ಜನ್ನನ

ಅನಂತನಾಥಪುರಾಣ ಸಂಗ್ರಹ

ಸಂಪಾದಕ

ಡಾ. ಎಸ್. ವಿದ್ಯಾಶಂಕರ

ಗೀತಾ ಬುಕ್ ಹೌಸ್
ಮೈಸೂರು

ಜನ್ನನ

ಅನಂತನಾಥಪುರಾಣ ಸಂಗ್ರಹ

ಸಂಪಾದಕ

ಡಾ. ಎಸ್. ವಿದ್ಯಾಶಂಕರ

ಗೀತಾ ಬುಕ್ ಹೌಸ್
ನ್ಯೂ ಸ್ಟ್ಯಾಚ್ಯು ಸರ್ಕಲ್, ಮೈಸೂರು

JANNANA ANANTANATHA PURANA SANGRAHA—Edited by Dr. S. Vidyashankar, M.A., Ph.D., Published by Geetha Book House, New Statue Circle, Mysore 570 001. First Edition 1974, Pp. 208

ಮೊದಲನೆಯ ಮುದ್ರಣ: ೧೯೭೪

ಮುದ್ರಕರು:
ವಾಣೀ ಪ್ರೆಸ್, ಚಾಮರಾಜಪುರಂ
ಮೈಸೂರು–೫೭೦ ೦೦೪

ಅನಂತನಾಥಪುರಾಣ ಸಂಗ್ರಹ

ವಿಷಯಸೂಚಿ

ಮೊದಲ ಮಾತು

ಕರ್ಣಾಟಕೃತಿಗೆ ನೇಮಿಚಂದ್ರ ಹಾಗೂ ಜನ್ನರನ್ನು 'ಸೀಮಾಪುರುಷ'ರೆಂದು ಮಧುರಕವಿ (1389) ತನ್ನ 'ಧರ್ಮನಾಥಪುರಾಣ'ದಲ್ಲಿ ತುಂಬುಮನದಿಂದ ಕರೆದಿರುವನು. ಕರ್ಣಾಟಕೃತಿಗೆ ಜನ್ನ 'ಸೀಮಾಪುರುಷ'ನೆಂಬ ಅವನ ಮಾತಿನಲ್ಲಿ ಸತ್ಯಾಂಶ ಉಂಟು. ಪಂಪನ ಅನಂತರದ ಕವಿಗಳಲ್ಲಿ ಜನ್ನ ಎದ್ದುಕಾಣುವ ವ್ಯಕ್ತಿ. ಅವನ 'ಯಶೋಧರ ಚರಿತೆ' ಹಾಗೂ 'ಅನಂತನಾಥಪುರಾಣ' ಕನ್ನಡ ಸಾಹಿತ್ಯಾಕಾಶದಲ್ಲಿ ಜಾಜ್ವಲ್ಯಮಾನವಾಗಿ ಬೆಳಗುತ್ತಿರುವ ಎರಡು ಧ್ರುವನಕ್ಷತ್ರಗಳು.

'ಅನಂತನಾಥಪುರಾಣ'ವನ್ನು ಓದಲು ಕೈಗೆ ತೆಗೆದುಕೊಂಡಾಗಲೆಲ್ಲಾ ಇಂತಹ ಒಳ್ಳೇ ಕಾವ್ಯದ ಸಂಗ್ರಹರೂಪ ಸಹೃದಯರಿಗೆ ಲಭ್ಯವಾದದ್ದೇ ಆದರೆ ಎಷ್ಟು ಚೆಂದ ಎಂಬ ಆಲೋಚನೆ ಮೂಡುತ್ತಿತ್ತು. ಈ ಕಾರ್ಯವನ್ನು ಮಾಡುವ ಆಸೆ ನನ್ನ ಮನದಲ್ಲಿ ಗುಪ್ತ ವಾಹಿನಿಯಾಗಿ ಹರಿಯುತ್ತಲೇ ಇದ್ದಿತು. ಗುರುತರವಾದ ಹಾಗೂ ಕ್ಲಿಷ್ಟವಾದ ಈ ಕಾರ್ಯಭಾರವನ್ನು ಹೊರಲು ಮನಸ್ಸು ಹಿಂದುಮುಂದು ಎಣಿಸುತ್ತಿತ್ತು. ನನ್ನ ಮನ ದಾಳದ ಬಯಕೆಗೆ ಒಂದು ರೂಪ ಬಂದುದು ವೆಲ್ಲೂರಿನಲ್ಲಿ ನಾನು ಚಿಕಿತ್ಸೆಗಾಗಿ ಹಲವು ದಿವಸಗಳನ್ನು ಕಳೆಯಬೇಕಾಗಿ ಬಂದಾಗ. ಕವಿಯ ಬಹುಮುಖ ವ್ಯಕ್ತಿತ್ವ ಹಾಗೂ ಉಜ್ವಲ ಪ್ರತಿಭೆಗೆ ಊಣಯವಾಗದಂತೆ, ಕಥಾಸರಣಿ ಕೆಡದಂತೆ, ಕಥೆಯ ಒಟ್ಟಂದದ ಸ್ವಾರಸ್ಯಕ್ಕೆ ಭಂಗಬರದಂತೆ, ಪಾತ್ರಗಳು ಕತ್ತರೀಪ್ರಯೋಗದಿಂದ ಕೃಶವಾಗದಂತೆ, ಅವಶ್ಯ ವಾದ ವರ್ಣನೆ ಬಿಟ್ಟು ಹೋಗದಂತೆ, ವಿವರಣೆ ಮೊಟಕುಗೊಳ್ಳದಂತೆ ಸಂಗ್ರಹ ಸಿದ್ಧಪಡಿ ಸುವ ಆಲೋಚನೆ, ಪ್ರಾಮಾಣಿಕ ಯೋಜನೆ ಮನದಲ್ಲಾಯಿತು. ಯೋಜನೆ ಕಾರ್ಯ ರೂಪಕ್ಕೆ ಬಂದಾಗಲೇ ಅದರ ಕಷ್ಟ–ನಷ್ಟಗಳ ಅರಿವು ನಮಗಾಗುವುದು. ಜನ್ನನಂತಹ ಪ್ರತಿಭಾವಂತ ಹಾಗೂ 'ಹಿತಮಿತಮೃದುವಚನ' ಕವಿಯ ಕೃತಿಯನ್ನು ಸಂಗ್ರಹಿಸುವುದು ಎಷ್ಟು ಕಷ್ಟದ ಕೆಲಸ ಎಂಬುದರ ಪರಿಚಯ ನನಗಾಯಿತು. ಯಾವುದನ್ನು ಬಿಡಬೇಕು ಯಾವುದನ್ನು ಇಟ್ಟುಕೊಳ್ಳಬೇಕು ಎಂಬ ಧರ್ಮಸಂಕಟ ಒಂದಾದರೆ ಕವಿಯ ಪ್ರಭಾವ ತನ್ನ ಬಲವಾದ ಒತ್ತುಮುದ್ರೆಯನ್ನು ನನ್ನಲ್ಲಿ ಮೂಡಿಸಿರುವಾಗ ಅವನ ಭಾವಗಳನ್ನು, ವರ್ಣನೆಗಳನ್ನು ಸಂಗ್ರಹಿಸಿ ಹೇಳುವುದು ಹೇಗೆ ಎಂಬ ತೊಳಲು ಎರಡನೆಯದಾಯಿತು. ಕವಿಯ ದಟ್ಟವಾದ ಪ್ರಭಾವವಲಯದಿಂದ ನನ್ನನ್ನು ನಾನು ಬಿಡಿಸಿಕೊಳ್ಳುವ ಪ್ರಾಮಾ ಣಿಕ ಪ್ರಯತ್ನ ನಡೆಸಿ ಈ ಸಂಗ್ರಹ ಸಿದ್ಧಪಡಿಸಿರುವೆ. ಹೀಗೆಂದ ಮಾತ್ರಕ್ಕೆ ಇದರಲ್ಲಿ ತಪ್ಪುಗಳೇ ಇಲ್ಲವೆಂದು ಅರ್ಥವಲ್ಲ. ಇಲ್ಲಿ ಬರುವ ದೋಷಗಳಿಗೆಲ್ಲಾ ನಾನೇ ಹೊಣೆ. ನನ್ನ ಇತಿ–ಮಿತಿಯರಿತು ಸಹೃದಯರು ತಪ್ಪುಗಳನ್ನು ನನಗೆ ತಿಳಿಯಪಡಿಸುವ ಔದಾರ್ಯವನ್ನು

ಪ್ರಕಟಿಸಬೇಕು. ಗುಣಗ್ರಾಹಿಗಳ ಅಮೂಲ್ಯ ಸಲಹೆಗಳಿಗೆ ನನ್ನಲ್ಲಿ ಸದಾ ಸ್ವಾಗತವಿದೆ.

ಸಂಗ್ರಹ ಸಿದ್ಧವಾಗಿ ಎರಡು ವರುಷಗಳಾದುವು. ಒಳ್ಳೆಯ ಪ್ರಕಾಶಕರು ಸಿಗದೆ ಪ್ರಕಟಣೆಯ ಆಸೆ ಕೈಬಿಟ್ಟಿದ್ದ ನನಗೆ ಈ ಸಂದರ್ಭದಲ್ಲಿ ಒತ್ತಾಸೆಯಾಗಿ ನಿಂತವರು ಗೀತಾ ಬುಕ್ ಹೌಸ್‌ನ ಶ್ರೀ ಸತ್ಯನಾರಾಯಣರಾವ್‌ರವರು. ಗುರುತುಪರಿಚಯವಿಲ್ಲದ ನನ್ನನ್ನು ಆದರಿಸಿ, ನನ್ನ ಕೃತಿಯ ಪ್ರಕಟಣೆಯ ಭಾರ ಹೊತ್ತು ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು. ಅವರ ಅವ್ಯಾಜಪ್ರೇಮಕ್ಕೆ ನಾನು ತುಂಬಾ ಋಣಿಯಾಗಿರುವೆ.

ಸಂಗ್ರಹಕಾರ್ಯ ಕೈಗೆ ತೆಗೆದುಕೊಂಡು ಮುಂದುವರಿಸುತ್ತಿದ್ದಾಗ ಬೆನ್ನುತಟ್ಟಿ ಬೇಗ ಮುಗಿಸುವಂತೆ ಹೇಳಿ ಪ್ರೋತ್ಸಾಹಿಸಿದ ಡಾ. ಎಂ. ಚಿದಾನಂದಮೂರ್ತಿಗಳಿಗೆ ಹಾಗೂ ಸಂಗ್ರಹಕಾರ್ಯ ಮುಗಿದಮೇಲೆ ಒಮ್ಮೆ ಅವಲೋಕಿಸಿ ಮೆಚ್ಚುಗೆಯ ನುಡಿಗಳನ್ನಾಡಿದ ಡಾ. ಜಿ. ಎಸ್. ಶಿವರುದ್ರಪ್ಪನವರಿಗೆ, ಡಾ. ಹಾ. ಮಾ. ನಾಯಕರಿಗೆ ನನ್ನ ಹೃತ್ಪೂರ್ವಕವಾದ ನಮನಗಳು.

ನಾನು ಈ ಸಂಗ್ರಹವನ್ನು ಸಿದ್ಧಪಡಿಸುವಾಗ ಶ್ರೀಯುತರಾದ ಡಿ. ಶ್ರೀನಿವಾಸಾಚಾರ್ ಮತ್ತು ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್‌ರವರು ಸಂಪಾದಿಸಿದ್ದ, 1930 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಓರಿಯಂಟಲ್ ಲೈಬ್ರರಿಯವರಿಂದ ಪ್ರಕಾಶಿತವಾಗಿದ್ದ 'ಅನಂತನಾಥಪುರಾಣ'ವನ್ನು ಆಧಾರಗ್ರಂಥವಾಗಿ ಸ್ವೀಕರಿಸಿದ್ದೆನು. ಇದರಲ್ಲಿನ ಕಣ್ಣಿರಿಯುವ ಅಚ್ಚಿನ ದೋಷಗಳನ್ನು ಹಾಗೂ ತಪ್ಪು ಪಾಠಗಳನ್ನು ತಿದ್ದಿ, ಕ್ರಮಗೊಳಿಸಿ ನಾನು ಸಂಗ್ರಹಕಾರ್ಯವನ್ನು ಮುಗಿಸುವ ವೇಳೆಗೆ 'ಅನಂತನಾಥಪುರಾಣ'ದ ಎರಡನೇ ಆವೃತ್ತಿ ಹೊರಬಂದಿತು. ಇದರಿಂದ ನಾನು ಎಷ್ಟು ಉಪಕೃತನಾಗಿರುವೆನೆಂಬುದನ್ನು ವ್ಯಕ್ತಪಡಿಸಲಿಕ್ಕೆ ನಿಜವಾಗಿಯೂ ನನ್ನ ಬಡನುಡಿಗಳಿಗೆ ಸಾಧ್ಯವಾಗದು. ಈ ಎರಡನೇ ಆವೃತ್ತಿಯ ಸಂಪಾದಕರಿಗೆ ಹಾಗೂ ಅದನ್ನು ಪ್ರಕಟಿಸಿದ ಮೈಸೂರು ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ. ಅತ್ಯಲ್ಪ ಅವಧಿಯಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ವಾಣೀ ಪ್ರೆಸ್‌ನ ವ್ಯವಸ್ಥಾಪಕರಿಗೆ ನನ್ನ ನೆನಕೆಗಳು.

ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ
ಬೆಂಗಳೂರು, ೫೬೦ ೦೫೯

ವಿದ್ಯಾಶಂಕರ

ಪೀಠಿಕೆ

ಕನ್ನಡದ ಹೆಸರಾಂತ ಜೈನ ಚಂಪೂ ಕವಿಗಳಲ್ಲಿ ಜನ್ನನೂ ಒಬ್ಬ. ಜನ್ನ, ಜನ್ನಿಗ, ಜನ್ನಯ್ಯ, ಜನ್ನಮಯ್ಯ, ಜಾನಕಿ, ಜನ್ನಮರಸ, ಜನಾರ್ದನದೇವ—ಎಂಬೆಲ್ಲ ಹೆಸರುಗಳಿಂದ ತನ್ನನ್ನು ಕರೆದುಕೊಂಡಿರುವ ಈತ ಪಂಪ, ರನ್ನರಂತೆ ಸ್ವಕೀಯ ವಿಷಯಗಳನ್ನು ಬಾಯ್ತುಂಬ ಹೇಳಿರುವನು. ಯಶೋಧರಚರಿತ್ರೆಯನ್ನು ಬರೆದು ಪ್ರಖ್ಯಾತನಾದ ಈತ ತನ್ನ ಮತೀಯ ಶ್ರದ್ಧೆಯನ್ನು ಪ್ರಕಟಪಡಿಸಲು ಹಿಂದಿನ ಕವಿಗಳ ಸಂಪ್ರದಾಯವನ್ನನುಸರಿಸಿ ಅನಂತಜಿನನನ್ನು ಕುರಿತು ಅನಂತನಾಥಪುರಾಣವನ್ನು ಬರೆದಿರುವನು. ಸುಖದ ನೆಲವೀಡಾದ ದ್ವಾರಸಮುದ್ರದಲ್ಲಿ ಹೊಯ್ಸಳ ವೀರಬಲ್ಲಾಳನ (ಕ್ರಿ.ಶ. 1173–1220) ಆಳ್ವಿಕೆಯಲ್ಲಿ ಜನತೆ ಸಮೃದ್ಧಿಯ, ಸಂತೃಪ್ತಿಯ ಜೀವನವನ್ನು ನಡೆಸುತ್ತಿದ್ದಾಗ ಆ ಆವರಣದಲ್ಲಿ ಉಸಿರಾಡಿ ಬೆಳೆದ ಕವಿ ಜನ್ನ ಅಂದಿನ ರಸಿಕರ ಶೃಂಗಾರಮಯವಾದ ಬದುಕಿನ ಪ್ರತಿನಿಧಿಯಾಗಿ ಕಾಮಶಾಸ್ತ್ರವನ್ನು ಕುರಿತ 'ಅನುಭವಮುಕುರ'ವೆಂಬ ಕಿರುಕೃತಿಯನ್ನು ರಚಿಸಿ ಆ ಮೂಲಕ ತನ್ನ ರಸಿಕತೆಯನ್ನು ವ್ಯಕ್ತಪಡಿಸಿರುವನು. ಜನ್ನನು ಮೊದಲು ಶಾಸನರಚಕನಾಗಿ ಕವಿತಾರಚನೋದ್ಯೋಗವನ್ನು ಆರಂಭಿಸಿದಂತೆ ತಿಳಿಯಬರುತ್ತದೆ. ಕ್ರಿ.ಶ. 1191ರಲ್ಲಿ ಹುಟ್ಟಿದ ಚನ್ನರಾಯಪಟ್ಟಣದ 179ನೆಯ ಶಾಸನ ಹಾಗೂ 1197ರಲ್ಲಿ ಹುಟ್ಟಿದ ತರೀಕೆರೆಯ 45ನೆಯ ಶಾಸನಗಳು ಜನ್ನಕೃತ ಶಾಸನಗಳೆಂದೂ ಕ್ರಿ.ಶ. 1205ರಲ್ಲಿ ಹುಟ್ಟಿದ ತರೀಕೆರೆಯ 42ನೆಯ ಶಾಸನ ಹಾಗೂ ಕ್ರಿ.ಶ. 1208ರಲ್ಲಿ ಹುಟ್ಟಿದ ತರೀಕೆರೆಯ 68ನೆಯ ಶಾಸನ ಜನ್ನನವೇ ಆಗಿರಬಹುದೆಂದೂ ವಿದ್ವಾಂಸರು ಅಭಿಪ್ರಾಯಪಡುವರು. ಜನ್ನನ ಈ ನಾಲ್ಕು ಶಾಸನಗಳು ರಾಜಭಕ್ತಿಪರವಾದ, ಪ್ರೌಢಚಂಪೂ ಶೈಲಿಯ ರಚನೆಗಳಾಗಿವೆ. ಮೊದಲು ಶಾಸನಗಳಲ್ಲಿ ತನ್ನ ಕಾವ್ಯಪ್ರತಿಭೆಯನ್ನು ಹರಿಯಬಿಟ್ಟ ಜನ್ನ ಅವರಲ್ಲಿ ನುರಿತನಂತರ ಕಾವ್ಯರಚನೆಯತ್ತ ಗಮನಹರಿಸಿರಬಹುದೆಂದು ಹೇಳಬಹುದಾಗಿದೆ.

ಜನ್ನ ತನ್ನ ಕಾವ್ಯಗಳಲ್ಲೆಲ್ಲೂ ಜನನಕಾಲವನ್ನು ಸ್ಪಷ್ಟವಾಗಿ ಹೇಳಿಲ್ಲ. ತಾನು ಅನಂತಜಿನನು ಹುಟ್ಟಿದ ಆಷಾಢ ಕೃಷ್ಣ ತ್ರಯೋದಶೀ ರೇವತೀ ನಕ್ಷತ್ರ ಶಿವಯೋಗದಲ್ಲೇ ಹುಟ್ಟಿದುದಾಗಿ ಹೇಳಿಕೊಂಡಿರುವನು. ಜನ್ನನ ಶಾಸನಗಳ ಹಾಗೂ ಕಾವ್ಯಗಳ ರಚನೆಯ ಕಾಲದ ಆಧಾರದ ಮೇಲೆ ಅವನ ಜೀವಿತಕಾಲವನ್ನು ನಿರ್ಧರಿಸಬೇಕಾಗಿದೆ. ಅವನು ಬರೆದ ಶಾಸನಗಳ ಕಾಲ ಕ್ರಮವಾಗಿ 1190, 1197. ಯಶೋಧರಚರಿತ್ರೆಯನ್ನು ಕ್ರಿ.ಶ. 1209ರಲ್ಲಿಯೂ ಅನಂತನಾಥಪುರಾಣವನ್ನು ಕ್ರಿ ಶ. 1230ರಲ್ಲಿಯೂ ಬರೆದುದಾಗಿ ಆಯಾ ಗ್ರಂಥಗಳ ಕೊನೆಯ ಪದ್ಯಗಳಲ್ಲಿ ಜನ್ನ ಹೇಳಿರುವನು. ಹೀಗಾಗಿ, ಕವಿ

ಜನ್ನ 12ನೆಯ ಶತಮಾನದ ಉತ್ತರಾರ್ಧ ಮತ್ತು 13ನೇ ಶತಮಾನದ ಪೂರ್ವಾರ್ಧದಲ್ಲಿ ಬಾಳಿದವನೆನ್ನಬಹುದು.

ಜನ್ನ ತನ್ನ ಜನ್ಮಸ್ಥಳವನ್ನು ಎಲ್ಲಿಯೂ ಸ್ಪಷ್ಟವಾಗಿ ತಿಳಿಸಿಲ್ಲ. ಜನ್ನನ ತಂದೆಯಾದ ಕವಿಸುಮನೋಬಾಣನು ಹೊಯ್ಸಳ ನಾರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದನು. ಜನ್ನ ಹೊಯ್ಸಳ ವೀರಬಲ್ಲಾಳನಿಂದ (ಕ್ರಿ.ಶ. 1173–1220) 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದು ಅನಂತರ ಬಲ್ಲಾಳನ ಮಗನಾದ ನರಸಿಂಹನಲ್ಲಿ ಆಸ್ಥಾನಕವಿ, ದಂಡಾಧಿಪತಿ. ಮಂತ್ರಿ ಆಗಿದ್ದನು. ಅವನು ಬರೆದ ಶಾಸನಗಳೆಲ್ಲಾ ಚೆನ್ನರಾಯಪಟ್ಟಣ. ತರೀಕೆರೆ ಪ್ರಾಂತ್ಯಗಳಲ್ಲಿ ಸಿಕ್ಕಿವೆಯಾದ್ದರಿಂದ ಜನ್ನ ಹಳೆಯಬೀಡು ಪ್ರಾಂತದವನೆಂದು ಹೇಳಬಹುದು.

ಜನ್ನ ಹುಟ್ಟಿನಲ್ಲಿ ಜೈನ. ಕಮ್ಮೆವಂಶದ ಕಾಶ್ಯಪಗೋತ್ರಕ್ಕೆ ಸೇರಿದವನು. ತಂದೆ ಹೊಯ್ಸಳ ನಾರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದ ಸುಮನೋಬಾಣನೆಂಬ ಬಿರುದಾಂತ ಶಂಕರ. ತಾಯಿ ಗಂಗಾದೇವಿ. ಇವನ ಪತ್ನಿ "ರಾಯದಂಡಾಧಿನಾಥಾಕೃತಾಂತಂ ಪೆಸರ್ವೆತ್ತ ಚಾಕಣಸತ್ಪುತ್ರಂ ರೇಚಯಂ ಪೆತ್ತ ಪುತ್ರಿ" ಲಕುಮಾದೇವಿ. ಜನ್ನನ ಮನೆತನ ಪಾಂಡಿತ್ಯಪ್ರತಿಭೆಗಳಿಗೆ ತವರು. ಜನ್ನನ ಸೋದರಿಯನ್ನು 'ಸೂಕ್ತಿಸುಧಾರ್ಣವ'ದ ಮಲ್ಲಿಕಾರ್ಜುನನಿಗೆ ಕೊಡಲಾಗಿತ್ತು. ಈ ಮಲ್ಲಿಕಾರ್ಜುನನ ಮಗನಾದ 'ಶಬ್ದಮಣಿದರ್ಪಣ'ದ ಕೇಶಿರಾಜ ಜನ್ನನ ಸೋದರಳಿಯ. ಹೀಗೆ ವಿದ್ವಜ್ಜನರ ನಡುವಿನ ಆವರಣದಲ್ಲಿ ಹುಟ್ಟಿ ಬೆಳೆದ ಜನ್ನನಲ್ಲಿ ಪಾಂಡಿತ್ಯ-ಪ್ರತಿಭೆ ಈಡುಜೋಡಾಗಿ ಮೇಳಗೊಂಡುದರಲ್ಲಿ ಆಶ್ಚರ್ಯವೇನಿಲ್ಲ. ವಿದ್ವತ್ ಪ್ರಪಂಚದ ಅಡುಂಬೊಲದಲ್ಲಿ ಒಡನಾಡಿ ಪಳಗಿದ ಕವಿಗೆ ಆತನ ಕವಿತಾಶಕ್ತಿ ರಾಜಾಶ್ರಯ ಸುಲಭವಾಗಿ ಪ್ರಾಪ್ತವಾಗುವಂತೆ ಮಾಡಿತು ಎನ್ನಬಹುದು.

ಜನ್ನನ ವಿದ್ಯಾಗುರು ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನೂ. 'ಇದಾನೀಂತನ ಶರ್ವವರ್ಮ'ನೆಂದು ಪ್ರಸಿದ್ಧನೂ ಆದ ನಾಗವರ್ಮ. ಆಗಿನ ಕಾಲದಲ್ಲಿ ಜೈನಸಮಾಜದಲ್ಲಿ ಹೆಸರಾಂತ ಕಾಣೂರ್ಗಣ ಮಾಘಚಂದ್ರ ತ್ರೈವಿದ್ಯನ ಶಿಷ್ಯನಾದ ಗಂಡವಿಮುಕ್ತ ರಾಮಚಂದ್ರಮುನಿ ಜನ್ನನ ಪಾರಮಾರ್ಥಿಕ ಗುರು. 'ಕಾಣೂರ್ಗಣ ಚಿಂತಾಮಣಿ'ಗಳಾದ ರಾಮಚಂದ್ರದೇವ ಮುನೀಂದ್ರರ ಪಾದಪದ್ಮೋಪಜೀವಿಯಾಗಿ ಜನ್ನ ಜಿನಾಗಮಗಳ ಸಂಪೂರ್ಣ ಪರಿಚಯ ಮಾಡಿಕೊಂಡನು. ಕವಿ ಜನ್ನ ತನ್ನ ಅಪೂರ್ವ ಬುದ್ಧಿಶಕ್ತಿಯನ್ನೂ ಅನ್ಯಾದೃಶವಾದ ಮತಪರವಾದ ಪಾಂಡಿತ್ಯವನ್ನೂ ತನ್ನ ಮೆಚ್ಚಿನ ಮತಪ್ರಚಾರಕ್ಕಾಗಿ ವಿನಿಯೋಗಿಸಿರುವನು. ಯಶೋಧರಚರಿತ್ರೆ, ಅನಂತನಾಥಪುರಾಣಗಳು ಜೈನಧರ್ಮೋಪದೇಶಕ್ಕಾಗಿಯೇ ವಿರಚಿತವಾದ ಕೃತಿಗಳಾಗಿದ್ದು ಕವಿಯ ಕಾವ್ಯರಚನೋದ್ದೇಶವನ್ನು ಅವು ಸ್ಪಷ್ಟಪಡಿಸುತ್ತವೆ.

ಕ್ರಿ.ಶ. 1191ರ ಚನ್ನರಾಯಪಟ್ಟಣದ 179ನೆಯ ಶಾಸನವು 'ಹೊಯ್ಸಳ ವೀರಬಲ್ಲಾಳದೇವನ ಪಾದಪದ್ಮೋಪಜೀವಿ'ಯೂ 'ದಕ್ಷಿಣಚಕ್ರವಲ್ಲಭ ಸಭಾರತ್ನ ಪ್ರದೀಪ'ನೂ 'ಮಂತ್ರಿಮಾಂಡಲಿಕದಂಡಾಧೀಶ'ನೂ 'ಸಕಲಬುಧಜನಮುದ್ಭೋಜ'ನೂ ಆದ ಮಾಚಣನು ಹಾಕಿಸಿದ ಶಾಸನವಾಗಿದ್ದು ಇದರಲ್ಲಿ ವೀರಬಲ್ಲಾಳ ಹಾಗೂ ಮಾಚಣನ ವಂಶವರ್ಣನೆ ಉಜ್ವಲವಾಗಿ ಮೂಡಿಬಂದಿದೆ. ಹೊಯ್ಸಳ ವೀರಬಲ್ಲಾಳನ ಘನವಾದ ವ್ಯಕ್ತಿತ್ವಕ್ಕೆ ಮಾರುಹೋದ ಕವಿಜನ್ನ ರಾಜನ ಬಗೆಗಿನ ತನ್ನ ಅತ್ಯುನ್ನತ ಭಕ್ತಿ, ಗೌರವಗಳನ್ನು ಈ ಶಾಸನದಲ್ಲಿ ಮೊದಲಿಗೆ ಪ್ರಕಟಪಡಿಸಿದ. ಹಾಗೆಯೇ ಶಾಸನವನ್ನು ಹಾಕಿಸಿದ ಮಾಚಣನ ಪ್ರೀತಿ-ವಿಶ್ವಾಸ-ಪ್ರೋತ್ಸಾಹಗಳಿಗೆ ಪರವಶನಾದ ಕವಿಜನ್ನ ಮಾಚಣನ ವಂಶವರ್ಣನೆಯನ್ನು ತುಂಬುಮನದಿಂದ ಮಾಡುವುದರ ಮೂಲಕ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದ. ಕ್ರಿ.ಶ. 1197ರ ತರೀಕೆರೆಯ 45ನೆಯ ಶಾಸನವು 'ಯಾದವೇಶ್ವರಸಭಾರತ್ನಪ್ರದೀಪ'ನೂ 'ಯಾದವಕಟಕರತ್ನಾಭರಣ'ನೂ 'ಶ್ರೀಪ್ರತಾಪಚಕ್ರವರ್ತಿ ವೀರಬಲ್ಲಾಳದೇವ ರಾಜಾಭ್ಯುದಯಕಾರಣ'ನೂ 'ಚತುರ್ಥಕುಲಕುಮುದಿನೀ ಶರಚ್ಚಂದ್ರ ಚಂದ್ರಿಕೋಪಮ'ನೂ 'ಮಂತ್ರಿಮಾಂಡಳಿಕ ದಂಡಾಧೀಶ'ನೂ 'ದಂಡನಾಥಚೂಡಾಮಣಿ'ಯೂ ಆದ ಅಮಿತನು ಹಾಕಿಸಿದ ಶಾಸನವಾಗಿದ್ದು ಇದರಲ್ಲಿ ವೀರಬಲ್ಲಾಳನ ಕುಲವರ್ಣನೆಯ ಜೊತೆಗೆ ಅಮಿತನ ಮಹಿಮೆಯ ವರ್ಣನೆ ವಿಶೇಷವಾಗಿ ಬಂದಿದೆ. ಹುಟ್ಟುಕವಿಯಾದ ಜನ್ನನಿಗೆ ಅವನ ಕವಿತೆ ರಾಜಕೃಪೆ ಪ್ರಾಪ್ತವಾಗುವಂತೆಯೂ ಮಾಚಣ, ಅಮಿತ–ಇವರೇ ಮೊದಲಾದ ಪ್ರಬಲರಾಜಕಾರಣಿಗಳ ಬೆಂಬಲ, ಪ್ರೋತ್ಸಾಹ ಲಭ್ಯವಾಗುವಂತೆಯೂ ಮಾಡಿತು. ಈ ಶಾಸನಗಳ ಕವಿತೆ ರಾಜಾಶ್ರಯದ ಬಾಗಿಲು ತೆರೆಯಲು ಸ್ವಲ್ಪಮಟ್ಟಿಗೆ ಸಹಾಯ ಮಾಡಿತಾದರೂ ಯಾದವಕಟಕಾಚಾರ್ಯನಾದ ತಂದೆಯ ಬೆಂಬಲ, ವಿದ್ಯಾಗುರುವಾದ ನಾಗವರ್ಮನ ಶ್ರೀರಕ್ಷೆ, ಪ್ರಬಲ ರಾಜಕಾರಣಿಗಳಾದ ಮಾಚಣ, ಅಮಿತರ ಔದಾರ್ಯಯುತ ಆಶ್ರಯ, ಪ್ರೋತ್ಸಾಹಗಳು ಬಹುಮಟ್ಟಿಗೆ ಜನ್ನನನ್ನು ಆಸ್ಥಾನಕವಿಯಾಗುವಂತೆ ಮಾಡಿದುವು ಎನ್ನಬಹುದು.

'ಯಶೋಧರಚರಿತೆ' ಜನ್ನನಿಗೆ ಕೀರ್ತಿಯನ್ನೂ ರಾಜಗೌರವವನ್ನೂ ತಂದು ಕೊಟ್ಟಿರಬೇಕು. 'ನೃಪನ ಸಭೆಯೊಳಖಿಳ ಕಲಾನಿಪುಣರ ನಟ್ಟನಡುವೆ ಬೊಟ್ಟಿತ್ತಿಗೆಲಲ್ ತಾನೆ ಚತುರ್ವಿಧಪಂಡಿತ'ನಾಗಿದ್ದ ಜನ್ನನಿಗೆ ಯಶೋಧರಚರಿತ್ರೆಯಿಂದಾಗಿ 'ಕವಿಚಕ್ರವರ್ತಿ' ಎಂಬ ಬಿರುದು ಬಲ್ಲಾಳನಿಂದ ಪ್ರಾಪ್ತವಾಗಿದ್ದಿತು. ತನ್ನ ತೋಳ್ಬಲ ವಿದ್ಯಾಬಲಗಳಿಂದ ವೀರಬಲ್ಲಾಳನ ಮೆಚ್ಚುಗೆಗೆ ಪಾತ್ರನಾಗಿದ್ದ ಜನ್ನ ಆತನ ಆಸ್ಥಾನದಲ್ಲಿ 'ಚತುರ್ವಿಧಪಂಡಿತ'ನೂ 'ಕವಿರಾಜಶೇಖರ'ನೂ ಆಗಿದ್ದನು. ವೀರಬಲ್ಲಾಳನ ಮಗನಾದ ನರಸಿಂಹನ ಕಾಲಕ್ಕೆ ಜನ್ನನ ಕಾವ್ಯಪ್ರೌಢಿಮೆ, ಭುಜಬಲಪ್ರತಾಪ ಔನ್ನತ್ಯದ ಶಿಖರವನ್ನು ಮುಟ್ಟಿರಬೇಕು. ಹೀಗಾಗಿ ನರಸಿಂಹಚೋಳಕುಲೋದ್ಧರಣನ ಸರ್ವಜ್ಞಭೂಪನ

ಓಲಗದಲ್ಲಿ 'ನಿಂದಿರೆ ದಂಡಾಧೀಶಂ, ಕುಳ್ಳಿರೆ ಮಂತ್ರಿ, ತೊಡಂಕೆ ಕವಿ'ಯಾದ ಜನಾರ್ಧನದೇವ. ಪಂಪನಾದಮೇಲೆ ಕವಿ, ಕಲಿ ಎರಡೂ ಆಗಿ ರಾಜಾಸ್ಥಾನವನ್ನು ಪ್ರವೇಶಿಸಿ ಪ್ರತಿಭೆ, ಪರಾಕ್ರಮಗಳ ಮೂಲಕ ಅತ್ಯಂತ ಹಿರಿದಾದ ರಾಜಗೌರವವನ್ನು ಪಡೆದ ಪುಣ್ಯಶಾಲಿ ಕವಿಯಾಗಿ ಜನ್ನ ಕಾಣಿಸಿಕೊಳ್ಳುವನು. ಪಂಪನಿಗಿಲ್ಲದ ಮಂತ್ರಿ ಪಟ್ಟವನ್ನು ಜನ್ನ ಹೊಂದುವುದರ ಮೂಲಕ ಆ ಸೌಭಾಗ್ಯದ ಕೋಡನ್ನು ಏರಿಸಿಕೊಂಡನು.

ಪಂಪನಂತೆ ಕವಿಯೂ ಕಲಿಯೂ ಆಗಿದ್ದ ಜನ್ನ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದ ಅತ್ಯಂತ ಪ್ರತಿಭಾಶಾಲಿ. ಈತನ ಉಭಯಭಾಷಾಪ್ರಭುತ್ವವನ್ನು ಮೆಚ್ಚಿದ ವೀರಬಲ್ಲಾಳ 'ಉಭಯಕವಿಚಕ್ರವರ್ತಿ' ಎಂಬ ಬಿರುದಿತ್ತು ಗೌರವಿಸಿದ್ದ. ಸ್ವತಃ ಜನ್ನನೇ ತನ್ನನ್ನು 'ನಾಟ್ಯಭುಜನಾರ್ಧನದೇವ' ಎಂದು ಕರೆದುಕೊಂಡಿರುವನು. ಇದು ಯಾರಿತ್ತ ಬಿರುದೊ' ತಿಳಿಯದು. 'ಸಾಹಿತ್ಯರತ್ನಾಕರ, ಕವಿವೃಂದಾರಕವಾಸವ, ಕವಿಕಲ್ಪಲತಾ ಮಂದಾರ, ರಾಜವಿದ್ವತ್ಸಭಾಕಳಹಂಸ. ಕವಿಭಾಳಲೋಚನ, ಕವಿಭಾಳೇಕ್ಷಣ, ಉದ್ದಂಡಕವಿಭಾಳನೇತ್ರ: ಸುಕವಿಜನಮಿತ್ರ. ವಿನೇಯಜನಮುಖತಿಲಕ. ಮೊದಲಾದ ಬಿರುದುಗಳು ಜನ್ನನಿಗೆ ಇದ್ದುವೆಂಬುದು ತಿಳಿದುಬರುತ್ತದೆ.

ಜನ್ನನಲ್ಲಿ ಅಭಿಮಾನದ ಆಧಿಕ್ಯದಿಂದಾಗಿ ಒಮ್ಮೊಮ್ಮೆ ಆತ್ಮಸ್ತುತಿ ಎಲ್ಲೆ ಮೀರಿತೊ ಎಂದೆನ್ನಿಸುವುದುಂಟು. ತನ್ನನ್ನು ಚತುರ, ನೀಜಿ, ಉದಾರ, ಉಜ್ವಲಯಶಂ, ಸೌಭಾಗ್ಯ ಸಂಪನ್ನ, ಊರ್ಜಿತಪುಣ್ಯೋದಯ ಎಂದೆಲ್ಲಾ ಕರೆದುಕೊಂಡಿರುವನು. 'ಜಿನೇಂದ್ರ ವಾಗ್ವನಿತೆ ನಿಲ್ವನ್ನುಖಾಂಭೋಜದೊಳ್' ಎಂದು ವಿನಯದಿಂದ, ಭಕ್ತಿಯಿಂದ ಪ್ರಾರ್ಥಿಸುವ ನಾಲಗೆಯೆ "ಈ ಜನಾರ್ಧನನ ವಕ್ತ್ರಾಂಭೋಜದೊಳ್ ಸಾದರಂ ಸುಸ್ಥಿತೆಯಾಗಿರ್ದಪಳಿಂದೆ ತಾನ್ ಸೊಬಗೆಯಾದಳ್ ಜಾಣೆಯಾದಳ್ ಸರಸ್ವತಿ ಸರ್ವೋಹಿತೆಯಾದಳಗ್ಗಳಮೆಯಾದಳ್ ವಿಶ್ವಭೂಚಕ್ರದೊಳ್" ಎನ್ನುತ್ತದೆ. "ಉಭಯ ಕವಿ ಚಕ್ರವರ್ತಿಯು ಸಭೆಯುಂ ಪುಗಲಣ್ಮವಕ್ಕೆ ಪದವಾಕ್ಯಾರ್ಥ ಪ್ರಭವಕಲಂಕಮಲಂಕಾರ ಭಾವ ರಸ ರೀತಿ ದೂಷಣಾಭಾಸಂಗಳ್" : "ನಂದ ಜನಾರ್ಧನಂ ಸುಕವಿವಲ್ಲಭನಾತನ ಮುಂದೆ ಗಣ್ಯರೇ ಚಂದದ ಬಳ್ಳಿ ಸಂಕಲಿಯೊಳಕ್ಕರದಂ ಸೆಱೆಗೆಯ್ವ ಕಕ್ಕಸರ್" : "ವಾಗ್ಮಿಗಣಾಗ್ರಗಣ್ಯನೆನಿಸಿ ಜನ್ನಂಗಾರ್ಸಮಂ ಧಾತ್ರಿಯೊಳ್" ಇವೇ ಮೊದಲಾದ ಮಾತುಗಳಲ್ಲಿ ಆತ್ಮಪ್ರಶಂಸೆ ಮೇರೆಮೀರಿದಂತೆ ಕಾಣುತ್ತದೆ. 'ವಿನೇಯಜನಮುಖತಿಲಕ'ನೆಂದು ಕರೆದುಕೊಂಡಿರುವ ಜನ್ನ ಕುಕವಿನಿಂದೆಯಲ್ಲಿ ಸಂಪ್ರದಾಯಕ್ಕೆ ಶಿರಬಾಗಿ ಸ್ವಲ್ಪಮಟ್ಟಿಗೆ ಆ ವಿನಯವನ್ನು ಕಳೆದುಕೊಂಡಂತೆ ತೋರುತ್ತದೆ.

ಭೋಗಭಾಗ್ಯಾದಿಗಳಲ್ಲಿ ಸಂಪ್ರೀತನಾಗಿ ತುಂಬುಬಾಳನ್ನು ಜನ್ನ ಬಾಳಿದ್ದ. ಭರತ, ಸುರತಶಾಸ್ತ್ರಗಳಲ್ಲಿ ಪರಿಣತನಾಗಿದ್ದ ಜನ್ನ ಶೃಂಗಾರಪ್ರಿಯನಾದ ರಸಿಕಚಕ್ರಿ. ಈ ರಸಿಕಾಗ್ರಣಿ ತನ್ನನ್ನು 'ಸೊಬಗಿನ ಅಭಿನವಮದನನ್', 'ಸೊಬಗಿನ ಜಂಗಮ

ಶಾಸನನ್' ಎಂದು ಕರೆದುಕೊಂಡಿರುವನು. ಈ ಮನ್ಮಥಸ್ವಾಮಿ ತರುಣಿಯರ 'ಕುರುಳ ನಿಟಿಪಲ್ ಬೆರಲಂ ಕೊಳಲು, ಉರದ ಮೇಲೆ ಪೆಸರಕ್ಕರಮಂ ಬರೆಯಲ್ಕಲ್ಲದೆ' ಕೂಡಲಿಕ್ಕೆ ಸಮಯವಿಲ್ಲದವನೂ. 'ಬಟ್ಟೆಯುರುಡಿಕಿಪೊಡುಡಕಲ್ತ ಕೋಪ'ನೂ ಆಗಿದ್ದನು

ಜನ್ನ ಕವಿಯಷ್ಟೇ ಅಲ್ಲ ಕಲಿಯೂ ಆಗಿದ್ದ. "ಬರೆಯಲ್ ಪೇಣ್ ಸುಕ್ಕರದಿಂ ಕರೆಯಲ್ ಪೇಣ್ ಕಯ್ಗೆ ಪಲಗೆ ಬರೆ ಕಾವ್ಯಕಲಾಪರಿಣತಿಯೊಳ್ ಖಡ್ಗಕಳಾಪರಿಣತಿಯೊಳ್ ಭಾಳನೇತ್ರನೆನಿಪಂ ಜನ್ನಂ"—ಇದು ಕಾವ್ಯಕಲೆ ಹಾಗೂ ಖಡ್ಗಕಲೆಯಲ್ಲಿ ಪರಿಣತನಾಗಿದ್ದ ಜನ್ನನ ಅಭಿಮಾನದ ಮಾತು.

ಯಾದವಸಿಂಹನಾದ ನರಸಿಂಹರಾಯನ ಸಭಾವಾಟೋತ್ಸವವು ಜನ್ನಮರಸನಿಂದಾಗಿ ಚೆಲ್ವಾಯ್ತೆಂದು ಸ್ವತಃ ಜನ್ನನೇ ಹೆಮ್ಮೆಯಿಂದ ಹೇಳಿಕೊಂಡಿರುವನು:

ಕವಿತಾಕೌತುಕದಿಂ ಮಹಾಪ್ರಭೃತಿಯಿಂದೌದಾರ್ಯದಿಂ ಭೋಗದೊ।
ಪವಿಳಾಸೋದಯದಿಂದೆ ಜನ್ನಮರಸಂ ಸಂದಿರ್ದು ಚೆಲ್ವಾಯ್ತು ಯಾ।
ದವಸಿಂಹಂ ನರಸಿಂಹರಾಯನ ಸಭಾವಾಟೋತ್ಸವಂ ಚಂದ್ರನಿ।
ರ್ದ ವಸಂತಂ ಮಳಯಾನಿಳಂ ಸೊಗಯಿಸಿರ್ದುದ್ಯಾನಮೆಂತಂತೆವೋಲ್॥

ನರಸಿಂಹರಾಯನ ಆಸ್ಥಾನದಲ್ಲಿ ಕವಿ, ಮಂತ್ರಿ, ದಂಡಾಧಿಪತಿ ಎಲ್ಲವೂ ಆಗಿದ್ದ ಜನ "ತನ್ನ ನುಡಿ, ತನ್ನ ತೇಜಂ, ತನ್ನ ಬಲಂ, ತನ್ನ ವಿದ್ಯೆ, ತನ್ನ ವಿಳಾಸಂ ತನ್ನನುಮಯವೆನಿಪ್" ಪ್ರಖ್ಯಾತನಾಗಿದ್ದನು,

ಜನ್ನ ಕೊಡುಗಯ್ಯ ದಾನಿಯಾಗಿದ್ದ. 'ಜಗದೊಳ್ ತಾನಿತ್ತ ಕೆಯ್ಯಲ್ಲದೆ ಒಡ್ಡಿದ ಕಯ್ಯಿಲ್ಲದ ಪೆಂಪು' ಅವನದು. ಗಂಡರಾದಿತ್ಯನ ಪೊಟಲಿನಲ್ಲಿ (ದ್ವಾರಸಮುದ್ರದಲ್ಲಿ) ಅನಂತಜಿನನಿಗೆ ಪ್ರೊಸಜ್ಜೈತನ್ಯವನ್ನು 'ಚೆಲ್ವಪ್ಪಿನಂ ಮಾಡಿಸಿ' ತನ್ನ ಧರ್ಮಶ್ರದ್ಧೆಯನ್ನು ಪ್ರಕಟಿಸಿ 'ಜೈನಮಂದಿರ ನಿರ್ಮಾಣಧನ'ನಾಗಿದ್ದಾನೆ. ಜನ್ನನದು ಉದಾರವೂ ಸುಸಂಸ್ಕೃತವೂ ಆದ ಮನಸ್ಸು. 'ಅನ್ಯರ ಲೇಸನಲ್ಲದೆ ಎನಗಿಂತಂತೆಂದು ಮಾತಾಡಲೊಲ್ಲದ' ಮಾನಸಮೇರುಸ್ವಭಾವ ಅವನದು.

ಕಥಾಸಾರ

ಭರತಕ್ಷೇತ್ರದಲ್ಲಿ 'ಅತಿಶಯಸುಖಿಲಾಭಾರತರ ಸಚ್ಚಿನ ಅಚ್ಚು' ಎನ್ನಿಸಿರುವುದು ಕೌಶಲದೇಶ. ಇದರ ರಾಜಧಾನಿ ಅಯೋಧ್ಯೆ. ಇದನ್ನು ಇಕ್ಷ್ವಾಕುವಂಶೀಯನಾದ ಸಿಂಹಸೇನ ಆಳುತ್ತಿದ್ದನು. ಈತನ ಪಟ್ಟದರಸಿ ಜಯಶ್ಯಾಮೆ. ಒಂದು ದಿವಸ ಒಡ್ಡೋಲಗಕ್ಕೆ ಅಪ್ಸರಸ್ತ್ರೀಯರೊಡನೆ ಇಷ್ಟಶರ್ಮನೆಂಬ ಬ್ರಾಹ್ಮಣೋತ್ತಮನು ಪುಷ್ಪಕವಿಮಾನ

ದಿಂದಿಳಿದು ಬಂದು ಅರಸನನ್ನು ಆಶೀರ್ವದಿಸಿ ಉಪಾಯನ ವಿನಿಯೋಗ ಮಾಡಿದನು. ಆಗ ಆ ಬ್ರಾಹ್ಮಣನ ಪಕ್ಕದಲ್ಲಿದ್ದ ಮನೋಹರಿಯೋರ್ವಳನ್ನು ನೋಡಿ ಮಂತ್ರಿಮಹತ್ತರರು "ಈ ಮಹಾನುಭಾವೆಯಾದ ಮನೋಹರಿಯ" ಹೆಸರೇನೆಂದು ಕೇಳಲು ಅದಕ್ಕೆ ಇಷ್ಟಶರ್ಮ "ಮದನಮಂಜರಿ ಎಂಬುವಳೀಕೆ ಭುಜಂಗಸೇನ ಮಹಾರಾಜನ ಕುವರಿ" ಎನ್ನುವನು. ಅದನ್ನು ಕೇಳಿ ಜಯಮಿತ್ರೆಗೆ ಕಣ್ಣು ತುಂಬಿ ಬಂದು, ಗದ್ಗದಿತಳಾಗಿ ಪೀಠದಿಂದ ಮೇಲೆದ್ದು ಭರದಿಂದ ಬಂದು ಮದನಮಂಜರಿಯನ್ನು ಅಪ್ಪಿದಳು. ಆಶ್ಚರ್ಯಗೊಂಡ ಸಿಂಹಸೇನ ಮಹಾರಾಜ 'ಪ್ರಣಯಪ್ರವಾಹಿನಿಯೊಳ್ ಮುಳುಂಕಿ ತೇಂಕಾಡುವ' ಮನಃಪ್ರಿಯೆಯನ್ನು ಕುರಿತು ನಿನಗಿಷ್ಟು ವ್ಯಾಮೋಹವೇಕಾಯಿತು? ಈ ಮಾನಿನಿ ನಮಗೇನಾಗಬೇಕು?' ಎಂದು ಅನುನಯದಿಂದ ಕೇಳಲು ಆನಂದದ ಕಣ್ಣೀರನ್ನು ಸುರಿಸುತ್ತಾ ಆಕೆ ಗಂಡನೊಂದಿಗೆ ಹೀಗೆಂದಳು: "ದೇವ, ನೀವು ನನ್ನ ಮದುವೆಯಂದು ಕಂಡ ಕಾಶ್ಮೀರದೇಶಕ್ಕೆ ವಿಶೇಷವಾದ ಪದ್ಮನಗರದಲ್ಲಿ ನನ್ನ ತಂದೆ ಭುಜಂಗಸೇನ ಮಹಾರಾಜನು ನನ್ನ ಅಕ್ಕ ಮದನಮಂಜರಿಯ ಬಾಲಕೇಳಿವಿಲಾಸವನ್ನು ನೋಡುತ್ತ ಆನಂದಿಸುತ್ತಿರುವಲ್ಲಿ ವಿದ್ಯಾಧರನಾದ ಉತ್ಪಲಚೂಡನೆಂಬ ಉದ್ಧತನು ವಿಮಾನದಲ್ಲಿ ಚಲಿಸುತ್ತಾ ಅವಳನ್ನು ನೋಡಿ ಮನೋಜವಿಮೋಹದಿಂದ ತೆಗೆದು ತನ್ನ ಪುಷ್ಪಕವಿಮಾನದಲ್ಲಿಟ್ಟು ಬಾಲಕಿಯನ್ನು ಸಮ್ಮೋಹಿಸಿ ವಿದ್ಯಾಪ್ರಭಾವದಿಂದ ಮೋಹಿಸಿದನು.

ಉತ್ಪಲಚೂಡನು ಅವಳನ್ನು 'ತುಹಿನಕರ ಕಳೆಯಂ ಬಳಯಿಸುವ ಗಗನವಲ್ಲಭನಂತೆ' ಕಳಾಕಲಾಪದೊಡನೆಯೂ ವಿದ್ಯಾಧರ ವಿಲಾಸದೊಡನೆಯೂ ಬಳಯಿಸಲು ಅವಳ ರೂಪಲಾವಣ್ಯಗಳು ಆಶ್ಚರ್ಯವನ್ನುಂಟುಮಾಡಿತು. ಕನ್ಯೆಯ ನಿಸ್ಪೃಹೆಯಾದರು ಕೂಡದೆಯೇ ಅವಳನ್ನು ಸ್ವೀಕರಿಸಿದರೆ ನನ್ನ ವಂಶಕ್ಕೆ ಅಯಶಸ್ಸು ಪ್ರಾಪ್ತವಾಗುತ್ತದೆಂದು ಭಾವಿಸಿದ ಉತ್ಪಲಚೂಡ ಪದ್ಮನಗರಕ್ಕೆ ಮದನಮಂಜರಿಯೊಂದಿಗೆ ಬಂದನು. ಭುಜಂಗಸೇನ ಅವರೀರ್ವರಿಗೂ ಮದುವೆ ಮಾಡಿದ. ಈ ಸುದ್ದಿ ತಿಳಿದಿದ್ದ ನಾನು ಮದನಮಂಜರಿಯನ್ನು ಇಂದು ಕಂಡೆನು—ಎಂದಳು. ಅನಂತರ ಸಿಂಹಸೇನ "ಭುಜಂಗಸೇನನು ರಾಜ್ಯಭಾರವನ್ನು ಮಗನಾದ ಕೀರ್ತಿಶೇಖರನಿಗೆ ಒಪ್ಪಿಸಿದರೆಂದು ಕೇಳಿರುವೆವು. ನೃಪನವನು ಕ್ಷೇಮವೇ?" ಎಂದು ವಿಚಾರಿಸಿದನು. ಅದಕ್ಕೆ ಮದನಮಂಜರಿ "ಕ್ಷೇಮದಿಂದಿರುವನು. ಒಮ್ಮೆ ನಂದೀಶ್ವರಾಷ್ಟಮಿಯಲ್ಲಿ ಕೀರ್ತಿಶೇಖರ ತನ್ನ ಭಾವನೊಡನೆ ಕುರುವಿಂದನೆಂಬ ಗಿರಿಗೆ ಹೋಗಿ ಕಲ್ಯಾಣವನ್ನು ಮಾಡಿ ಧರ್ಮಶ್ರವಣಾನಂತರ "ಜಯಮಿತ್ರೆಗೆ ಪುತ್ರೋದ್ಭವವೆಂದು" ಎಂದು ಮುನಿವೃಂದಾರಕನನ್ನು ಕೇಳಿದನು. ಆಗ ಮುನಿಗಳು ಇಷ್ಟಶರ್ಮರಿಗೆ ವಿಶದವಾಗಿ ಎಲ್ಲವನ್ನೂ ತಿಳಿಸಿದರು. ಇಷ್ಟಶರ್ಮರೊಡಗೂಡಿ ನಾನು ಬಂದಿರುವೆನು. ಅವರಿಂದ ಅವಧಾರಿಸಿ" ಎಂದಳು. ಇಷ್ಟಶರ್ಮನು ಕಥೆಯನ್ನು ಹೇಳತೊಡಗಿದ:

ಕೋಸಲದೇಶದ ಅರಿಷ್ಟನಗರವನ್ನು ಪದ್ಮರಥನೆಂಬ ರಾಜನು ಆಳುತ್ತಿದ್ದನು.

ಆತನ ರಾಣಿ ಲಕ್ಷ್ಮೀಮತಿ. ಮಗ ಮೇಘರಥ. ಒಮ್ಮೆ ರಾಜನು ಓಲಗಶಾಲೆಯಲ್ಲಿರಲು ಓರ್ವ ದೂತನು ಬಂದು ವಿನ್ಮಯೋಗೀಶ್ವರರ ಕೂಟವು ಅತ್ತ ಬರುತ್ತಿರುವುದಾಗಿ ಹೇಳಿದನು. ಪದ್ಮರಥ ಎದ್ದು ಬಂದು ಮುನಿವೃಂದಕ್ಕೆ ನಮಸ್ಕರಿಸಿ ದರ್ಶನಾರ್ಥವಾಗಿ ತಪೋವನಕ್ಕೆ ಹೊರಟನು. ಅಲ್ಲಿನ ಪ್ರಶಾಂತ ಹಾಗೂ ವೈರತ್ವವಿಲ್ಲದ ಆವರಣವನ್ನು ನೋಡಿ ಸಂತೋಷಗೊಂಡು ಮಂದರಪರ್ವತವನ್ನು ಬಲಗೊಳ್ವ ಪುರಂದರನ ರೀತಿಯಲ್ಲಿ ಅರುಹನ ಮಂದಿರವನ್ನು ಪ್ರದಕ್ಷಿಣೆ ಮಾಡಿ ಒಳಗೆ ಪ್ರವೇಶಿಸಿ ತ್ರೈಲೋಕ್ಯನಾಥನನ್ನು ಪೂಜಿಸಿದನು. ಅನಂತರ ತಪಸ್ವಿಗಳ ನಡುವೆಯಿದ್ದ ಭಟ್ಟಾರಕನನ್ನು ನೋಡಿ ಭಕ್ತಿಯಿಂದ ನಮಿಸಿ ಅರ್ಚಿಸಿದನು. 'ಧರ್ಮಶ್ರವಣಪ್ರಶಂಸೋತ್ಕಂಠ'ನಾದ ಮಹಾರಾಜನಿಗೆ ಸ್ವಯಂಪ್ರಭ ಮುನಿಗಳು ಆಶೀರ್ವದಿಸಿ 'ಕಿಜುವಜತೊಳೆ ತಿಳಿಸಂತಿರೆ' ಜಿನಧರ್ಮವನ್ನು ಬೋಧಿಸಿ ಮಿಥ್ಯಾಮಲವನ್ನು ತಮ್ಮ 'ವಾಕ್ಚಂದ್ರಿಕಾಪೂರ'ದಿಂದ ನಿವಾರಿಸಿದರು. ಮಹಾರಾಜನು ಸಮುದಾಯಕೀ ಸಭೆಯನ್ನು ಬಲಗೊಂಡು ಸಿದ್ಧಶೇಷೆಯನ್ನು ಸ್ವೀಕರಿಸಿ ನಗರಕ್ಕೆ ಮರಳಿದನು. ಅಂದಿನ ರಾತ್ರಿ ಆಗಸದಲ್ಲಿ ಉಲ್ಕಾಪಾತವನ್ನು ಕಂಡು ಶರೀರಾದಿ ಸಮಸ್ತ ವಸ್ತುಗಳಲ್ಲಿ ಅಸ್ಥಿರತ್ವವನ್ನು ಮನಗಂಡು ನಿರ್ವೇಗಪರನಾದನು. ಮಗನಾದ ಮೇಘರಥನನ್ನು ಕರೆಯಿಸಿ ರಾಜ್ಯಭಾರವನ್ನು ಅವನಿಗೆ ವಹಿಸಿಕೊಟ್ಟು ವನಕ್ಕೆ ನಡೆದು ಪರಮಗುರುವಿನ ಪಾದಪದ್ಮೋಪಾಂತದಲ್ಲಿ ದೀಕ್ಷೆ ಸ್ವೀಕರಿಸಿ ಕಠೋರ ತಪಸ್ಸನು ಆಚರಿಸಿ ಪ್ರತಿಮಾಯೋಗವನ್ನು ಕೈಕೊಂಡು ಮಡಿದು ಅಚ್ಯುತಕಲ್ಪವನ್ನು ಸೇರಿ ಅಲ್ಲಿ ಇಂದ್ರನಾದನು. ಈ ಅಚ್ಯುತೇಂದ್ರನೇ ಹದಿನಾಲ್ಕನೆಯ ತೀರ್ಥಂಕರನಾದ ಅನಂತನು. ಈತ ನಿಮಗೆ ಮಗನಾಗಿ ಹುಟ್ಟುವನೆಂದು ಮುನಿನಾಥರು ಹೇಳಿದರು.

ಇಷ್ಟಶರ್ಮನು ಹೇಳಿದುದನ್ನು ಕೇಳಿ ಸಭಾಜನ, ಪರಿಜನ, ಬಂಧುಜನಗಳೆಲ್ಲಾ ಸಂತೋಷಸಾಗರದಲ್ಲಿ ಮುಳುಗಾಡಿದರು. ಅನಂತರ ಇಷ್ಟಶರ್ಮ ರಾಜನನ್ನು ಕುರಿತು "ಮುಂದೆ ತ್ರೈಲೋಕ್ಯನಾಥನನ್ನು ಮಗನನ್ನಾಗಿ ಹೊಂದುವ ನಿಮ್ಮನ್ನು ನೋಡಿದ ಕಾರಣದಿಂದ ನಾವು ಕೃತಕೃತ್ಯರಾದೆವು. ದೇವ, ಇನ್ನು ನಮ್ಮನ್ನು ಬೀಳ್ಕೊಡಬೇಕು" ಎನ್ನಲು ಸಿಂಹಸೇನ ಅವರನ್ನು ಮನ್ನಿಸಿ ಬೀಳ್ಕೊಟ್ಟನು.

ಸಾಕೇತದಲ್ಲಿ ಅನಂತನಾಥನ ಉದಯವಾಗುವುದನ್ನು ಅವಧಿಜ್ಞಾನದಿಂದ ಅರಿತ ಅಮರೋತ್ತಮನು ಇನ್ನು ಆರು ತಿಂಗಳಿದೆ ಎನ್ನುವಾಗಲೇ ಗರ್ಭಾವತಾರ ವಾರ್ತೆಯನ್ನು ತಿಳಿಸಿದನು. ಒಂದು ದಿನ ಆಸ್ಥಾನದಲ್ಲಿ ಜಯಶ್ಯಾಮಾದೇವಿಯೊಂದಿಗೆ ಮಹರಾಜನಿರಲು ಅಲ್ಲಿಗೆ ಓರ್ವ ವೈಮಾನಿಕನು ಬಂದು ಇಂದ್ರನು ಜಯಶ್ಯಾಮೆಯ ಉಪಚಾರಕ್ಕಾಗಿ ಅನೇಕ ಪರಿಚಾರಕಿಯರನ್ನು ಕಳುಹಿಸಿರುವುದಾಗಿ ಹೇಳಿ ಅವರೆಲ್ಲರನ್ನೂ ತೀರ್ಥಂಕರ ಜನನಿಯ ಸೇವೆಗೆ ನಿಯಮಿಸಿ ಮಹಾರಾಜನಿತ್ತ ಪಾರಿತೋಷಕದಿಂದ ಸಂತೃಪ್ತಮನನಾಗಿ ತನ್ನ ನಿವಾಸಕ್ಕೆ ಮರಳಿದನು. ಜಯಶ್ಯಾಮೆ ಒಂದು ಶುಭರಾತ್ರಿ ಬೆಳಗಿನ ಜಾವದಲ್ಲಿ ಶುಭ

ಸ್ವಪ್ನಗಳನ್ನು ಕಂಡು ಎಚ್ಚತ್ತು ಚಿತ್ರವಲ್ಲಭನಿಗೆ ಅವೆಲ್ಲವನ್ನೂ ಹೇಳಿದಳು. ಸಿಂಹಸೇನನು ಮಹಾರಾಣಿಗೆ ಆಕೆ ಕಂಡ ಸ್ವಪ್ನಫಲಗಳನ್ನು ತಿಳಿಸಿ, ನಿನ್ನ ಮುಖವನ್ನು ಬಿಳಿಯ ಆನೆ ಪ್ರವೇಶಿಸಿದುದು ಪರಮಪುರುಷನ ಅವತಾರದ ಸೂಚನೆಯೆಂದನು.

ಶುಭಮುಹೂರ್ತದಲ್ಲಿ ಅನಂತಜಿನನು ಜಯಶ್ಯಾಮೆಯ ಗರ್ಭದಲ್ಲಿ ಬಂದು ನೆಲಸಿದನು. ಜಯಶ್ಯಾಮೆಯ ಗರ್ಭಮಹಿಮೆಯನ್ನು ಹೇಗೆ ವರ್ಣಿಸುವುದು! ಚಾರಣರು ವಿಶೇಷದ ಮುನಿಪುಂಗವರು ತಮಗೆ ತತ್ವಪದಾರ್ಥದಲ್ಲಿ ಒಂದು ಸಂದೇಹ ತಲೆದೋರಲು ಜಯಶ್ಯಾಮೆಯಿದ್ದಲ್ಲಿಗೆ ಬಂದು ತಾಯಿಯನ್ನು ಪ್ರದಕ್ಷಿಣೆ ಮಾಡಿದರು. ಗರ್ಭದಲ್ಲಿನ ನಿರ್ಭರ ಬೋಧಮಹಾಪ್ರಭಾವದಿಂದ ಸಂದೇಹ ನಿವಾರಣೆಯಾಯಿತು. ಒಂಬತ್ತು ತಿಂಗಳು ಕಳೆಯಿತು. ಧನುರ್ನಕ್ಷತ್ರಾಧಿಪವಾದ ಕಾಲದಲ್ಲಿ ಶಿವಾಜ್ಞಾನ ವಿಶಿಷ್ಟಯೋಗ, ಆಷಾಢ ಕೃಷ್ಣ ತ್ರಯೋದಶಿ ರೇವತಿಯಲ್ಲಿ ಜಗತ್ತ್ರಿತಯ ಲಕ್ಷ್ಮೀವಲ್ಲಭ ಹುಟ್ಟಿದನು.

ಅನಂತನ ಜನನವಾಗುತ್ತಲೇ ಇಂದ್ರನಿಗೆ ಆಸನಕಂಪವಾಯಿತು. ಅವಧಿಜ್ಞಾನದಿಂದ ಜಿನಜನನವನ್ನು ಅರಿತು ಶತಕ್ರತು ಜನ್ಮನ್ಯತಿವಿರಹಿತನಾದ ಅನಂತಜಿನನಿಗೆ ಜನ್ಮಾಭಿಷೇಕ ಕಲ್ಯಾಣವನ್ನು ಮಾಡಲು ಉದ್ಯತನಾದನು. ದೇವೇಂದ್ರನು ಪತ್ನೀಸಮೇತನಾಗಿ ದೇವತೆಗಳೊಡನೆ ಅಯೋಧ್ಯೆಯತ್ತ ತೆರಳಿ ಪುರೋಭಾಗದಲ್ಲಿ ನಿಂತು ಪೌಲೋಮಿಯನ್ನು ಜಿನಜನನಿಯ ಮಂದಿರಕ್ಕೆ ಕಳುಹಿಸಿದನು. ಆಕೆ ರೂಪುಗರೆದು ಜಿನಜನನೀ ಗೃಹವನ್ನು ಪ್ರವೇಶಿಸಿ ಜಿನಶಿಶುವನ್ನು ನೋಡಿ ಅದನ್ನು 'ಒಡೆಯರ ತೊಡವಂ ತೊಟ್ಟನೆ ಬಡವಂ ಕಂಡಂತೆ' ಎತ್ತಲು ಧೈರ್ಯವಿಲ್ಲದೆ ನಿಂತಳು. ಕಲ್ಯಾಣೋದ್ಯೋಗಕ್ಕೆ ತಡವಾಗುವುದೆಂದು ಹೆದರಿ ಧೈರ್ಯವನ್ನು ತಂದುಕೊಂಡು ತನ್ನ ನಳಿದೋಳ್ಗಳಿಂದ ಬಾಲಕನನ್ನು ಅಂಜುತ್ತಲೆತ್ತಿದಳು. ತಾಯಿಗೆ ಮಾಯದ ನಿದ್ರೆಯನ್ನು ಬರಿಸಿ ಮಾಯಾಶಿಶುವನ್ನು ಪಕ್ಕದಲ್ಲಿ ತಂದಿಟ್ಟು ಪುಲೋಮಸುತೆ ಸಂತೋಷದಿಂದ ತನ್ನೆರೆಯನಿಗೆ ಮಗುವನ್ನು ನೀಡಿದಳು. ಕುಲಿಶಧರನು ಪ್ರೀತಿಯಿಂದ ಮಗುವನ್ನು ತೆಗೆದುಕೊಂಡು 'ಕಣ್ಣಾರೆ ತಣಿಯೆ' ನೋಡಿ ಐರಾವತದ ಪೂರ್ವಾಸನದಲ್ಲಿ ಕುಳ್ಳಿರಿಸಿ ಅಯೋಧ್ಯಾಪುರದಿಂದ ಅಮರಾದ್ರಿಗೆ ಸುರನಿಕುರುಂಬದೊಂದಿಗೆ ನಡೆದನು.

ಮೇರುಪರ್ವತದಲ್ಲಿ ಪಾಂಡುಕಶಿಲಾತಳದ ಮಧ್ಯದ ಸಿಂಹಾಸನದಲ್ಲಿ ಜಿನನನ್ನು ಪೂರ್ವಾಭಿಮುಖವಾಗಿ ಕುಳ್ಳಿರಿಸಿ ಅಭಿಷೇಕ ಮಾಡಿಸಿ ಮಂಗಳಪ್ರಸಾಧನಗಳಿಂದ ಅಲಂಕರಿಸಲಾಯಿತು. ಊರ್ವಶಿ, ರಂಭೆ, ತಿಲೋತ್ತಮೆ, ಮಂಜುಘೋಷೆ, ಮೇನಕೆ— ಇವರುಗಳೊಂದಿಗೆ ಬಿಡೌಜಸಂಗನೆ ಆರತಿಯೆತ್ತಿದಳು. ಅಷ್ಟವಿಧ ಕರ್ಮವೈರಿಯನ್ನು ಅಷ್ಟವಿಧ ಅರ್ಚನೆಗಳಿಂದ ಪೂಜಿಸಿ ಸಾಷ್ಟಾಂಗನಮಸ್ಕಾರ ಮಾಡಿ ದೇವೇಂದ್ರ ಸ್ತುತಿಸಿದನು. ಅನಂತರ ಉತ್ಸವದಿಂದ ಅಯೋಧ್ಯೆಗೆ ಮರಳಿ ಬಂದು ದೇವಸಮೂಹದೊಂದಿಗೆ ರಾಜಮಂದಿರವನ್ನು ಪ್ರವೇಶಿಸಿ ಉಪ್ಪರಿಗೆ ಮನೆಯ ಅಪರ ಭಾಗದಲ್ಲಿ

ತನ್ನಾಜ್ಞೆಯಿಂತೆ ಮುನ್ನವೇ ನಿರ್ಮಿಸಲ್ಪಟ್ಟ ಮಣಿಮಂಟಪದ ಮಧ್ಯ ವೇದಿಕೆಯ ಸಿಂಹಾಸನದಲ್ಲಿ ಜಿನಸಿಂಹ ಕಿಶೋರಕನನ್ನು ಇರಿಸಿ ತನಗಿದಿರಾಗಿ ಬಂದ ಸಿಂಹಸೇನ ಜಯಶ್ಯಾಮಾ ಮಹಾದೇವಿಯರನ್ನು ಸಂತೋಷಗೊಳಿಸಿ ಜಿನಜನ್ಮಾಭಿಷೇಕ ಕಲ್ಯಾಣವನ್ನು ಅವರಿಗೆ ತಿಳಿಯಹೇಳಿ ಮಗುವಿಗೆ ಅನಂತನೆಂಬ ಹೆಸರನ್ನಿಟ್ಟು ಅಮರೇಂದ್ರರೆಲ್ಲರನ್ನೂ ಕಳುಹಿ ಅಮರಾವತಿಗೆ ಮರಳಿದನು.

ಬಾಲಕನಾದ ಅನಂತನಾಥ ತನ್ನ ಬಾಲಲೀಲೆಗಳಿಂದ ತಂದೆ–ತಾಯಿಯರನ್ನು ಸಂತಸದ ಕಡಲಿನಲ್ಲಿ ಮುಳುಗಾಡಿಸಿದ. ಬಾಲ್ಯ ಸರಿದು ಯೌವನ ಮುಂದಿಟ್ಟಿತು. ಒಮ್ಮೆ 'ಪುಣ್ಯದ ಪುಂಜ'ವಾದ ಅನಂತನನ್ನು ನೋಡಿದ ಸೈನಿಕಾಗ್ರೇಸರನೊಬ್ಬನು "ಕುಮಾರನು ವಿವಾಹಕ್ಕೆ ಒಪ್ಪಿದರೂ ಜಿನನನ್ನು ಸೋಲಿಸುವ ಹೆಂಗೆಳೆಯರಾರು? ಪರಮನನ್ನು ತೋಳ್ಸೆರೆಯಲ್ಲಿ ಕಾವ ಕಾಮಿನಿಯಾವು? ದೇವದೇವನಂಕತಲದಲ್ಲಿ ಮಾದೇವಿಗೊಪ್ಪುವ ಅಂಗನೆಯಾವು? ಅಂತಹ ಹೆಣ್ಣನ್ನು ಕೇಳ್ದಿದೆಯಿಲ್ಲ ಕಂಡ ಕುರುಹಿಲ್ಲ" ಎಂದನು. ಇದು ಅರಸನ ಕಿವಿಗೂ ಬಿದ್ದಿತು. ಮಗನ ಮದುವೆಯ ಚಿಂತೆ ದಂಪತಿಗಳಿಗಾಯಿತು. ಆಗ ಛತ್ರಬಳನೆಂಬವನು ಅನಂತನಾಥನಿಗೆ ಕೀರ್ತಿಶೇಖರನ ಮಗಳಾದ ರತ್ನಮಾಲೆಯೇ ಸರಿಯಾದ ಕನ್ಯೆಯೆಂದು ತಿಳಿಸಿದನು. ವಿವಾಹ ತೀರ್ಮಾನವಾಯಿತು.

ಸಿಂಹಸೇನ ಮಹಾರಾಜನು ಅನಂತನಿಗೆ ಸಾಮ್ರಾಜ್ಯಪಟ್ಟ ಕಟ್ಟಿದನು. ಅಷ್ಟರಲ್ಲಿ ವಸಂತ ತಲೆದೋರಿದ. ಅನಂತ ತನ್ನವರೊಡನೆ ವನವಿಹಾರ ಕೈಗೊಂಡ. ಹದಿನೈದು ಲಕ್ಷ ವರುಷ ಸಾಮ್ರಾಜ್ಯಸೌಖ್ಯಗಳನ್ನು ಅನುಭವಿಸಿದಮೇಲೆ, ವರ್ಷಾಗಮದಲ್ಲಿ ಒಂದು ದಿವಸ ಆಗಸದಲ್ಲಿ ಮಿಂಚನ್ನು ಕಂಡು ಅನಂತ ಶರೀರಭೋಗನಿರ್ವೇಗಪರನಾಗಿ ಸಭಾಭವನಕ್ಕೆ ಬಂದು ರಾಜ್ಯಭಾರವನ್ನು ಮಗನಾದ ವಿಜಯಕುಮಾರನಿಗೆ ಒಪ್ಪಿಸಿ ಅನಂತರ ಸಭೆಗೆ ನರಕದುಃಖವರ್ಣನ ಮಾಡಿ ಧರ್ಮಬೋಧೆ ಮಾಡಿದನು. ಅಭವನ ನಿಷ್ಕ್ರಮಣ ವಿಶೇಷೋತ್ಸವವನ್ನು ಅವಧಿಜ್ಞಾನದಿಂದ ತಿಳಿದ ಇಂದ್ರ ಚತುರ್ನಿಕಾಯ ನಾಕಿನಿಕಾಯ ಸಮೇತ ಸಾಕೇತಪುರಕ್ಕೆ ಬಂದು ಅರಮನೆಯನ್ನು ಪ್ರವೇಶಿಸಿ ನಿಷ್ಕ್ರಮಣ ಮಂಗಳ ಕಾರ್ಯವನ್ನು ಹೊಗಳಿ ತನ್ನ ಆಜ್ಞೆಯಿಂದ ನಿರ್ಮಿತವಾದ ಅಭಿಷವಣ ಮಂಡಪಕ್ಕೆ ಅನಂತ ಜಿನನನ್ನು ತಾನೇ ಕೈಗೊಟ್ಟು ನಡೆಯಿಸಿ ಪರಿನಿಷ್ಕ್ರಮಣೋತ್ಸವವನ್ನು ನೆರವೇರಿಸಿದನು. ಆಗ ಪಂಚಾಶ್ಚರ್ಯಗಳು ಉಂಟಾದುವು. ಅನಂತ ಉಗ್ರ ತಪಸ್ಸನ್ನಾಚರಿಸಿ ಕೇವಲ ಜ್ಞಾನವನ್ನು ಹೊಂದಿದನು.

ಜಿನಚಂದ್ರನ ಬೋಧ ವಿಲೋಚನಚಂದ್ರಿಕೆ ಜಗಲು ಮೆಚ್ಚಿ ತಲೆದೂಗುವ ರೀತಿಯಲ್ಲಿ ಅನಿಮಿಷಪತಿಗೆ ಆಸನಕಂಪನವಾಯಿತು. ದೇವೇಂದ್ರನು ಕುಬೇರನಿಗೆ ಸಮವಸರಣ ಮಂಟಪ ವಿರಚನೆಗೆ ನಿರೂಪಿಸಿ, ಪೌಳೋಮಿ ಸಮೇತನಾಗಿ ಚಾತುರ್ಥಕಲ್ಯಾಣವನ್ನು ನಿರ್ವರ್ತಿಸಲು ಸಮವಸರಣ ಮಂಟಪದ ಸಮೀಪಕ್ಕೆ ಬಂದನು. ಇಂದ್ರ ಅನಂತನನ್ನು

ಬಲವಂದು ರತ್ನಕುಸುಮಾಂಜಲಿಯನ್ನು ಅವನಿಗಿತ್ತು ಸ್ತುತಿಸುತ್ತಾ "ನಿನ್ನರಿವು, ನಿನ ಮಾರ್ಗ, ನಿನ್ನಾಗಮಯುಕ್ತಿ, ನಿನ್ನ ಮಹಿಮೋನ್ನತಿ ನನ್ನಲ್ಲಿ ಇಲ್ಲ. ನನ್ನ ಮನವರಿಯುವಂತೆ ಬಿಕ್ಕನರಲ್ಲಿ ನನ್ನನ್ನು ನಿನ್ನಂತೆ ಮಾಡು. ಮುನಿದು ಒಸೆದು ಕೊಡುವ ಕೊಳ್ವಾತನೆ ದೇವನು" ಎಂದು ಅನೇಕ ಪ್ರಕಾರವಾಗಿ ಸ್ತುತಿಸಿ ಬಳಿಕ ಅತ್ಯಂತ ಪೂಜ್ಯವೂ ಬೆಲೆಬಾಳುವವೂ ಆದ ವಸ್ತ್ರಗಳಿಂದ ಅಂಗಜಹರನನ್ನು ಆರಾಧಿಸಿದನು.

ಇತ್ತ ಅಯೋಧ್ಯೆಯಲ್ಲಿ ವಿಜಯಕುಮಾರನು ತಂದೆಯ ಅಗಲಿಕೆಯ ನೋವನ್ನು ಸಹಿಸಲಾರದವನಾಗಿ ರಾಜ್ಯಸುಖಪರಾಙ್ಮುಖನಾಗಿ ಮಂತ್ರಿಮಹತ್ತರರಿಗೆ ರಾಜ್ಯವನ್ನು ಒಪ್ಪಿಸಿ. ಜಗತ್ತ್ರಯಗುರುವನ್ನು ಕಾಣುವ ಉತ್ಸುಕತೆಯಿಂದ ಅಯೋಧ್ಯೆಯಿಂದ ಹೊರಟನು. ನಗರ, ಗ್ರಾಮ, ಖೇಡ, ಖರ್ವಡ, ಮಡಂಬ, ಪತ್ತನ ಇವೇ ಮೊದಲಾದ ಬೀಡುದಾಣಗಳಲ್ಲೆಲ್ಲಾ ಅನಂತನಾಥನನ್ನು ಅರಸಿ ಕಾಣದೆ ಬಳಲಿ ಜೋಲಾಡುತ್ತಾ ಮನಸ್ಸಿನಲ್ಲಿ ಮೂಡಿದ ಅನುಮಾನವನ್ನನುಸರಿಸಿ ಸಹೇತುಕವನದ ಕಡೆಗೆ ನಡೆದು ಬಂದು ಅಲ್ಲಿದ್ದ ಅಶ್ವತ್ಥವೃಕ್ಷದ ಕೆಳಗೆ ಕುಳಿತನು. ಆಗ ಅಲ್ಲಿಗೆ ಶಾಂತಿಶುಭಾಚಾರ್ಯರೆಂಬ ದಿವ್ಯ ಮುನೀಂದ್ರರು ಬರಲು ಅವರನ್ನು ಕಂಡು ವಿಜಯಕುಮಾರನು ನಮಸ್ಕರಿಸಲು ಅವರು ಹರಸಿ ಈ ಅರಳಿಯ ಮರದಡಿಯ ಚಂದ್ರಕಾಂತ ಶಿಲೆಯ ಮೇಲೆ ನಿನ್ನ ಗುರು ನಿಲ್ಲಲು ಪರಮಜ್ಞಾನಸಂಪತ್ತು ಪ್ರಾಪ್ತವಾಯಿತು. ಅನಂತರ ಸಮವಸರಣ ಮಂಟಪದಲ್ಲಿ ಕುಳಿತು ಧರ್ಮವಿಹಾರ ಮಾಡುತ್ತಾ ಆಗಸದಲ್ಲಿ ಚಲಿಸಿ ಭವ್ಯಸಸ್ಯಾವಳಿಗಳಿಗೆ ಧರ್ಮಾಮೃತವೆಂಬ ಮಳೆಯನ್ನು ಕರೆದನು. ನಿನ್ನಾಸೆಯು ಸಫಲವಾಗುವ ವ್ರತವೊಂದನ್ನು ಹೇಳುವೆನು ಕೇಳು ಎಂದು ಹೇಳಿ ಶಾಂತಿಶುಭಾಚಾರ್ಯರು ಪುರಾಣಪ್ರಸಿದ್ಧವಾದ ಅನಂತವ್ರತವನ್ನು ಉಪದೇಶಿಸಿ ಆ ವ್ರತದ ಆಚರಣೆಯಿಂದಾಗುವ ಫಲವನ್ನು ವಿವರಿಸಿ "ಅರ್ಹದ್ವಲ್ಲಭನು ಇಲ್ಲಿಗೆ ನೂರು ಯೋಜನ ದೂರದಲ್ಲಿ ಮಹಾಸಮವಸರಣ ಮಂಟಪದಲ್ಲಿ ವಿರಾಜಿಸಿರುವನು. ನೀನು ಅಲ್ಲಿಗೆ ಹೋಗಿ ಅನಂತನನ್ನು ಕಂಡು ಸುಪ್ರೀತನಾಗುವೆ. ಭಾದ್ರಪದ ಶುದ್ಧ ಚತುರ್ದಶಿ ನಾಳೆ ನೀನು ವ್ರತವನ್ನು ನೋನಲು ವನದೇವತೆಗಳು ನಿನ್ನನ್ನು ಆಗಸಮಾರ್ಗದಲ್ಲಿ ಕೊಂಡೊಯ್ವರು. ಸಚರಾಚರಗುರುವನ್ನು ಒಂದು ನಿಮಿಷದಲ್ಲಿ ಕಾಣುವೆ" ಎಂದು ಹೇಳಿದನು. ವಿಜಯನು ಮುನೀಂದ್ರರು ತಿಳಿಸಿದಂತೆಯೇ ಆ ವ್ರತವನ್ನು ಅನುಷ್ಠಿಸಲು ಆತನನ್ನು ಖೇಚರರು ಸಮವಸರಣ ಮಂಟಪಕ್ಕೆ ತಂದರು. ವಿಜಯನು ತ್ರಿಭುವನೈಕ ಚೂಡಾಮಣಿಯನ್ನು ಕಂಡು ವಂದಿಸಿ ಸ್ತುತಿಸಿ ಪೂಜಿಸಿ ಬಳಿಕ ಸುಖವನ್ನು ಅಕ್ಷಯ ಸುಖತರ ಸುಖವನ್ನು ಹೊಂದಿ ರಾಜ್ಯಲೀಲೆಯಲ್ಲಿದ್ದನು.

ಮದನಪತಾಕೆಯೆಂಬ ಖಚರಾಂಗನೆ ಸಮವಸರಣ ಮಂಟಪವನ್ನು ಪ್ರವೇಶಿಸಿ ಮದನಹರನಾದ ಅನಂತಜಿನನಿಗೆ ನಮಸ್ಕರಿಸಿ ಮುಖ್ಯಗಣಾಗ್ರಣಿಗಳಿಗೆ ಭಕ್ತಿಭಾವದಿಂದ ಅಭಿನಂದಿಸಿ ಬರುತ್ತ ಧೂಳೀಶಾಳದ ಕಡೆಮಾಡದಲ್ಲಿ ಸಭೆಗೆ ಬರುತ್ತಲಿದ್ದ ತಂಗಿ ಚಿತ್ರಲತೆ

ಯನ್ನು ಕಂಡು ಅವಳ ಕೈಹಿಡಿದು ನಿಲ್ಲಿಸಿ "ತಂಗಿ ಚಿತ್ರಲತೆ, ನೀನು ಹೋಗಿರುವೆಯೆಂದು ತಿಳಿದು ನಿನ್ನನ್ನು ಲತಾವನೀತಳದಲ್ಲಿ ಕೃತಕಾದ್ರಿಯಲ್ಲಿ, ಗಣಾಂಗನಾಮಾಲೆಯಲ್ಲಿ, ಸರೋವರದಲ್ಲಿ ವನವೀಧಿಯಲ್ಲಿ ಸುನೃತ್ತಗೀತಾಲಯದಲ್ಲಿ ಸುತ್ತಿ ಅರಸಿ ಕಾಣದಾದೆ. ಸಮವಸರಣದಲ್ಲಿ ನಾನು ಕೇಳಿದುದನ್ನು ಹೇಳುತ್ತೇನೆ ಕೇಳು" ಎನ್ನಲು ಚಿತ್ರಲತೆ ಕರ್ಣಸುಭಗವಾದ ವೃತ್ತಕವನ್ನು ಕೇಳಲು ಸಿದ್ಧಳಾದಳು.

ಅನಂತಜಿನನ ಸಮವಸರಣ ಮಂಟಪಕ್ಕೆ ಸುಪ್ರಭನೆಂಬ ನಾಲ್ಕನೆಯ ಬಲದೇವನು ಬಂದು ದೇವದೇವನನ್ನು ಅನೇಕ ಅರ್ಚನೆಗಳಿಂದರ್ಚಿಸಿ ನಮಸ್ಕರಿಸಿ, ಜಯನಾಥಗಣಧರರಲ್ಲಿ ತನ್ನ ಪೂರ್ವಜನ್ಮವೃತ್ತಕವನ್ನೂ ಮತ್ತು ತನ್ನ ಕೂಡಹುಟ್ಟಿದವನೂ ಚತುರ್ಥ ವಾಸುದೇವನೂ ಆದ ಪರಮಪುರುಷೋತ್ತಮನ ವೃತ್ತಕವನ್ನೂ ಬೆಸಗೊಳಲು ಒಡನೆಯೇ ಆ ಗಣಾಧರಾಧೀಶ್ವರರು ಬೆಸಸಿದ 'ಕರ್ಣಸುಭಗವಾದ ವೃತ್ತಕ'ವನ್ನು ಕಿವಿಯುಂಡ ಮದನಪತಾಕೆ ತಂಗಿ ಚಿತ್ರಲತೆಗೆ ಅದನ್ನು ಹೇಳತೊಡಗಿದಳು:

ಭರತವರ್ಷದ ತೆಂಕವಕ್ಕದಲ್ಲಿ ಸುರಮ್ಯಮಂಡಲವಿರುವುದು. ಅದರ ರಾಜಧಾನಿ ಪೌದನಪುರ. ಸುರಮ್ಯಮಂಡಲ ಹಾಗೂ ಪೌದನಪುರಗಳ ಅಧಿಪತಿಯಾದ ವಸುಷೇಣ ತನ್ನ ರಾಣಿವಾಸದ ಐನೂರ್ವರಲ್ಲಿ ಹಿರಿಯಳಾದ ಸುನಂದೆಯನ್ನು ಪಟ್ಟದರಸಿಯನ್ನಾಗಿ ಹೊಂದಿ ಇಷ್ಟವಿಷಯಕಾಮಸುಖಾನುಭವವಿಭೂತಿಯಿಂದ ರಾಜ್ಯಭಾರ ಮಾಡುತ್ತಿದ್ದನು. ಸುನಂದೆಯ ಮುಖಬಿಂಬವೇ ಮಣಿದರ್ಪಣವಾಗಿ, ಅಚ್ಚುಮೆಚ್ಚಿನ ಆ ಮಹಾದೇವಿಯಲ್ಲಿಯೇ ಆ ಭೂಕಾಂತನ ಕಣ್ಣುಗಳಿಗೆ ನಲಿವು. ಒಂದು ದಿನ ವೈಹಾಳಿಯಲ್ಲಿ ಗಜಾರೋಹಣಕ್ರೀಡೆಯಲ್ಲಿ ಮಗ್ನನಾಗಿದ್ದ ವಸುಷೇಣನನ್ನು ಸುದರ್ಶನನೆಂಬವನು ಬಂದು ಕಂಡು ನಮಸ್ಕರಿಸಿ "'ಸಹಪಾಂಸುಕ್ರೀಡಾನುಬಂಧಸಂಗತಬಂಧು'ವೂ 'ಮಕರಗ್ರಾಹಪುರವರಾಧೀಶ್ವರ'ನೂ ಆದ ಚಂಡಶಾಸನನು ತಮ್ಮನ್ನು ಹಲವು ದಿವಸ ಅಗಲಿ ಇದ್ದು ಈಗ ನೆನೆದು ನೋಡಲು ಬರುತ್ತಿದ್ದು ಅವಸರವನ್ನರಿಯಲು ನನ್ನನ್ನು ಅಟ್ಟಿದನು" ಎನ್ನಲು ಸಂತೋಷಗೊಂಡ ವಸುಷೇಣ ಬೇಗನೆ ಕರೆತರುವಂತೆ ಹೇಳಿಕಳುಹಿಸಿ ಗೆಳೆಯನನ್ನು ಇದಿರುಗೊಳ್ಳಲು ಸರ್ವಸಚಿವರೇ ಮೊದಲಾದವರೊಂದಿಗೆ ಬಂದು ನಿಂತನು. ಚಂಡಶಾಸನನು ಮಹೋತ್ಸಾಹದಿಂದ ಬಂದನು. ಬಹುಕಾಲ ಅಗಲಿ ಇದ್ದ ಗೆಳೆಯರೀರ್ವರೂ 'ರೋಮಾಂಚ ಸಂಚಯಂ ತೊಟ್ಟಂಗಿಗಳ ತಟ್ಟುಬೆರ್ಚಿ ಪೆರ್ಚಿದ ಮುಯ್ಪಿನೆಡೆ ಪೊಟ್ಟಿಸೊಡೆಂಬಿ' ಪರಸ್ಪರ ಆಲಿಂಗನ ಮಾಡಿದರು. ವಸುಷೇಣ ತನ್ನ ಪಟ್ಟದ ಮದ್ದಾನೆಯಲ್ಲಿ ಚಂಡಶಾಸನನನ್ನು ಕುಳ್ಳಿರಿಸಿ ತಾನು ಬೇರೆ ಆನೆಯನ್ನು ಏರಿ ಮಹಾವಿಭೂತಿಯಿಂದ ಕೂಡಿ ತನ್ನರಮನೆಗೆ ಕರೆದುತಂದನು. ಗೆಳೆಯರೀರ್ವರೂ ಸರಸಕಾವ್ಯವಿನೋದಗೋಷ್ಠಿಗಳಿಂದಲೂ, ನಾಟಕ ನೃತ್ಯ ಗೀತ ವಾದ್ಯಗಳಿಂದಲೂ, ಜಟ್ಟಿಕಾಳಗ ವೇಷವಿಶೇಷಗಳಿಂದಲೂ, ಚಿತ್ರವಿಚಿತ್ರ ಕೌತುಕಗಳಿಂದಲೂ ಸಮಯವನ್ನು ಕಳೆದರು. ನಿರ್ವಿಕಲ್ಪವೂ ನಿರಂತರಿತವೂ ಆದ

ಪ್ರೀತಿಯಿಂದಿರುವಾಗ ಏಕಶಯನ ಸಹಪಙ್ತ್ರಿಭೋಜನ, ಸಹವಿಲಾಸಕ್ರೀಡೆಗಳ ಸಮಯಗಳಲ್ಲಿ ವಸುಷೇಣನಂಗನೆ ಸುನಂದಾದೇವಿಯು ಕಾಮದೇವನ ಕರವಾಳಂತೆ ಕಣ್ಣಿನಲ್ಲಿ ಹೊಳೆದು ಸ್ಮರನ ಸಮ್ಮೋಹನಶಕ್ತಿಯಂತೆ ಭಾವಕರ ಬಗೆಯ ಬಯ್ಕೆಯನ್ನು ಸೂರೆಗೊಂಡು ದುರಾತ್ಮನಾದ ಚಂಡಶಾಸನನ ಕಣ್ಮಲರ್ ಕವಿದು ಕನ್ನರೆಗೊಂಡು ಸೋಲಿಸಿ ಪಡೆಯಬೇಕೆಂಬ ಆಸೆಯುಳ್ಳ, ಎದೆಗೆ ವಿಶೇಷವಾಗಿ ನೋವನ್ನು ತನುವಿಗೆ ತಾಪವನ್ನು ಜೊತೆಜೊತೆಗೆ ಬೆಳೆಯುವಂತೆ ಮಾಡಿದಳು. ಒಂದು ದಿನ ಕೆಳೆಯನ ಸಹಪಙ್ತ್ರಿ ಭೋಜನದಲ್ಲಿ ಸುನಂದೆ ಬಡಿಸಲು ಬಂದಾಗ ಆ ಮನೋಹರಿಯ ಸೊಬಗು ವಿಲಾಸಗಳಿಂದ ಭ್ರಮೆಗೊಂಡ ಕಾಮುಕ ಚಂಡಶಾಸನ ಕಂತುಸಂತಾಪಕ್ಕೆ ಗುರಿಯಾಗಿ ಮದನಜ್ವರದಿಂದ ಒಳಗೊಳಗೇ ಬೇವ ಹೃದಯವನ್ನು ಹದಕ್ಕೆ ತರಲಾಗದೆ ತನ್ನ ಅವಸ್ಥಾಂತರವನ್ನು ಕೆಳೆಯ ಸುದರ್ಶನನಲ್ಲಿ ಹೃದಯಬಿಚ್ಚಿ "ಕಡುನಂಟನ ಸತಿಯ ರೂಪು ಸೋಲಿಸಿತೆನ್ನಂ" ಎಂದು ಹೇಳಿ "ಪೇೞ್ ಸಖ ಬಾೞ್ವ ಉಪಾಯಮನ್" ಎಂದು ಕೇಳಿಕೊಳ್ಳುವನು. ಆ ತಳೋದರಿಯನ್ನು ಸಂಭೋಗಿಸುವ ಪುಣ್ಯ ತನಗೇಕೆ ಸಲ್ಲದು? ಗಂಡನಿದ್ದರೇನು? ಎಂದು ತನ್ನ ಹೃದಯಕವಾಟವನ್ನು ಗೆಳೆಯನಿಗೆ ತೆರೆದು ನುಡಿದಾಗ ತನ್ನೊಡೆಯನಿಗೆ ಸುದರ್ಶನನು 'ಪರಿವ ಮನಕ್ಕೆ ಪಗ್ಗವಿಲ್ಲ ನೋಡುವ ಕಣ್ಗಳ್ಗೆಡೆಗಟ್ಟಿಲ್ಲ'ವೆಂದು ಹೇಳಿ ಅವನ ಬಯಕೆಯ ಬೆಂಕಿಗೆ ಗಾಳಿಯೂದುತ್ತಾನೆ. ನಿನ್ನ ಮನೋರಥಸಿದ್ಧಿಗೆ ಅವಕಾಶವುಂಟು. ಹೇಗೆಂದರೆ ಕೋಕಿಲನಾದೆಯಾದ ಸುನಂದೆ ನನ್ನೊಂದಿಗೆ ನಯವಾಗಿ "ನಿಮ್ಮರಸನು ಬಂದ ಕಾರಣವೇನು? ಇಲ್ಲಿಯ ಕಾರ್ಯಾಂತರವೇನು? ಪ್ರಯಾಣದಿನವೆಂದು? ಇವೇ ಮೊದಲಾಗಿ ಹೆತ್ತ ತಂದೆಯ ಮಿತ್ರನಿಗೂ ಒಡಹುಟ್ಟಿದಣ್ಣನ ಕೆಳೆಯನಿಗೂ ಆಡುವಂತೆ ಆಡಿದಳು. ಇದೇನು ಆಸೆಯೊ ಅಥವಾ ನಿರ್ಮೋಹವೋ ಭಾವಿಸು" ಎಂದು ಸುದರ್ಶನ ಹೇಳುವನು. ಮಿತ್ರನ ಮಾತನ್ನು ನಂಬದೆ "ಆ ಮದಿರಾಕ್ಷಿ ತನ್ನಿನಿಯನಿರ್ದವೊಲೆನ್ನೊಡನಾಸೆಗೆಯ್ವಳ್" ಎಂದು ವಾದಿಸಲು, ವಸುಷೇಣನೂ ನೀನೂ ಆರೋಗಿಸಿ ಕೈಘಟ್ಟಿ ಸ್ವೀಕರಿಸುತ್ತ ಏಕಮರಾಳತೂಳತಲ್ಪಾಸನದಲ್ಲಿ ಪರಸ್ಪರ ಸುಖಸಂಭಾಷಣಾವಿಶೇಷದಲ್ಲಿದ್ದಾಗ ಆ ಕಾಮಿನಿ ಸುನಂದೆ ಗಂಡನ ನೆವದಿಂದ ನಿನ್ನನ್ನು ಯಾರೂ ಕಾಣದಂತೆ ನೋಡುತ್ತಿದ್ದುದನ್ನು ತಾನು ನೋಡಿದುದಾಗಿ ಸುದರ್ಶನ ಒಡೆಯನಿಗೆ ನಂಬುವಂತೆ ಸುಳ್ಳುಹೇಳಿ, ಅವನ ಮನದ ಪಿಶಾಚಕ್ಕೆ ವಚನರಚನಾಧೂಪವನ್ನು ತೋರಿ ವಿರಹವಿಕಾರವನ್ನು ಕೆರಳಿಸುವನು. ಸುನಂದೆಯನ್ನು ಕೂಡುವ ಉಪಾಯವನ್ನು ಈಗಲೇ ಮಾಡುವೆನೆಂದು ಆ ಧೂರ್ತನು ಚಂಡಶಾಸನನನ್ನು ನಂಬಿಸಿ ಹೋಗುವನು.

ಒಂದು ದಿನ ಗೆಳೆಯರೀರ್ವರೂ ಬೇಟೆಗೆ ಹೊರಡುವರು. ಬೇಟೆಯ ಸೋಹಿನಲ್ಲಿ ಗೆಳೆಯರಿಬ್ಬರೂ ಅಗಲಿ ಬೇರೆಯಾಗುತ್ತಾರೆ. ಚಂಡಶಾಸನನು ವಸುಷೇಣನರಸಿ ಬರುವ ದಾರಿಯಲ್ಲೇ ಕಾದಿದ್ದು, ಜೋನವನ್ನು ತೆಗೆಸಿಕೊಂಡು ಕೆಲವು ಗೆಳತಿಯರೊಡಗೂಡಿ

ಪಲ್ಲಕ್ಕಿಯಲ್ಲಿ ಬರುತ್ತಲಿದ್ದ ಸುನಂದೆಯನ್ನು ಕಂಡು ಕರುಳ ಕತ್ತರಿಯೂ ನಂಟರ ಮಾರಿಯೂ ಆದ ಖಳನು ಮೋಹಿಸಿಬಿದ್ದು ಅವಳನ್ನು ತನ್ನ ರಥದಲ್ಲಿ ತೆಗೆದಿಟ್ಟುಕೊಂಡು ಮನೋವೇಗದಿಂದ ನಡೆದನು. ಚಂಡಶಾಸನ ಎರಗಿದೊಡನೆ ಹಾವು ಹಿಡಿದಂತಾಗಿ, ಸಿಡಿಲು ಬಡಿದಂತಾಗಿ ಸುನಂದೆ ಮೈಮರೆಯುವಳು. ಸ್ವಲ್ಪಹೊತ್ತಿನಲ್ಲೇ ಮೂರ್ಛೆ ತಿಳಿದೆದ್ದು ವಿಶ್ವಾಸಘಾತುಕನಾದ ಚಂಡಶಾಸನ ಕಾಮುಕಾತುರನಾಗಿ ತನ್ನನ್ನು ಹಿಡಿದು ದನ್ನು ಅರಿತು ಹುಯಲಿಟ್ಟ, ಬಸಿರನ್ನು ಜಾರೇಳುವಂತೆ ಮೋದಿದಳು. ದುಃಖೋದ್ವೇಗ ಗಳಿಂದ ಕೂಡಿದ ಸುನಂದೆ ಚಂಡಶಾಸನನನ್ನು ಎಲೆ ಬೂತೆ ಸ್ತ್ರೀಬಾಲೆಯನ್ನು ಗಂಡನ ಹಿಂದೆ ಕದ್ದೊಯ್ಯುವುದು ತರವೇ? ಪಾಳುಮನೆಯಲ್ಲಿರುವ ತುಪ್ಪದಮಡಕೆಯನ್ನು ನಾಯಿ ಕೊಂಡೊಯ್ಯುವ ರೀತಿಯಲ್ಲಿ ನೀನು ಕದ್ದೊಯ್ಯುವುದು ವೀರನಾದವನಿಗೆ ಯೋಗ್ಯ ವಾದುದೆ? ದೂರ ನಿಲ್ಲು ಎಂದು ಮೊರೆಯಿಡುವಳು. ಸುರಮ್ಯಮಂಡಲದ ಗಡಿಕಾಪಿನವನಾದ ಹೆಸರಾಂತ ಸಾಮಂತ ಸಿಂಹಚೂಡನು ಸುನಂದೆಯ ಗೋಳಿಕರೆಯನ್ನು ಕೇಳಿ ಸಹಾಯ ಕ್ಕಾಗಿ ಅತ್ತ ಇತ್ತ ನೋಡದೆ ಕಯ್ಯ ಕತ್ತಿಗುರಾಣಿಯನ್ನು ನೆಮ್ಮಿ, ಒಡನೆಯೇ ನಡೆದು ‘ಹರಿಣಿಯಂ ಪಿಡಿದುಯ್ವ ತರಕ್ಷುವಿನಂತೆ ತರುಣಿಯಂ ಪಿಡಿದುಯ್ವ’ ಚಂಡಶಾಸನನನ್ನು ಇದಿರಿಸುತ್ತಾನೆ. ‘ಮಾನಸನೇಂ ಸೆಳೆವುದೆ ಪೇರಾಸೆಯ ಕಯ್ಯಿಡಿದ ಕರ್ಬನ್?’ ವ್ಯರ್ಥಾ ಯಾಸವೇಕೆ, ಸುಮ್ಮನೆ ಹೋಗು ಎಂದು ಚಂಡಶಾಸನ ಜುಚ್ಚಿನುಡಿಯಲು ಅದಕ್ಕೆ ಸಿಂಹಚೂಡ ನಕ್ಕು “ಸುನಂದಾದೇವಿಯರೊಡಗೂಡಿ ನಿನ್ನ ನೆತ್ತರು ಬಸಿಯುವ ತಲೆ ಯನ್ನು ವಸುಷೇಣನೃಪನಿಗೆ ಕಾಣಿಕೆಯಾಗಿ ಕೊಂಡೊಯ್ದು ಒಪ್ಪಿಸಿ ಆತನ ಮುಂದೆ ಬಿಸುಟಲ್ಲದೆ ಬಿಡುವನೆ? ಎಂದು ಪ್ರತಿಜ್ಞೆಯನ್ನೇ ತೊಟ್ಟನು. ಈರ್ವರೂ ಯುದ್ಧಕ್ಕೆ ಸನ್ನದ್ಧರಾದರು. ಆಗ ಅವರ ಯುದ್ಧವನ್ನು ನೋಡಲು ಬಳಸಿನಿಂತ ನೋಟಕರು ತಮ್ಮ ತಮ್ಮಲ್ಲಿ “ಭೂಮಂಡಲದಲ್ಲಿ ಸಿಂಹಚೂಡನೇ ಶೂರನು. ಚಂಡಶಾಸನನು ಕೃತಘ್ನನು. ಇವರೀರ್ವರೂ ಪರಾಕ್ರಮಿಗಳು. ಇವರ ಸೋಲು-ಗೆಲ್ಲವು ಅರಸನ ಪುಣ್ಯ” ಎಂದರು. ಇತ್ತ ಸುನಂದೆ ತನ್ನ ಮನದಲ್ಲಿ “ನೀರಜಾಕ್ಷಿ, ನೆಲನೇ, ವ್ಯೋಮಮೆ, ವಾಯುದೇವ ತಲೆಗಾಯೀ ಭಟನಂ ಪೊಣರ್ಚಿ ಪೊಡೆದಿಕ್ಕೀ ದ್ರೋಹನಂ ಸೆರೆಯಿಂದಂ ತಪ್ಪಿದಂದೆನ್ನನಾಂ ಬಲಿಗೆಯ್ವೆಂ ನಿಮಗೆ” ಎಂದು, ಮೈಕೊಡಗಿ ನಿಟ್ಟುಸುರು ಬಿತಿವಿದಾರಿ ಬರುತ್ತಿರಲು ಕೆಂಗೆಟ್ಟು ಸುನಂದೆ ಅವರೀರ್ವರ ಯುದ್ಧವನ್ನು ನೋಡಲು ನಿಂತಳು ಚಂಡಶಾಸನನು ಸಿಂಹಚೂಡನ ತಲೆಕಡಿದುರುಳಿಸಿ ಸುನಂದೆಯನ್ನು ಮುಹೂರ್ತಮಾತ್ರದಲ್ಲಿ ತನ್ನ ದುರ್ಗಕ್ಕೆ ಕೊಂಡೊಯ್ದು ಅವಳನ್ನು ಸೆರೆಯಲ್ಲಿಟ್ಟನು.

ಇತ್ತ ವಸುಷೇಣ ಬೇಟೆಯಿಂದ ಮರಳಿ ಬಂದು “ಬಂದಳೆ ದೇವಿ, ಪಂಕ್ತಿಗೆ ಎಡೆಮಾಡಿಸಿದಪ್ಪಳೆ, ಚಂಡಶಾಸನಂ ಬಂದನೆ” ಎಂದು ಮುಂದಿರ್ದ ಮಹತ್ತರನನ್ನು ಪ್ರಶ್ನಿಸು ತ್ತಿರುವಲ್ಲಿ ‘ಶೋಕರಸಮೆ ರೂಪುಗೊಂಡಂತೆ’ ಬಂದ ಸುನಂದೆಯ ಸಖೀಜನರಿಂದ ಅವಳ

ಸೆರೆಹೋದ ಸುದ್ದಿಯನ್ನು ಕೇಳುತ್ತಾನೆ. ಆ ಸುದ್ದಿ ಕೇಳುತ್ತಿದ್ದಂತೆಯೇ ಉಕ್ಕಿಬಂದ ಕೋಪಾಗ್ನಿಗೆ ವಿಯೋಗದುಃಖಶೋಕದ ಗಾಳಿ ಬೀಸಲು ಮೂರ್ಛೆಹೋಗಿ, ಆಪ್ತರ ಸಚಿವರ ಶೈತ್ಯೋಪಚಾರದಿಂದ ಮೆಲ್ಲನೆ ಎಚ್ಚತ್ತು ಪ್ರಾಣಪ್ರಿಯಳಿಲ್ಲದ ಪೊಳಲನ್ನು ಪ್ರವೇಶಿಸಲು ಇಷ್ಟಪಡದೆ "ಇನ್ನೇನಾತೊ ಕಿರ್ಚೆದೋರ್ದಂಗಿರಲಾದಂ ಗಡ ಪೂರಿ ಪೊಕ್ಕು ಮನೆಯೊಳ್ ಪರ್ದಂ ಗಡಾಕೊಳಚದೇಂ ಪೆರ್ಗೆಂ ಬೆಂಬಲದೇಂ ಸ್ವರಾದಿ ಬಲದೇಂ ನೀಂ ಪೇಳ್ವುದೇಂ ಕೇಳ್ವುದೇಂ" ಎಂದು ಹಿಂದುಮುಂದನ್ನು ನೋಡದೆ ಯುದ್ಧಸನ್ನದ್ಧನಾದನು. ವಸುಷೇಣನ ಸೈನ್ಯವು ಬಹುಕೋಟಿಯಂತ್ರಸಾಮಗ್ರಿಗಳ ಸಮೂಹವನ್ನು ಹೊಂದಿ ಲಗ್ಗೆಹತ್ತಿತು. ಹಗಲಿನಲ್ಲಿ ಎರಡೂ ಕಡೆಯವರಿಗೆ ಯುದ್ಧ ನಡೆಯಿತು. ಕತ್ತಲಾಗಲು ಎರಡೂ ಪಡೆಗಳು ಆಹಾರತೂರ್ಯವನ್ನು ಮೊಳಗಿಸಿದವು.

ಚಂಡಶಾಸನ ಸೈನ್ಯದೀವಿಗೆಗಳ ಬೆಳಗಿನಲ್ಲಿ ಸುನಂದೆಯನ್ನು ಸೆರೆಯಿಟ್ಟ ಮಣಿಮಾಡಕ್ಕೆ ಬಂದು ತನ್ನ ಜೊತೆಯಲ್ಲಿ ಬಂದು ಬಾಗಿಲಲ್ಲಿ ನಿಂತ ಪರಿಜನರನ್ನು ಮತ್ತು ಅಕ್ಕಪಕ್ಕದಲ್ಲಿದ್ದ ಪರಾಯತರುಗಳನ್ನು ಕಳುಹಿಸಿ ಕೃತಕವಿನಯೋಪಚಾರಗಳಿಂದ ಸುನಂದಾದೇವಿಯನ್ನು ಕುರಿತು "ನಯದಿಂದ ನಿನ್ನಲ್ಲಿ ಒಪ್ಪಿಗೆ ಪಡೆಯಲಿಲ್ಲ. ಔದ್ಧತ್ಯದಿಂದ ತಂದ ನಲುಗೆಯನ್ನು ಮನ್ನಿಸು. ಕಾಮಿ ಕಣ್ಣಿಯನಲ್ಲ. ನಾನು ನಿನಗೆ ಗಂಡನಹೆನು. ನನ್ನ ರಾಣಿವಾಸವೆಲ್ಲ ನಿನಗೆ ಪರಿಚಾರಕರು. ಈ ಸಾಮ್ರಾಜ್ಯಲಕ್ಷ್ಮೀಸ್ವಯಂವರದಲ್ಲಿ ನೀನು ನನಗೆ ವಲ್ಲಭೆಯಾಗಿರು" ಎನ್ನುವನು. ಖಳನ ಮಾತನ್ನು ಕೇಳಿ ವ್ರತಾಪಂಕ್ತಿಯ ಶಿಖಿಜ್ವಾಲೆಯಂತೆ ಬಾಲೆ ಕನಲ್ದು "ಕೆಟ್ಟಸಿಕ್ಕಿ ಹಿಡಿದುತಂದ ಹೆಂಗಿತಿಯನ್ನು, ಭೋಗೋಪಭೋಗಗಳನ್ನು ಮರೆತು ಕಾಣದ ಅನಾಥೆಯನ್ನು ನಾಚಿಸುವಂತೆ ಪಾಪಿ, ನಿನ್ನೊಂದು ಸಂಪತ್ತಿಯನ್ನು ಜರಿಯುತ್ತಿರುವೆ. ನಾಳೆ ನಿನ್ನ ತಲೆಯು ಸೆರೆಮನೆಯ ಬಾಗಿಲಲ್ಲಿ ಮೆರೆಯುವಾಗ ಇದನ್ನು ನುಡಿ" ಎಂದು ಬಯ್ಯಲು ಆವಳ ನುಡಿಗೆ ಚಂಡಶಾಸನ ನಸ್ನೈಸಿ ಮುಳಿಯದೆ ಲಜ್ಜೆಯಿಂದ ತಲೆಯುದೆ ಮತ್ತೆ "ನಾನು ಕೆಳೆಗಟ್ಟು ಪಗೆಯಾದೆನಾಗಿ ವಸುಷೇಣ ಹೋದನು. ನನ್ನ ಮಾತನ್ನು ನಂಬು. ಆಳಿಯಾಸೆಯಿಂದ ಹಮ್ಮುಬಿಡಿಸು. ಆಗ್ರಹ ಬೇಡ. ಸತ್ತು ಸಪ್ಪಲವನ್ನು ತೋರುವ ಬಾಳಿಯಾಗದಿರು. ಪಾತಿವ್ರತ್ಯದಿಂದ ಬತ್ತಿದ ಬಾಳಾಗದೆ ಸೌಖ್ಯಶ್ರೀವಿಲಾಸಗಳನ್ನು ಆಳಿಕೊಂಡಿರು" ಎಂದನು. ಇವನಿಗೆ ಮಾತುಮಾತಿಗೆ ಉತ್ತರ ಕೊಡುವುದೇಕೆಂದು ಸುನಂದೆ "ವಸುಷೇಣನೃಪನೆ ಕೈಹಿಡಿದವನಿಗೂ ಒಡೆಯ ಚಿತಾಗ್ನಿಗೂ ಒಡೆಯ"ನೆಂದು ನಿರ್ದಾಕ್ಷಿಣ್ಯನಾಗಿ ನುಡಿಯಲು ಆಗ ಆ ಕುಟಿಲನು ಆಕೆಯಲ್ಲಿ ತೆಪ್ಪಗಾಣದೆ "ನಾನು ನಿನ್ನನ್ನು ಬಿಡುವುದಿಲ್ಲ. ನೀನು ಸತ್ತರೆ ನಾನೂ ಸಾಯುವೆನು. ಉಳಿಯುವವನಲ್ಲ. ನೀನು ನನ್ನನ್ನು ಪ್ರೀತಿಸಿದರೇನು ಪ್ರೀತಿಸದಿದ್ದರೇನು ನಾನು ಎರಡಿಲ್ಲದೆ ಪ್ರೀತಿಸಿದೆನು. ಅದ್ದರಿಂದ ಬೇರಾವ ಪ್ರೇಮಕ್ಕೂ ಬಾಯಿಬಿಡಲಾರೆ. ಸೆರೆಯಾದರೂ ಸರಿ, ನೀನು ನನ್ನ ಮನೆಯಲ್ಲಿರುವೆಯೆಂಬ ಆಸೆಯೇ ಸಾಕು ನನಗೆ. ಬಳಿಕ ರಣದಿಂದ ಆಗುವುದಾಗಲಿ"

ಎಂದು ತನ್ನ ಬಯಕೆಯ ಆಳನನ್ನು ಚಾಳಿಸಿ ನುಡಿದು ಹೋಗುವನು.

ಸೂರ್ಯೋದಯವಾದರೂ ವಿರಹ ಪರಿತಾಪ ತೀರದೆ ಆ ತಳೋದರಿಯನ್ನು ಯಾವುದರಿಂದಲೂ ಒಡಂಬಡಿಸಲಾಗದೆ "ಪತಿಯಿರಲು ಆಸೆ ಹಿಂಗದು. ಈ ಸತಿ ಮನದ ಒಂದು ಅಭಿಲಾಷೆಯಿಂದ ನನ್ನನ್ನು ಒಲ್ಲಳು. ಇವಳನ್ನು ಮರಳುಗೊಳಿಸುತ್ತೇನೆ" ಎಂದು ಬಗೆದು, ಆ ಇಂದ್ರಜಾಲಿಗನು ವಸುಷೇಣನ ಸೈನ್ಯ ಸೋತು ಹೆದರಿ ಕಾಲಿಗೆ ಬುದ್ಧಿ ಕೊಟ್ಟಿತೆಂದೂ ಪಗೆಯ ಪಂದಲೆ ಕೈಸೇರಿತೆಂದೂ ಸುಳ್ಳುಸುದ್ದಿ ಹರಡಿಸಿ ತಾನು ಸುನಂದಾ ದೇವಿಯಿದ್ದ ಸೆರೆಮನೆಗೆ ಬಂದು ಅವಳ ಮುಂದೆ ಪತಿಯ ಮಾಯದ ಶಿರವನ್ನು ಮಾಯಾವಿ ಈಡಾಡಿದನು. ಹಾಗೆ ಈಡಾಡಿದ ಶಿರವನ್ನೂ ಪೇರುರದಲ್ಲಿ ಮೆರೆವ ತೋರಮುತ್ತಿನ ಹಾರವನ್ನೂ ಕಾಣಲು ಹೃದಯದಲ್ಲಿರುವ ಪತಿದೇವನನ್ನೂ ಆ ಕ್ಷಣ ಭೀತಿಯಿಂದ ಈಕ್ಷಿಸುವಂತೆ ಅಲರ್ಗಣ್ಣು ಮುಚ್ಚಿದುವು. ಕರಪಲ್ಲವವು ಕುಚಮಧ್ಯದಲ್ಲಿಗೆ ಸೇರಿತು. ಧ್ವನಿಯನ್ನಾಲಿಸುವಂತೆ ಮೊಗವು ಮಲಗಿತು. ಹೃದಯವು ಶೂನ್ಯವಾಗಿ ಅರಸನನ್ನರಸಿ ಹೋಗುವಂತೆ ಅಸುವು ಪೋಯಿತು. ಇನಿಯನಿರಲು ಮತ್ತೊರ್ವನ ಕಣ್ಗೆ ಮನಕ್ಕೆ ಒಪ್ಪುವುದೆ ಈ ತನುವು. 'ಸುದಲೀತನುವನ್' ಎಂದು ಜೀವವು ಮುನಿದಂತೆ ಶಶಿಮುಖಿಯ ತನುವನ್ನು ಪ್ರಾಣವು ಬಿಟ್ಟುಹೋಯಿತು. ಅದನ್ನು ಕಂಡ ಆ ಖಳನು ಬೆದರಿ ಬೆರಗಾಗಿ "ಸ್ವಪ್ನದಲ್ಲಿ ದಾಯಿಗನಾಗಿ ಬಂದ ವಿಧಿ ಮತ್ತೊಂದ ಮಾಡಿತು. ಕೂಡುವೆನೆಂದು ಮಾಡಿದ ಉಪಾಯ ಮರಣವನ್ನು ತಂದೊಡ್ಡಿತು. ಹೋ ಬೆಂದೆ, ಉರಿದೆ, ನಂದಿದೆ" ಎಂದು ಭರದಿಂದ ಸುನಂದೆಯ ಹೆಣವನ್ನು ತಕ್ಕೈಸಿ ಮೈಸೋಂಕಿನಿಂದ ಮೂರ್ಛೆಹೋಗುವನು. ಮೂರ್ಛೆಯಿಂದ ಎಚ್ಚತ್ತು ಬೆಚ್ಚನೆ ಸುಯ್ದು ಬೆದೆಬೆದೆ ಬೆಂದು ನೊಂದು ತನ್ನನ್ನು ತಾನೇ ನಿಂದಿಸಿಕೊಂಡು ಸುನಂದೆಯನ್ನು ನೋಡಿ "ದೇವಿ, ಮೌನದಿಂದ ನೀನೇಕೆ ನನ್ನ ಮನಸ್ಸನ್ನು ಪರೀಕ್ಷಿಸುವೆ. ಸಾವಿನಿಂದ ಸರಸವಾಡುವರೆ? ಮರುಹುಟ್ಟಿನಲ್ಲಾದರೂ ನಿನ್ನನ್ನು ಕೂಡದೆ ಬಿಡೆನು. ಇಂದು ನಾನು ನಿನ್ನೊಡನೆ ಧೂಮಸೌಧಗೃಹದಲ್ಲಿ ಶಿಖಿಪಲ್ಲವರಾಗತಲ್ಪದಲ್ಲಿ ಮೆಯ್ಗೆ ಮೆಯ್ಗೊಡುವೆ" ಎಂದು ಹೇಳಿ ಯಾರು ತಡೆದರೂ ನಿಲ್ಲದೆ ಸುನಂದಾದೇವಿಯ ಶವದೊಡನೆ ಏಕಾಸನದಲ್ಲಿ ಕುಳಿತು ಚಿತೆಗೆ ನಡೆಯುತ್ತಾನೆ. ಆಗ ಅವನ ರಾಣಿವಾಸದಲ್ಲಿ ಓರ್ವಳು "ನನಗೆ ನಾಚದೆ ನಮ್ಮನ್ನೂ ಒಲ್ಲದೆ ಪರಸ್ತ್ರೀಗೆ ಒಲಿದು ಅವಳು ಸಾಯಲು ತಾನೂ ಪ್ರಾಣವನ್ನು ಬಿಟ್ಟನು ನಮ್ಮರಸು ಮಾವಿಂಗೆ ಮಲ್ಲಿಗೆಗಳ್ ಕೂರ್ತೋದೆ ಮಾವು ಕೊರ್ತೀದು ವಸಂತಶ್ರೀಗೆ" ಎನ್ನಲು ಆ ಮಾತನ್ನು ಕುಲವತಿಯೂ ಶೀಲವತಿಯೂ ಆದ ವಿದಗ್ಧೆಯೊರ್ವಳು ಪ್ರತಿಭಟಿಸುತ್ತ "ರಾಜನೇನೇ ಆಗಲಿ ತಾವು ಅವನ ಮೈನೆಳಲಿನಂತಿರಬೇಕು. ಅದು ಶೀಲವತಿಯರಾದ ನಮ್ಮ ಸಂಪತ್ತು. ನಮಗಿನ್ನು ಆ ಮಾತೇಕೆ?" ಎಂದು ಹೇಳಿದಳು. ಅಂತಃಪುರದ ಸ್ತ್ರೀಜನರೆಲ್ಲ ಪತಿಯೊಡನೆ ಸಹಗಮನ ಮಾಡಿದರು.

ಇತ್ತ ವಸುಷೇಣ ಕೋಟೆಗೆ ಲಗ್ಗೆಮಾಡಲು ಇಚ್ಛೆಪಟ್ಟು ದುರ್ಗಕ್ಕೆ ಆನೆಗಳ

ಸಮೂಹವನ್ನು ಹೊಗಿಸಿ ವಾಹವ್ಯೂಹವನ್ನು ನಿರ್ಮಿಸಿ, ಸುಭಟರು ಆಯುಧಗಳನ್ನು ಹಿಡಿದು ಸನ್ನದ್ಧರಾಗಿರುವಂತೆ ಹೇಳಿ ರಾಜಾವಾಸದಿಂದ ತಾನು ಹೊರಬರುತ್ತಾ ಹೆಂಗಸರ ಗೋಳುದನಿಯನ್ನು ಕೇಳಿ ಸುದ್ದಿಯೇನೆಂದು ವಿಚಾರಿಸಲು ಚರನೊರ್ವನು ಸುನಂದೆಯ ಸಾವಿನ ವೃತ್ತಾಂತವನ್ನು ತಿಳಿಸುವನು. ಸತಿಯ ಸಾವಿಗಾಗಿ ದುಃಖಿಸುತ್ತಾ "ನಾನು ಅಳಿವೆನೆಂದು ಸುಳ್ಳು ಹೇಳಲು ಮಾನಿನಿ, ನೀನು ಪ್ರಾಣಬಿಟ್ಟೆ. ನಿನ್ನ ಸಾವನ್ನು ನೋಡಿಯೂ ನಾನು ಉಳಿದೆನು. ನನಗಿಂತ ನಿರ್ಲಜ್ಜರಾದವರು, ಕೃಪಣರಾದವರು, ಕೃತಘ್ನರಾದವರು ಮತ್ತಾರಿರುವರು!" ಎಂದು ಭಾವಿಸಿ ಅನಂತರ ತನ್ನ ಸಾಮಂತರೊಂದಿಗೆ "ಇನಿಯಳು ಅಳಿದ ಬಳಿಕ ತನ್ನಿರವು ತಾರಾಮಂಡಲ ಹೋದ ಲೋಚನದಂತೆ, ಸುಗಂಧ ಹೋದ ಕಳಿವೂವಿದ್ದಂತೆ, ಅಸು ಹೋದ ಬಾಳ್ವೆಣದಂತೆ ಆಯಿತು. ಯುದ್ಧದಲ್ಲಿ ಹೋರಾಡಿ ಪಡೆಯಬೇಕಾದ ಧನ: ವಲ್ಲಭೆ. ರತ್ನಪ್ರಾಯಳಾದ ಪ್ರಾಣೇಶ್ವರಿಯೇ ಇಲ್ಲದಮೇಲೆ ಶಕ್ತಿ, ಕೋಟೆ ಇವು ಗಳಾದರೂ ಏಕೆ? ಗೆಲ್ಲಬೇಕೆನ್ನುವ ಕೋಟಲೆಯಾದರೂ ಏಕೆ? ಶತ್ರು ಸತ್ತು ಅಡಗಿಹೋಗಿರುವನು. ಇನ್ನು ನಾನು ಗೆಲ್ಲುವುದಾದರೂ ಯಾರನ್ನು?" ಎಂದು ಆಲೋಚಿಸಿ ರಾಜ್ಯ ಹಾಗೂ ಬಾಳುವೆ—ಇವೆರಡಕ್ಕೂ ಕೊಕ್ಕರಿಸಿ ಲಗ್ಗೆಯನ್ನು ತೆಗೆಯಹೇಳಿ ನಿರ್ವೇಗಪರನಾಗಿ ತನ್ನ ಮಂಡಲವನ್ನು ಪ್ರವೇಶಿಸಿ ಕೊಡೆ ಹಾಗೂ ಪಟ್ಟವನ್ನು ಮಗನಿಗಿತ್ತು ವಸುಷೇಣ ತಪಸ್ಸಿಗೆ ನಡೆದನು. ವಸುಷೇಣನು ತಪವನ್ನು ಮುಡಿಸಿ ಉಗ್ರತಪಸ್ಸಿನ ಫಲವಾಗಿ ಸಹಸ್ರಾರಕಲ್ಪದಲ್ಲಿ ಸುರನಾಗಿ ಹುಟ್ಟಿದನು. ಅಲ್ಲಿಯೂ ಸಂಸಾರ ಅಸಾರವೆಂದು ಮನಗಂಡು ನಿರ್ವೇಗಪರನಾಗಿ ಉಗ್ರೋಗ್ರ ತಪಸ್ಸನ್ನಾಚರಿಸಿ ಒಂದು ತಿಂಗಳು ಸನ್ಯಸನ ವಿಧಿಯಿಂದ ದಂಡಿತಕರಣನಾಗಿ ಪಂಡಿತಮರಣದಿಂದ ಮುಡಿಪಿ, ದ್ವಾರಾವತಿಯ ಸೋಮಪ್ರಭ ಹಾಗು ರಾಣಿ ಸೀತಾದೇವಿ—ಇವರಿಗೆ ಪುರುಷೋತ್ತಮನು ವಾಸುದೇವನಾಗಿ ಹುಟ್ಟುವನು.

ಸೋಮಪ್ರಭ ಹಾಗು ಸೀತಾದೇವಿಯರು ಮಗ ಹುಟ್ಟಿದ ಹತ್ತನೆಯ ದಿವಸದಲ್ಲಿ ಮಗನು ನಿರ್ಭರ ಪ್ರಭಾವಿಭಾಸಿಯಾಗಿರುವುದರಿಂದ ಸುಪ್ರಭನೆಂದೂ, ಭುಜಬಲದಲ್ಲಿ ಸರ್ವತೋಭದ್ರನಾಗಿರುವುದರಿಂದ ಬಲಭದ್ರನೆಂದೂ, ಲೋಕಾವಲೋಕ ಅಭಿರಾಮನಾಗಿರುವುದರಿಂದ ರಾಮನೆಂದೂ ಅನ್ವರ್ಥನಾಮಗಳನ್ನಿಟ್ಟು ಉತ್ಸವದ ಪರಮಸೀಮೆಯಿಂದಿರಲು ಒಸಗೆಯ ಮೇಲೆ ಮತ್ತೊಸಗೆ, ಸಂತಸಿಕೆಯ ಮೇಲೆ ಸಂತಸಿಕೆ. ಮಂಗಳಾಚಾರದ ಮೇಲೆ ಮಂಗಳಗಳಾಗುವಂತೆ ಮತ್ತೊಬ್ಬ ತನೂಭವನನ್ನು ಪಡೆದರು. ಅರಸನು ತನ್ನ ದ್ವಿತೀಯ ಕುಮಾರನಿಗೆ ಜಾತಕರ್ಮನಿರ್ವಾಪಣ ಮಹೋತ್ಸವವನ್ನು ಮಾಡಿ ಅನಂತರ ಶುಭದಿನದಲ್ಲಿ ಅಷ್ಟೋತ್ತರಶತಖ್ಯಾತನು ಈತನಾಗಿರುವುದರಿಂದ ಪುರುಷೋತ್ತಮನೆಂಬ ಹೆಸರನ್ನಿಟ್ಟನು. ಅಣ್ಣತಮ್ಮಂದಿರ ಗಡಣವು ಬಿಳಿಯ ಕರಿಯ ಆಲಿಯಂತೆ ಉಜ್ವಲಿಸಿರಲು ಲೋಕಕ್ಕೆ ತಾವೇ ಲೋಚನವಾದರು.

ಸುನಂದೆಯ ಜೊತೆಗೂಡಿ ಪ್ರಾಣಬಿಟ್ಟ. ಚಂದ್ರಶಾಸನನು ಘೋರಾಕಾರ ಸಂಸಾರದ ಕಡಲಿನಲ್ಲಿ ಬಿದ್ದು ಮುಳುಗಿ ಮತ್ತೆ ದೈತ್ಯಾನ್ವಯದಲ್ಲಿ ಮಧುವಾಗಿ ಹುಟ್ಟಿ ವಾರಣಾಸಿಗೆ ಒಡೆಯನಾಗಿ ಭೂಪರಲ್ಲಿ ಅರ್ಧಚಕ್ರಿ ಎನ್ನುವಂತೆ ರಾಜಾಮ್ನಾಯದಲ್ಲಿ ಕೂಡಿದನು. ಅರ್ಧಚಕ್ರಿಯಾದ ಮಧುವು ಮಧುಮತ್ತಂಬೋಲ್ ಉದ್ವೃತ್ತನಾದನು. ಅವನ ಉದ್ಭಟತನಕ್ಕೆ ಪ್ರತಾಪಾಗ್ನಿಗೆ ತ್ರೈಲೋಕ್ಯವೂ ತಲ್ಲಣಿಸುತ್ತಿತ್ತು. ಒಂದು ದಿನ ದೈತ್ಯ ಮಧುವಿನ ಒಡ್ಡೋಲಗಕ್ಕೆ ನಾರದನು ಬಂದನು. ದೈತ್ಯನು ನಾರದನನ್ನು ಯೋಗ್ಯ ರೀತಿಯಲ್ಲಿ ಸತ್ಕರಿಸಿ ಉಚ್ಚಾಸನದಲ್ಲಿ ಕೂರಿಸಿ ತಾನು ಸಿಂಹಾಸನದಲ್ಲಿ ಕುಳಿತು ಕ್ಷೇಮ ಕುಶಲ ಸಂಭಾಷಣಾನಂತರ ನಮ್ಮ ಪೂರ್ವಪುಣ್ಯವೇ ನಿಮ್ಮನ್ನಿಲ್ಲಿಗೆ ಕರೆದುತಂದಿತು. ಆವ ಕಾರ್ಯಕ್ಕಾಗಿ ಬಂದಿರಿ? ಎನ್ನಲು ಅದಕ್ಕೆ ನಾರದ "ದನುಜೇಂದ್ರ, ಅಖಿಲಭುವನಭಾಗ್ಯಶ್ರೀಭಾಜನನಾದ ನಿನ್ನನ್ನು ಕಣ್ಣಾರೆ ನೋಡಿ ಮನವಾರೆ ಹರಸಿ ಕಂಡುದನ್ನು ನಿನಗೆ ತಿಳಿಸಲು ಬಂದೆವು. ಸೋಮಪ್ರಭನ ನಂದನರುಗಳು ಈಗ ಕೊಬ್ಬಿ ಮೆರೆಯುತ್ತಿರುವರು. ದಾನವವೈರಿ, ದಾನವಕುಲಾಂತಕ, ಉದ್ಧತಚಕ್ರಿಸಿಂಹನಂದ ತನ್ನ ಆನೆಯ ಕಾಲಿಗೆ ಕೃಷ್ಣನು ಹಂದಿಯದ ಪಾಸೆಯನ್ನು ಹಾಕಿದನು. ಕೃಷ್ಣನ ಬಳಿಯಿರುವ ಆ ಆನೆಯನ್ನು ನೀನು ಮುಳಿದು ಇರಲು ಜಗತ್ತ್ರಯವು ನಿನ್ನ ಪಾದಾನತವಾಗದಿರುವುದೆ? ಬನದಲ್ಲಿಯಾಗಲೀ ಗಜಶಾಲೆಯಲ್ಲಾಗಲೀ ಅಂತಹ ಭದ್ರಜಾತಿಯ ಆನೆಯನ್ನು ನಾನು ನೋಡಿಯೇ ಇಲ್ಲ" ಎಂದು ಹೇಳಿ ದನುಜೇಂದ್ರನ ಚಿತ್ತಕ್ಷೇತ್ರದಲ್ಲಿ ಮತ್ತು ಶತ್ರುವಿನಾಶಕಾರ್ಯದಲ್ಲಿ ಕ್ಷೋಭವನ್ನು ಆನೆಯಲ್ಲಿ ಲೋಭವನ್ನು ಸಮಸಮನೆ ಬೆಳೆಯಿಸಿ ಅಲ್ಲಿಂದ ದ್ವಾರಾವತಿಗೆ ಬಂದನು. ಸುಪ್ರಭಪುರುಷೋತ್ತಮರಲ್ಲಿಗೆ ಬಂದ ನಾರದನು "ಕಾಶೀವಿಷಯಾಬ್ಧಿಯಲ್ಲಿ ವಿಷವೆ ಮೂಡಿರುವಂತೆ ಲೋಕೈಕ ಲುಂಟಾಕನೂ ದುರ್ವಿನೀತನೂ ಆದ ಮಧುವೆಂಬ ದಾನವ ಮೂರ್ತಿ ಮೂಡಿ ತನ್ನ ನಿಜತೇಜದಿಂದ ಅಮರಲೋಕವನ್ನು ಗೂಡಾಡಿಸುತ್ತಿರುವನು. ಅವನ ಕರಪೀಡನದಿಂದ ಅಗ್ರಹಾರ ಸಮೂಹಗಳು ರಕ್ಷಣೆಯಿಲ್ಲದೆ ಭಯಗೊಂಡಿರುವುವು. ಆ ದಾನವನಿಂದ ವರ್ಣಸಂಕರ ವಿಶೇಷವಾಗಿ ಆಯಿತು. ನೀವು ಕಾರಣಪುರುಷರಾಗಿರುವಿರಿ. ಅವನೀಭಾರಧುರಂಧರತೆಗೆ, ಉಗ್ರಶಾತ್ರವಕುಲಸಂಹಾರಕ್ಕೆ ನೀವೇ ಕಾರಣಪುರುಷರಾಗಿರುವಿರಿ. ನಿಮ್ಮವತಾರವು ಸಕಲಲೋಕಗಳ ಪುಣ್ಯಫಲವಾಗಿದೆ. ನಿಮ್ಮ ತಲೆ ನಿಮಿರಲು ಯಾಗ, ದಾನ, ಧರ್ಮ, ಚಾಗಗಳು ನಿಮಿರುವುವು. ನೀವು ಆ ದೈತ್ಯನ 'ಕಣ್ಣ ಮುಳ್ಳು, ಮನದ ಶೂಲ'ವಾಗಿರುವಿರಿ. ಧರಾಚಕ್ರಿ ತಾನೆಂದೂ, ಇತರರು ಸಾಮಾನ್ಯರೆಂದೂ ಭಾವಿಸಿ ಆತ ನಿಮ್ಮನ್ನು ಅಪ್ರಂಕಿಸಿ ಇರಲಾರ. ಅವನಿಗೆ ಹೆದರದೆ ನೀವು ನಿಮ್ಮ ರಕ್ಷಣೆಗಾಗಿ ಮಂತ್ರತಂತ್ರಗಳನ್ನು ಸಂಪಾದಿಸುವುದು" ಎಂದು ಹೇಳಿ ಅವರ ಕಿವಿಯಲ್ಲಿ ಏನೇನೋ ಗುಟ್ಟನ್ನು ತಿಳಿಸಿ ಸಕಲಮಂಗಳವಿಜಯವಾಗಲಿ ಎಂದು ಹರಸಿ 'ಪ್ರೊಡೆಪಟ್ಟ ಸೆಂಡಿನಂತೆ' ಗಗನಕ್ಕೆ ಒಗೆದನು.

ಮಧುಕೈಟಭನ ದೂತ ಪುರುಷೋತ್ತಮನಲ್ಲಿಗೆ ಬಂದು ಸಂಧಿಯ ಬಯಕೆಯನ್ನು ವ್ಯಕ್ತಪಡಿಸಿದನು. ಸಂಧಿಯನ್ನೊಪ್ಪದ ಬಲದೇವ–ವಾಸುದೇವರು ಯುದ್ಧವನ್ನು ನಿಶ್ಚಯಿಸಿದರು. ಮಂತ್ರನಿಕೇತನದಿಂದ ಹೊರಬರುತ್ತಿರುವಾಗ ಭಯಂಕರಾಕಾರದ ರಾಕ್ಷಸನೊಬ್ಬ ಅವರಿಗೆ ಕಣ್ಮುಟ್ಟಿನಲ್ಲಿ ಕಾಣಿಸಿಕೊಂಡನು. ಕೃಷ್ಣನ ಶಕ್ತಿ ಅವನ ದೇಹವನ್ನು ತಾಗಲು ರಾಕ್ಷಸರೂಪ ತೊಲಗಿ ದೇವರೂಪ ಕಾಣಿಸಿಕೊಂಡಿತು. ಆಗ ದೇವನು ರಾಮ–ದಾಮೋದರರ ಪಾದಗಳಿಗೆರಗಿ "ದೇವ, ನೀವಿರ್ವರು ಹಿಂದಿನ ಜನ್ಮದಲ್ಲಿ ಸಹಸ್ರಾರಕಲ್ಪದಲ್ಲಿ ಹುಟ್ಟಿ ದಿವಿಜಾಧೀಶರಾಗಿದ್ದಿರಿ. ಪೂರ್ವವೈರದಿಂದ ನನ್ನ ಮೇಲೆ ಧೈತ್ಯವಜೂಡನು ಆಕ್ರಮಣ ನಡೆಸಿದಾಗ ನೀವು ಸಕಾಲದಲ್ಲಿ ಸಹಾಯ ಮಾಡಿದಿರಿ. ನನ್ನ ಹೆಸರು ಮಣಿಚೂಡ. ನೀವು ಮಾಡಿದ ಪ್ರಾಣೋಪಕಾರಕ್ಕೆ ಪ್ರತಿಯಾಗಿ ಉಪಕಾರವುಂಟೆ? ತಮ್ಮ ಭುಜಾರ್ಜಿತ ಜಯಶ್ರೀಗೆ ನನ್ನ ವಿದ್ಯೆಗಳ ಸಮೂಹ ಬೆಸಕೆಯ್ಯುತ್ತ ಇರಲಿ" ಎಂದು ಪ್ರೀತಿಯಿಂದ ತಾನು ಕಲಿತ ವಿದ್ಯೆಯನ್ನು ಮುಸಲಿಕೃಷ್ಣರಿಗೆ ತಿಳಿಸಿಕೊಟ್ಟನು.

ಸಮರಭೇರಿ ಮೊಳಗಿತು. ವಿಜಯಪ್ರಸ್ಥಾನಶಿಬಿರದಿಂದ ಸೈನ್ಯ ಚಲಿಸಿತು. ಮಧುಕೈಟಭನಿಗೆ ದೂತ ಯುದ್ಧದ ಸುದ್ದಿ ಮುಟ್ಟಿಸಿದನು. ಅಸುರರೆಲ್ಲ ತಮ್ಮರಸನ ಮುಂದೆ ತಮ್ಮ ಪ್ರತಾಪವನ್ನು ಅತಿಶಯವಾಗಿ ಹೇಳಿಕೊಂಡರು. ಮಧು ಯುದ್ಧಸನ್ನದ್ಧನಾಗಿಬಂದು ಬಲದೇವ–ವಾಸುದೇವರು ಬೀಡುಬಿಟ್ಟಿರುವುದಕ್ಕೆ ಕಟ್ಟಿದಿರಾಗಿ ಮಕರವ್ಯೂಹವನ್ನು ಒಡ್ಡಿನಿಂತನು. ಅದನ್ನು ಭೇದಿಸುವ ಸೂಚೀವ್ಯೂಹವನ್ನು ಕೃಷ್ಣನ ಕಡೆಯವರು ನಿರ್ಮಿಸಿದರು. ಎರಡೂ ಕಡೆಯವರು ಯುದ್ಧ ಪ್ರಾರಂಭಿಸಲು ಸೈಬೀಸಿದರು. ಭೀಕರವಾದ ಯುದ್ಧ ನಡೆಯಿತು. ಮಧು ಕೋಪಾಟೋಪದಿಂದ ಕೃಷ್ಣನ ಮೇಲೆ ತನ್ನ ಚಕ್ರವನ್ನು ಪ್ರಯೋಗಿಸಿದನು. ಅದು ಕೃಷ್ಣನನ್ನು ಬಲಗೊಂಡು ಅವನ ಬಲಭುಜದಲ್ಲಿ ನೆಲಸಿತು. ಬಲದೇವ ಆ ಚಕ್ರವನ್ನು ಶತ್ರುವಿನ ಮೇಲೆ ಬಿಡಲು ಅದು ಅವನ ಶಿರವನ್ನು ಹಾರಿಸಿತು. ಆಗ ಆಗಸದಿಂದ ಪುಷ್ಪವೃಷ್ಟಿಯಾಯಿತು. ದೇವತೆಗಳು ಬಲದೇವ–ವಾಸುದೇವರನ್ನು ಹರಸಿದರು. ಕೃಷ್ಣ ವಿಜಯಲಕ್ಷ್ಮಿಯೊಂದಿಗೆ ನೆರೆಯಲು ದೇವದುಂದುಭಿಗಳು ಮೊಳಗಿದುವು. ಅನಂತರ ರಣರಂಗವನ್ನು ಪೂಜಿಸಲು ಹೇಳಿ, ಶರಣಾಗತರಾದವರಿಗೆ ಅಭಯ ನೀಡಿ, ಬಲರಾಮ–ಕೃಷ್ಣರು ದ್ವಾರಾವತಿಗೆ ಮರಳಿದರು. ಬಲಭದ್ರನು ಕೃಷ್ಣನಿಗೆ ಚಕ್ರೇಶಪಟ್ಟವನ್ನು ಕಟ್ಟಿದನು.

ಹೀಗೆ ತಂಗಿ ಚಿತ್ರಲತೆಗೆ ಮನಂಬುಗುವಂತೆ ಮದನಪತಾಕೆ ಕಥೆ ಹೇಳಿ ಮತ್ತೆ ಚಿತ್ರಲತೆಯೊಡಗೂಡಿ ಜಿನೇಂದ್ರ ಸಭಾಂತರಾಳವನ್ನು ಪ್ರವೇಶಿಸಿದಳು. ಅವಧಿಜ್ಞಾನದಿಂದ ಇಂದ್ರನು ಅನಂತನ ಧರ್ಮಶ್ರೀ ವಿಹಾರವಿರುವುದನ್ನು ಅರಿತು, ಇದುವರೆವಿಗೂ ಕುಂದಿದ ಧರ್ಮವನ್ನು ಬೆಳಗುವಂತೆ ಅನಂತನಲ್ಲಿ ವಿಜ್ಞಾಪನೆ ಮಾಡಿಕೊಂಡನು. ಜಗದ್ಗುರು ಧರ್ಮಾಮೃತಸಾರವನ್ನು ಲೋಕದಲ್ಲೆಲ್ಲಾ ಸಂಚರಿಸಿ ಹರಡಿ ಸಮ್ಮೇದಶಿಖರಕ್ಕೆ ಮರಳಿ

ಬಂದನು. ಪಾವನಪ್ರದೇಶದಲ್ಲಿನ ಶುದ್ಧಸ್ಫಟಿಕಶಿಲಾತಲದಲ್ಲಿ ಮೋಕ್ಷಲಕ್ಷ್ಮೀಸಮಾಲಿಂಗನಕ್ಕೆ ಆಸೆಪಟ್ಟು ಪ್ರತಿಮಾಯೋಗದಲ್ಲಿ ನಿಂತನು. ಪರಮೇಶ್ವರನ ಪರಿನಿರ್ವಾಣಕಲ್ಯಾಣ ಮಹೋತ್ಸವವನ್ನು ಆಚರಿಸಲು ಇಂದ್ರಸಮಾಜ ಹಾಗೂ ಇಂದ್ರಾಣಿಯ ಗಣರು ಬಂದು ಸವಿಸ್ತಾರವಾಗಿ ಆರಾಧಿಸಿದರು. ದೇವೇಂದ್ರ ಜಿನೇಶ್ವರನನ್ನು ಕೀರ್ತಿಸಿ ಅರ್ಚಿಸಿ ಪೂಜಿಸಿ ನೋಡಿಯೂ ತಣಿಯದೆ ನಿರ್ವಾಣನೃತ್ಯವನ್ನಾಡಿದನು.

ವಿಮರ್ಶೆ

ಮಹಾಕಾವ್ಯಲಕ್ಷಣ ಹಾಗೂ ಪುರಾಣರಚನಾಸಂಪ್ರದಾಯಗಳನ್ನು ಮೈಗೂಡಿಸಿಕೊಂಡು ಬಂದ ಜನ್ನನ ಎರಡನೇ ಕೃತಿ ಅನಂತನಾಥಪುರಾಣ. ಇದು ಹದಿನಾಲ್ಕನೆಯ ತೀರ್ಥಂಕರನಾದ ಅನಂತನನ್ನು ಕುರಿತ, ಹದಿನಾಲ್ಕು ಆಶ್ವಾಸಗಳುಳ್ಳ, ಮಹಾಕಾವ್ಯದ ಶಾಸ್ತ್ರೋಕ್ತಲಕ್ಷಣಸಮನ್ವಿತವಾದ ಪುರಾಣಪದ್ಧತಿಗನುಗುಣವಾಗಿ ಅಷ್ಟಲಕ್ಷಣಗರ್ಭಿತವಾದ ಪ್ರೌಢ ಚಂಪೂಕಾವ್ಯ. ಇದರಲ್ಲಿ ಹದಿನಾಲ್ಕನೆಯ ತೀರ್ಥಂಕರನಾದ ಅನಂತನ ಮತ್ತು ಅವನ ವಂಶಕ್ಕೆ ಸೇರಿದ ಸುಪ್ರಭ-ಪುರುಷೋತ್ತಮರೆಂಬ ಬಲದೇವ–ವಾಸುದೇವರ ಚರಿತ್ರೆಯೂ, ಪ್ರತಿವಾಸುದೇವನಾದ ಅರ್ಧಚಕ್ರಿ ಮಧುಕೈಟಭನ ಚರಿತ್ರೆಯೂ ಬಂದಿದೆ. ಅನಂತಜಿನನ ಕಥೆ ಗುಣಭದ್ರಾಚಾರ್ಯರ ಉತ್ತರಪುರಾಣದ ಅರವತ್ತನೆಯ ಪರ್ವದಲ್ಲಿ ಬಂದಿದೆ. ಇದನ್ನೇ ಅನುಸರಿಸಿ ಚಾವುಂಡರಾಯನು ಕನ್ನಡದಲ್ಲಿ 'ತ್ರಿಷಷ್ಟಿಶಲಾಕಾಪುರುಷಪುರಾಣ'ವೆಂಬ ಕೃತಿಯಲ್ಲಿ ಅನಂತಜಿನ ಹಾಗೂ ಸುಪ್ರಭ–ಪುರುಷೋತ್ತಮರ ಚರಿತವನ್ನು ಬರೆದಿರುವನು. ಉತ್ತರಪುರಾಣ ಹಾಗೂ ಚಾವುಂಡರಾಯಪುರಾಣದಲ್ಲಿ ಬಂದಿರುವ ಕಥಾಭಾಗವನ್ನು ನೋಡಿದಾಗ ತೀರ ಚಿಕ್ಕದಾಗಿರುವಂತೆ ಕಂಡುಬರುತ್ತದೆ. ಈ ಪುಟ್ಟಕಥೆಯನ್ನೇ 'ಪುರಾಣಪದ್ಧತಿ'ಗೆ ಅನುಗುಣವಾಗಿ ಹಿಗ್ಗಿಸಿ ಹದಿನಾಲ್ಕು ಆಶ್ವಾಸಗಳುಳ್ಳ ಮಹಾಕಾವ್ಯವನ್ನಾಗಿ ಮಾಡಿರುವನು.

'ನಿರ್ಮಳ'ನೂ 'ಪರಮಶ್ರೀಜಿನಪಾದಪಲ್ಲವಲತಾಂತ'ನೂ 'ಜೈನಮಂದಿರನಿರ್ಮಾಣಧನ'ನೂ ಆದ ಜನ್ನ 'ದೇವಾಧೀಶನನೊರ್ಮೆ ವರ್ಣಿಸೆ ಮನೋವಾಕ್ಕಾಯಸಂಶುದ್ಧಿಯಿಂ ದೇವೇಂದ್ರತ್ವಮೆ ಸಾರ್ದಪುದು' ಎಂದು ಬಲವಾಗಿ ನಂಬಿದ್ದನು. ಒಮ್ಮೆ ವಿನೇಯಜನರೆಲ್ಲ ಸೇರಿ

> ಕವಿಭಾಳೇಕ್ಷಣ ಜನ್ನ ನಿನ್ನ ಕವಿತಾಪ್ರೋತ್ತುಂಗಸಂಪತ್ತಿ ಮೇ।
> ರುವಿನಂತಿರ್ದಪುದಿಂದ್ರನಂ ಮಜಿಸಯಿಸಲ್ ಸಾಲ್ದಪ್ಪುದೀ ನಿನ್ನ ಭ।
> ವ್ಯವಿಳಾಸಂ ಕೃತಿಮಾರ್ಗಪಾಂಡುಕಶಿಲಾಪಟ್ಟಾಗ್ರದೊಳ್ ವಾಕ್ಸುಧಾ।
> ನವನಂ ಶ್ರೀಮದನಂತನಾಥಚರಿತಕ್ಕಿಂಬಾಗೆ ಸಂಭಾವಿಸಾ॥

ಎಂದು ಹೇಳಲು 'ಭಕ್ತಿನಿತಂಬಿನೀಪ್ರಣಯದಿಂದ' ಕವಿ ಹೇಳಲು ನಿಶ್ಚಯಿಸಿದನು. ಅರ್ಹದ್ದೇವನನ್ನು ಭರ್ತೃವಾದಿ 'ತದೀಯಾಶ್ಚರ್ಯಚಾರಿತ್ರದೊಳ್ ಭಾವಂ ನಿಂದು ಪುರಾಣಮಂ' ಜನ್ನ ರಚಿಸಿದನು.

ಹಿಂದೆ, ತೀರ್ಥಂಕರಚರಿತೆಯನ್ನು ಪ್ರಥಮಚಕ್ರಿಯಾದ ಭರತನು ಆದಿತೀರ್ಥಂಕರನ ಗಣಧರನನ್ನು ಕೇಳಲು ಅದನ್ನು ವೃಷಭಸೇನಸ್ವಾಮಿಯು ಕೈಲಾಸದಲ್ಲಿ ಹೇಳಿದನು. ಪ್ರಭುನಾಥನ ಓಲಗದಲ್ಲಿ ಆ ಸತ್ಸೂತ್ರವನ್ನು ಶ್ರೇಣಿಕನು ತಿಳಿಯಬಯಸಲು ವಿಪುಲಾದ್ರಿಯಲ್ಲಿ ಗೌತಮನು ವರ್ಧಮಾನನ ಸಭಾಮಧ್ಯದಲ್ಲಿ ಆತನಿಗೆ ತಿಳಿಯುವಂತೆ ಬೋಧಿಸಿದನು. 'ಆ ಪುರಾಣಕೃತಿಯಂ ಬಲ್ಲಂದದಿಂ ಪೇಳ್ದಪೆಂ' ಎಂದು ಕವಿ ಹೇಳುವನು. ಪರಂಪರೆಯಿಂದ ಬಂದ 'ಪುರಾಣಪದ್ಧತಿ' ಜಿನಸೇನ-ಗುಣಭದ್ರಾಚಾರ್ಯರ ಪ್ರಯತ್ನದಿಂದಾಗಿ ಧರ್ಮದ ವಿಚಾರಗಳು ಕಾವ್ಯದ ಚೌಕಟ್ಟಿನಲ್ಲಿ ಸೇರ್ಪಡೆಯಾದುವು. ಅನಂತನಾಥನ ಚರಿತೆ ಗುಣಭದ್ರಾಚಾರ್ಯರ ಉತ್ತರಪುರಾಣದಲ್ಲಿ ಕೇವಲ 85 ಶ್ಲೋಕಗಳಲ್ಲಿ ಮೊತ್ತಮೊದಲು ಕಾಣಿಸಿಕೊಂಡಿತು. ಚಾವುಂಡರಾಯಪುರಾಣದಲ್ಲಿ ಅನಂತನ ಕಥೆ ಸು. 20 ಸಾಲುಗಳಲ್ಲಿ ಬಂದಿತು. ಜನ್ನ ಇವುಗಳಿಂದ ಪ್ರಭಾವಿತನಾಗಿ ಪಂಪನೇ ಮೊದಲಾದ ಜೈನಪುರಾಣಕವಿಗಳ ಮಾರ್ಗವನ್ನನುಸರಿಸಿ ಬೃಹತ್ ಕಾವ್ಯವೊಂದರ ನಿರ್ಮಾಣಕ್ಕೆ ತೊಡಗಿದನು.

ಜನ್ನನಿಗೆ ಅನಂತನಾಥನ ಚರಿತೆಯನ್ನು ಬರೆಯಲು ಸಹಾಯಕ ಸಾಮಗ್ರಿಗಳು ಉಪಲಬ್ಧವಿದ್ದುದರಿಂದ, ಪುರಾಣರಚನೆಯ ಹಾದಿ ಅವನ ಕಾಲಕ್ಕಾಗಲೇ ಹಿಂದಿನವರಿಂದಾಗಿ ಸವೆದಿದ್ದುದರಿಂದ, ಕಾವ್ಯಲಕ್ಷಣಕ್ಕನುಸಾರವಾಗಿ ಕೃತಿರಚನೆ ಮಾಡುವುದು ಅವನಿಗೆ ಕಷ್ಟವಾಗಿ ತೋರಲಿಲ್ಲ. ಜನ್ನನ ಕವಿತಾಪ್ರತಿಭೆ 'ಅನಂತನಾಥಪುರಾಣ'ದಲ್ಲಿ ಸಂಪ್ರದಾಯನಿಷ್ಠವಾಗಿರುವಂತೆ ಕಂಡುಬರುತ್ತದೆ. ಪುಟ್ಟ ಕಥಾವಸ್ತುವನ್ನು ಹೊಂದಿರುವ ಅನಂತನ ಚರಿತೆ ಮಹಾಕಾವ್ಯವಾಗುವ ಸಂದರ್ಭದಲ್ಲಿ ಅನಿವಾರ್ಯವಾಗಿ ಅಷ್ಟಾದಶ ವರ್ಣನೆ, ಅಲಂಕಾರ, ಕವಿಸಮಯಗಳು ತಲೆಹಾಕುವಂತೆ ಮಾಡಿತು. ವಿದ್ವಾಂಸರೊಬ್ಬರು ಅಭಿಪ್ರಾಯಪಡುವಂತೆ "ಶಾಸ್ತ್ರೋಕ್ತವಾದ ಮಹಾಕಾವ್ಯದ ಲಕ್ಷಣಗಳೆಲ್ಲವೂ ತುಂಬಿ ತುಳುಕುತ್ತಿರುವುದರಿಂದ ಅದು ಮಹಾಕಾವ್ಯ. ಜಗನ್ನುತ ಜನ್ನನ ಆಳವಾದ ತುಂಬು ಪಾಂಡಿತ್ಯಕ್ಕೆ ಅದು ಆಡುಂಬೊಲ; ಮಿದುಳಿನ ಮಾಟದ ಬೆಡಗು ವರಸೆಗಳ ಗರಡಿಯ ಮನೆ."[1]

ಪಂಪ ಆದಿಪುರಾಣದಲ್ಲಿ ಜೈನಪುರಾಣಗಳ ಲಕ್ಷಣಗಳನ್ನು ಹೀಗೆ ವಿವರಿಸಿರುವನು:

---

[1] ಪ್ರೊ. ಕ. ವೆಂ. ರಾಘವಾಚಾರ್: ಯಶೋಧರಚರಿತ್ರೆ, ಪೀಠಿಕೆ, ಪು. XVI, XVII

"ಆ ಪುರಾಣಕ್ಕಂ ಲೋಕಾಕಾರಕಥನಮುಂ, ದೇಶನಿವೇಶೋಪದೇಶನಮುಂ, ನಗರಸಂಪತ್ಪರಿವರ್ಣನಮುಂ, ರಾಜ್ಯರಾಮಣೀಯಕಾಖ್ಯಾನಮುಂ, ತೀರ್ಥ ಮಹಿಮಾಸಮರ್ಥನಮುಂ, ಚತುರ್ಗತಿಸ್ವರೂಪನಿರೂಪಣಮುಂ, ತಪೋದಾನ ವ್ಯಾವರ್ಣನಮುಂ, ತತ್ಫಲಪ್ರಾಪ್ತಿಪ್ರಕಟನಮುಮೆಂದಿಂತವಯವಮೆಂಟಕ್ಕುಂ"

ಪಂಪ ಜೈನಪುರಾಣಗಳಿಗೆ ಎಂಟು ಅವಯುವಗಳೆಂದು ಹೇಳಿದರೆ ಅಭಿನವಪಂಪನು ಜೈನ ಪುರಾಣದಲ್ಲಿ ಕಥಾಂಗಗಳು ಎಂಟು ಎಂದು ಹೇಳುವನು :

ಸಕಲಜ್ಞಪ್ರತಿಪಾದ್ಯಮಪ್ಪ ಭುವನಂ, ದೇಶಂ, ಪುರಂ, ರಾಜನ್ಯ-।
ತ್ರಿಕಮರ್ಹದ್ವಿಭವಂ, ಚತುರ್ಗತಿ, ತಪೋಮಾರ್ಗಂ, ಫಳಂ, ತತ್ಪರಾ ।
ಣ ಕಥಾಂಗಗಳಿವೆಂಟೆನಿಕ್ಕುಮವಱೊಳ್ ಮುನ್ನಂ ಕಲಾಚಾರ್ಯರ ।
ಪ್ಪ ಕವೀಂದ್ರೋಕ್ತಮದಿಂ ಪ್ರತಿಷ್ಠೆವಡೆಗುಂ ಲೋಕಕಥಾಪೀಠದೊಳ್ ॥

(ಮಲ್ಲಿಪು. 1.54)

ಜನ್ನನ ಕಾಲಕ್ಕಾಗಲೇ ಜೈನಪುರಾಣಪದ್ಧತಿ ಸುಸ್ಪಷ್ಟತೆಯನ್ನು ಪಡೆದುಕೊಂಡಿತ್ತು. ಆತ ತನ್ನ 'ಅನಂತನಾಥಪುರಾಣ'ದಲ್ಲೂ ಹಿಂದಿನವರಂತೆ ಜೈನಪುರಾಣಗಳ ಅಷ್ಟಾಂಗ ಗಳನ್ನು ಹೇಳಿರುವನಾದರೂ ಪುರಾಣಕ್ಕೆ ಅವಯುವಗಳು ಐದು ಕಾವ್ಯರೂಪವಾದ ಪುರಾಣಕ್ಕೆ ಎಂಟು ಎಂದು ಮೊದಲಿಗೆ ಸ್ಪಷ್ಟಪಡಿಸಿ ವಿವರಿಸಿರುವನು. ಆತ ಹೇಳುವಂತೆ ಮುನಿ ಮಾರ್ಗೋಕ್ತ ಪುರಾಣಪದ್ಧತಿಗೆ ಲೋಕಾಕಾರ, ತೀರ್ಥವರ್ತನ, ವ್ಯಾಪ್ತಚತುರ್ಗತಿಸ್ಥಿತಿ, ಭಾಸ್ವತ್ತಪೋದಾನಕೀರ್ತನ, ತತ್ಫಲಸಿದ್ಧಿ—ಇವು ಐದು ಅವಯುವಗಳು. ಕವಿಪ್ರೋಕ್ತ ಕಾವ್ಯನಿಬಂಧಕ್ಕೆ ಲೋಕಾಕಾರ, ತೀರ್ಥವರ್ತನ, ವ್ಯಾಪ್ತಚತುರ್ಗತಿಸ್ಥಿತಿ, ಭಾಸ್ವತ್ತಪೋ ದಾನಕೀರ್ತನ, ತತ್ಫಲಸಿದ್ಧಿ, ದೇಶ, ನಗರಿ, ರಾಜ್ಯೋತ್ಸವಾಖ್ಯಾನ—ಇವು ಎಂಟು ಅಂಗಗಳು.[1] ಜನ್ನನ ಅನಂತನಾಥಪುರಾಣದಲ್ಲಿ ಈ ಅಷ್ಟಾಂಗಗಳಲ್ಲದೆ ತೀರ್ಥಂಕರನ ಗರ್ಭಾವತರಣ, ಜನ್ಮಾಭಿಷವಣ, ಪರಿನಿಷ್ಕ್ರಮಣ, ಕೇವಲಜ್ಞಾನ ಮತ್ತು ಪರಿ ನಿರ್ವಾಣಗಳೆಂಬ ಪಂಚಕಲ್ಯಾಣಗಳ ವರ್ಣನೆ; ಜೈನತತ್ತ್ವೋಪದೇಶ; ಅನಂತವ್ರತ

---

[1] ಮುನಿಮಾರ್ಗೋಕ್ತ ಪುರಾಣಪದ್ಧತಿಗೆ ಲೋಕಾಕಾರಮುಂ ತೀರ್ಥವ ।
ರ್ತನಮುಂ, ವ್ಯಾಪ್ತ ಚತುರ್ಗತಿಸ್ಥಿತಿಗಳುಂ, ಭಾಸ್ವತ್ತಪೋದಾನಕೀ ।
ರ್ತನಮುಂ, ತತ್ಫಲಸಿದ್ಧಿಯುಂ ನೆಗಱ್ದೈದಂಗಂ ಕವಿಪ್ರೋಕ್ತ ಕಾ ।
ವ್ಯನಿಬಂಧೋಚಿತಮೆಂಟುಂ ದೇಶನಗರೀರಾಜ್ಯೋತ್ಸವಾಖ್ಯಾನದಿಂ ॥

(ಅನಂಪು. 1.66)

ಬೋಧೆ ಇವೇ ಮೊದಲಾದುವುಗಳೂ ಬಂದಿವೆ. ಅನಂತನ ಬಾಲಲೀಲೆ, ಯೌವನೋದಯ ವಿಲಾಸ, ವಸಂತ, ಚಂದ್ರೋದಯ, ರಾತ್ರಿವಿಹಾರ ಇಲ್ಲೆಲ್ಲ ವರ್ಣನೆಗಳು ರಸಭರಿತವಾಗಿವೆ. ಚಂದ್ರಿಕಾವಿಹಾರದ ವರ್ಣನೆಯಲ್ಲಿ ಶೃಂಗಾರದ ಪೂರವೇ ಹರಿದಿದೆ. 'ಅಂಗೋದ್ಭವನ ಸಕಲ ಸಾಮ್ರಾಜ್ಯ'ವನ್ನು ತನ್ಮಯನಾಗಿ ವರ್ಣಿಸುವ ಭರದಲ್ಲಿ ಕಾವ್ಯವು 'ಬಾಳಬಟ್ಟೆ', 'ಪರಮಾಗಮ' ಎಂದು ತಾನೇ ಹೇಳಿದ್ದನ್ನು ಮರೆತನೋ ಎನ್ನುವ ಸಂಶಯವನ್ನು ಓದುಗರ ಮನದಲ್ಲಿ ಕವಿ ಉಂಟುಮಾಡುವನು. ಚಂಡಶಾಸನನ ಪ್ರಸಂಗ 'ಅನಂತನಾಥಪುರಾಣ'ದ ಉತ್ತುಂಗಸ್ಥಲವಾಗಿದೆ. ಸುನಂದೆಯ ಉಜ್ವಲವಾದ ಪಾತಿವ್ರತ್ಯ, ಮಿತ್ರನ ಅಂಗನೆಯಲ್ಲಿ 'ಕುರುಡುಮೋಹ'ಕ್ಕೆ ಒಳಗಾಗಿ ಬಲಾತ್ಕಾರದಿಂದ ಅವಳನ್ನು ಮಿತ್ರನಿಂದ ಕದ್ದೊಯ್ದು ಅವಳ ಮನವೊಲಿಸಲು ನಾನಾಬಗೆಯಲ್ಲಿ ಪ್ರಯತ್ನಿಸಿ ವಿಫಲನಾಗಿ ತನ್ನಳಿವಿಗೆ ತಾನೇ ಕಾರಣನಾದ ಚಂಡಶಾಸನನ ಪಾತ್ರಸೃಷ್ಟಿ ಅಪೂರ್ವವಾಗಿ ಮೂಡಿಬಂದಿದೆ. ಚಂಡಶಾಸನನ ಕಥೆಯಲ್ಲಿ ಸನ್ನಿವೇಶಕಲ್ಪನಾಚಾತುರ್ಯ, ದುರಂತ ವಿನ್ಯಾಸರಚನೆ ಮೇಲೆದ್ದು ಕಾಣುವ ಗುಣವಾಗಿದೆ.

ಚಂಡಶಾಸನ ಕಥೆ :

'ಅನಂತನಾಥಪುರಾಣ'ದಲ್ಲಿ ಓದುಗರ ಮನಸನ್ನು ಸೂರೆಗೊಳ್ಳುವ ಭಾಗವೆಂದರೆ ಚಂಡಶಾಸನನ ಕಥೆ. ಉತ್ತರಪುರಾಣದಲ್ಲಿ ಕೇವಲ ಆರು ಸಾಲುಗಳಲ್ಲಿ[1] ಬಂದಿರುವ ಈ ಕಥೆ ಜನ್ನನಲ್ಲಿ ಪ್ರತಿಭೆಯ ಮಾಂತ್ರಿಕ ಸ್ಪರ್ಶದಿಂದ ಹೊಸರೂಪ ಪಡೆದುಕೊಂಡು ಬಂದಿದೆ. ಯಶೋಧರಚರಿತ್ರೆಯಲ್ಲಿ ಪ್ರಣಯಸಮಸ್ಯೆಯ ಒಂದು ಮುಖವನ್ನು ಕಂಡಂತೆ ಅನಂತನಾಥಪುರಾಣದಲ್ಲೂ ಅದರ ಮತ್ತೊಂದು ಮುಖವನ್ನು ಕಾಣುತ್ತೇವೆ. ಒಟ್ಟಿನಲ್ಲಿ ಎರಡೂ ಕೃತಿಗಳಲ್ಲಿ ಬರುವುದು, ಧರ್ಮಬಾಹಿರ ಪ್ರಣಯ ಸಮಸ್ಯೆಯೇ. ಅಮೃತಮತಿ 'ಅಭಿನವ ಮನ್ಮಥ'ನಾದ ಯಶೋಧರನಂತಹ ಪತಿಯಿದ್ದರೂ ಒಂದಿರುಳು ತೇಲಿಬಂದ ಗಾನದ ಮಾಧುರ್ಯಕ್ಕೆ ಮನಸೋತು ಅಷ್ಟಾವಂಕನಿಗೆ ತನ್ನ ತನು–ಮನಗಳನ್ನು ಒಪ್ಪಿಸಿ ಕೈಹಿಡಿ

[1] ಏತಸ್ಮಿನ್ ಭಾರತೇ ವರ್ಷೇ ಪೌದನಾಧಿಪತಿರ್ನೃಪಃ ।
ವಸುಷೇಣೋ ಮಹಾದೇವೀ ತಸ್ಯ ನಂದೇತ್ಯನಿಂದಿತಾ ॥
ಮಲಯಾಧೀಶ್ವರೋ ನಾಮ್ನಾ ಕದಾಚಿಚ್ಚಂಡಶಾಸನಃ ।
ಆಜಗಾಮ ನೃಪಂ ದ್ರಷ್ಟುಂ ತತ್ಪುರಂ ಮಿತ್ರತಾಂ ಗತಃ ॥
ನಂದಾ ಸಂದರ್ಶನೇನಾಸೌ ಮೋಹಿತಃ ಪಾಪಪಾಕವಾನ್ ।
ಅಪೃತ್ಯ ತಾಮುಪಾಯೇನ ಸ್ವದೇಶಮಗಮತ್ಕುಧೀಃ ॥

ದೊಲವಿನೊಡೆಯನಿಗೆ ದ್ರೋಹ ಬಗೆದರೆ ಚಂಡಶಾಸನ ಪರಮಾಪ್ತಗೆಳೆಯ ವಸುಷೇಣನನ್ನು ಕಾಣುವ ಉತ್ಸುಕತೆಯಿಂದ ಬಂದವನು ಗೆಳೆಯನ ಅತಿಥಿಯಾಗಿ ಗೆಳೆಯನ ಮನದನ್ನೆ ಸುನಂದೆಯ ಅನುಪಮಸೌಂದರ್ಯದ ಸಂಕೋಲೆಯಲ್ಲಿ ಬಂಧಿತನಾಗಿ ಅವಳನ್ನು ಪಡೆಯಲೇಬೇಕೆಂಬ ಕೆಟ್ಟ ಹಠಕ್ಕೆ ಕಟ್ಟುಬಿದ್ದು ಮೋಸದಿಂದ ಕದ್ದೊಯ್ದು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸುವ ಗೆಳೆಯನಿಗೆ ದ್ರೋಹ ಬಗೆದ. ಮಾನವನ ಬದುಕಿನಲ್ಲಿ ಕಾಮ ಅನಿವಾರ್ಯ. ಮಾನವನ ಬದುಕನ್ನು ರೂಪಿಸುವ ಪಾತ್ರವಾಗಿ ಬರುವ ಕಾಮ ಮಾನವ ಜನಾಂಗದ ವಿಕಸನದಲ್ಲಿ ಪ್ರಮುಖಪಾತ್ರವಹಿಸಿದೆ. ಬದುಕಿನಲ್ಲಿ ಅವಶ್ಯವಾಗಿರುವ ಕಾಮದ ಪ್ರಾಧಾನ್ಯವನ್ನರಿತ ಕವಿ ವ್ಯಕ್ತಿಯ ಬದುಕಿನಲ್ಲಿ ಕಾಮ ಹೇಗೆ ಏಳು–ಬೀಳುಗಳಿಗೆ ಆಧಾರವಾಗಬಹುದೆಂಬುದನ್ನು ಚೆನ್ನಾಗಿ ಅರಿತವನಾಗಿದ್ದಾನೆ. ಹೀಗಾಗಿ ಧರ್ಮಬಾಹಿರ ಪ್ರಣಯಪ್ರಸಂಗವನ್ನು ವಿವೇಚಿಸುವಾಗ ಅದನ್ನು ಒಂದು ಮಾನವೀಯ ಸಮಸ್ಯೆಯಾಗಿ ಪರಿಗಣಿಸಿ ವಿಶ್ಲೇಷಿಸಿರುವನು. ಧರ್ಮಬಾಹಿರ ಪ್ರಣಯಪ್ರಸಂಗದಲ್ಲಿ ವೈಮನಸ್ಸಿನ ಹತೋಟಿಯನ್ನು ಹರಿದು ಪ್ರವಾಹಕ್ಕೆ ಬಿದ್ದು ತಾನು ನೊಂದು ಬೆಂದದ್ದಲ್ಲದೆ ಇತರರನ್ನೂ ಸಂಕಟಕ್ಕೀಡುಮಾಡಿದ ಪ್ರಣಯವೈಚಿತ್ರ್ಯ ಮತ್ತು ಅದರ ಘೋರ ದುರಂತದ ರೌದ್ರ ರಮಣೀಯತೆಯ ಕಡೆಗೆ ಕವಿ ನಮ್ಮನ್ನು ತಳ್ಳಿ ನಾವೂ ವಿಚಾರಪರರಾಗುವಂತೆ ಮಾಡಿರುವನು.

ಬಹುಕಾಲ ಅಗಲಿದ್ದ ಮಿತ್ರ ವಸುಷೇಣನನ್ನು ಮಕರಗ್ರಾಹಪುರದರಸು ಚಂಡಶಾಸನ ನೋಡಲು ಬಂದು ಸಹೋದರಸಮಾನನೂ ಸಹಪಾಂಸುಕ್ರೀಡಾನುಬಂಧಸಂಗತ ಬಂಧುವೂ ಆದ ವಸುಷೇಣನ ಅತಿಥಿಯಾಗಿ ಕೆಲವು ದಿವಸವಿದ್ದು ವಾಹವಿಳಾಸ, ಕಂದುಕಕೇಳಿ, ಗಜಯುದ್ಧ, ವಾರುವದ ಅಂಕ, ಚಿತ್ರವಿಚಿತ್ರ ಕೌತುಕಗಳಿಂದ ಮನರಂಜನೆಯನು ಪಡೆದು ಏಕಾಸನದ ಸಹಪಂಕ್ತಿಭೋಜನದ ಸಹವಿಳಾಸಕ್ರೀಡಿತದ ಸಮಯಗಳಲ್ಲಿ ಗೆಳೆಯನ ಮಡದಿ ಸುನಂದೆಯನ್ನು ನೋಡಿ ಅವಳ ಅನುಪಮಸೌಂದರ್ಯದಿಂದ ಸಮ್ಮೋಹಿತನಾಗುವನು. 'ಕಂತುಸಂತಾಪಕ್ಕೆ ಪಕ್ಕಾಗಿ ಕುಕ್ಕುಳಗುದಿದುರ್ಕಿದೊಳಗೊಳಗೆ ಬೇವ' ಹೃದಯವನ್ನು ಸಹವಡಿಸಲಾರದೆ ಆತ ತನ್ನವಸ್ಥಾಂತರವನ್ನು ಕೆಳೆಯ ಸುದರ್ಶನನಿಗೆ ಮನಬಿಚ್ಚಿ ಹೇಳುವನು. ತಾನು ಬಯಸಿರುವುದು ಪ್ರಾಣಮಿತ್ರನ ಅಂಗನೆಯನ್ನು ಎಂಬ ವಿಚಾರದ ಸುಳಿವೂ ಅವನ ಮನಸ್ಸಿನಲ್ಲಿ ಮೂಡದ ಕುರುಡುವ್ಯಾಮೋಹದ ತಪ್ತಸ್ಥಿತಿಯಲ್ಲಿ ಗೆಳೆಯ ಸುದರ್ಶನ ನಿಮ್ಮ ಮನೋರಥಸಿದ್ಧಿಗೆ ಅವಕಾಶವಿದೆ. ಅದೆಂತು ಎನ್ನುವಿರೊ

ನಯದಿಂ ಲೋಕಿಕನಾದ ನಿಮ್ಮರಸರಿಂತೀಕಾರಣಂ ಬಂದರಿ |
ಲ್ಲಿಯ ಕಾರ್ಯಾಂತರದಿಂ ಪ್ರಯಾಣದಿನಮಿನ್ನೆಂದಂತು ತಾಂ ಪೆತ್ತ ತಂ |

ದೆಯ ಮಿತ್ರಂಗೊಡವುಟ್ಟಿದಣ್ಣನ ಸಹಾಯಂಗಾಡುವಂತೀಗಳಿ ।
ನ್ನಯ ಕೂಡಾಡಿದಳಿಂತಿದೇನಳಿಪೊ ಮೇಣ್ ನಿರ್ಮೋಹಮೋ ಭಾವಿಸಾ ॥

ಎಂದು ಮೊದಲಾಗಿ ನುಡಿದು 'ಮನದ ಪಿಶಾಚಕ್ಕೆ ವಚನರಚನಾಘೋಷ'ವನ್ನು ತೋರಿ ವಿರಹವಿಕಾರವನ್ನು ಕೆರಳಿಸಿದನು. 'ಆ ಮದಿರಾಕ್ಷಿ ತನ್ನಿನಿಯನಿರ್ದವೊಲಿನ್ನೊಡನಾಪೆಗೆಯ್ವಳ್' ಎಂದು ಭಾವಿಸಿ ತನ್ನಳಿಯಾಸೆಯ ನೆರವೇರಿಕೆಗಾಗಿ ವಿವೇಕಶೂನ್ಯನಾಗಿ ಜೀವದ ಗೆಳೆಯನಿಗೆ ದ್ರೋಹಬಗೆದು ಸುನಂದೆಯನ್ನು ಮೋಸದಿಂದ ಕದ್ದೊಯ್ದ. ಗೆಳೆಯನನ್ನು ನೋಡಬಂದು ಅವನ ಒಲವಿನೊಡತಿಯನ್ನು ಮೋಸದಿಂದ ಕದ್ದೊಯ್ದ ಚಂಡಶಾಸನನ ವರ್ತನೆ ಖಂಡಿತ ಸಮರ್ಥನೀಯವಲ್ಲ. ಅವನು ರಾಗಾಂಧನಾಗಿ ಮಾಡಿದ ಅಪಚಾರ ಅಕ್ಷಮ್ಯ. ಆದರೂ ತಪ್ಪಿತಸ್ಥನಾದ ಅವನಲ್ಲಿಯ ಕೆಲವು ಒಳ್ಳೆಯ ಗುಣಗಳಿಗಾಗಿ ಅವನ ದುರಂತ ಸ್ಥಿತಿಯಲ್ಲಿ ನಾವು ಅವನ ಬಗ್ಗೆ ಕನಿಕರಿಸುತ್ತೇವೆ.

ಚಂಡಶಾಸನ ಪ್ರೇಮದ ಸವಿಯುಂಡವನು. ಅನೇಕ ರಾಣಿಯರ ಬೇಟದಲ್ಲಿ ಪ್ರಿಯ ಸುಖವುಂಡವನು. ಅವನಿಗೆ ಭೋಗೋಪಭೋಗಗಳಲ್ಲಿ ಅರೆಯೆಂಬುದೇ ಇಲ್ಲ. ಕಾಮದ ಅಗ್ನಿಕುಂಡದಲ್ಲಿ ಅರೆಬೆಂದ ಅಸ್ಪೃಷ್ಟ ಅವನಲ್ಲ. ಗೆಳೆಯನನ್ನು ಬಹುಕಾಲ ಅಗಲಿ ಇದ್ದು ನೋಡಬೇಕೆಂಬ ಕಾತುರದಿಂದ ಬಂದ ಆತ ಕಾಮನ ಅಲರಂಬಿನ ಬಿರುಘಾತಕ್ಕೆ ಒಳಗಾಗಿ 'ಬಗೆಯ ಬಯ್ಕೆಯನಗೆಯುತ್ತಿ ಸೂಜಿಗೊಳ್ವ' ಸುನಂದೆಯ ರೂಪಲಾವಣ್ಯಕ್ಕೆ ಮನಸೋತ. ಕಂತುಸಂತಾಪಕ್ಕೆ ಒಳಗಾಗಿದ್ದ ಚಂಡಶಾಸನನನ್ನು ಒಳ್ಳೆಯ ಮಾತುಗಳಿಂದ ಮನದ ವಿಕಾರವನ್ನು ಕಳೆಯದೆ, ಗೆಳೆಯ ಸುದರ್ಶನ ಹುಸಿಮಾತುಗಳಿಂದ ಅವನ ಮನದ ವಿಕಾರವನ್ನು ಮತ್ತಷ್ಟು ಕೆರಳಿಸಿದ. ರಾಗಾಂಧನಾದ ಚಂಡಶಾಸನ ಸಾರಾಸಾರ ವಿಚಾರವಿವೇಚನೆ ಮಾಡದೆ ಸುನಂದೆಯನ್ನು ಮೋಸದಿಂದ ಅಪಹರಿಸಿದ. ಸುನಂದೆಯ ಅನುಪಮಸೌಂದರ್ಯಕ್ಕೆ ಚಂಡಶಾಸನ ಮನಸೋತಿದ್ದರೂ ಕಾಮಾಂಧನಾಗಿ ಅವಳ ಮೇಲೆ ಆಕ್ರಮಣ ನಡೆಸಲಿಲ್ಲ. ಸುನಂದೆಯ ಮುಂದೆ ವಿನಯದಿಂದ ವರ್ತಿಸಿ ಅವಳನ್ನು ಒಲಿಸಿಕೊಳ್ಳಲು ಪ್ರಯತ್ನಿಸುವನು. ಅವಳಲ್ಲಿ ವಿನೀತನಾಗಿ ಪ್ರೇಮಯಾಚನೆ ಮಾಡುತ್ತಾ "ನಯದಿಂದ ನಿನ್ನನ್ನು ಒಪ್ಪಿಸಿ ಪಡೆಯದೆ ಔತ್ಸುಕ್ಯದಿಂದ ನಿನ್ನನ್ನು ತಂದೆ. ನನ್ನೀ ಸಲುಗೆಯನ್ನು ಮನ್ನಿಸು. ಕಾಮಿ ಕಣ್ಣರಿವನಲ್ಲ. ನಾನು ಗಂಡುದೊಳ್ತು. ನನ್ನ ರಾಣಿಯ ವಾಸದವರು, ಪರಿಚಾರಕರು—ಇವರೆಲ್ಲ ನಿನ್ನ ಸೇವೆಗೆ ಮೀಸಲು. ಈ ಸಾಮ್ರಾಜ್ಯಲಕ್ಷ್ಮೀ ಸುಖೋದಯದಲ್ಲಿ ನೀನು ನನ್ನ ವಲ್ಲಭೆಯಾಗಿರು" ಎಂದು ಬೇಡುವನು. ಒರ್ವ ಹೆಣ್ಣಿನ ಪ್ರೇಮಕ್ಕಾಗಿ ಕಾತರಿಸಿ ಮನಕರಗುವಂತೆ ಬೇಡುವ ಅವನ ಬಗ್ಗೆ ಪರಿತಾಪ ಮೂಡುತ್ತದೆ. ಒಲವಿನ ಸೆಳೆತದ ಬಗ್ಗೆ ಅದರ ಅಪ್ರತಿಮಶಕ್ತಿಯ ಬಗ್ಗೆ ಈ ಸಂದರ್ಭದಲ್ಲಿ ಆಶ್ಚರ್ಯವಾಗುತ್ತದೆ. ಖಳ ಚಂಡಶಾಸನನ ಮಾತು ಕೇಳಿ ಸುನಂದೆ ಕಡೆಗಣ್ಣಿಂದ ಕಿಡಿಸೂಸುತ್ತಾ

ಕನಲಿ ನುಡಿದಾಗ ಚಂಡಶಾಸನ ಏನ್ನೈಸಿ ಮುಳಿಯದೆ ಲಜ್ಜೆಯಿಂದ ಚಳಿಯದೆ "ಮಿತ್ರನ ಸ್ನೇಹವನ್ನು ಕಳಚಿ ಶತ್ರುವಾದೆ. ವಸುಷೇಣ ಹೋದನು. ನೀನು ನನ್ನ ಕೈಸೆರೆಯಾಗಿರುವೆ. ಗಂಡನನ್ನು ಸೇರುವೆನೆನ್ನುವ ವ್ಯರ್ಥ ಆಸೆಯಿಂದ ನವೆಯಬೇಡ. ನನ್ನ ಮೇಲಿನ ಆಗ್ರಹ ವನ್ನು ಬಿಡು. ಸತ್ತು ಸತ್ಫಲವನ್ನು ತೋರುವ ಬಾಳೆಯಗಿಡದಂತಾಗದಿರು. ಪಾತಿವ್ರತ್ಯದಿಂದ ಬತ್ತಿ ಬಾಳ್ಗಳಿರಾಗುತ್ತಿರದೆ ಆತ್ಮಪರ ಸೌಖ್ಯಶ್ರೀವಿಲಾಸಗಳನ್ನು ಆಳುತ್ತಲಿರು" ಎಂದು ನಯವಾಗಿ ಎಚ್ಚರಿಸುವನು. ತನ್ನ ನಯ–ವಿನಯಗಳಿಂದ ಕೂಡಿದ ಮಾತುಗಳಿಗೆ ಸುನಂದೆ ಬೆಲೆಗೊಡದೆ ಹೋದಾಗ

ಬಿಡೆ ನಾಂ ನೀ ಸಯೆ ಸಾವೆನಲ್ಲದುಟಿಯಿಂ ನೀನೊಲ್ದಡೇನೊಲ್ಲದಿ ।
ರ್ದೊಡಮೆನ್ನಾನೆರಡಿಲ್ಲದೊಲ್ಲೆನದಱಿಂ ಬೇಱರ ಬೇಟಕ್ಕೆ ಬಾಯ್ ।
ಬಿಡಲಾಱೆಂ ನೆಱೆಯಿಂದಮೆನ್ನ ಮನೆಯೊಳ್ನೀನಿರ್ದೆಯೆಂಬಾಸೆಯು ।
ಳ್ಳೊಡೆ ಸಾಲ್ಗುಂ ಬಟಿಕಪ್ಪುದಕ್ಕೆ ರಿಣದಿಂದಂಭೋಜಪತ್ರೇಕ್ಷಣೆ ॥

ಎಂದು ಚಾಳಿಸಿ ನುಡಿಯುವ ಚಂಡಶಾಸನನನ್ನು ಕಂಡು ಆಶ್ಚರ್ಯ ಪರವಶರಾಗುತ್ತೇವೆ. ಅವನ ಪರಿಶುದ್ಧಪ್ರೇಮದ ಆಳವನ್ನು, ನೀನೊಲಿದರೆ 'ಬೇಱರ ಬೇಟಕ್ಕೆ ಬಾಯ್ ಬಿಡ ಲಾಱೆಂ' ಎನ್ನುವ ಅವನ ನಿಶ್ಚಯವನ್ನು, "ನೀನು ನನ್ನ ಮನೆಯಲ್ಲಿದ್ದರೆ ಸಾಕು" ಎನ್ನುವ ಅವನ ನಿಷ್ಕಾಪಟ್ಯ ಮನವನ್ನು ಕಂಡು ಮೂಕರಾಗುತ್ತೇವೆ. ಸುನಂದೆಯ ಸಾವು ಚಂಡ ಶಾಸನನ ಪರಿಶುದ್ಧವೂ ಆಳವೂ ಆದ ಪ್ರೇಮವನ್ನು ಒರೆಹಚ್ಚಿ ನೋಡಲು ಬಂದಂತಿದೆ. 'ಬಿಡೆ ನಾಂ ನೀ ಸಯೆ ಸಾವೆನಲ್ಲದುಟಿಯಿಂ' ಎನ್ನುವ ಅವನ ಮಾತು ಅವನನ್ನು ಪರೀಕ್ಷೆಗೆ ಒಳಗುಮಾಡಿತು. ಸುನಂದೆಯ ಜೊತೆಗೂಡಿ ಅಗ್ನಿಪ್ರವೇಶಮಾಡಿ ಆತ ತನ್ನ ಪ್ರೇಮದ ಪರಿಶುದ್ಧತ್ವವನ್ನು, ಆಳವನ್ನು, ಪರಾಕಾಷ್ಠೆಯನ್ನು ಒರೆಹಚ್ಚಿ ತೋರಿಸಿಕೊಟ್ಟ. ಹೆಣ್ಣಿಗಾಗಿ ಗಂಡು ಅಗ್ನಿಪ್ರವೇಶ ಮಾಡಿ, ಚಂಡಶಾಸನ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನೇ ನಿರ್ಮಿಸಿದ. ಪ್ರೇಮವನ್ನು ಅಮರವನ್ನಾಗಿಸಿದ ಚಂಡಶಾಸನನ ಪಾತ್ರ ವನ್ನು ನಾವು ಮರೆಯುವುದಾದರೂ ಹೇಗೆ?

'ಯಶೋಧರಚರಿತೆ'ಯಲ್ಲಿ ಅಮೃತಮತಿ ತನ್ನ ನೀತಿಗೆಟ್ಟ ನಡತೆಯಿಂದ ಸ್ತ್ರೀ ಕುಲಕ್ಕೇ ಕಳಂಕವನ್ನು ತಂದರೆ 'ಅನಂತನಾಥಪುರಾಣ'ದಲ್ಲಿ ಸುನಂದೆ ತನ್ನ ಪರಿಶುದ್ಧ ಚಾರಿತ್ರ್ಯದಿಂದ ಕೀರ್ತಿಯನ್ನು ತಂದಳು. ಕಾಮಾಂಧಳಾದ ಹಾಗೂ ಪರಮಪತಿವ್ರತೆ ಯಾದ ಸ್ತ್ರೀಯ ಎರಡು ಮುಖಗಳನ್ನು ಅರಿತವನಾದ ಜನ್ನ ತನ್ನೆರಡು ಕೃತಿಗಳಲ್ಲಿ ಅವನ್ನು ಸೊಗಸಾಗಿ ಪರಿಚಯಿಸಿರುವನು. ಸುನಂದೆ "ವಸುಷೇಣನೃಪನೆ ಕೈವಿಡಿದಸುವಿಂಗೊಡೆಯ ಚಿತಾಗ್ನಿಗೊಡೆಯಂ" ಎಂದು ಭಾವಿಸಿ ನಡೆದ ಪರಮಪತಿವ್ರತೆ, ಆದರ್ಶ ನಾರಿ. ಚಂಡ ಶಾಸನನು ಒಡ್ಡಿದ ಹಲವು ಬಗೆಯ ಪ್ರಲೋಭನೆಗಳಿಗೆ ಒಳಗಾಗದೆ ತನ್ನ ಪರಮ

ಪಾತಿವ್ರತ್ಯವನ್ನು ಮನಗಾಣಿಸಲು ಗಂಡನ ಪ್ರಾಣದೊಂದಿಗೆ ತನ್ನದನ್ನು ಲೀನಗೊಳಿಸಿದಳು. ಸಾಧ್ವಿ ಸುನಂದೆಯ ಅಚಲವಾದ ನಿಷ್ಠೆ, ಅತ್ಯಮೋಘವಾದ ಪಾತಿವ್ರತ್ಯ. 'ಈ ಪಾತಿವ್ರತ್ಯದ ವಿನಾಶಗೈವ ಜಸವೆಣ್ಣ ತಲೆಗೆ ತಪ್ಪಿಸೆ ಪುಲ್ಲ' ಎನ್ನುವ ಅವಳ ಮನೋನಿಲವು— ಅವಳನ್ನು ಅಮರಳಾಗಿಸಿದ್ದು. ಓದುಗರು ಅವಳನ್ನು ಮರೆಯುವುದಾದರೂ ಹೇಗೆ?

'ಉತ್ತರಪುರಾಣ'ದಲ್ಲಿ ಬಿಂದುರೂಪವಾಗಿ ಬಂದಿರುವ ಚಂಡಶಾಸನನ ಕಥೆಯನ್ನು ವಿಸ್ತರಿಸುವ ಸಂದರ್ಭದಲ್ಲಿ ಕವಿ ರಾಮಾಯಣದ ಕಥೆಯಿಂದ ಪ್ರಭಾವಿತನಾಗಿರುವಂತೆ ಕಂಡುಬರುತ್ತದೆ. ಸುನಂದೆಯನ್ನು ಚಂಡಶಾಸನ ಕದ್ದೊಯ್ಯುತ್ತಿದ್ದಾಗ ಅದನ್ನು ಕಂಡು ವಸುಷೇಣನೃಪನ ಕೆಳೆಯ ಸಾಮಂತ ಸಿಂಹಚೂಡ ಗಜರಿ ಗರ್ಜಿಸಿ ಮುಟ್ಟಿ ಮೂದಲಿಸಿ ಚಂಡಶಾಸನನನ್ನು ತಡೆದು "ಧರೆ ಪ್ರಜಾಪ್ರತಿ ಪರವೆಣ್ಣಾಟಿಸಿದೊಡೆ ಕಳ್ದೊಯ್ದು ಕೂಡಿ ತಂದ್ದ ಪುಲ್ಲ್ಯಾನನನಾದ ಚಂಡಶಾಸನನೆನಂ ಚಂಡಾಲ ನೀರೊಳಿಂತರ್ದುವರೇ?" ಎಂದು ಚುಚ್ಚಿ ನುಡಿದು ಅವನೊಡನೆ ಹೋರಾಡಿ ವೀರಮರಣವನ್ನಪ್ಪಿದ ಸನ್ನಿವೇಶ ರಾಮಾಯಣದಲ್ಲಿ ರಾವಣ ಸೀತೆಯನ್ನು ಕದ್ದೊಯ್ಯುವಾಗ ಜಟಾಯು ರಾವಣನನ್ನು ಇದಿರಿಸಿ ವೀರೋಚಿತವಾಗಿ ಹೋರಾಡಿ ಪ್ರಾಣಬಿಟ್ಟ ಭಾಗವನ್ನು ನೆನಪಿಸುತ್ತದೆ. ಜನ್ನ ಬಹುವಾಗಿ ನಾಗಚಂದ್ರನ ರಾಮಾಯಣದಿಂದ ಪ್ರಭಾವಿತನಾಗಿರಬಹುದು.

ಜನ್ನನ ವರ್ಣನೆಗಳಲ್ಲಿ ಪೂರ್ವಕವಿಗಳ ಛಾಯೆ ಅಲ್ಲಲ್ಲಿ ಕಂಡುಬಂದರೂ ಅವುಗಳ ನಿರೂಪಣಾ ವಿಧಾನದಲ್ಲಿ ನಾವೀನ್ಯವನ್ನು, ಓದಿನವರನ್ನು ವಿಸ್ಮಯಿಸುವ ಸ್ವತಂತ್ರ ಪ್ರತಿಭೆಯ 'ಛಳ'ಕನ್ನು ನೋಡಬಹುದಾಗಿದೆ. ಜನ್ನನ ಅನಂತನಾಥಪುರಾಣವು ಅವನ ತುಂಬು ಪಾಂಡಿತ್ಯವನ್ನು ವ್ಯಕ್ತಪಡಿಸುವಂತಹ ಕೃತಿ. ಇದರಲ್ಲಿ ಬರುವ ಸಾಂಪ್ರದಾಯಿಕ ಅಷ್ಟಾದಶ ವರ್ಣನೆಗಳನ್ನು ಬಿಟ್ಟು ಸಹೃದಯರು ಕಾವ್ಯವನ್ನು ಆಸ್ವಾದಿಸಿದ್ದೇ ಆದರೆ ಜನ್ನನ ಅಪ್ರತಿಮ ಪ್ರತಿಭೆಯು ಕಾವ್ಯಸ್ವಾರಸ್ಯದ ಸವಿ ಆಗದಿರದು.

ಜನ್ನನ ಉತ್ಪ್ರೇಕ್ಷೆಯಲ್ಲೂ ಒಂದು ಸೊಗಸಿದೆ. ಮನುಜಮನೋಜನಾದ ಸಿಂಹಸೇನನ ಆಶ್ಚರ್ಯಕರವಾದ ರೂಪವನ್ನು ವರ್ಣಿಸುತ್ತಾ ಕವಿ, ಅವನ ಕಡೆಗಣ್ಣ 'ಕಾಂತಿಲತಿಕಾಸುಮನಸ್ಮರ ಮೋಹಪಾಶ'ದಲ್ಲಿ ಸಿಕ್ಕಿದ 'ಚಿತ್ರಜಂಗೆ ಜಾಟಿತ್ಯಾದ ಲಸಿಪ್ಪ' ಅಟ್ರಿಕಾರ್ತಿಯರ ಮನವು ಚದರಿ. ತನು ಕಲಂಕಿ, ಮುಖ ಬಾಡಿ, ಕಣ್ಣ ನೀರುಸುಳಿ ದೋಡಿ ಮನ್ಮಥಬಾಧೆಗೆ ಒಳಗಾದ ಅವರು ಬೆದಬೆದ ಬೆಂದು ತಮಗೆ ತಾವೇ ಎದವಾಗಿ 'ಸ್ಮರಪಾಶ ಪ್ರೇರಿತಂ ಗೋರಿಯು ಹರಿಣೆಯವೋಲ್ ಸ್ಥಾನಮಂ ಪೊಕ್ಕು ತತ್ತ್ವೇಕರ ರೋಚಿವಾರ್ಗರಿಯಿಂ ತದ್ದರಹಸಿತ ವಚಸ್ಯಂದನಾಸೇಕದಿಂ ತತ್ಪರಿಹಾಸಸ್ಪರ್ಶಸೌಖ್ಯಾವೃತದಿನೊದವೆ ಶೀತೋಪಚಾರಂ' ಆ ಪ್ರಮಾಲಾಧರೆಯರು ಕಣ್ಣೋಟದಿಂದಲೇ ಕೋಟಲೆಗೊಂಡರು—ಎನ್ನುವನು.

ಭೋಗೋಪಭೋಗಗಳಲ್ಲಿ ಮುಳುಗಿದ ಜೀವವು ಬದುಕಿನ ಯಾವುದೋ ಒಂದು ಘಟ್ಟದಲ್ಲಿ ಭೋಗದ ಕ್ಷಣಭಂಗುರತೆಯನ್ನರಿತು ಸುಖದ ಪೊಳ್ಳಿನ ಮಬ್ಬಿನಲ್ಲಿ ನಿಜದ ಅರಿವಾಗಿ ಅಜ್ಞಾನದ ತೆರೆ ಸರಿಸಿ ಸುಖದ ಸುಪ್ಪತ್ತಿಗೆಯಿಂದ ಇಳಿದು ಬರುವ ಭಾಗ ಜೈನಪುರಾಣಗಳಲ್ಲಿ ಮನಮುಟ್ಟುವಂತೆ ಬಂದಿವೆ. 'ಅನಂತನಾಥಪುರಾಣ'ದಲ್ಲಿ ಪದ್ಮರಥನಿಗೆ ಶರೀರಾದಿ ಸಮಸ್ತ ವಸ್ತುಗಳಲ್ಲಿ ಅಸ್ಥಿರತ್ವವು ಗೋಚರವಾದ 'ನರರ ಬಾಳ್ ಲಘುಕಾಲ'ವೆಂಬ ಅನಿಸಿಕೆ ಉಂಟಾದ ಸನ್ನಿವೇಶ ಹೃದಯಸ್ಪರ್ಶಿಯಾಗಿ ಬಂದಿದೆ. ಉಲ್ಕಾಪಾತವನ್ನು ಕಂಡ ಪದ್ಮರಥ ನಿರ್ವೇಗಪರನಾಗಿ 'ಸಂಸಾರಮೇಂ ನೀರ ಬುದ್ಬುದಮೇಂ? ಜನ್ಮನಮೇಂ ತರಂಗಲತೆಯೇಂ? ಸಂಪತ್ತಿಯೇಂ ವಾರಿವಾಹದ ಸೊಂಪೇಂ? ಇದನಿತ್ಯಂ' ಎಂದು ನಿರ್ಧರಿಸಿ ನಿಸ್ಸಾರವಾದ ಸಂಸಾರದ ಬಂಧನದಿಂದ ಬಿಡುಗಡೆ ಹೊಂದ ಬಯಸುತ್ತಾನೆ. ಅನಿತ್ಯನಾಟಕವನ್ನು ಕಂಡ ಅವನ ಒಳಮನ

ಮೊದಲೊಳ್ ಪುಟ್ಟುವ ನೋವು ಸಾವಿನ ಸಮಾನಂ ಬಾಲ್ಯದೊಳ್ ಬದ್ಧ ಬಾ ।
ಬಿದರಿಷ್ಟಂ ನವಯೌವನಂ ಮದಮುಖಂ ಸರ್ವಪ್ರಮಾದಕ್ಕೆ ತಾಂ ।
ಸದನಂ ಬೂದಿಯ ಬೊಟ್ಟು ಬೀದಿಯ ಸೊಡರ್ ಮುಪ್ಪಿನ್ನಿಗಂ ಬಟ್ಟಿನಂ ।
ಬಿದೆ ದಲ್ ಚಿತ್ರಮನಿತ್ಯನಾಟಕದ ಜೋಹಂ ತೀರ್ದುದಿಂ ಸಾಲದೇ ॥

ಎನ್ನುತ್ತದೆ. ಮೋಕ್ಷಲಕ್ಷ್ಮೀಸಮಾಗಮಕ್ಕೆ ಕಾತುರನಾದ ಪದ್ಮರಥ ಮಗನಿಗೆ ರಾಜ್ಯಭಾರ ವನ್ನೊಪ್ಪಿಸಲು ತೀರ್ಮಾನಿಸಿ ತನ್ನ ಬಳಿಗೆ ಮಗ ಘನರಥನನ್ನು ಕರೆಯಿಸಿ ತನ್ನ ಮನೋಗತವನ್ನು ಅವನಿಗೆ ತಿಳಿಸುವನು. ತಂದೆಯ ನಿರ್ಧಾರವನ್ನು ಕೇಳಿ ಚಿಂತಾನಿಮಗ್ನನಾದ ಘನರಥನ ಮನಃಸ್ಥಿತಿಯನ್ನು ಸ್ವಭಾವೋಕ್ತಿಚಿತ್ರದಿಂದ ನಮ್ಮ ಕಣ್ಣುಮುಂದೆ ಕವಿ ನಿಲ್ಲಿಸಿರುವನು :

ತೀವಿದ ಕಣ್ಣನೀರ್ ಮಿಡಿದು ಪಾಯ್ದೆವೆರ್ದೆ ಹಿಗ್ಗಿದ ಗಗ್ಗರಿಕೆ ಸಂ ।
ಭಾವನೆಯುಂ ಕಟಿಬ್ಬಿ ದೆಸೆಗೆಟ್ಟಜುನಂ ಮಱತಿಪೊಂದು ಮಾತುಮಂ ।
ದೇವನೊಳಿಂತುಟೆನ್ನದೆ ಕುಮಾರಕನಿರ್ದನದಕ್ಕೆ ಪಂದೆಯುಂ ।
ಪಾವಡರ್ದಂತೆ ಪೊಯ್ಪಡೆದವಂತೆ ಮುಟುಂಗಿದನಂತೆ ಚಿಂತೆಯೊಳ್ ॥

ಮಗನಿಗೆ ಪಟ್ಟಗಟ್ಟಿ ಪದ್ಮರಥ ತಪೋವನದತ್ತ ನಡೆದಾಗ ಅರಸನ ಅಗಲಿಕೆಯ ನೋವಿನಿಂದ ಪಲುಂಬಿ ಹಂಬಲಿಸುವ ಪೆಂಡವಾಸದ ತಂಡದವರ ಅಳಲು, ಮನದಾಳದ ಸಂಕಟ, ನೋವು ಓದುಗರ ಮನವನ್ನು ಮಿಡಿಯುತ್ತದೆ :

ಮನದೊಳಗಂಧಕಾರದ ಕಡಲ್ ಕವಿತರ್ಪುದು ನಿನ್ನ ವಕ್ತ್ರಚಂ ।
ದ್ರನ ಬೆಳಗೊಮ್ಮೆ ತೋಱದೊಡೆ ವಲ್ಲಭ ನೀಂ ಬಿಸುಟಿಂತು ಪೋಗೆ ಜೀ ।

ವನಮೆಮಗೆಂತು ನಾಥ ಬರವೇಱಿಸಲಾಗದೆ ದೇವ ಸತ್ತ್ರವೋ |
ವನ ತರುಷಂಡಮೆಮ್ಮನೊಳಕೊಳ್ವುದೆ ಪೇೞ್ ಭುವನೈಕಭೂಷಣಾ ||

ಲಲಿತವಿಲಾಸ ಲಾಸ್ಯವನ್ನು ಮೆಚ್ಚುವ, ವೀಣೆಯ ಮಧುರನಾದವನ್ನು ಮೆಚ್ಚಿ ಹೆಸರಿಡುವ, ಹಾಡಿನ ಮಂಜುಳ ನಿನದಕ್ಕೆ ಮನಸೋತು ಬಹುಮಾನಿಸುವ ನೃಪನೀಜ, ನೀನು ತಪಸ್ಸನ್ನು ಮೆಚ್ಚಿಹೋದ ಬಳಿಕ ಈ ಲಾಸ್ಯ, ವೀಣೆ, ಗಾನ—ಇವು ಇನ್ನು ನಮಗೇಕೆ? ಎಂದು ಮನಕರಗುವಂತೆ ಬೇಡುವ ಅವರ ಆಕ್ರಂದನ ಕರುಳಿರಿಯುವಂತಿದೆ:

ಲಳಿತ ವಿಲಾಸಲಾಸ್ಯರಸಮಿನ್ನೆಮಗೇಕೆಲೆ ದೇವ ವಲ್ಲಕೀ |
ಕಳರವದಿಂ ಪಸಾರ್ಗೆಸರಿಡಲ್ಕಱಿವರ್ ನೃಪನೀಜ ಗೀತಮುಂ |
ಜುಳ ನಿನದಕ್ಕೆ ಮೆಚ್ಚಱಿದು ಮೆಚ್ಚಿಪರಾರಧಿನಾಥ ನೀಂ ತಪ |
ಕ್ಕೆಳಸಿ ಬೞಿಕ್ಕೆ ಪೋದ ಬೞಿಕಾಮೆಮಗೇಕೆ ನೃಪಾಲಮನ್ಮಥಾ ||

ಅರಸ ರತ್ನಶಿಬಿಕೆಯನ್ನು ಏರಿದಾಗ ಒಲವಿನೊಡೆಯನ ಅಗಲಿಕೆಯ ನೋವನ್ನು ಸಹಿಸಲಾರದ ರಾಣಿಯರು ಅರಸನೊಂದಿಗೆ ತೆರಳಲು ನಿರ್ಧರಿಸಿದರು:

ಎರಡೊಡಲೊಂದೆ ಜೀವಮೆನೆ ಸಂಸೃತಿಸೌಖ್ಯಮನೂಡಿದ್ದೆ, ದಿಟಂ |
ನೆರೆವರ ನೀತಿಯಲ್ತೆ ಸುರಲೋಕಸುಖಂ ಬೞಿಕಿಂತಿಳೇಶ ಪಿಂ |
ತಿರಿಸುವೆ ಮೆಯ್ಯ ಪಿಂತೆ ನೆೞಲಿರ್ಪುದೆ ಬಾರದೆ ಮಾಣೆವೆಂದು ಪ್ರೌ |
ಢಾರಸಿಯರೇಱಿದರ್ ನೃಪನ ಕೂಡೆ ಪೇರ್ ಪಿರಿಯಂದಣಂಗಳಂ ||

ಅನಂತನಾಥನು ಸಕಲಜನಾನಂದವಾಗುವ ರೀತಿಯಲ್ಲಿ ರಾಜ್ಯಭಾರ ಮಾಡುತ್ತಿರುವಲ್ಲಿ ವಸಂತನ ಆಗಮನವಾಯಿತು. ವಸಂತಸಮಯದಲ್ಲಿ ಅನಂತನ ವಾರಸುಂದರೀ ಬಳಗದಲ್ಲಿನ ಪರಿಮಳೆ ಭ್ರಮರಿಕೆಯೆಂಬ ಮೇಳದ ವಿಳಾಸಿನಿಯರು ಒಡೆಯನಲ್ಲಿಗೆ ಬಂದು ತಾವು ವಿರಚಿಸಿದ ವಸಂತೋತ್ಸವಗದ್ಯವನ್ನು ಓದಿದರು. ವಸಂತನ ಆಗಮನವಾಗುತ್ತಿದ್ದಂತೆ ಪ್ರಕೃತಿಯಲ್ಲಾಗುವ ಮಾರ್ಪಾಟುಗಳನ್ನೂ ವಸಂತನ ವೈಭವದ ಸೊಗಸನ್ನೂ ಕವಿ ನೇರವಾಗಿ ತಾನೇ ಹೇಳದೆ ಭ್ರಮರಿಕೆ ಪರಿಮಳೆಯರ ಮೂಲಕ ಹಾಡಿಸಿ ಅವರ ವರ್ಣನೆಯ ಸೊಗಸು ವಾಗ್ಭಾಮಿನೀಭೂಷಣನ ಕಿವಿಗೆ ಸವಿಯನ್ನುಂಟುಮಾಡಿತೆಂದೂ ಅದನ್ನು ಕೇಳಿ ಮೆಚ್ಚಿ ತಲೆದೂಗಿ 'ಸುಕುಮಾರೋಚಿತಮಾಯ್ತು ರೀತಿ, ಮೆಱೆದತ್ತುತ್ಪ್ರೇಕ್ಷೆ, ಚೆಲ್ವಾಯ್ತು ರೂಪಕದೊಳ್, ವಕ್ರಿಮಜಾತಿಯಾಯ್ತು, ಸುರಭಿವ್ಯಾವರ್ಣನಂ ಪೇೞ್ದ ಮುಕ್ತಕಮಿಂಬಾದುವಿದಗ್ಧಮಾ ಕವಿತೆ ವೀರಾಗಂಗಳೊಳ್ಪೆಯ್ದಿ ಕೌತುಕಮಾಯ್ತು' ಎಂದು ಹೊಗಳಿ ಬಹುಮಾನವಿತ್ತನೆಂದೂ ಹೇಳುವುದರ ಮೂಲಕ ಕವಿ

ವಿನೂತನಸೃಷ್ಟಿಯನ್ನು ಮಾಡಿರುವನು. ಕವಿಯ ಈ ನವೀನ ಕಲ್ಪನೆ ಅನನ್ಯವಾಗಿದ್ದು ಸನ್ನಿವೇಶಕ್ಕೆ ತುಂಬಾ ಕಳೆಯನ್ನು ತಂದಿದೆ.

ಜನ್ನ ಉಭಯಭಾಷಾಕವಿಯಾಗಿದ್ದು ಆತ ಅನಂತನಾಥಪುರಾಣದಲ್ಲಿ ಸಂಸ್ಕೃತ ಭೂಯಿಷ್ಠ ಶೈಲಿ ಹಾಗೂ ಸರಳ ಅಚ್ಚಗನ್ನಡಶೈಲಿ—ಇವೆರಡರ ಬಳಕೆಯನ್ನು ಸೊಗಸಾಗಿ ಮಾಡಿರುವನು. ಸಂಸ್ಕೃತದ ಮೇಲೆ ತನಗಿರುವ ಪ್ರಭುತ್ವವನ್ನು ತಿಳಿಯಪಡಿಸಲು ಎಷ್ಟೋ ಪದ್ಯಗಳನ್ನು ಸಂಸ್ಕೃತಮಯ ಮಾಡಿರುವುದುಂಟು. ಬಾಣನ ಪ್ರಭಾವ ಜನ್ನನ ಮೇಲೆ ವಿಶೇಷವಾಗಿ ಬಿದ್ದಿರುವುದರಿಂದ ಈತನ ವಚನಗದ್ಯಗಳಲ್ಲಿ ದೀರ್ಘಸಮಾಸಪದಗಳ ಬಳಕೆ ಕಂಡುಬರುತ್ತದೆ. ಅಷ್ಟೇ ಅಲ್ಲ ಸಂಸ್ಕೃತದ ಹೊಡೆಸುಳಿಯಿಂದಾಗಿ ವಚನಗದ್ಯಗಳು ಕೃತಕವಾಗಿ ಬಂದಿರುವುದೂ ಉಂಟು. (ಉದಾಹರಣೆಗೆ ಮೂಲದ ಆಶ್ವಾಸ 2.11 ವ; 19 ವ; ಆ 6.10 ವ; ಆ 3.11 ವ ಇತ್ಯಾದಿ) ಅಚ್ಚಗನ್ನಡದಲ್ಲಿ ಕವಿ ಸೊಗಸಾಗಿ ಬರೆಯಬಲ್ಲನೆಂಬುದಕ್ಕೆ ಆತನ ಕಾರ್ಗಾಲದ ವರ್ಣನೆಯನ್ನು ನೋಡಬಹುದು. ಲಲಿತಪದಗಳಿಯಲ್ಲಿ ಬಂದಿರುವ ಆ ವರ್ಣನೆ ಸೊಗಸಾದ ಸ್ವಭಾವೋಕ್ತಿ ಚಿತ್ರಗಳಿಂದ ಕೂಡಿದ್ದು ಓದುಗರ ಮನಸ್ಸನ್ನು ಸೂರೆಗೊಳ್ಳುತ್ತದೆ :

ಅಂತು ಮೊಗಮಂ ನೋಡಲಿಳಿಯೆ ಕಣ್ದೆಱೆವಂತೆ |
ಮಣಿಬೀಡು ರಜ ಧರಣಿಯೊಳ್ಕಿಗೆದು ಮೋರಂತೆ |
ಕಲ್ಲ ಪೊಗರಿಂಪೊಳಿಟ್ಟ ಕಾರ್ಮುಗಿಲ ಮೊಟ್ಟೆಗಳ್ |
ತಾಮೆನಿಸಿ ಪರ್ಬಿದುವು ಪೆರ್ಜೇನ ಪುಟ್ಟಿಗಳ್ |
ತರಪೆ ಪಾಱುವ ಬೆಳ್ವಕ್ಕಿ ಸೂಲ್ದಿಗೆದಂತೆ |
ನೆರೆದ ಕಾಮನಬಿಲ್ಗೆ ಬಿಳಿಯ ತಿರು ಬಿಗಿದಂತೆ |
ಸಿಡಿಲ ದನಿಗಗಿದು ಶಬರನನಪ್ಪಿದಳ್ ಶಬರಿ |
ಬೆಂಬಿಡಿದು ಸೋಗೆ ನವಿಲೊಳ್ ಸೆಣಸುತಿರೆ ಶಬರಿ |
ಬಸಿಜನಪ್ಪಿದ ಮಱಿಗಳಂ ಪೊತ್ತು ಸಾಲ್ಗೊಂಡು |
ಮರದ ಪೊಟಲ್ಗೆ ಸಾರ್ದುವು ಕೋಡಗದ ಹಿಂಡು |

ಜನ್ನ, ಹೆಣ್ಣಿನ ಸುಕೋಮಲಮನದ ತುಡಿತವನ್ನರಿಯಬಲ್ಲ ಜಾಣ. ಸೋಮಪ್ರಭನ ಪತ್ನಿ ಸೀತೆಯ ಪುತ್ರದೋಹಳದ ವರ್ಣನೆ ಮಾಡುವಲ್ಲಿ ಅವಳ ಒಳಮನದ ಮಿಡಿತವನ್ನು ಸೂಕ್ಷ್ಮವಾಗಿ ಗ್ರಹಿಸಿ ಸೊಗಸಾಗಿ ಅದನ್ನು ನಿರೂಪಿಸಿರುವನು. ಸೀತೆ ತನ್ನ ಬಹುದಿವಸಗಳ ಬಯಕೆ—ಪುತ್ರಾಕಾಂಕ್ಷೆ—ಯನ್ನು ಹೀಗೆ ನೆನೆದು ನಿಟ್ಟುಸಿರುಬಿಡುವಳು:

ಪಡೆದಮರ್ದಪ್ಪಿಕೊಂಡು ಬಿಗಿಯಪ್ಪಿ ತನೂಜನ ಮೆಯ್ಯ ಧೂಳಿ ಪ |
ತ್ರದ ನಳಿತೋಳ್ಗಳೇಕೆ ಮೊಲೆಯುಂಬ ಕುಮಾರನ ಕಣ್ಣಕಜ್ಜಳಂ|

ಪುದಿಯದುರೋಜಮೇಕೆ ಪರಿಚುಂಬಿಸೆ ಕಂದನ ಕೈದೊಡಂಕೆ ಸೂ |
ಸದ ಕುಮಾಳ್ಕೆ ಬೇಜತ ಪ್ರೋಜತಿಯೊಳ್ಕಿವಜಂ ಕುಲವೆಣ್ಗೆ ಲೋಕದೊಳ್ ||

ಮಗನಂ ತೊಟ್ಟಿಲೊಳಿಟ್ಟು ತೂಗಿ ನಲವಿಂದಂ ಜೋಗುಳಂಬಾಡಿ ಮು |
ಲ್ಪಗೆಯಿಂ ಮುದ್ದಿಡೆ ಮೊಗಂ ತುಳುಂಕೆ ಪರಸುತ್ತುಂ ನೋಡಿ ಬಾ ದೇವ ಬಾ |
ಜಗತೀವಲ್ಲಭ ಬಾರ ಮಾಣಿಕವೆ ಬಾರೆನ್ನಾಸೆಯೆಂದೆತ್ತಿ ಮು |
ದ್ದಿಗೆವನ್ನಂ ಮೊಲೆಯೂಡಿ ತೂಪಿಜುವ ಪುಣ್ಯಂ ನೋನದಳ್ಗೆಕ್ಕುಮೇ ||

ಸೀತೆಯ ಮನದಾಳದ ಬಯಕೆಯನ್ನು ಸೋಮಪ್ರಭನಿಗೆ ಆಕೆಯ ಕೆಳದಿ ಪರಿಚಯ ಮಾಡಿಕೊಡುವ ಭಾಗ ಕವಿಯ ಪ್ರತಿಭಾಶಕ್ತಿಗೆ ನಿದರ್ಶನವಾಗಿ ಬಂದಿದೆ. ಸೀತೆ ನಂದೀಶ್ವರಾಷ್ಟಮಿಯಲ್ಲಿ ಅಷ್ಟಮಲೋಕಚೂಡಾಮಣಿಯನ್ನು ಪೂಜಿಸಿ ಕೆಳದಿಯೊಂದಿಗೆ ಪುಷ್ಪರಥಾರೂಢಳಾಗಿ ಬರುವಲ್ಲಿ ಅವಳ ಕಣ್ಣಿಗೆ ಅಪೂರ್ವ ದೃಶ್ಯವೊಂದು ಕಾಣಿಸಿತು :

ಕಡುವಾಯುಂ ಬಿರ್ಚಿ ಜಿಹ್ವಂ ಕುಸಿದು ನೆಗಪಿ ವಾಳಾಗ್ರಮಂ ಬೇನೆಯಿಂ ಘೂ |
ಳಿಡುತಂ ಶೈಲಾಗ್ರದೊಳ್ಕೈಕ್ಕಜಿಸಿ ಮಜಿಕದಿಂದೀಂಬ ಸಿಂಹಿ ಕಿಶೋರಂ |
ನಡುಗೂಳಿಲೊಳ್ಸಿಕಿರ್ಚ ಕಣ್ಣಂ ತೆಱದಿಭತತಿಯುಂ ತಾರಲೊಳ್ಕೊಂಡು ಕಾಯ್ವಂ |
ನಡುವಾಯಪ್ಪಾ ತಾಯ್ಗೆ ದುಃಖ ಪ್ರಸವಸಮಯದೊಳ್ತಂದುದಂ ತೊಂದಲಂಪಂ ||

ಹೆರಿಗೆಯ ಬೇನೆಯಿಂದ ಕರುಣೆಯುಕ್ಕುವಂತೆ ಸಂಕಟಪಡುತ್ತಿರುವ ತಾಯಿ ಸಿಂಹಿ. ತಾಯ ಹೊಟ್ಟೆಯ ಬಳಿ ಸೇರಿ ರಕ್ಷಣೆಯ ಭಾರ ಹೊತ್ತು ಕಣ್ಣುಬಿಟ್ಟು ಕುಳಿತ ಕಿಶೋರ ಸಿಂಹ. ತೀರ ಸಮೀಪದಲ್ಲೇ ಭಯಾನಕವಾಗಿ ನಿಂತ ಇಭಪತಿ. ಕೋಪದಿಂದ ಇಭಪತಿಯ ಮೇಲೆ ಕಿಶೋರಸಿಂಹ ಬಿದ್ದು ಅದನ್ನು ಕೊಂದು ಆ ಮೂಲಕ ತಾಯಿಯ ದುಃಖ ಪ್ರಸವ ಸಮಯದಲ್ಲೂ ತಾಯಿಗೆ ಸಂತೋಷವನ್ನುಂಟುಮಾಡಿದ ಕಿಶೋರಸಾಹಸ. ಒಂದೇ ಒಂದು ಪದ್ಯದಲ್ಲಿ ಇಂತಹ ಅಪೂರ್ವಸನ್ನಿವೇಶವೊಂದರ ಸೆರೆಹಿಡಿಯುವುದು ಜನ್ನನಂತಹ ಪ್ರತಿಭಾವಂತ ಕವಿಗೆ ಮಾತ್ರ ಸಾಧ್ಯ. ಈ ದೃಶ್ಯವನ್ನು ನೋಡಿದ ಸೀತೆ :

ಪಡೆವೊಡೆ ಸಿಂಹಿವೊಲ್ಪಡೆವುದಾತ್ಮಜರಂ ಬಱಿವೇಕೆ ಮಕ್ಕಳಂ |
ಪಡೆದಪೆನೆಂದು ಹಿಗ್ಗುವರೊ ಪುಟ್ಟಿದ ಮುನ್ನಮೆ ಜಾತಿವೈರದಿಂ |
ಸಿಡಿಲೆಱಪಂದದಿಂದೆಱಗಿದಪ್ಪುದು ಹಸ್ತಿಗೆ ಶತ್ರುಸಿಂಹನಂ |
ಪೊಡವಿಗಧೀಶನಂ ಪಡೆಯದಾಕೆಯ ಜೀವನಮದಕ್ಕೆ ನಿಷ್ಫಲಂ ||

—ಎಂದು ಮನಸ್ಸಿನಲ್ಲಿ ಭಾವಿಸಿ ಚಿಂತೆಯಿಂದ ನಿಟ್ಟುಸಿರುಬಿಟ್ಟದ್ದರಲ್ಲಿ ಆಶ್ಚರ್ಯವಿಲ್ಲ.

ಸುನಂದೆಯನ್ನು ಚಂಡಶಾಸನ ಅಪಹರಿಸಿಕೊಂಡು ಹೋದಾಗ ಅವಳ ಸಖೀಜನರು ಮಾಡಿದ ದುಃಖೋದ್ಗಾರವನ್ನು ಜನ್ನ ಮನಮುಟ್ಟುವಂತೆ ಹೇಳಿರುವನು :

ಹಾ ಲಲಿತಾಂಗಿ ಹಾ ಕುಸುಮಕೋಮಳೆ ಹಾ ಕಳಹಂಸಯಾನೆ ಹಾ ।
ನೀಳಸರೋಜಲೋಚನೆ ಸುನಂದೆ ನೃಪೇಂದ್ರನ ರಾಜ್ಯಲಕ್ಷ್ಮಿ ಭೂ ।
ಪಾಲನ ಭಾಗ್ಯಲಕ್ಷ್ಮಿ ವಸುಷೇಣನ ಮಂಗಳಲಕ್ಷ್ಮಿ ರಾಜ ಚಾಂ ।
ಡಾಲನ ಬಾಹುರಾಹುಗಿಳನಂ ನಿನಗೆ ಎತ್ತಣಿಂ ಎತ್ತ ಬಂದುದೋ ॥

ಕಲಿಯಾಗಿದ್ದ ಜನ್ನ ತನ್ನ 'ಅನಂತನಾಥಪುರಾಣ'ದಲ್ಲಿ ಯುದ್ಧವರ್ಣನೆಯ ಸಂದರ್ಭದಲ್ಲಿ ವೀರರಸದಪ್ರವಾಹವನ್ನೇ ಹರಿಸಿರುವನು. ಜೈನಪುರಾಣಗಳಲ್ಲಿ ಶಾಂತರಸ ಪ್ರಧಾನವಾಗಿ ಬಂದರೂ ಚಕ್ರವರ್ತಿಯ ದಿಗ್ವಿಜಯ ವರ್ಣನೆಯ ಸಂದರ್ಭದಲ್ಲಿ ವೀರರಸ ದುಂಟು. ಜೀವಹಾನಿಯಾಗದ ರೀತಿಯಲ್ಲಿ ಚಕ್ರವರ್ತಿಯ ದಿಗ್ವಿಜಯ ಯಾತ್ರೆ ನಡೆಯು ಬರುವುದರಿಂದ ಲೌಕಿಕ ಕಾವ್ಯಗಳಲ್ಲಿ ಕಾಣಬರುವ ಕ್ಷಾತ್ರತೇಜವನ್ನಾಗಲಿ, ಮೈನವಿರೇಳಿಸುವ ಸನ್ನಿವೇಶಗಳನ್ನಾಗಲಿ, ವೀರರ ಸಾಹಸದ ಪರಾಕಾಷ್ಠೆಯನ್ನಾಗಲೀ ಅಲ್ಲಿ ಕಾಣಲಾಗದು. ಆದರೆ ಇದಕ್ಕೆ ಅಪವಾದವೆನ್ನುವಂತೆ ಅನಂತನಾಥಪುರಾಣದಲ್ಲಿ ವೀರ್ಯವತ್ತಾದ ವರ್ಣನೆ ಗಳನ್ನು ನೋಡಬಹುದಾಗಿದೆ. ಜನ್ನನಲ್ಲಿ ಕೋಟೆಗಾಳಗದ ವರ್ಣನೆ ಅಪೂರ್ವವಾಗಿ ಮೂಡಿಬಂದಿದೆ.[1] ಇಲ್ಲಿ ಯುದ್ಧವರ್ಣನೆಗೆ ಉಪಾಂಗವಾಗಿ ಕೋಟೆಗಾಳಗದ ವರ್ಣನೆ ಬಂದಿದ್ದು ಜನ್ನನ ಈ ವರ್ಣನೆ ಬಹುವಾಗಿ ಆತನ ಕಾಲದ ಕೋಟೆಗಾಳಗವನ್ನು ಪ್ರತಿನಿಧಿಸುತ್ತದೆನ್ನಬಹುದು. ಸುನಂದೆಯನ್ನು ಚಂಡಶಾಸನ ಮೋಸದಿಂದ ಕದ್ದೊಯ್ದಾಗವ ಸುಷೇಣ ಅಸಹನೀಯ ಕೋಪದಿಂದ ಶತ್ರುವಿನ ಕೋಟೆಗೆ ಮುತ್ತಿಗೆ ಹಾಕುವನು. ವಸುಷೇಣನ ಕಡೆಯವರು ಕೋಟೆಯನ್ನು ಮುತ್ತಿದ ಬಗೆ ಹಾಗೂ ಕೋಟೆಗಾಳಗದ ರೀತಿ—ಇವನ್ನು ಕವಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವನು. ಅಂದಿನ ಕಾಲದ ಯುದ್ಧ ತಂತ್ರಗಳು, ಬಳಸುತ್ತಿದ್ದ ಆಯುಧಗಳು, ಯುದ್ಧ ಮಾಡುತ್ತಿದ್ದ ಬಗೆ—ಇವೆಲ್ಲದರ ವಿವರಗಳು ಹಿಂದಣ ಕಾವ್ಯಗಳಲ್ಲಿ ಅಪರೂಪವಾಗಿ ಅಲ್ಲಲ್ಲಿ ಕಂಡುಬಂದಿದೆ. ಬಹುಶಃ ಅಗ್ಗಳನಾದ ಮೇಲೆ ಕೋಟೆಗಾಳಗದ ವರ್ಣನೆ ಮಾಡಿದ ಶ್ರೇಯಸ್ಸಿಗೆ ಜನ್ನ ಭಾಜನನಾಗುವನು. ಜನ್ನ ಇದರ ಬಗ್ಗೆ ಕೊಡುವಷ್ಟು ವಿವರಗಳನ್ನು ಇತರ ಕವಿಗಳು ಕೊಟ್ಟಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಯುದ್ಧವರ್ಣನೆ ಮಾಡುತ್ತಾ ಕವಿ ಸಮನೆ ಬಳಸುವ ಉಪಮೆಗಳು

[1] ಅಂದಿನ ಕಾಲದ ಕೋಟೆಗಾಳಗದ ಬಗ್ಗೆ ಹೆಚ್ಚಿನ ವಿವರಗಳನ್ನು ಶ್ರೀ ಬೆಟಗೇರಿ ಕೃಷ್ಣ ಶರ್ಮರ 'ಕರ್ನಾಟಕ ಜನಜೀವನ' ಎಂಬ ಗ್ರಂಥದಲ್ಲಿನ 'ಕನ್ನಡಿಗರ ಕೋಟೆಗಾಳಗ' ಎಂಬ ಸಂಶೋಧನ ಪ್ರಬಂಧದಿಂದ ಪಡೆಯಬಹುದು.

ಜಾನಪದದ ಸತ್ವವನ್ನು ಪ್ರತಿಬಿಂಬಿಸಿಕೊಂಡು ನಿಂತಂತಿವೆ. ಉದಾಹರಣೆಗೆ 'ಬಣಜಿಗನ ಬಳಕೆಯಂತೆ' ಕೊತ್ತಳವು ಬರಿದಾಯಿತು; ಬಟ್ಟಲು ಬಡಗೊಂಡಿಯಂತೆ ಆಳ್ವೇರಿ ನಾಶವಾಯಿತು; ಕಡುಗೊಬ್ಬಲಾದ ಕೆಯ್ಯಂತೆ ತೆನೆ ಮುರಿದುದು: ಬೀಸರವಾದ ರಾಶಿಯಂತೆ ಹುಲಿಮೊಗಗಳು ನಾಶವಾದುವು ಇತ್ಯಾದಿ. ಕೆಲವು ಉಪಮೆಗಳು ನಿರ್ದಿಷ್ಟಚಿತ್ರವನ್ನು ಕಣ್ಣಮುಂದೆ ನಿಲ್ಲಿಸಬಲ್ಲ ಶಕ್ತಿಯನ್ನು ಪಡೆದುಕೊಂಡು ಬಂದಿರುವುವು. ಉದಾಹರಣೆಗೆ ಗಾಳಕ್ಕೆ ಸಿಕ್ಕಿಸಿ ಮೇಲಕ್ಕೆ ಎತ್ತಿದ ಕೃಷಿಕರು 'ಎತ್ತಿದ ಪಾಪೆ'ಯಂತೆ ನೇತಾಡುತ್ತಿದ್ದರಂತೆ. ಭಲ್ಲೆಯದಿಂದ ಚುಚ್ಚಿ ಸಾಲಾಗಿ ಬಿದ್ದವರು ಮಾಂಸದ ಅಂಗಡಿಯಲ್ಲಿ ಕೋಲಿಗೆ ಕಟ್ಟಿ ನೇತುಹಾಕಿದ 'ಪುಂಟಿಗೆ'ಗಳಂತೆ ಕಂಡರಂತೆ. ದುರ್ಗದ ಆಳ್ವೇರಿಯ ಮೇಲೆ ನಿಂತ ಭಟರ ಮೈಮೇಲಿನ ಗಾಯಗಳ ಕೆಂಪುಬಣ್ಣದಿಂದ ಹೂವಾದ ಮುತ್ತುಗದ ಮರಗಳುಳ್ಳ ಮೊರಡಿಯಂತೆ ಕಾಣುತ್ತಿದ್ದಿತಂತೆ. ಅಟ್ಟಳೆಗಳಲ್ಲಿ ನಿಂತವರ ಅಟ್ಟಿಗಳಿಂದ ಒಗೆದ ನೆತ್ತರ ಸುಟ್ಟುರಿಗಳಿಂದ ಅವು ಬೇಸಗೆಯ ಕಾಳ್ಗಿಚ್ಚು ಹತ್ತಿದ ಬೆಟ್ಟದಂತೆ ಕಾಣಿಸಿದುವಂತೆ.

ವೀರರ ವೀರೋಚಿತವಾದ ಉದ್ಗಾರಗಳನ್ನು ಅನಂತನಾಥಪುರಾಣದಲ್ಲೂ ನೋಡಬಹುದು. ಸುಪ್ರಭ–ಪುರುಷೋತ್ತಮರನ್ನು ಕೋಡುಗಗಟ್ಟಿ ತರುವುದಾಗಿ ಮಧುಕೈಟಭನ ಮುಂದೆ ಓರ್ವ ಮನ್ನಣೆಯ ಮೈಮೆಯ ದಾನವ ಸೇನಾನಿಯೊರ್ವನು ಹೀಗೆ ತನ್ನ ಪೌರುಷವನ್ನು ಮುಂದಿಡುವನು :

ಬೇಡುವ ಸಾಧು ನೀಂ ಕುಡದ ಗಂಡರಮರ್ಚಿಸನ್ನಿಸೊರ್ವನಂ |
ಕೋಡುಗಗಟ್ಟುಗಟ್ಟಿ ಹಲಿಕೃಷ್ಣರನಾಳಿಸಿ ತಾಳಪಟ್ಟದೊಳ್ |
ಮುಡಿದ ಹಾಡೆಯಂತೆಬಲಿ ಸೈರಿ ರ್ಪುಳಿಪ್ಪನಿಂದು ಕಂಬದೊ |
ಳ್ನೋಡ ನೃಪೇಂದ್ರ ಕಟ್ಟುದೊಡೆ ಬೀರದ ಬಟ್ಟಿಗೆ ಕೈದುಗಟ್ಟುವೆಂ ||

ಮತ್ತೊಬ್ಬ ವೀರ ಭೂಚರಪತಿಪ್ರತಾಪನ ಪೊತ್ತವೊದಲಿಗನು ತನ್ನ ಮುಂಗಯ್ಯ ಕಂಕಣವನ್ನು ಕಳಚಿ ನೂಕುತ್ತ ಜಾವುದ ಸುಳಿಪಟ್ಟಿಗೆಯನ್ನು ಮೇಲೆಳೆದುಕೊಳ್ಳುತ್ತಾ ಹೀಗೆನ್ನುವನು :

ಕೊಡಗೂಸಾಗಿಸಿದತ್ತು ನಿನ್ನ ತುಳಿ ಬಾಹಾಸಾಹಸಂ ಸಿಂಗಮಂ |
ಸಿಡಿಲಂ ಮಾರ್ಪೊಡಮೆಮ್ಮ ಸಿಂದುಂ ಮರೆಗುಂ ಮಾಜಾಂಪರಿಲ್ಲೆಂಬ ಮಾ |
ರ್ನುಡಿಯಾಯ್ತಿನ್ನವಧಾರಿಸೆಂದನೆಲೆ ಕಣ್ಣೆಂಪೇಜುಸಂ ನಿನ್ನ ಕ |
ಣ್ಣಸುಗೆಂಪೇಜದ ಮುನ್ನೆ ವೈರಿನೃಪರಕ್ತಾಸೇಕದಿಂ ಲೋಕಮಂ ||

ಕನ್ನಡಕ್ಕೆ ಜೈನಪುರಾಣಗಳ ಕಾಣಿಕೆ ಹಲವು ಬಗೆಯದಾಗಿದ್ದು ಅವುಗಳಲ್ಲಿ ಲಾಕ್ಷಣಿಕ ವಿಚಾರಗಳು ಗಮನೀಯವಾಗಿವೆ. ನಮ್ಮ ಕವಿಗಳು ಕಾವ್ಯದ ಅಷ್ಟಾಂಗಗಳಲ್ಲಿ

ಆಳವಾದ ಅಭ್ಯಾಸ ಮಾಡಿದ್ದುದರಿಂದ ತಮ್ಮ ಕೃತಿಯ ಪ್ರಾರಂಭದಲ್ಲಿ ಕಾವ್ಯಲಕ್ಷಣ, ಸತ್ಕವಿಪ್ರಶಂಸೆ, ಕುಕವಿನಿಂದೆ—ಇತ್ಯಾದಿ ವಿಷಯಗಳನ್ನು ತಿಳಿಸಹೊರಟರು. ಬಹುಶಃ ಇದು ಕನ್ನಡಕವಿಗಳ ಸ್ವಂತ ಕಾಣಿಕೆ ಇರಬಹುದೇನೋ? ಕನ್ನಡಕವಿಗಳ ಕಾವ್ಯಶಾಸ್ತ್ರ ವಿಚಾರಗಳು ಸಂಸ್ಕೃತ ಲಾಕ್ಷಣಿಕರಲ್ಲಿ ಮೊದಲಿಗನಾದ ಭಾಮಹನ ಹಾಗೂ ಅವನ ನಂತರದ ದಂಡಿಯ ಅಭಿಪ್ರಾಯಗಳನ್ನು ಅನುಸರಿಸಿದಂತೆ ಕಂಡುಬಂದರೂ ಕಾವ್ಯಶಾಸ್ತ್ರ ವಿಚಾರವನ್ನು ಕಾವ್ಯದ ಪ್ರಾರಂಭದಲ್ಲಿ ಹೇಳಹೊರಟು ಒಂದು ಹೊಸ ಸಂಪ್ರದಾಯದ ನಿರ್ಮಾಪಕರಾದುದು ಇಲ್ಲಿ ಗಮನಿಸಬೇಕಾದ ವಿಷಯ. ಪಂಪ, ರನ್ನ, ನಾಗಚಂದ್ರ, ನೇಮಿಚಂದ್ರ—ಇವರೇ ಮೊದಲಾದ ಜೈನಕವಿಗಳು ಕವಿಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ಬೆಲೆಬಾಳುವ ಮಾತುಗಳನ್ನು ಆಡಿರುವರು. ಇವರ ಸಾಲಿನಲ್ಲಿ ಸೇರಲು ಜನ್ನ ಎಲ್ಲ ವಿಧದಿಂದಲೂ ಅರ್ಹನಾಗಿರುವನು.

ಕವಿಗಳ ಆರಾಧ್ಯದೈವವಾದ ಸರಸ್ವತಿ ಸಾಮಾನ್ಯರಿಗೆ ಸ್ತ್ರೀಮೂರ್ತಿಯಾಗಿ ಕಂಡುಬಂದರೆ ಜೈನಪುರಾಣಕವಿಗಳಿಗೆ 'ಪರಮಜಿನೇಂದ್ರವಾಣಿ'ಯಾಗಿ ಗೋಚರವಾದಳು. ಜಗತ್ತಿನ ಸುಖ–ಸಂತಸಗಳಿಗೆ ಜಿನೇಂದ್ರವಾಣಿಯ ವಾಗ್ವಿಳಾಸ ಕಾರಣವೆಂಬ ಅತ್ಯುಚ್ಚ ಭಾವನೆಯಿಂದ ಪ್ರೇರಿತರಾಗಿ ಆ 'ಜಿನೇಂದ್ರವಾಗ್ವನಿತೆ'ಯ ಸೇವೆಯನ್ನು ತಮ್ಮ ಹಾಗೂ ಲೋಕದ ಒಳಿತಿಗಾಗಿ ಮಾಡಿದರು. ಸರಸ್ವತಿಯ ಬಗೆಗಿನ ಈ ಭವ್ಯಕಲ್ಪನೆ ಜೈನಕವಿಗಳ ವೈಶಿಷ್ಟ್ಯವೆನ್ನಬಹುದು. ಜನ್ನ ಹಿಂದಣ ಕವಿಗಳಂತೆ ಜಿನೇಂದ್ರವಾಗ್ವನಿತೆ ತನ್ನ ಮುಖಾಂಭೋಜದಲ್ಲಿ ನೆಲೆನಿಲ್ಲುವಂತೆ ಭಕ್ತಿಯಿಂದ ಹೀಗೆ ಪ್ರಾರ್ಥಿಸುವನು:

ಪದವಿನ್ಯಾಸವಿಶೇಷದೊಳ್ ಪದವಿಲಾಸಂ ಸೊಂಪುವೆತ್ತಿರ್ದ ಕಾ
ವ್ಯದ ಮೆಯ್ಯೊಳ್ ಸಮುದಾಯಶೋಭೆ ವಿನುತಸ್ವಾದರ್ಥದೊಳ್ ಮಧ್ಯಭಾ ।
ಗದ ಕಾರ್ಶ್ಯಂ ನಯಯುಗ್ಮದೊಳ್ ನಯನಭಾವಂ ಭಂಗಿಯಿಂ ತಾಳ್ದಿ ಸ
ನ್ನಿಧಿಯಾಗಿರ್ದ ಜಿನೇಂದ್ರವಾಗ್ವನಿತೆ ನಿಲ್ಕೆಮ್ಮನ್ಮುಖಾಂಭೋಜದೊಳ್ ॥

ಕವಿ ಬೆಳೆದ ವಾತಾವರಣ ಪರಿಶುದ್ಧವೂ ಪವಿತ್ರವೂ ಆಗಿದ್ದು, ಕಲಿಸಿದ ಗುರು ವಿಖ್ಯಾತ ಯೋಗಿಯಾಗಿದ್ದು, ಓದಿದ ಗ್ರಂಥಗಳು ಮನಸ್ಸಿನ ನಿರ್ಮಲತ್ವಕ್ಕೆ ಕಾರಣವಾಗಿದ್ದಲ್ಲಿ ಆ ಆವರಣದಲ್ಲಿ ಉಸಿರಾಡಿ ಬೆಳೆದ ಕವಿ ಇತರರಿಂದ ಭಿನ್ನವಾದ ಗುಣಗಳನ್ನು ಹೊಂದುವ ಸಾಧ್ಯತೆಯೂ ಇದೆ. ಇದಕ್ಕೆ ಯೋಗ್ಯ ನಿದರ್ಶನ ಕನ್ನಡದ ಕವಿ ನಾಗಚಂದ್ರ. "ಕಥೆ ಜಿನಚರಿತಮೆ ಕವಿ ಜಿನ । ಕಥೆಯಂ ಪೇಳ್ದವನೆ ರಾಜವಿಟಚೋರಕಥಾ । ಕಥೆ ಕಥೆಯೇ ಕವಿ ಕವಿಯೇ ತ । ತ್ಕಥೆಯಂ ಪೇಳ್ದ ಪ್ರಶಸ್ತಮಂ ಪುಟ್ಟಿಸುಗುಂ" ಎಂದು ನಾಗಚಂದ್ರ ಮಲ್ಲಿನಾಥಪುರಾಣದಲ್ಲಿ ಸಾರಿದನು. ಕಾವ್ಯವಾದುದು ಕವಿಯ ಕಲ್ಪನೆಯ ಬಳ್ಳಿಯ ಹಬ್ಬುಗೆಯಲ್ಲ. ರಾಜ, ವಿಟ, ಚೋರರ ಕಥೆಯನ್ನೊಳಗೊಂಡ ಕಬ್ಬದ ಕಥೆ ಕಥೆಯೇ

ಅಲ್ಲ ಎನ್ನುವ ನಾಗಚಂದ್ರ ತನ್ನೆರಡೂ ಕೃತಿಗಳಲ್ಲಿ ತನ್ನ ಉದ್ದೇಶವನ್ನು ತಪ್ಪದೆ ನೆರವೇರಿಸಿದ. ತಾನು ಕಾವ್ಯ ಬರೆಯುತ್ತಿರುವುದು ಗುಣ, ಖ್ಯಾತಿ ನಿಮಿತ್ತವಲ್ಲ 'ಶುಭಧ್ಯಾನಾರ್ಥಿಯೆಂ' ಎಂಬ ದೊಡ್ಡ ಮಾತನ್ನು ಆಡಿದ. ನಾಗಚಂದ್ರನಂತೆ ಜನ್ನನೂ ತನ್ನ ಕೃತಿಯ ಬಗ್ಗೆ ದೊಡ್ಡ ಮಾತನ್ನಾಡಿರುವನು. ಆತನ ತೂಕದ ಮಾತು ಆತನೊಬ್ಬನಿಗೇ ಮೀಸಲಾಗದೆ ಎಲ್ಲ ಕವಿಗಳೂ ಆತನಂತೆ ಭಾವಿಸಿದ್ದರೆ 'ಕೃತಿಗೌರವ' ಮುಗಿಲು ಮುಟ್ಟುತ್ತಿತ್ತೋ ಏನೋ! ಜನ್ನ ಹೇಳುವಂತೆ ಆತನ ಕೃತಿ 'ಅನಂತನಾಥಪುರಾಣ' 'ಬಾಳಬಟ್ಟೆಯು ಪರಮಾಗಮ' 'ಕವಿತಾಶಕ್ತಿ ಸುರೇಂದ್ರಧೇನು, ಅದು ಪುಣ್ಯಾಯತ್ತಂ' ಹೀಗೆ ಉದಾತ್ತಭಾವಗಳಿಂದ ಪ್ರಚೋದಿತನಾದ ಕವಿ 'ಜಾರ ಚೋರ ವೀರರ ಕಥೆಯಂತೆ ಬಾಯ್ಸವಿಯ ಮಾತು'ಗಳನ್ನೂ ವ್ಯರ್ಥಚರ್ಚೆಗಳನ್ನೂ ಮಾಡುವುದಿಲ್ಲವೆಂದೂ 'ಅರುಹನ ಮೂರ್ತಿಯಂತಿರೆ ನಿರಾಭರಣಂ ಮೆಱೆಯಲ್ಕೆ ಪೇೞ್ದಪೆಂ' ಎಂದೂ ಘೋಷಣೆ ಮಾಡಿರುವನು. ಯಾವ ವಿಧವಾದ ಫಲಾಪೇಕ್ಷೆಯೂ ಇಲ್ಲದೆ 'ಬಱಿದೆ' ಚರಿತಪುರಾಣವನ್ನು ಹೇಳುವೆನೆನ್ನುವ ಕವಿಯ ಆದರ್ಶ ಮೆಚ್ಚಬಹುದಾಗಿದೆ.

ಜನ್ನ ಸತ್ಕವಿಪ್ರಶಂಸೆ ಮಾಡುತ್ತಾ 'ಅವನ ಬೆಡಂಗು ಬೇಱೆ, ಅವನ ವಕ್ತೃತೆ ಬೇಱೆ, ಅವನ ಬಂಧ ದೇಸೆ ಬೇಱೆ, ಅವನ ರಸಜ್ಞತಾವಿಷಯಸಂಗತಿ ಬೇಱೆ' ಎನ್ನುವಂತೆ ಪೇಳ್ವವನು ಕವಿ ಎಂದು ತಿಳಿಸಿ ಸತ್ಕವಿಯ ಗುಣಲಕ್ಷಣಗಳ ಸೂಚನೆ ಮಾಡಿರುವನು. ಕವಿಯಾದವನು ಎಂತೆಂತಹ ಗುಣಗಳನ್ನು ಹೊಂದಿದವನಾಗಿರಬೇಕೆಂಬುದನ್ನು ತಿಳಿಸುತ್ತಾ 'ಕವಿ ರಸಸುವ್ಯುತ್ಪನ್ನಂ' ; 'ವಿವಿಧಕಳಾಭಿಜ್ಞಂ' ; 'ಆಗಮಜ್ಞಂ' ; 'ಬರೆದೋಱುವ ಜಾಣನ್' ಆಗಿ, ಕಾವ್ಯರಚನೆ ಮಾಡಿದಲ್ಲಿ ಆತನ ಕಾವ್ಯವು 'ಅಖಿಳಶ್ರಾವ್ಯ'ವಾಗುವುದೆನ್ನುವನು.

ಸತ್ಕವಿಯಾದವನು ಸತ್ಕೃತಿಯೊಂದನ್ನು ರಚಿಸುವಾಗ ಗಮನಿಸಬೇಕಾದ ಮುಖ್ಯ ಅಂಶಗಳೇನು? ಜನ್ನ ಅದಕ್ಕೆ ಹೀಗೆ ಉತ್ತರಿಸುವನು:

ಕಾವ್ಯವನ್ನು ಸತ್ಕವಿ

(ಅ) ಸಹಜಂವೇೞ್ವುದು
(ಆ) ಮುನ್ನೆವೇೞ್ವುದು (= ಪರಂಪರಾಗತವಾಗಿ ಹೇಳುವುದು)
(ಇ) ಪದವ್ಯುತ್ಪತ್ತಿವೇೞ್ಕುಂ

ಕಾವ್ಯರಚನೆಯಲ್ಲಿ ಕವಿಯಾದವನಿಗೆ ಅವಶ್ಯವಿರಬೇಕಾದ ಗುಣಗಳೇನು? ಜನ್ನ ಅದಕ್ಕೆ ಹೀಗೆ ಉತ್ತರಿಸುವನು:

(ಅ) ಬಹುಕಾವ್ಯಾನುಭವಂ

(ಆ) ಕಲಾಪ್ರತಿಭೆ (Artistic genius)
(ಇ) ಲೋಕಜ್ಞತ್ವ
(ಈ) ಆಪ್ತಾಗಮಸ್ಪೃಹೆ

ಒಂದು ವಿಧದಲ್ಲಿ ಕವಿಯೊಬ್ಬ ನೆಯ್ಗೆಕಾರ. ಕಾವ್ಯದ ನೆಯ್ಗೆ ಸೊಗಸಿದ್ದಲ್ಲಿ ಅದಕ್ಕೆ ಬೆಲೆಯೂ ಹೆಚ್ಚು. ಹಳೆಯ ಮಾಗ್ಗದಲ್ಲಿ ಕಾವ್ಯವನ್ನು ನೇಯುವವನು ಮುಖ್ಯವಾಗಿ ಗಮನಿಸಬೇಕಾದ್ದೇನು? ಜನ್ನನನ್ನು ಪ್ರಶ್ನಿಸಿದರೆ ಹೀಗೆ ಆತ ಹೇಳುತ್ತಾನೆ:

(ಅ) ಸಮುದಾಯಂ ಪೆಱಿಯವೇಳ್ಪುದು ಕಥಾವಿಸ್ತಾರದೊಳ್
(ಆ) ವರ್ಣನಕ್ರಮಮೋಯಾರಮನಾಳ್ದು ದಳ್ಳಿಸಿಸವೇಳ್ಕುಂ
(ಇ) ವೃತ್ತವೃತ್ತಕ್ಕೆ ಭಾವವೊಡಂಬಟ್ಟಿರವೇಳ್ಕುಂ
(ಈ) ಒಂದೆ ತೆಱನ ಆಯಾಸಕ್ರಮಂ ಕಾವ್ಯಮಂ ಸಮೆವಂಗಂ

ನಮ್ಮ ಕವಿಗಳು ಸುಕವಿಗಳನ್ನು ಗೌರವಪೂರ್ವಕವಾಗಿ ಹೊಗಳಿ ಕುಕವಿಗಳನ್ನು ಅಸಹನೆಯಿಂದ ತೆಗಳಿ—ಹೀಗೆ, ಪ್ರಶಂಸೆ-ನಿಂದೆ ಎರಡನ್ನೂ ಓರ್ವರೇ ಮಾಡಿರುವರು. ಅರಸಿಕನಾದ ಕುಕವಿಯನ್ನು ದಡ್ಡ, ಮೂಢ, ಜಡ, ಮೂಕ, ಗೂಗೆ, ನಾಯಿ, ಕಪ್ಪೆ, ಕೋಡಗ, ನಪುಂಸಕ—ಎಂದೆಲ್ಲಾ ಹೇಳಿ ಅಸಹ್ಯವಾಗಿ ನಿಂದಿಸಿ ತಮ್ಮ ಮನಸ್ಸಿನ ಆಕ್ರೋಶವನ್ನೆಲ್ಲಾ ಮಾತಿನಲ್ಲಿ ವ್ಯಕ್ತಪಡಿಸಿರುವರು. ಪಂಪ. ರನ್ನ. ನಾಗಚಂದ್ರ, ನೇಮಿಚಂದ್ರ—ಇವರೇ ಮೊದಲಾದ ಹಿರಿಯ ಕವಿಗಳೂ ಈ ಬಗೆಯ ಆಕ್ರೋಶ, ಆರ್ಭಟಗಳಿಂದ ಮುಕ್ತರಾಗಿಲ್ಲ.

ದುರ್ಜನರ ನಿಂದೆಗೆ ಹೆದರಿ ಕವಿ ಕೃತಿರಚನೆ ಮಾಡುವುದನ್ನು ಬಿಡಬೇಕಾಗಿಲ್ಲ. ದುರ್ಜನರು ನಿಂದೆ ಮಾಡಿದರೆ ಮಾಡಲಿ. ಕೃತಿರಚನೆ ಸಾಗಲಿ. ಸತ್ಕೃತಿಯನ್ನು ಕೇಳಿ ದುರ್ಜನರು ನಿಂದಿಸಿದ್ದೇ ಆದರೆ ಕಾವ್ಯ ಪುರಸ್ಕಾರಾರ್ಹವಾಗುವುದೇ ಇಲ್ಲವೆ? ಇದು ಜನ್ನನ ಪ್ರಶ್ನೆ. ಜನ್ನ ಕವಿಜಗತ್ತಿಗೆ ಧೈರ್ಯ ಹೇಳುತ್ತಾ "ರಸವತ್ಕೃತಿಯಂ ಕವಿ ಪೇಳ್ಗೆ. ದುರ್ಜನಂ ಪೞಿಯುತ್ತಮಿರ್ಕೆ. ಚಾಟ್ವಿ ಮನೆಗೊಂದು ಒಗುಳ್ವುದು ಬೇಳ್ಕುಮೆನ್ನಿರೇ" ಎನ್ನುವನು.

ಕುಕವಿಗಳು ಕೂಪಮಂಡೂಕಗಳೆನ್ನುವ ಜನ್ನ "ಪದವಿನ್ಯಾಸವನ್ನು ತಿಳಿಯದೆ, ಪದ್ಯದ ಸ್ವಾರಸ್ಯವನ್ನು ತಿಳಿಯದೆ, ಶ್ರೇಷ್ಠಕವಿಯ ಪ್ರತಿಭೆಯ ಗುಣ್ಪನರಿಯದೆ ಅವು ಡುಱುಕೆಂಬುವು"—ಎಂದು ವ್ಯಂಗ್ಯವಾಗಿ ಕುಕವಿಗಳನ್ನು ಮೂದಲಿಸುವನು.

ಜನ್ನ ಹೇಳುವಂತೆ, ಕುಕವಿಯಾದವನು ಪದವನ್ನು ಪ್ರಾಸವನ್ನು ತಪ್ಪದೆ ಬಲ್ಲನು. ರಸಭಾವಗಳಲ್ಲಿ ಕವಿತ್ವ ಬೇರೆ ರೀತಿಯಲ್ಲಿ ಹೊರಳಿದುದನ್ನು ಆತ ಅರಿಯ. ಕುಕವಿ ಎತ್ತಿ

ನಂತೆ ಎತ್ತೀ ಎಂದರೆ ಮಾತ್ರ ಓ ಎನ್ನುವನು. ಬೇರೆ ಬಗೆಯಲ್ಲಿ ಕರೆದರೆ ಎತ್ತು ಓಗೊಡದ ರೀತಿಯಲ್ಲಿ ಆತ ನಿಷ್ಕ್ರಿಯನು, ಮಾತು ಬರದವನು.

ಜನ್ನನಿಗೆ ಬೇರೆಯವರು ಹೇಳಿದ ಮಾತನ್ನೇ ಪಲ್ಲಟಿಸಿ ನುಡಿಯುವವರನ್ನು ಕಂಡ ರಾಗದು. ಆತ 'ಪೆಱಗಬ್ಬಿಗರ್ನುಡಿದ ಮಾತನೆ ಪಲ್ಲಟವಿಟ್ಟು ಕಟ್ಟುವ' ಕುಕವಿಗಳನ್ನು ಕಂಡು ಅಸಹನೆಗೊಂಡು ಅಂತಹವರನ್ನು 'ಕವಿಗಳ ವೇಷದಿಂದ ಕುಣಿದೇಡಿಪ ಕೋಡಗ ನೆಂದು ನಕ್ಕಪೆಂ' ಎಂದು ಹೇಳಿರುವನು.

ಕಾವ್ಯಾಸ್ವಾದನೆಗೆ ಸಹೃದಯ ರಸಿಕರು ಬೇಕು. ಅಂತಹ ರಸಿಕರನ್ನು ಪಡೆಯುವು ದೊಂದು ಭಾಗ್ಯ. ಜನ್ನನ ಅಭಿಪ್ರಾಯ ಈ ಮಾತಿಗೆ ಹೊರತಾಗಿಲ್ಲ. ಜನ್ನ ತನ್ನ ಕೃತಿ ಯನ್ನು ಮೆಚ್ಚುವ, ಆರಾಧಿಸುವ ಸಹೃದಯನೊಬ್ಬನನ್ನು ಹುಡುಕುತ್ತಿದ್ದು ಅಂತಹ ಸಹೃದಯನಾದ ರಸಿಕ ಸಿಗದಿದ್ದಲ್ಲಿ ಕಾವ್ಯಪುಷ್ಪಮಾಲೆಯನ್ನು ಕಟ್ಟಿಯೂ ಪ್ರಯೋಜನ ವೇನು? ಮಾಲೆಗಾಱ ಬಹುಕಷ್ಟಪಟ್ಟು ಸಿದ್ಧಪಡಿಸಿದ ಹೂವಿನ ದಂಡೆ ಮುಡಿವ ಭೋಗಿಗಳಿಲ್ಲದೆ ಬಾಡಿಹೋಗುವುದಿಲ್ಲವೇ? ಎಂದು ಸಿಟ್ಟುಸಿರು ಬಿಟ್ಟಿರುವನು :

> ಎನಿತಸೊಱಲ್ದು ಪೇಟ್ದ ಕವಿಯೇವನದಂ ಪೆಸರಿಟ್ಟು ಮೆಚ್ಚುಬ
> ಲ್ಲಿನನಱಸಲ್ಕೆವೇಟ್ಪುದವನಂ ಜಗದೊಳ್ಪಡೆಯಲ್ಕೆ ಬಾರದಾ।
> ತನ ಮುಖದಿಂದಮಲ್ಲದದು ಸಲ್ಲದು ಕಟ್ಟಿಯುಮೇನೊ ಮಾಲೆಗಾ
> ಱನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ ॥

'ಅರುಹನ ಮೂರ್ತಿಯಂತಿರೆ ನಿರಾಭರಣಂ ಮೆಱೆಯಲ್ಕೆ ಪೇಟ್ದಪೆಂ' ಎಂದು ಜನ್ನ ಹೇಳಿಕೊಂಡಿರುವನಾದರೂ ಪರಂಪರೆಯ ಬಿಗಿಹಿಡಿತ ಹಾಗೂ ಸಂಪ್ರದಾಯದ ವ್ಯಾಮೋಹಗಳಿಂದಾಗಿ ಹೇಳಿದ ಮಾತಿಗೆ ತಕ್ಕಂತೆ ಆತ ನಡೆದುಕೊಳ್ಳಲಾಗಲಿಲ್ಲ. ಆತನ ಕಾವ್ಯಕನ್ನಿಕೆ 'ಯಶೋಧರಚರಿತ್ರೆ'ಯಲ್ಲಿ ನಿರಾಭರಣಸುಂದರಿಯಾಗಿ ಕಂಡುಬಂದರೂ 'ಅನಂತನಾಥಪುರಾಣ'ದಲ್ಲೂ ನಿರಾಭರಣೆಯಾಗಿರುವಳೆಂದು ಹೇಳಲಾಗದು. 'ಅನಂತನಾಥ ಪುರಾಣ' ಸಂಪ್ರದಾಯದ ಕಟ್ಟುನಿಟ್ಟಿನ ಅನುಸರಣೆಯಿಂದಾಗಿ ಮಹಾಕಾವ್ಯ; ಒಂದು ಅರ್ಥದಲ್ಲಿ ಪರಂಪರೆಯ ಶಿಶು. ಹೀಗಾಗಿ ಜನ್ನನ ಕಾವ್ಯಕನ್ನಿಕೆ ಬಾಹ್ಯಾಲಂಕಾರ ಭೂಷಿತಳಾದ ಸುಂದರಿಯಾಗಿರುವಳು.

ಪ್ರತಿಭೆ–ಪಾಂಡಿತ್ಯಗಳ ಮೇಲಾಟಕ್ಕೆ ಅಲಂಕಾರಗಳು ಪೂರಕಸಾಮಗ್ರಿಗಳಾಗಿ ದ್ದರೂ ಇವೇ ಪ್ರಧಾನವಲ್ಲ. ಜನ್ನನ 'ಅನಂತನಾಥಪುರಾಣ'ವನ್ನು ಗಮನಿಸಿದಾಗ ಇದು ಮನದಟ್ಟಾಗುತ್ತದೆ. ಹಿಂದಣ ಸಂಸ್ಕೃತ–ಕನ್ನಡ ಕವಿಗಳಂತೆ ಜನ್ನ ಕಾವ್ಯಕನ್ನಿಕೆಗೆ ಅಲಂಕಾರಗಳನ್ನು ಹೇರಿ ವಿಕೃತಗೊಳಿಸಿಲ್ಲ. ಶಬ್ದಾಲಂಕಾರಕ್ಕಿಂತ ಅರ್ಥಾಲಂಕಾರ ಜನ್ನನ ಮೇಲೆ ಪ್ರಭಾವ ಬೀರಿದಂತೆ ಕಂಡುಬರುತ್ತದೆ. ಪಾಂಡಿತ್ಯಪ್ರದರ್ಶನಕ್ಕೇ ಮೀಸಲಾದ

ಪದ್ಯಗಳನ್ನು ಗಮನಿಸಿದಾಗ ಅಲ್ಲೆಲ್ಲಾ ಪೂರ್ವಕವಿಗಳ ಸಂಪ್ರದಾಯಾನುಸರಣೆ ಕಂಡು ಬರುತ್ತದೆ. ಉದಾಹರಣೆಗೆ—

ನಿಗಡಂ ಸೊರ್ಕಾನೆಯೊಳ್, ವಿಗ್ರಹಮೊದವಿದ ವಾದಂಗಳೊಳ್ ದಂಡಮುತ್ಕೀ
ತುಗಳೊಳ್ ಕಾರ್ಶ್ಯಂ ವಧೂಮಧ್ಯದೊಳತಿಕಠಿನತ್ವಂ ಕುಚದ್ವಂದ್ವದೊಳ್ ವ।
ಕ್ರಗಮಂ ನಕ್ಷತ್ರದೊಳ್ ಭಂಗದಪರಿ ತೆರೆಯೊಳ್ ಕಂಟಕಂ ಹರ್ಷದೊಳ್ ಬ
ಲ್ಪಗೆ ಕಾವ್ಯಪ್ರೌಢರೊಳ್ ತಳ್ತಿಱಿವುದೆಮೆಯೊಳಿಂತಲ್ಲಿ ಬೇಱಿಲ್ಲ ನಾಡೊಳ್ ॥

— ಇಂತಹ ಪದ್ಯಗಳಲ್ಲಿ ಪರಿಸಂಖ್ಯಾಲಂಕಾರವನ್ನೂ

ಇಲ್ಲ ಮರಾಳಮಿಲ್ಲದ ಕೊಳಂ ಕೊಳನಿಲ್ಲದ ಪಾಣಿಪಾಡು ಪಾ
ಡಿಲ್ಲದ ತುಂಬಿ ತುಂಬಿಗಳ ಗೊಂದಣಮಿಲ್ಲದ ಪೂವಲರ್ದ ಪೂ।
ವಿಲ್ಲದ ಮಲ್ಲಿಕಾಲತಿಕೆ ಮಲ್ಲಿಕೆಯಿಲ್ಲದ ಮಾವು ಬಂದ ಮಾ
ವಿಲ್ಲದ ನಂದನಂ ಕುಳಿರ್ದ ನಂದನಮಿಲ್ಲದ ಜಾತಿಜಾಂಗಣಂ ॥

—ಇಂತಹ ಪದ್ಯಗಳಲ್ಲಿ ಏಕಾವಳಿ ಅಲಂಕಾರವನ್ನೂ ನೋಡಬಹುದಾಗಿದೆ. ಇಲ್ಲೆಲ್ಲಾ ಬರುವ ಚಮತ್ಕಾರಯುತ ಪದಬಂಧ, ಪದಜೋಡಣೆಯ ವಿನ್ಯಾಸ—ಇವು ಕೊಡುವ ಆನಂದ ಕ್ಷಣಿಕವಾದದ್ದು ಎಂದೆನ್ನಿಸುತ್ತದೆ. ಪಂಡಿತರಂಜನೆಗಾಗಿ ಕವಿ ಪಟ್ಟ ಶ್ರಮವೆನ್ನಿಸುತ್ತದೆ. ಉತ್ಪ್ರೇಕ್ಷಾಲಂಕಾರವು ಕವಿಯ ಸಂಪ್ರದಾಯಪ್ರಿಯತೆಯನ್ನು ಸಾರುವ ರೀತಿಯಲ್ಲಿ ಬಂದಿದೆ. ಇದಕ್ಕೆ ಉದಾಹರಣೆಯಾಗಿ ತೃತೀಯಾಶ್ವಾಸದಲ್ಲಿ ಬರುವ ಸೂರ್ಯಾಸ್ತಮಯ ವರ್ಣನೆಯನ್ನೇ ನೋಡಬಹುದಾಗಿದೆ.

ಕಾವ್ಯದ ಬಾಹ್ಯಸೌಂದರ್ಯವನ್ನು ಪರಿಸಂಖ್ಯೆ, ಯಥಾಸಂಖ್ಯೆ, ಏಕಾವಳಿ, ಉತ್ಪ್ರೇಕ್ಷೆ—ಇವೇ ಮೊದಲಾದ ಅಲಂಕಾರಗಳಲ್ಲಿ ಕಂಡರೆ, ಕಾವ್ಯದ ಆಂತರಿಕ ಸೌಂದರ್ಯವನ್ನು ಕಾವ್ಯದಲ್ಲಿ ಬರುವ ಉಪಮಾಲಂಕಾರಗಳಲ್ಲಿ ನೋಡಬಹುದಾಗಿದೆ. ಕವಿಗೆ ಉಪಮೆಯಲ್ಲಿ ಹೆಚ್ಚಿನ ಒಲವಿರುವುದನ್ನು ಆತ ಅವನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸಿರುವುದರಿಂದ ತಿಳಿಯಬಹುದಾಗಿದೆ. ಇಲ್ಲಿ ಬರುವ ಉಪಮೆಗಳು ಕಾವ್ಯಸೌಂದರ್ಯವನ್ನು ಹೆಚ್ಚಿಸಿವೆ. ಮಾತಿಗೆ ವಿಸ್ತಾರವಾದ ಅರ್ಥಪುಷ್ಟಿಯನ್ನು ತಂದುಕೊಟ್ಟಿವೆ. ಸನ್ನಿವೇಶದ ಸೊಗಸನ್ನು ಮನಸ್ಸಿಗೆ ಮುಟ್ಟಿಸಲು ಸಮರ್ಥ ಮಾಧ್ಯಮವಾಗಿವೆ. ಉದಾಹರಣೆಗೆ ಕೆಲವನ್ನಿಲ್ಲಿ ನೋಡಬಹುದು :

ಒಡೆಯರ ತೊಡವಂ ತೊಟ್ಟನೆ ಬಡವಂ ಕಂಡಂತೆ (5.9)

ಪಾರಿಜಾತಾಂಕುರಮಿಂದ್ರೋದ್ಯಾನದೊಳ್ ಬಳ್ವಳನೆ ಬಳೆದುಕ್ಕೆವಂದವೊಲ್ (6.6)

ಪಾವು ಪಿಡಿದಂತಿರೊದಱ್, ಕಡುಜರ ಪತ್ತಿದಂತು ಕಳವಳಿಸಿ, ಠಕ್ಕು ಪತ್ತಿದಂತೆ ಮತಿಗೆಟ್ಟು, ಸಿಡಿಲ್ ಪೊಡೆದಂತೆ ಹಮ್ಮುದಂಬೋಗಿ (9.32 ವ)

ಪಂಜಿಯುಂ ಪಾವಡರ್ದಂತೆ, ಪೊಯ್ಮಡೆದನಂತೆ ಜೇಡಂ ತರುಶಾಖಾಖಗನೀಡಮಂ ನಳ್ಳಿಱಿದು ದೋಂಟಿಯಿಂ ಕೆದಱುವವೊಲ್ (11.22)

ಮಧುಮದದಿಂ ಸುರತಾಸಕ್ತಿಯ ಕುಜಂಗಳಿಂತಂತೆ (11.23)

ಪೊಡೆವಟ್ಟು ಸೆಂಡಿನಂತೆ ಗಗನಕ್ಕೊಗೆದಂ (11.29 ವ)

ಉಟ್ಟುತೊಟ್ಟು ಪೆಣ್ಣಚ್ಚಮೊಡಂಬಡಂ ಪಡೆದ ಪ್ಯಾಲಿಯ ಸಜ್ಜನೆಯಂತೆ (11.34)

ಸೂಲಮಂ ಬಚ್ಚಿಸಿ ಪೊತ್ತು ಗೂಡಿಡುವ ಗುಬ್ಬಿಗಳಂತೆ (11.34)

'ಮನೋಜಾತನನಂಗನಾಗಿ ಮನದಿಂದಂ ಮಾಡಿದಂ ಪೆಣ್ಣವಿದ್ದಮನ್' ಎಂಬಂತೆ ಜಯಶ್ಯಾಮಾದೇವಿಯ ಸೌಂದರ್ಯವಿದ್ದಿತಂತೆ; ಜಯಶ್ಯಾಮೆಯ ನಿರ್ಮಲದಂತಚ್ಛವಿ 'ಜೇಡಿಮರ್ಗೆ ಮರವೀವಂತಿರ್ದುವು'; 'ಜಗಮಂ ಗೆಲ್ವನ್ನ ಶಸ್ತ್ರಾಧಿಷ್ಠೈವಮಿದೆಂದು' ಜಯಶ್ಯಾಮಾ ಮಹಾಸತಿಯ ರೂಪವನ್ನು ಕಾಮನು ಆರಾಧಿಸುವನಂತೆ; ಮರಾಳಿಕಾತಲ್ಪದಲ್ಲಿ 'ಅಮೃತಾಬ್ಧಿತರಂಗದ ಮೇಲೆ ಮಲಂಗಿದ ಚಂದ್ರಕಲೆಯ ಕಳಿಕೆಯೊಲ್' ಜಯಶ್ಯಾಮೆ ಕುಳಿತಿದ್ದಳಂತೆ; ಸಜ್ಜೆಮನೆಗೆ 'ಅಲಸನ್ನದುಗಮನೆ'ಯಾದ ಜಯಶ್ಯಾಮಾದೇವಿಯು 'ಪುಲಿನತಳದಿಂದೆ ಮೆಲ್ಲನೆ ನಲಿನಾವಾಸಕ್ಕೆ ಬರ್ಪ ಕಲಹಂಸಿಯವೊಲ್' ಬಂದಳಂತೆ; ಜಯಶ್ಯಾಮಾದೇವಿಗೆ 'ಶುಭರತ್ನಮನಾಂತ ನಿಧಾನಲಕ್ಷ್ಮಿಗೊಲ್ದೆಱಗುವ ದೀಪವರ್ತಿಯವೊಲ್' ಪುಲೋಮಜಾತೆ ಎಱಗಿದಳಂತೆ; ವೀಣಾಧರಿಯರು 'ಸವಿಯಂ ಸಾಲಿಡೆ' ಶ್ರುತಿಯನ್ನು ಹೊಯ್ದು ನೋಡಿದರಂತೆ—ಹೀಗೆ ಬರುವ ಉಪಮೆಗಳಲ್ಲಿ ಕವಿಯ ಕಲ್ಪನೆ ಮನೋಜ್ಞವಾಗಿ ಮೂಡಿಬಂದಿರುವುದನ್ನು ನಾವು ಕಾಣಬಹುದಾಗಿದೆ. ಕವಿಯ ಪ್ರತಿಭೆಯನ್ನು ಗುರುತಿಸಲು ಮೇಲೆ ತಿಳಿಸಿದ ನಿದರ್ಶನಗಳೇ ಸಾಕು.

ಪರಿವ ಮನಕ್ಕೆ ಪಗ್ಗಮಿಲ್ಲಂ, ನೋಡುವ ಕಣ್ಗಳ್ಗಿಡೆಗಟ್ಟಿಲ್ಲ; ತಲೆಪೋಗಿಯುಂ ಬಸಿದು ಬೀೞದೆ ಸ್ವೈರಿಸರಲ್ತೆ ಕಾಮುಕರ್; ಮನದ ಪಿಶಾಚಕ್ಕೆ ವಚನರಚನಾಧೂಪಮಂ ತೋಱಿ ವಿರಹವಿಕಾರಮಂ ಕೆಳರ್ಚಿ; ಸುದತಿಯರೆಂಬ ಪಾಪಿಗಳ್ ಮಾಡದುದೇನ್; ಕರುಳಕತ್ತರಿ ನಂಟರ ಮಾರಿ ತುತ್ತುವಿಂಚಿದೊಡೊಡನುಂಡು ಮತ್ತೆ ತೊಡೆ ವಿಂಚಿದೊಡೆ ಆ ಖಳನಿಂತು ಮಾಡಿದಂ; ನಾರದ ನಾರದಂ ನುಡಿದರ್; ನಾಣೆಯ ಬಾರಂತೆ ಪೋದ ಕೆಯ್ಯೊಳ್ ಮಗುೞ್ದಂ; ತಾನೆಯ್ದಿತ್ತು ಲೋಕಂ ನಿರಾಲೋಕಂ ಮರ್ಕಟಹಸ್ತ ದುಸ್ತ್ರುಟಿತ ಮಲ್ಲಿಮಾಲಿಕಾವಸ್ಥೆಯಂ; ಪಾವಂ ಪೆತ್ತವರ್ಗೀಲಿಯುಂ ಪುಗುಮಂತಪ್ಪುದದಣ್ಯಾಮಂ —ಇವೇ ಮೊದಲಾದ ನೀತಿಪರವಾದ ವಾಕ್ಯಮಾಣಿಕ್ಯಗಳು, ಜಾಣ್ಣುಡಿಗಳು, ಅರ್ಥ

ಪೂರ್ಣವಾದ ನುಡಿಗಟ್ಟುಗಳು ಅನಂತನಾಥಪುರಾಣದಲ್ಲಿ ಯಥೇಷ್ಟವಾಗಿ ಸಿಗುವವು.

ಜನ್ನ ಅಸದೃಶವಾದ ಪ್ರತಿಭಾಸಂಪನ್ನ ಕವಿ. ಆತನ ಎರಡೂ ಕೃತಿಗಳನ್ನು ಅವಲೋಕಿಸಿದಾಗ ಆತ ತನ್ನ ಬಗ್ಗೆ ತಾನೇ ಹೇಳಿಕೊಂಡಿರುವ ಹೆಗ್ಗಳಿಕೆ, ಆತ್ಮಶ್ಲಾಘನೆಯ ಮಾತುಗಳು ಪ್ರತಿಭಾವಂತ ಕವಿಯೊಬ್ಬನ ಅಭಿಮಾನಯುಕ್ತವಾದ ಮಾತುಗಳು ಎಂದು ಅನ್ನಿಸದಿರದು. ಪದವಿಪ್ರತಿಷ್ಠೆಗಳ ಜೊತೆಗೆ ಪ್ರತಿಭೆಪಾಂಡಿತ್ಯಗಳು ಈಡು ಜೋಡಾಗಿ ಬಂದಿರುವುದರಿಂದ ಜನ್ನ ಎದ್ದುಕಾಣುವ ಕವಿಯಾಗಿ ಕಾಣಿಸಿಕೊಳ್ಳುವನು. ಅಭಿನವವಾದಿವಿದ್ಯಾನಂದನು 'ಕಾವ್ಯಸಾರ'ದಲ್ಲಿಯೂ ಭಟ್ಟಾಕಳಂಕನು 'ಶಬ್ದಾನುಶಾಸನ'ದಲ್ಲಿಯೂ ಜನ್ನನ ಅನೇಕ ಪದ್ಯಗಳನ್ನು ಉದ್ಧರಿಸಿ ಅವನನ್ನು ಗೌರವಿಸಿರುವರು. ಜನ್ನನ ಕವಿತಾಪ್ರೌಢಿಮೆಯಲ್ಲಿ ಅವನ ಅನಂತರ ಬಂದ ಕವಿಗಳು ವ್ಯಕ್ತಿಗತವಾದ ಒಂದೊಂದು ಗುಣವನ್ನು ಕಂಡಿದ್ದಾರೆ. ಉದಾಹರಣೆಗೆ, ಗುಣವರ್ಮನು (1235) ಪುಷ್ಪದಂತಪುರಾಣದಲ್ಲಿ 'ಜನ್ನಿಗನಿಂಪು' ಎಂದೂ; ಕಮಲಭವನು (1235) ಶಾಂತೀಶ್ವರಪುರಾಣದಲ್ಲಿ '....ಜಗನ್ನುತ ಜನ್ನನ ರಂಜಿಪಗ್ಗಳಿಯ್ಯನ ಕೃತಿ ಸೌಂದರೀಸುಭಗವಾವಗಮಿರ್ಕೆ ಮದೀಯ ಕಾವ್ಯದೊಳ್' ಎಂದೂ ಆಂಡಯ್ಯನು (ಸು. 1235) ಕಬ್ಬಿಗರ ಕಾವದಲ್ಲಿ 'ಜನ್ನಿಗನಜಸಂ' ಎಂದೂ ಮಲ್ಲಿಕಾರ್ಜುನನು (1245) ಸೂಕ್ತಿಸುಧಾರ್ಣವದಲ್ಲಿ 'ಜನ್ನನ ದೇಸೆ' ಎಂದೂ; ನಾಗರಾಜನು (1331) ಪುಣ್ಯಾಸ್ರವಚಂಪುವಿನಲ್ಲಿ 'ಜನ್ನನೊಳೊಪ್ಪುವನ್ತ್ರ ಪೊಸವಾತು' ಎಂದೂ; ಅವನ ಕಾವ್ಯಗಳಲ್ಲಿನ ವಿಶಿಷ್ಟ ಗುಣಗಳನ್ನು ಎತ್ತಿ ಹೇಳಿ ಗೌರವಿಸಿರುವರು. ಮಧುರನು (1389) ಧರ್ಮನಾಥಪುರಾಣದಲ್ಲಿ 'ನೇಮಿಜನ್ನಮುರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್' ಎಂದು ಹೇಳುವಲ್ಲಿ ಇತರರಾರೂ ಹೇಳದ ರೀತಿಯಲ್ಲಿ ಜನ್ನನನ್ನು ಕರ್ಣಾಟಕೃತಿಗೆ ಸೀಮಾಪುರುಷನೆಂದು ಕರೆದು ಗೌರವಿಸಿರುವನು. ಮಧುರನು ಕೊಟ್ಟ ಪ್ರಶಸ್ತಿಗೆ ನಿಜವಾಗಿಯೂ ಅರ್ಹನಾಗಿರುವನು ಜನ್ನ. ಜನ್ನನಾದಮೇಲೆ ಜನ್ನನನ್ನು ಮೀರಿಸುವ ಮತ್ತೊಬ್ಬ ಕವಿ ಬರಲಿಲ್ಲವಾಗಿ ಮಧುರನ 'ನುಡಿಗೌರವ' ಜನ್ನನಿಗೆ ಒಪ್ಪುವಂತಿದೆ.

ಜನ್ನನ

ಅನಂತನಾಥಪುರಾಣ ಸಂಗ್ರಹ

ಅರುಹನ ಮೂರ್ತಿಯಂತಿರೆ ನಿರಾಭರಣಂ

ಶ್ರೀಮದನಂತಬೋಧದಿನನಂತವಿಲೋಕನದಿಂದನಂತಸೌ
ಖ್ಯಾಮೃತದಿಂದನಂತಬಲದಿಂ ತನಗಾದುದನಂತನಾಮಮು ।
ದ್ದಾಮದನಂತಕರ್ಮಜಯದಿಂ ದೊರೆವೆತ್ತುದು ಮತ್ತನಂತಜಿ
ನ್ನಾಮನೆಸಿಪ್ಪನೀಗೆಮಗನಂತಜಿನೇಂದ್ರನನಂತಸೌಖ್ಯಮಂ ॥ ೧ ॥

ವಿತ್ರಸ್ತಾರಿ ಜಿನೇಶ್ವರಂ ಪರಮದೈವಂ ತನ್ಮತಂ ಜೀವರಾ
ಶಿತ್ರಾಣಾಗಮಮೆಂದು ನಂಬುವಜೀವಿಂದಾಚರಿಪ್ಪಂತಿವಂ ।
ತತ್ತ್ರೈಲೋಕ್ಯಪತಿತ್ವಮಂ ಕುಡುಗೆ ಸಮ್ಯಗ್ದರ್ಶನಜ್ಞಾನಚಾ
ರಿತ್ರಂಗಳ್ ಪರಮಾಮೃತಪ್ರಣಯಿ ಭವ್ಯಶ್ರೇಣಿಗವ್ಯಾಕುಳಂ ॥ ೨ ॥

ಪದವಿನ್ಯಾಸವಿಶೇಷದೊಳ್ ಪದವಿಲಾಸಂ, ಪೆಂಪುವೆತ್ತಿರ್ದ ಕಾ
ವ್ಯದ ಮೆಯ್ಯೊಳ್ ಸಮುದಾಯಶೋಭೆ, ವಿನುತಸ್ವಾದರ್ಶದೊಳ್ ಮಧ್ಯಭಾ ।
ಗದ ಕಾರ್ಶ್ಯಂ, ನಯುಯುಗ್ಮದೊಳ್ ನಯನಭಾವಂ, ಭಂಗಿಯಂ ತಾಳ್ದಿ ಸ
ನ್ನಿಧಿಯಾಗಿರ್ದ ಜಿನೇಂದ್ರವಾಗ್ವನಿತೆ ನಿಲ್ಕಸ್ಮನ್ಮುಖಾಂಭೋಜದೊಳ್ ॥ ೩ ॥

ಶ್ರೀಮದ್ಗಂಡವಿಮುಕ್ತಶಿ
ಖಾಮಣಿಗಳ್ ರಾಮಚಂದ್ರದೇವಮುನೀಂದ್ರರ್ ।
ಪ್ರೇಮದ ಶಿಷ್ಯಾಗ್ರೇಸರ
ರ್ ಮಾಧವಚಂದ್ರದೇವಸೈದ್ಧಾಂತಿಕರಾ ॥ ೪ ॥

ನೆನೆಯಲ್ಬಾರದು ಪುಟ್ಟೆ ತೋಱಲರಿದಾರ್ಗಂ ರಾಮಚಂದ್ರವ್ರತೀಂ
ದ್ರನ ದುರ್ವಾರಸಘೋರವೀರತಪಮೇನಂ ಪೇೞ್ದಪೆಂ ದೂರದ ।
ರ್ಶನ ದೂರಶ್ರವಣ ಪ್ರಸಿದ್ಧ ಮಲಧಾರಿಪ್ರಾಭವಂ ಕುಕ್ಕುಟಾ
ಸನಮಾ ಗಂಡವಿಮುಕ್ತವರ್ತನೆ ಪುರದ್ವಾರಂ ಸಸ್ವೈಕಾಂತರಂ ॥ ೫ ॥

ಮದನನ ಕೆಯ್ದು ಕೆಯ್ದ ಕರಶಾಖೆ ಮುಱುಂಟಿದುದೆಯ್ದೆ ಗೊಟ್ಟಗ
ಟ್ಟಿದುದು ಸರಲ್ಗೆ ಜೀಗಿ ನಸೆದೋಱುವ ಪೂಗುಡಿ ಬಿಲ್ಲ ಕರ್ವು ನಾಂ ।
ಟಿದೆ ನಸಿದತ್ತು ನಾರಿಯುಳಿದುಂಬಿಯ ಮಾಲೆಯ ಕೋಡೆಱಂಕೆ ಸೀ
ದುದಿದರ್ದುದು ರಾಮಚಂದ್ರಮುನಿನಾಥನ ಶಾಂತಿರಸಾತಿರೇಕದಿಂ ॥ ೬ ॥

ಶ್ರೀಮತ್ಕಾಣೂರ್ಗಣ ಚಿಂ
ತಾಮಣಿಗಳ್ ರಾಮಚಂದ್ರದೇವಮುನೀಂದ್ರರ್ ।
ತಾಮೆ ಗಡ ಗುರುಗಳೆನಿಪ ಮ
ಹಾಮಹಿಮಂಗೆ ಜನ್ನನಂತೆ ನೋಂತವನಾವಂ ॥ ೭ ॥

ಲಕುಮಾದೇವಿ ಸುಶೀಲೆ ಸುಪ್ರಸಿದ್ಧಂ ರಾಯದಂಡಾಧಿನಾ
ಥ ಕೃತಾಂತ ಪೆಸರ್ವೆತ್ತ ಚಾಕಣನಪುತ್ರಂ ರೇಚಯಂ ಪೆತ್ತ ಪು ।
ತ್ರಿ ಕುಲಸ್ತ್ರೀ ಗಡ ಭಾಳಲೋಚನನ ಭವ್ಯಾಚಾರಗಾರ್ಹಸ್ಥ್ಯಮೇಂ
ಸಕಲೈಶ್ವರ್ಯಗಭೀರಮೇಂ ಸತತ ದಾನಾಧಾರಮೇಂ ಸಾರಮೋ ॥ ೮ ॥

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾನಾಗವ
ರ್ಮನಿದಾಸೀಂತಸಕರ್ಣವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ ।
ದು ನೃಸಿಂಹಕ್ಷಿತಿನಾಥನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ
ಕ್ತಿ ನವೀನೋಜ್ವಳಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್ ॥ ೯ ॥

ಎನಗನುಕೂಲಮಪ್ಪ ಗುಣವರ್ಮನ ಜಾಣ್ನುಡಿ ಪಂಪನಿಂಪು ಪೊ
ನ್ನನ ಬಗೆ ನಾಗವರ್ಮನ ಬಹುಜ್ಞತೆ ರನ್ನನ ಕಾಂತಿ ನಾಗಚಂ ।
ದ್ರನ ರಸಭಾವಮುಗ್ಗಳಿಸ ವಕ್ರತೆ ನೇಮಿಯ ದೇಸೆ ಪುಷ್ಪಬಾ
ಣನ ಮೃದುಬಂಧಮೀ ಕವಿಗಳಿತ್ತೆ ಜಿನೇಂದ್ರಪುರಾಣಕರ್ತೃಗಳ್ ॥ ೧೦ ॥

ಅರಿದಿದು ಬಾಳಬಟ್ಟೆ ಪರಮಾಗಮಮಲ್ಲದೆ ಜಾರಚೋರ ವೀ
ರರ ಕಥೆಯಂತೆ ಬಾಯ್ಸವಿಯ ಮಾತುಗಳಂ ಬಳಕೆಯ್ವ ಚರ್ಚೆಯ ।
ಲ್ಲರುಹನ ಮೂರ್ತಿಯಂತಿರೆ ನಿರಾಭರಣಂ ಮೆಱೆಯಲ್ಕೆ ಪೇಳ್ದಪೆಂ
ಚರಿತಪುರಾಣಮಂ ಬಳಿಯೆ ಪೇಳ್ದಪನೆಂದೊಡೆ ತಿರ್ದವಪ್ಪುದೇ ॥ ೧೧ ॥

ಕವಿ ಸರಸಂ ವ್ಯುತ್ಪನ್ನಂ
ವಿವಿಧಕಳಾಭಿಜ್ಞನಾಗಮಜ್ಞಂ ಬರೆದೋ ।
ದುವ ಜಾಣನಾಗೆ ನಿರ್ವಹಿ
ಸುವುದಾ ಕವಿ ಪೇಳ್ದ ಕಾವ್ಯಮಖಿಳಶ್ರಾವ್ಯಂ ॥ ೧೨ ॥

ಪೞಿವೊಡೆ ಬಾಳ್ವಿನಲ್ಲದೊಡೆ ಸಾಯನೆ ಸತ್ಕೃತಿಗೇಳ್ದ ದುರ್ಜನಂ
ಪೞಿವ ಪೃಥೋಕ್ತಿ ನಲ್ಲದೊಡೆ ಸಾಯದೆ ಕಾವ್ಯನಿಬಂಧನಕ್ಕಮಾ ।
ಪೞಿಯೆ ಪ್ರೋಚಿಸ್ತೆಯಲ್ತೆ ರಸವತ್ಕೃತಿಯಂ ಕವಿ ಪೇಳ್ಗೆ ದುರ್ಜನಂ
ಪೞಿಯುತ್ತುಮಿರ್ಕೆ ಬಾಳ್ವ ಮನೆಗೊಂದು ಬಗುಳ್ವುದು ಬೇಳ್ಕುಮೆನ್ನದೇ ॥ ೧೩ ॥

ಎನಿತನೊಱಲ್ದು ಪೇೞ್ವ ಕವಿಯೇವನದಂ ಪೆಸರಿಟ್ಟು ಮೆಚ್ಚುಬ
ಲ್ಲನನಱಸಲ್ಕೆವೇೞ್ವುದವನಂ ಜಗದೊಳ್ಪಡೆಯಲ್ಕೆ ಬಾರದಾ ।
ತನ ಮುಖದಿಂದನುಲ್ಲವದು ಸಲ್ಲದು ಕಟ್ಟಿಯುಮೇನೊ ಮಾಲೆಗಾ
ಱನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗವೇ ॥ ೧೪ ॥

ಅವನ ಬೆಡಂಗು ಬೇಱವನ ವಕ್ತೃತೆ ಬೇಱವನೊಂದು ದೇಸೆ ಬೇ
ಱವನ ರಸಜ್ಞತಾವಿಷಯಸಂಗತಿ ಬೇಱೆನೆ ಪೇೞ್ದು ಸಂದವಂ ।
ಕವಿ ಪಱಿಗ[illegible]ಗರ್ನುಡಿದ ಮಾತನೆ ಪಲ್ಲಟವಿಟ್ಟು ಕಟ್ಟುವಂ
ಕವಿಗಳ ವೇಷದಿಂದೆ ಕುಣಿಪೇಡಿಪ ಕೋಡಗನೆಂದು ನಕ್ಕಪೆಂ ॥ ೧೫ ॥

ಉಭಯಕವಿಚಕ್ರವರ್ತಿಯ
ಸಭೆಯುಂ ಪುಗಲಣ್ಮವಲ್ತೆ ಪದವಾಕ್ಯಾರ್ಥ ।
ಪ್ರಭವಕಲಂಕಮಲಂಕಾ
ರ ಭಾವ ರಸ ರೀತಿ ದೂಷಣಾಭಾಸಂಗಳ್ ॥ ೧೬ ॥

ಚಂದನಪಂಕದೊಳ್ ಪರಿಮಳಂ ಮೆಱೆವಂತಿರೆ ಬಂಧದೊಳ್ ರಸ
ಸ್ಯಂದಿಗಳಾವ ಮಾತು ಮನಮುಂ ಸಲೆ ಸಲ್ಲಿಸೆ ಪೇೞ್ದ ಲೋಕದೊಳ್ ।
ಸಂದ ಜನಾರ್ದನಂ ಸುಕವಿವಲ್ಲಭನಾತನ ಮುಂದೆ ಗಣ್ಯರೇ
ಚಂದದ ಬಳ್ಳಿಸಂಕಲೆಯೊಳಕ್ಕರಮುಂ ಪೆಱಗೆಯ್ವ ರಕ್ಕಸರ್ ॥ ೧೭ ॥

ಪರಮಶ್ರೀಜಿನಪಾದಪಲ್ಲವಲತಾಂತಂ ನಿರ್ಮಳಂ ಜೈನಮುಂ
ದಿರನಿರ್ಮಾಣಧನಂ ವಿನೇಯಸಿಧಿ ಗಂಗಾನಂದನಂ ಶೌಚಿ ಶಂ ।
ಕರಪುತ್ರಂ ಕವಿ ಕಮ್ಮೆವಂಶನಧಿಕಜ್ಞಂ ಕಾಶ್ಯಪಂ ಮಾನವೋ
ತ್ತರನೆಂದೇಪೊಗೞ್ವಂ ಕವೀಂದ್ರಪರಿಷದ್ಭಾಳಾಕ್ಷನಂ ಜನ್ನನಂ ॥ ೧೮ ॥

ಬರೆಯಲ್ಕೇಣ್ಮಚ್ಚರದಿಂ
ದರಿಯಲ್ ವೇಣ್ಕುಯ್ಗೆ ಪಲಗೆ ಬರೆ ಕಾವ್ಯಕಲಾ ।
ಪರಿಣತೆಯೊಳ್ ಖಟ್ಗಿ ಕಳಾ
ಪರಿಣತೆಯೊಳ್ ಭಾಳನೇತ್ರನೆನಿಪಂ ಜನ್ನಂ ॥ ೧೯ ॥

ತನ್ನ ನುಡಿ ತನ್ನ ತೇಜಂ
ತನ್ನ ಚಲಂ ತನ್ನ ವಿದ್ಯೆ ತನ್ನ ವಿಳಾಸಂ ।
ತನ್ನನುಪಮೆನಿಸಿ ನೆಗೞ್ದಂ
ಜನ್ನಂ ನರಸಿಂಹರಾಯನಾಸ್ಥಾಯಿಕೆಯೊಳ್ ॥ ೨೦ ॥

ನರಸಿಂಹನ ಚೋಳಕುಳೋ
ದ್ಧರಣನ ಸರ್ವಜ್ಞಭೂಪನೋಲಗದೊಳ್ಪಿಂ ।
ದಿರೆ ದಂಡಾಧೀಶಂ ಕು
ಳ್ಳಿರೆ ಮಂತ್ರಿ ತೊಡಂಕೆ ಕವಿ ಜನಾರ್ದನದೇವಂ ॥ ೨೧ ॥

ಕವಿತಾಶಕ್ತಿ ಸುರೇಂದ್ರಧೇನುವದು ಪ್ರಜ್ಞಾಯತ್ತಮಾ ಕಾಮಧೇ
ನುವೆ ಕೈಸಾರ್ದೊಡಮಾವಚಸ್ಸುಧೆಯುಮನ್ನರ್ಗಿತ್ತು ಕಾಟ್ಟಿಕ್ಕಿಗೂ ।
ಡುವವ್ರೊಲ್ತುಯ್ಯಲಸಿಂದ್ರವಂದಿತನನರ್ಘದ್ದೇವನಂ ಭರ್ತೃವಾ
ಡುವುದಾತಂ ಕಜ್ಜದಾತನಲ್ತೆ ತಳೆಯೊಳ್ಪಾಲಂ ಭವದ್ವಂದ್ವದಾ ॥ ೨೨ ॥

ದೇವಾಧೀಶನನೊರ್ವನ ವರ್ಣಿಸೆ ಮನೋವಾಕ್ಕಾಯಸಂಶುದ್ಧಿಯಿಂ
ದೇವೇಂದ್ರತ್ವಮೆ ಸಾರ್ವದೆಂದೊಡೆ ತದೀಯಾಶ್ಚರ್ಯಚಾರಿತ್ರದೊಳ್ ।
ಭಾವಂ ನಿಂದು ಪುರಾಣಮಂ ನವೆದನಾರ್ಧಂತ್ಯಕ್ಕೆ ಹಂಗೇಕೆ "ಯೋ
ಭಾವಸ್ತ್ವೋಭವ"ವೆಂಬ ವಾಕ್ಯಮೆ ವಲಂ ಮೂಢಪ್ರಬೋಧಾವಹಂ ॥ ೨೩ ॥

ಬೆಸಗೊಂಡಂ ಭರತೇಶ್ವರಂ ವೃಷಭಸೇನಸ್ವಾಮಿ ಕೈಲಾಸದೊಳ್
ಬೆಸಸಿಟ್ಟಂ ಪುರುನಾಥನೋಲಗದೊಳಾ ಸದ್ವೃತ್ತಮಂ ಶ್ರೇಣಿಕಂ ।
ಬೆಸಗೊಂಡಂ ವಿಪುಳಾದ್ರಿಯೊಳ್ ತಿಳಿಯೆ ಪೇಳ್ದರ್ ಗೌತಮರ್ ವರ್ಧಮಾ
ನಸಭಾಮಧ್ಯದೊಳಾ ಪುರಾಣಕೃತಿಯುಂ ಬಲ್ಲಂದದಿಂ ಪೇಳ್ದಪೆಂ ॥ ೨೪ ॥

ಆ ಭರತದೊಳತಿಶಯಸುಖ
ಲಾಭರತರ ನಚ್ಚಿನಚ್ಚು ತಾನೆನೆ ನಾನಾ ।
ಶೋಭಾವಿಳಸಿತಮುಂಟು ಯ
ಶೋಭಾವಿಷಯಂ ವಿನೂತಕೌಶಲವಿಷಯಂ ॥ ೨೫ ॥

ಕರಮೊಪ್ಪಂಬಡೆದಿರ್ದುದಾ ವಿಷಯಲಕ್ಷ್ಮೀವಕ್ತ್ರಮೋ ವಕ್ತ್ರಮಂ
ಕರುಹಕ್ಕೆನ್ನತನಾಸಿಕಾಮುಕುಳಮೋ ನಾಸಾವಿಳಾಸಕ್ಕೆ ಭಾ ।
ಸುರಲಲಾಟಮೋ ತಲ್ಲಲಾಟತಿಲಕಶ್ರೀಗಿಂಬುಗೊಟ್ಟಿರ್ದ ಶೇ
ಖರಮೋ ಶೇಖರಚೂಳಿಕಾಮಣಿಯೊ ಪೇಳಿಂಬಂತಯೋಧ್ಯಾಪುರಂ ॥ ೨೬ ॥

ಪುರುತೀರ್ಥೇಶ್ವರನಾದಿದೇವನುದಯಂಗೆಯ್ವಂದು ಮುನ್ನಂ ಪುರಂ
ದರನತ್ಯುತ್ಸವದಿಂದೆ ನಿರ್ಮಿಸಿದ ಸಾಕೇತಂ ಜಗತ್ಖ್ಯಾತಮು ।

ಚ್ಚರಿಯೆಂದೊಚ್ಚತಮಾಡಿ ಮಾಣ್ಬೆನಱಿಯೆಂ ಮತ್ತಾಪುರಂ ಚೆಲ್ವದಾ
ಪುರವಿಂಬಾಪುರವೊಳ್ಳಿತಾಪುರಮದಂತಿಂತೆಂಬ ಬೇಳಂಬಮಂ ॥ ೨೭ ॥

ಅದನಾಳ್ವಂ ನಿಜಬಾಹುರಾಹುಕಬಳೀಭೂತಾರಿಸಂತಾನನಂ
ಷ್ಪ್ರದಳತ್ಪಂಕಜರೇಣುಶೋಣಿತಶಿರೋಭೂಭೃತ್ಸಮಾದಾನನಾ ।
ಸ್ಪದಸಂಭಾವಿತಸತ್ಯಶೌಚಗುಣರತ್ನಾಂಭೋನಿದಾನಂ ಧರಾ
ಸುದತೀಹೃತ್ಪತಿ ಸಿಂಹಸೇನನನಘಂ ಸಾಹಿತ್ಯರತ್ನಾಕರಂ ॥ ೨೮ ॥

ನೋಡಿದುದು ಮಾಡಿದ ಕೌತುಕಮುಂ ಸಭಾಜನಂ

ಬಿದಱಿ ಮನಂ ಕಲಂಕೆ ತನು ಬಾಡೆ ಮೊಗಂ ಮುಱಿದೋಡೆ ಕಣ್ಣನೀರ್
ಬಿದೆಬಿದೆ ಬೆಂದು ತಾವೆ ತನುಗೇಱಿದಪ್ಪುದೊ ಚಿತ್ರಜಂಗೆ ಬಾ |
ಟಿಱುಕ್ಕದಲೆಸಿಪಲ್ಕಿಕಾರ್ತಿಯುಟಿಲ್ದು ನೃಪಾಲನುಸೋಜನಿಂತು ನೋ
ಡಿದ ಕಡೆಗಣ್ಣ ಕಾಂತಿಲತಿಕಾಸುಮನಸ್ಮರಮೋಹಪಾಶದೊಳ್ || ೧ ||

ಸ್ಮರಪಾಶಸ್ತ್ರೀರಿತಂ ಗೋರಿಯು ಹರಿಣಿಯುವ್ರೋಲ್ ಸ್ನಾನಮುಂ ಪ್ರೊಕ್ಕು ತತ್ಕ್ರೀ
ಕರದೋಜೆಮಾರಿಯುಂ ತದ್ವರಹಸಿತವಜಶ್ಚಂದನಾಸೇಕದಿಂ ತ |
ತ್ಪರಿಹಾಸಸ್ಪರ್ಶಸೌಖ್ಯಾಮೃತದಿನೊದವೆ ಶೀತೋಪಚಾರಂ ಪ್ರವಾಲಾ
ಧರೆಯರ್ ಕಣ್ಣೊಟ್ಟಿದೊಳ್ ಕೋಟಲೆಗೊಳೆ ಮೆಱೆಗುಂ ಭೂಪನಾಶ್ಚರ್ಯ
ರೂಪಂ || ೨ ||

ಬಿದಿ ಕೊಟ್ಟ ಶಾಸನಂ ಸುಕೃ
ತದ ರಾತ್ರಿಗೆ ಒದಿದ ಲಕ್ಷಣಂ ಸಂಸ್ಕೃತಿ ಮೋ |
ಹದ ಸಿದ್ಧಾಂತಂ ತಾನೆಂ
ಬುದು ಭೂಪನಮೋಘವಾಕ್ಯಮುಂ ಭುವನಜನಂ || ೩ ||

ಆ ನೃಪಮಕರಧ್ವಜನ ಮ
ನೋನಯನಮರಾಳಮಧುಪಕೇಳಿಗೆ ಸರಸೀ |
ಜಾನನೆ ಕೈರವಲೋಚನೆ
ತಾನೆ ಜಯಶ್ಯಾಮೆ ಸರಸಿಜಾಕರವಾದಳ್ || ೪ ||

ರಮಣೀಯೋಜ್ವಲ ಸಾರವಸ್ತುಚಯದೊಳ್ ಸೌಂದರ್ಯಸೌಭಾಗ್ಯಭಾ
ಗ್ಯಮನುತ್ಪಾದಿಸಿ ಮುಟ್ಟೆ ಮಾಡೆ ಸುಕುಮಾರತ್ವಂ ತ್ರಿಮಾಳ್ದಪ್ಪುದಂ |
ದು ಮನೋಜಾತನನಂಗನಾಗಿ ಮನದಿಂದಂ ಪೆಣ್ಣ ವಿ
ದ್ಧಮನೆಂಬಂತಿರೆ ಗಾಡಿ ರೂಪಿಯು ಜಯಶ್ಯಾಮಾ ಮಹಾದೇವಿಯಾ || ೫ ||

ಆ ಧರಾಧಿನಾಥಂ ಸಿಂಹಸೇನಮಹಾರಾಜನೊಂದು ದಿವಸಂ ಒಡ್ಡೋಲಗಂಗೊಟ್ಟು ಕುಳ್ಳಿರ್ಪಾಗಳ್

ದೆಸೆವಿಸರತ್ನಪಾಲಲತಿಕಾವಳಿಯಿಂ ತಳಿರ್ವೇಱಿದಪ್ಪುದಾ
ಗಸಮರುಣಾಂಬುಜಾತ ವನರಾಜಿಗಳಿಂ ದಳವೇಱುವಪ್ಪುದ

ರ್ವಿಸೆ ಮಣಿಮಾಲೆಯಿಂ ಜಲದಮಾಲೆ ಫಲಾವಲಿವೇಱಿದಪ್ಪುದಾ
ವೆಸಕಮಿದೆಂದು ನೋಡಿದುದು ಮೂಡಿದ ಕೌತುಕಮಂ ಸಭಾಜನಂ ॥ ೬ ॥

ಆಖಂಡಳದಿಶಾಮಂಡಳದಿನಂತು ಬಳ್ವಳಬಳೆದ ಕದಂಬವೆಳಗೆಂಬ ಧವಳಾರುಣ ನೀಲ ನೀರರುಹವನಕ್ಕಿದಿರೇಳ್ವ ಲೋಚನಮರೀಚಿಗಳ್ ವಿಕಸಿತಸರೋವರಜಳಂಗಳನಳಂಕೆಗೊಳಿಸಿ

ಅದು ನಾನಾರತ್ನರೋಚಿಃಪಟಳಜಟಿಳಮಂ ಪುಷ್ಪಕಾನೀಕಮಲ್ಲಿ
ರ್ದುದದೇಂ ತೂಣೀರದೊಳ್ತೀವಿದ ಕುಸುಮಶರಶ್ರೇಣಿಯಂತಲ್ತು ಚಿತ್ರಾಂ ।
ಬುದಪಾಳೀಜಾಳದೊಳ್ಪೊಯ್ದೆಳವೆಱಿಮುಗೆಯಲ್ತಲ್ತದಭ್ರಾಬ್ಧಿಯಿಂದಂ
ಸುದತೀಸಂದೋಹಮಿಂತಿಂತೊಗೆದಪುದೆನುತಿರ್ದತ್ತು ತದ್ರಾಜಲೋಕಂ ॥ ೭ ॥

ಅನ್ನೆಗಮಿತ್ತಲೆಸಳ್ಮಸಗಿದಲರ ಗೊಂಚಲ್ಗಳಿನಿಳಿವ ಚಂಚರೀಕ ಸಂಚಯದಂತೆ ಪಾಱುನೀಱಿಯರ್ ಪುಷ್ಪಕವಿಮಾನಮಾಳೆಗಳಿನವನೀತಳಕ್ಕವತರಿಸಿ ಪರಿಷದ್ವಲಯಮಂ ಪುಗುತಪ್ಪಾಗಳ್

ಯುವತಿಜನಕೌತುಕಪಾತ್ರ
ಪ್ರವೇಶದೊಳ್ ಸಭೆಯನವರ ತನುಸುರಭಿಗದೇಂ ।
ಕವಿದತ್ತೊ ನೀಲಚೇಲದ
ಜವನಿಕೆವಿಡಿದಂತೆ ಮುಂತೆ ಭೃಂಗೀಪಟಲಂ ॥ ೮ ॥

ಆ ಸಭೆಗೆ ಪುಗುವ ಖಚರವಿ
ಲಾಸಿನಿಯರ್ ನಡೆವ ನೆವದೆ ಕುಸುಮಾಂಜಲಿಯಂ ।
ಸೂಸಿದರೆಂಬಿನಮೇನಧಿ
ವಾಸಿಸಿದುದೊ ಚರಣನಖಮಯೂಖಪ್ರಕರಂ ॥ ೯ ॥

ನೆಲನಂ ಮುಟ್ಟದ ಖೇಚರ
ಲಲನೆಯರ್ಗರುಣಾಬ್ಜದೆಸಳೆಸೊಡ್ಡಿದಳವಸೀ ।
ಲಲನೆಯೆನೆ ನೀಳ್ದ ಕುಟ್ಟಿಮ
ತಲದೊಳ್ ಮಾರ್ಪೊಳೆದುವಂಘ್ರಿಕಿಸಲಯರುಚಿಗಳ್ ॥ ೧೦ ॥

ನಳಿನವನಶ್ರೀನಿವಹಂ
ಕಳಹಂಸಂಬೆರಸು ಬಂದುದೆನೆ ಲತಿಕಾಕೋ ।
ಮಳೆಯರ ನಡುವೋರ್ವಂ ನಿ
ರ್ಮಳರೂಪಂ ದ್ವಿಜಕುಲೋತ್ತಮಂ ಬರುತಿರ್ದಂ ॥ ೧೧ ॥

ಪಿಂತಣ ಶಿಷ್ಯನ ಕರಶಶಿ
ಕಾಂತಕಮಂಡಲು ಪಳಿಚ್ಚನೆಸೆದಿರ್ದುದು ಶು ।
ದ್ಧಾಂತಃಕರಣೋಪಾಧ್ಯಾ
ಯಾಂತೇವಾಸಿಯುವೊಲಾ ಧರಾಮರಪತಿಯಾ ॥ ೧೨ ॥

ಮಾಣಿಯ ಕೌಂಕುಳಿ ಚರಿತವು
ರಾಣದ ಕಮಳಿಗೆ ಸಮಾನಸಾಮ್ಯಮಳನಜೋ ।
ಬಾಣಂ ತೆಕ್ಕನೆ ತೀವಿದ
ತೂಣೀರತಳಾಗ್ರಭಾಗದೊಳ್ ಧಾರ್ಮಿಕನಾ ॥ ೧೩ ॥

ಅದಲ್ಲದೆಯುಂ

ಪರಿವಾರಾಂಗನೆಯರ್ ಪರಿಗ್ರಹಮಣಿಪ್ರಕ್ಷ್ವಾದ್ಯಕಾಚ್ಛತ್ರಚಾ
ಮರತಾಂಬೂಲಕರಂಕದರ್ಪಣನವೀನಪಾತ್ರಭೃತಾನುಪ್ರಸುಂ ।
ದರಹಸ್ತಾಚ್ಛೆಯರಿತ್ತಲುಂ ಬಳಸಿ ತನ್ನಂ ಬರ್ಪಿನಂ ಬಂದಳಾ
ಸ್ಮರಚಕ್ರೇಶನ ರಾಜ್ಯಲಕ್ಷ್ಮಿಯೆನಿಪನ್ನಂ ನಾಯಿಕಾಗೌರವಂ ॥ ೧೪ ॥

ಅಂತು ಬಂದು ನೃಪೇಂದ್ರಮೃಗೇಂದ್ರವಿಷ್ಟರಕ್ಕನತಿದೂರದೊಳ್ನಿಂದು ನಿಜರಾಜ್ಯ ವಿಶಿಷ್ಟವಸಿಷ್ಟಶರ್ಮನೆಂಬನನೆ ಪುರೋಹಿತನಂ ಮುಂತಿಟ್ಟು ಕಾಣಿಸಲೊಡಂ

ಕರನಖರಕುಮುದಕುಸುಮಮಾಂ
ಕುರಷಂಡಂ ವಿಮಲದಂತಕಾಂತಿಪ್ರಭೆಯಿಂ ।
ಶರದದ ಪೊಸವೆಳ್ದಿಂಗಳೊ
ಳಿರೆ ಭವತೇಸ್ವಸ್ತಿಯೆಂದು ಸಂಯುತಹಸ್ತಂ ॥ ೧೫ ॥

ಆಶೀರ್ವಚನಪ್ರಸ್ನಮ ಸಿದ್ಧಶೇಷಾಕ್ಷತಹಸ್ತಪ್ರಶಸ್ತಪ್ರಸ್ತರಣಮುಚಿತಪ್ರದೇಶ ದೊಳಿರ್ಪುದುಮನಾನಿತಂಬಿನೀ ವಿಯಚ್ಚರಲೋಕದೊಳ್ ಅಚ್ಚರಿಯೆನಿಸಿದುಪಾಯನ ಸಹಸ್ರಮುಂ ಸಖೀಸಹಸ್ರಂ ಕೆಯ್ಗೆಯೊಳ್ ನೀಡೆ ತಾನೆ ಕಳಿಮುಕೊಂಡು ಸಿಂಹಸೇನ ಮಹಾರಾಜಂಗಂ ಜಯಶ್ಯಾಮಾಮಹಾದೇವಿಗಮಂಟಯಿಂಸುವಾಗಳ್ ಕೆಲದೊಳಿರ್ದ ಮಂತ್ರಿಮಹತ್ತರಾಧರಾಮರಮುಖ್ಯನಸ್ಸೀ ಮಹಾನುಭಾವೆಯಮಾನಿನೀ ಮನೋಹರಿಯ ಪೆಸರೇನೆಂದು ಬೆಸಗೊಳಲೊಡನಾತಂ

ಮದನಮಂಜರಿಯೆಂಬಳೀಕೆ ಭುಜಂಗಸೇನನೃಪೇಂದ್ರನ
ಗ್ಗದ ತನೂಭವೆಯೆಂಬುದುಂ ಕರೆಗಣ್ಮಿ ಕಂಬನಿ ಕಂಠದೊಳ್ ।

ಪುದಿಯೆ ಗದ್ಗದನಾದವಾಕ್ಯದಿಂ ದಕ್ಷಿಣಾಯೆ ನಿಜೇಶನಂ
ಕದಿಸಿಕೇಶನ ಕಾಂತೆ ಬೆಚ್ಚರಪಾಟ್ಟಿ ಬೆಚ್ಚತಮಪ್ಪಿದಳ್ ॥ ೧೬ ॥

ಪುಳಕಭರನವ್ಪ್ರಕವ್ಪ್ರಲತೆಯಂ ಲತೆ ತೆಂಬಲರಿಂದಮಪ್ಪಿದಂ
ತೆಳಸಿದ ಸೋದರಪ್ರಣಯದಿಂ ಲಲಿತಾಂಗಿಯಪ್ಪಿ ನೀಳ್ದ ತೋಳ್ ।
ಬಳಸಿದುವಿಲ್ಲ ಪೆರ್ಮೊಲೆಗಳಿಂ ನಡುವಂ ನಡುಗೊಂಕಿತಿಲ್ಲ ಪೆಣ್ಬ
ಪುಳಕದಿನೊಂದಿತಿಲ್ಲ ಒಗೆಯಂ ತೆಗೆದಪ್ಪಿದರೋರ್ವರೋರ್ವರಂ ॥ ೧೭ ॥

ತದನಂತರಂ

ಪಳಯಿಪ ಸರಸೀರುಹದಿಂ
ತಿಳಿಗೊಳದೊಳ್ ತೇಂಕಿಪ ಮುದಶ್ರುಪೂರದೆ ಮನದು ।
ಚ್ಚಳದಿಂದಕ್ಕನ ಕೇಸಡಿ
ದಳರ್ಗೆ ಜಯಶ್ಯಾಮೆ ಪಾದ್ಯಮಂ ಪ್ರಕಟಿಸಿದಳ್ ॥ ೧೮ ॥

ಆಗಳಾ ಪ್ರಣಯಪ್ರವಾಹಿನಿಯೊಳ್ ಮುಳುಂಕಿ ತೇಂಕಾಡುವ ಪಂಕಜಾನನೆಯುಂ ಸಿಂಹಸೇನಮಹಾರಾಜನಿಂತೆಂದಂ

ವ್ಯಾಮೋಹಂ ನಿನಗಿನಿತಾ
ಯ್ತಾ ಮಾಸಿಸಿ ಸಮಗದಾವಳೆಂದನುನಯದಿಂ ।
ಭೂಮೀಶಂ ಕೇಳೆ ಜಯ
ಶ್ಯಾಮಾಮಧು ಕಿಂಚಿದವನತಾನನೆಯಾದಳ್ ॥ ೧೯ ॥

ಸಾಲ್ಗೊಂಡೆಲ್ಕು ಮಾಣಿಕ್ಯ ಪಕ್ಷ್ಮಪುಟದೊಳ್ ಒಟ್ಟೈಡೆ ಸುಣ್ಣಂಚು ಪೆ
ರ್ಮಲೆಯೊಳ್ ಸ್ರಗ್ರಪ್ರಾಲಪಾಂಗರುಚಿಗಳ್ ಕೈವೊಯ್ಯೆ ಶೋಣಾಬ್ಜದೊಳ್ ।
ಕಲ್ಗೊಂಡೆಲೆ ಲಾವಣ್ಯವಿಭ್ರಮವಿಲಾಸಪ್ರೇಮ ಬಿಂಬೋಷ್ಠವಿಂಬಾದ ಬಿಂ
ಬಲ್ಗೊಂಡೊಳ್ ನಗೆ ದಂತಕಾಂತಿ ಒಟ್ಟಿಕಿಂತೆಂದಳ್ ಮಹೀಕಾಂತನೊಳ್ ॥ ೨೦ ॥

ದೇವ ನೀನೆನ್ನ ಪರಿಣಯನದಂದು ಬಂದು ಕಂಡ ಕಾಶ್ಮೀರದೇಶಕ್ಕೆ ವಿಶೇಷಮಾದ ಪಟ್ಟನಗರದೊಳ್ ಎಮ್ಮ ತಾತಂ ಭುಜಂಗಸೇನಮಹಾರಾಜನೀ ಮದನಮಂಜರೀಮಹಾದೇವಿಯನೆನ್ನೊಡನೆ ಪರಿಣಾಗಿನೊಳ್ ಕೊಂಡಾಡೆ ನಡೆಯಿಸೆ ಶಕುನಸಮಯದಂತೆ ರೂಢಿಸಿ ನಡೆಯಲಿಚ್ಚಿಸುವ ಶೈಶವದೊಳೊರ್ವ ಹರ್ಮ್ಯಾಂಗಣದ ಮರಾಳಕೇಕಿಗಳೊಡನೆ ನಡೆಗಲ್ತಂತೆ ಕಣ್ಗಳಂಗಣಕ್ಕೆ ಮಂಗಳಾಲಂಕರಣಮಾದ ಬಾಲಕೇಳೀವಿಲಾಸದೊಳ್

ಮದನಮೋಹನಪುತ್ರಿಕೆ ಮುದ್ದಿಂ ದಟ್ಟಡಿಯಿಟ್ಟಪುದೆಂಬ ಚೆ
ಲ್ವಿದಿರ್ಗೊಳುತ್ತಿರೆ ರಾಜಗೃಹಪ್ರಾಸಾದಮಣಿಪ್ರಘಣಾಂತರಾ।
ಳದೊಳಗಾಡುವ ಬಾಲಕಿಯಂ ವಿದ್ಯಾಧರನುತ್ಪಲಚೂಡನೆಂ
ಬದಟನುದ್ಧತಯಾನವಿಮಾನಂ ಕಂಡು ಮನೋಜವಿಮೋಹದಿಂ || ೨೧ ||

ನಡೆವ ಬಯಲ್ದಾವರೆಯಂ
ನುಡಿವಂಗಣಕುಮುದಕುಸುಮಮಂ ಕಂಡಳಿಗಳ್।
ಬಿಡದೆಱಗುವಂತಿರೆಱಗಿದ
ಕಡೆಗಣ್ಗಳ ಕಾಂತಿಯಿಂದೆ ತೆಗೆದಂ ಖಚರಂ || ೨೨ ||

ತೆಗೆದು ಗಗನಲತಾಕುಸುಮದಂತಿರೆಸೆವ ಪುಷ್ಪಕದೊಳ್ ನಿಜಪರ್ಯಂಕಮಂಡಳಕ್ಕೆ ಮಂಡನಂ ಮಾಡಿ ಬಾಲಕಿಯಂ ಸಮ್ಮೋಹಿನೀವಿದ್ಯಾಪ್ರಭಾವದಿಂ ಮೋಹಿಸೆ ತಾತ ಮಾತೃಜನಂ ಕೇಳಿ ಶೋಕಾಪಸೋದಮಾದನಮುಸೇನಾನುಮಂ ನುಡಿದು ನಿಜನಿವಾಸಕ್ಕೊಯ್ದು ತುಹಿನಕರಕಳೆಯಂ ಬಳೆಯಿಸುವ ಗಗನವಲ್ಲಭನಂತೆ ಕಳಾಕಳಾಪದೊಳಂ ವಿದ್ಯಾಧರವಿಳಾಸದೊಳಮೊಡನೊಡನೆ ಬಳಸೆ ಬಱಯುಮುಳವಿಗಱವ ತಾರುಣ್ಯರಾಗದಿಂ ಬಣ್ಣಿಸಿದಂತೆ ಲಾವಣ್ಯರಸದಿಂ ನುಣ್ಣಿಸಿದಂತೆ ಮಂದಗಮನೆಯ ಸೌಂದರ್ಯಮಾಶ್ಚರ್ಯ ಮನಳಂಕೆಗೊಳಿಸೆ

ಅಯಶಂ ಮಾತೃಪಿತೃದ್ವಯಂ ಕುಡದೆಯುಂ ಕೊಂಡಂದು ಮತ್ಖೇಚರಾ
ನ್ವಯಮಂ ಪೊರ್ದುಗುಮೆಂದು ಪದ್ಮನಗರಕ್ಕೆೞ್ತಂದು ತಾತಂಗೆ ವಿ।
ಸ್ಮಯಮಪ್ಪಂತಿರೆ ರೂಪುವಿಭ್ರಮವಿಲಾಸಾಶ್ಚರ್ಯಮಂ ತೋಱೆ ಕ
ನ್ನೆಯನಾಖೇಚರನೊಳ್ ಭವಚ್ಛ್ವಶುರನತ್ಯುತ್ಸಾಹದೊಳ್ ಕೂಡಿದಂ || ೨೩ ||

ಎಂದೀಕೆಯ ವೃತ್ತಾಂತಮ
ನಂದಾಂ ಕೇಳ್ದೆಂ ಮದೀಯಪುಣ್ಯಫಲಂಗಳ್।
ತಂದೆಮ್ಮಂ ಕಾಣಿಸಿದವೊ
ಲಿಂದೀಗಳ್ ಕಂಡೆನೀ ಚಕೋರೇಕ್ಷಣೆಯಂ || ೨೪ ||

ಎಂಬುದುಮಿಳಾಕಾಂತನತ್ಯಂತ ವಿಸ್ಮಯಸ್ವಾಂತನಾಗಿ ನಿಜಮನೋವಲ್ಲಭೆಯೊಳೊದವಿದೌತ್ಸುಕ್ಯಸಂಕಟಮನಾನುಕೂಲ್ಯದಿನಗಲಿದೆಗೆದು ಮದನಮಂಜರಿಯಂ ಕೆಳಕ್ಕೆ ದೆಗೆದು ಇಷ್ಟಶರ್ಯರಂ ವಿಶಿಷ್ಟಾಸನದೊಳಿರಿಸಿ ಪರಿಚಿತೋಪಚಾರಚಾತುರ್ಯ ವಚನರಚನೆಗಳಿನಾ ಚಕೋರಲೋಚನೆಯನನುನಯಿಸುತ್ತುಂ ಓಲಗಮಂ ಪರೆಯಲ್ವೇೞ್ದು

ಗೃಹಮಹತ್ತರಾನ್ತರ್ವಂಶಿಕಸರ್ವಸಚಿವಹಿತಪುರೋಹಿತಸೌವಿದಲ್ಲ ರಾಜವಲ್ಲಭಪರಿಮಿತ ಪರಿಜನಪುರಜನಪರೀತನಾಗಿ ಬಱಿಯುಮಿಂತೆಂದಂ

ಧರಣೀಭರ್ತೃ ಭುಜಂಗಸೇನನವನೀ ಸಾಮ್ರಾಜ್ಯಮಂ ಕೀರ್ತಿಶೇ
ಖರನೊಳ್ ನೆರ್ಮಿಸಿ ಪೆರ್ಮೆಯಂ ಪಡೆದುದಂ ಮುಂ ಕೇಳ್ದಿವಿಂದೆಮ್ಮ ದೇ ।
ವರನೇಂ ಕ್ಷೇಮದೊಳಿರ್ದನೇ ಕುಶಲಮೇ ತದ್ವಲ್ಲಭಂಗಂ ಭವ
ದ್ಗುರುಪಾದಾಬ್ಜಪರಾಗರೇಣುತಿಲಕಂ ತದ್ರಾಜ್ಯಮೇಂ ಪೂಜ್ಯಮೇ ॥ ೨೫ ॥

ಎಂದು ಭಾವಂ ನಿಜಪ್ರಭಾವಸಂಭಾವಿತನಪ್ರಕಮ್ರಾಮ್ರೇಡಿತಮಂ ಮೆಱೆಯು ಲೊಡಮಾ ಮೃದುಮಧುರಭಾಷಿಣಿ

ದೇವರ ನಣ್ಪಿನಿಂ ನಿಜವಿಳಾಸನಶಾಸನರಾಜ್ಯವೈಭವಂ
ದೇವರ ಪೆಂಪಿನಿಂದೆ ಗುರುವಾರ್ಧಕರಾಜವಿಲಾಸಗೌರವಂ ।
ದೇವರ ತೇಜದಿಂದೆ ಮದಧೀಶವಿಲಾಸಮನೂನಮಾಗಳಿಂ
ದೇವರ ಮಿತ್ರನಂತೆಸೆವುದುನ್ನತಿವೆತ್ತ ಕುಳಂ ನಿರಾಕುಳಂ ॥ ೨೬ ॥

ಎಂದು ಮತ್ತಮಿಂತೆಂದಳೊಂದುದಿವಸಂ ವಿನೇಯವೃಂದಮನಾನಂದರಸದಿನೋಕುಳಿಯಾಡಿಸಲ್ಬಂದ ಬಸಂತದ ನಂದೀಶ್ವರಾಷ್ಟಮಿಯೊಳ್ ವಿಶಿಷ್ಟಾಷ್ಟಮಂಗಳಂ ಪುರೋವರ್ತಿ ಕೀರ್ತಿಶೇಖರಮಹೀವಲ್ಲಭಂ ಮದೀಯವಲ್ಲಭಸಮೇತಮಾಂ ಬೆರಸು ಪೂರ್ವವಿದೇಹಾಗತಚಾರಣ ಮುನೀಂದ್ರ ವೃಂದಾರಕರ ತಪಃಫಲಾವಳಿನಿರ್ಗಳಿತ ಶಾಂತ ರಸಪ್ರವಾಹವಿತಾನನಿಜಲತಾಪ್ರತಾನ ನಾನಾಖಗಮೃಗವಿಶಿಷ್ಟಮಾಗಿ ಭುವನಶೇಖರ ಮಾದ ಕುರುವಿಂದಮೆಂಬ ಗಿರಿಮಕ್ಕೆ

ಭುವನೈಕಾರಾಧ್ಯರ ಪೂಜಿಸುವೆಸಕದೆ ಪೋತಂದು ಮಾಂಗಲ್ಯಪೂಜೋ
ತ್ಸವದಿಂದಂ ಭಾವನುಂ ವೈದುಸನುಮೆಸೆಯೆ ಕಲ್ಯಾಣಮಂ ಮಾಡಿ ಧರ್ಮ ।
ಶ್ರವಣಾಸಂತರ್ಯ ಕಾರ್ಯಂ ಮನದೊಳಿರೆ ಜಯಶ್ಯಾಮಗಿನ್ನಾತ್ಮಜಾತೋ
ದ್ಭವಮೆಂದಕ್ಕುಂ ನಮೋಸ್ತು ಬೆಸಸಿಮೆನೆ ಮುನಿಶ್ರೇಷ್ಠರಿಂತೆಂದು ಪೇಳ್ದರ್ ॥ ೨೭ ॥

ಪರಮಮುನೀಂಪ್ರದಿವ್ಯವಚನಾಮೃತವರ್ಷಮನಾಂ ತೆರಳ್ಚಿಮಂ
ತಿರೆ ಪವಣಲ್ತದಂ ಘನರಸಾವಹವಾಕ್ಯದಿನಿಷ್ಟಶರ್ಮನಿಂ ।
ಸುರಿಸಲೊಡರ್ಚಿ ಬಂದೆನಿವರಿಂದನಧಾರಿಸಿ ಕೇಳ್ವುದಂತದ
ಚ್ಚರಿ ಸವರ್ಣೋ ಅಪೋಘವಯಣೋ ಎನೆ ತಪ್ಪದು ತತ್ಫಲೋದಯಂ ॥ ೨೮ ॥

ಅನಿತ್ಯನಾಟಕದ ಚೋಹಂ ತೀರ್ದುದು

ಶ್ರೀವನಿತೆವೊಲ್ ಜಯಶ್ರ್ಯಾ
ಮಾನಧುವಿನಲ್ ಸಖಿ ಮದನಮಂಜರಿ ಸಹಿತಂ ।
ಸೌವಸ್ತಿಕ ಕಥನಸುಧಾ
ಸೇವೆಯೊಳಿರ್ವಂ ವಿನೇಯಜನಮುಖತಿಲಕಂ ॥ ೧ ॥

ಆಗಳ್ ಧರಾಸುರಮುಖ್ಯಂ ಧರಾಪಾಳಕಚೂಡಾಮಣಿಗಿಂತೆಂದಂ

ಪ್ರಜ್ಞರ್ಗಾಗಮಮುಮಂ ಲೋ
ಕಜ್ಞರ್ಗಱಿಪನಿತನುಸಿರ್ವುದೆಗ್ಗಿನೆ ನಿಮಗಾಂ ।
ತ್ರಿಜ್ಞಾನಧರರ್ಗೆ ಕತೆವೇ
ಳ್ವಿಜ್ಞತೆ ಸೂರ್ಯಂಗೆ ಸೊಡರನಿಡುವಂತೆ ವಲಂ ॥ ೨ ॥

ಆದೊಡಂ

ಸಂಧಾನಿತಗುರುಭಾಷಾ
ಸಿಂಧುಸುಧಾಪಾನ ಸಮ್ಮದೋನ್ಮತ್ತಮನೋ ।
ಬಂಧುಜನವ್ಯಾಮೋಹನಿ
ಬಂಧನಮನವಿಸೆ ನೃಪೇಂದ್ರ ಬಿನ್ನವಿಸಿದಪೆಂ ॥ ೩ ॥

ಎಂದು ಬಿನ್ನವಿಸಿ ಸಿಂಹಸೇನಮಹಾರಾಜನೊಳಾಭಿಮುಖ್ಯತೆಯುಂ ಪಡೆದು ಪೇೞಲುದ್ಯುಕ್ತನಾದನದೆಂತೆಂದೊಡೆ

ಅದು ಜಂಬೂದ್ವೀಪಮಂಬೋಧಿಯು ಪೊಱತಱಿಸೊಳ್ ಧಾತಕೀಷಂಡಮಿರ್ದ
ಪೃಥು ಕಾಳೋದಾಬ್ಧಿ ತನ್ನಂ ಬಳಸಿ ಪಡುವಲುಂ ಮೂಡಲುಂ ಮಂದರಂ ಮ ।
ತ್ತದಱೊಳ್ ನಿಂದಿರ್ಪುವಾ ಮಂದರಮೆರಡಱೊಳೈಂದ್ರೀದಿಶಾಮಂದರಕ್ಕಿ
ರ್ಪುದುದೀಚೀಭಾಗಮುಖ್ಯಂ ಬಹುಜನಪದಸಂಸಖ್ಯಸ್ಯೈರಾವತಾಖ್ಯಂ ॥ ೪ ॥

ಅದಱೊಳ್ ಮೆಱೆವಾರ್ಯಾಖಂ
ಡದ ಮಧ್ಯದೊಳಖಿಲಸುಖದ ಕಣಿ ಚಾಗದ ಭೋ ।
ಗದ ನೆಲೆ ಸೆಂಪಿನ ಸೊಂಪಿನ
ಸದನಂ ಮೆಱೆದತ್ತು ಕೋಸಲಂ ಪೇಶಲದೊಳ್ ॥ ೫ ॥

ಇಲ್ಲಿ ಮರಾಳಮಿಲ್ಲದ ಕೊಳಂ ಕೊಳನಿಲ್ಲದ ಪಾಣಿ ಪಾಣಿ ಪಾ
ಡಿಲ್ಲದ ತುಂಬಿ ತುಂಬಿಗಳ ಗೊಂದಣಮಿಲ್ಲದ ಪೂವಲರ್ದ ಪೂ ।
ವಿಲ್ಲದ ಮಲ್ಲಿಕಾಲತಿಕೆ ಮಲ್ಲಿಗೆಯಿಲ್ಲದ ಮಾವು ಬಂದ ಮಾ
ವಿಲ್ಲದ ನಂದನಂ ಕುಳಿರ್ವ ನಂದನಮಿಲ್ಲದ ಜಾತಿಜಾಂಗಳಂ ॥ ೬ ॥

ತೆನೆಪಾಲೇಱಿದ ಶಾಲಿಗಂಪುಗಡಲೊಳ್ ಮುಟ್ಟಾಡಿ ಮುಟ್ಟಾಡಿ ಕೌಂ
ಗಿನ ಪೊಂಬಾಳೆಯನಟ್ಟಿಗಂಪುಗಡಲೊಳ್ ಚುಳ್ಕಾಡಿ ಚುಳ್ಕಾಡಿ ಮಾ ।
ವಿನರಲ್ಗೊಂಚಲ ತೆಳ್ಳಿಗಂಪುಗಡಲೊಳ್ ತೇಂಕಾಡಿ ತೇಂಕಾಡಿ ಪ
ದ್ಮಿನಿಯೊಳ್ ತುಂಬಿ ಮಲಂಗಿ ಸೇದೆಗಳೆಗುಂ ಕಾಸಾರತೀರಂಗಳೊಳ್ ॥ ೭ ॥

ಅಂತು ಸಕಲಜನಮನೋನಯನಾನಂದಕರಮಾದ ನಗರಗ್ರಾಮಸೀಮಾಪ್ರತಿಬದ್ಧಮಪ್ಪ ನಂದನವನಪ್ರದೇಶದೊಳ್

ಎಳಲತೆ ಪೆಕ್ಕಣಕ್ಕೆ ತಳಿರಂ ತೆಗೆದುಟ್ಟೆಳದಕ್ಕೆ ನಟ್ಟುವಂ
ಮಳಯಸಮೀರಣಂ ಪನಸರಂಗದೊಳಿಂತಿವೆ ಪಣ್ಣ ಬಂದ ಮು ।
ದ್ದಳೆ ಮಧುದೂತಿ ನಾಗಲತೆ ಮಲ್ಲಿಗೆ ಮಾಲತಿ ಬನ್ನಿಮೆಂದು ಸೂ
ಳ್ವಿಳಸವೊಲೆತ್ತುಲುಂ ಕರೆಗುಮಾಬನದೊಳ್ ಕಿಸುಗಣ್ಣ ಕೋಕಿಲಂ ॥ ೮ ॥

ಆ ಪುರಮನಾಳ್ದನುದ್ಗತ
ಗೋಪುರಮಂ ವಿಜಿತಶಕ್ರಧನಪತಿವರುಣ ।
ಶ್ರೀಪುರಮಂ ಧರಣೀಮಣಿ
ನೂಪುರಮಂ ಧೃತಮನೋರಥಂ ಪದ್ಮರಥಂ ॥ ೯ ॥

ಮನುಚರಿತಕ್ಕೆ ಸ್ಮೃತಿ ನೃಪನೀತಿಗೆ ಪಂಚಿಕೆ ಲೌಕಿಕಪ್ರವ
ರ್ತನೆಗಳ ವಾರ್ತಿಕಂ ರಿಪುಪಡಸ್ತ್ವಯುಗೋದದ ಟಿಪ್ಪಣಂ ಧರಾ ।
ವನಗುಣದೊಂದು ಟೀಕು ಪರಮಾರ್ಥವಿವೇಕದ ಭಾಗ್ಯಮೆಂದೊಡಾ
ಜನಪತಿರತ್ನಶೇಖರನ ರಾಜಗುಣಂ ಬುಧಸೇವ್ಯಮೆನ್ನಿರೇ ॥ ೧೦ ॥

ಹಾರದ ಕಟ್ಟಳೆ ವಿಜಯ ಯ
ಶೋರಮಣಿಯರಾಗಿ ನೆಲಸೆ ನೃಪನುದ್ಧರಿಸಲ್ ।
ವೀರದ ವಿತರಣದ ಮಹಾ
ಭಾರತುಳಾದಂಡಮಾಯ್ತು ಬಾಹಾದಂಡಂ ॥ ೧೧ ॥

ಕಾಮನ ಭುಜಬಲಲಕ್ಷ್ಮಿಯೊ
ಕಾಮನ ಭುಜವಿಜಯಲಕ್ಷ್ಮಿಯೋ ಪೇಟಿನೆ ಲ।
ಕ್ಷ್ಮೀನುತಿಯೆಂಬಳ್ ಕುಲಮಹಿ
ಷೀಮಂಡನನಾದಳಾ ಧರಾಧೀಶ್ವರನಾ ॥ ೧೨ ॥

ತರಳಾಪಾಂಗೆಯ ರೂಪವಿಭ್ರಮವಿಲಾಸಾಶ್ಚರ್ಯಮಂ ನೋಡಿ ತ
ದ್ವಿರಹಾವಸ್ಥೆಯೊಳಂಗಜಂ ಕರಗಿದಂ ದೋಷಾಕರಂ ಕಂದಿದಂ।
ಮರವಟ್ಟಂ ಮಧುವಿಂತನಂಗತೆ ಕಳಂಕಿತ್ವಂ ಮನಾಸಕ್ತಿ ನಿ
ರ್ನೆರಮೇಕಾಯ್ತೆನೆ ತಲ್ಲತಾಂಗಿ ತಳೆದಳ್ ಸೌಶೀಲ್ಯಸೌಭಾಗ್ಯಮಂ ॥ ೧೩ ॥

ತರುಣಮೃಗೀವಿಲೋಚನೆ ಮರಾಳಿಮದಾಲಸಯಾನೆ ಕೇಕಿ ಭಾ
ಸುರಕಚಭಾರೆ ಕೋಕಯುಗಪೀನಪಯೋಧರೆಯಾಕೆ ದೀವನಾ।
ಗಿರೆ ನೃಪನಂತರಂಗವನದೊಳ್ ಸಲೆ ಗೋರಿಗೊಳಿಪ್ಪನುಲ್ಲಸ
ತ್ಕರಣಗಣಂಗಳಂ ಕುಸುಮಸಾಯಕನೆಂಬ ವಿನೋದಿಲುಬ್ಧಕಂ ॥ ೧೪ ॥

ತರುಣಾರ್ಕಂ ನೆಲಸಿರ್ದ ಪೂರ್ವಗಿರಿನಾಥಂ ಪೋತಶೀತಪ್ರಭಾ
ಕರಗೊಪ್ಪಿರ್ದಮೃತಾಬ್ಧಿ ದಾರಕನನೋರಂತ್ರೀತಿ ಚೆಲ್ವಾದ ಚ್ಚೈ।
ತ್ರರಥಂ ತಾನೆನೆ ಸೂನು ಮೇಘರಥನಿಂ ತಳ್ವಾದ ನುಣ್ಪಿಂಗೆ ಪ
ದ್ಮರಥಂ ತುಂಗಭುಜಂ ಗಂಭೀರವಿಭವಂ ಸಂಸಾರಸಾರೋದಯಂ ॥ ೧೫ ॥

ಇರೆ ಪರಿಷನ್ಮಂಡಲದೊಳ್
ಹರಿಪೀಠೀಘಟಿತ ಸಿಂಹಕಟಿತಟನರಸಂ।
ಪರಿವೃತ ಪರಿಮಿತ ಪರಿಜನ
ಪರಿಚಿತಪರಿಹಾಸಸರಸಗೋಷ್ಠಿನಿವಿಷ್ಟಂ ॥ ೧೬ ॥

ಇದು ತಾಂ ಸ್ವರ್ಗಾಪವರ್ಗಪ್ರಮದೆಯ ಬಟ್ಟಿ ಸಂಸಾರಸಮ್ಮೋಹವಿಚ್ಛೇ
ದದ ದೂತಂ ವೃತ್ತರತ್ನತ್ರಯಕರಯುಗಸಂಧಾನಸಂದಾಯಕಂ ದಾ।
ನದಯೋದ್ಯಾನಪ್ರತಾನಪ್ರಬಳವನಪಾಲಂ ವಲೀ ಬಂದನೆಂಬಂ
ದದಿನೊರ್ವಂ ದಿವ್ಯಯೋಗೀಶ್ವರಸಮುದಯಸಂವೇದಕಂ ಬಂದನಾಗಳ್ ॥ ೧೭ ॥

ದೌವಾರಿಕ ನಿವೇದಿತ ನಿಜಗಮನನೆಯ್ದೆವಂದು ಕರಕಮಳಕುಟ್ಮಳಘಟಿತನಿಟಿಳಾರ್ಧ
ಮೃಗಾಂಕನಮಿಳಮಂಗಳಾಶೀಸ್ಸ್ಮರಂಗಿತಾನನಕುಶೇಶಯುನನತಿದೂರದೊಳ್ನಿಂದು ದೇವಾ

ಬಿನ್ನಪಮೆಂದು ನಮ್ಮ ವಸಂತಸುಭಗನೆಂಬ ನಂದನದ ಪರಿಸರಾಗಣ್ಯಪುಣ್ಯಾರಣ್ಯಮಾ ಸನಾಥೀಭೂತಂ ಮಾಳ್ಪ ಭೂತಗಿರಿಯ ಭುವನಶಿಖರ ಜಿನಾಲಯದ ಪರಿಸೂತ್ರಸೂತ್ರಿತ ಚೈತ್ರನಂದನ ಮದೀಯನಂದನವನಕ್ಕೆ

ಬನಮೆ ಬನಕ್ಕೆ ಬಾವರಿಗೆ ಬಂದವೊಲಾದುದು ತಂಡತಂಡದಿಂ
ಮುನಿಗಳ ಕೆಯ್ಯ ಕುಂಚಣಿಗೆ ಚಾಂದ್ರಮಸೀದಳಕುಂಡಿಕಾಳಿ ತ।
ಜ್ಜಿನಭವನಕ್ಕೆ ದುಗ್ಧನಿಧಿ ಕಟ್ಟಿದ ಪೊಟ್ಟಣಮಾರಿಗಟ್ಟಿದ
ತ್ತೆನಿಸಿಮದಿಂದು ಸಾಧುಜನಸಂಗಸಮಾಗಮನ ಪ್ರಪಂಚದೊಳ್ ॥ ೧೮ ॥

ಅಮೃತಕರನುದಯದೊಳ್ ಬಳೆ
ದಮೃತಾರ್ಣವಲಹರಿಯಿಂದೆ ವೇಳಾವನಮಾ।
ಳೆ ಮುಳುಂಕಿದಂತೆ ಬನಮಾ
ಸಮುದಾಯದ ಶಾಂತರಸದೆ ಮುಳುಕಿದುದರಸಾ ॥ ೧೯ ॥

ಎಂದು ಬಿನ್ನವಿಸಲೊಡಂ ಆಸನದಿನೆೞ್ದು ತದ್ದಿಶಾಮುಖಕ್ಕೆ ಜಯಜಯನಿನಾದ ಮುಖರಿತಮುಖನಾಗಿ ಮೂಮೆ ಪೊಡಮಟ್ಟು

ಮುಂದೆ ನೆರೆದಮೃತಲಕ್ಷ್ಮೀ
ಸುಂದರಿಗನುರಾಗದಿಂದೆ ಲಂಚಮನೀವಂ।
ತಂದಂಗಚಿತ್ತವಿತ್ತಂ
ಬಂದ ಮುನೀಶ್ವರರನಱಿಪಿದಾತಂಗಾತಂ ॥ ೨೦ ॥

ವರಕಾಂತಾಕರಪದ್ಮಪತ್ರಧೃತ ರತ್ನಾಮತ್ರಪೂಜಾಪರೀ
ಕರನಾಘೂರ್ಣಿಗೀತವಾದ್ಯಪಟಹಪ್ರಧ್ವಾನನಾದಾತ್ಮಕಾಂ।
ಬರನಾಪದ್ಮರಥಂ ಬಳಿಕ್ಕೆ ತಳರ್ದಂ ಲಕ್ಷ್ಮೀಮತೀದೇವಿ ಮೇ
ಘರಥಂ ಮಂತ್ರಿಮಹತ್ತರರ್ ಮಕುಟಬದ್ಧರ್ ಕೂಡೆ ಬರ್ಪನ್ನೆಗಂ ॥ ೨೧ ॥

ಅಂತು ಬಂದು ತದ್ವನೋಪಾಂತದೊಳವತೀರ್ಣಪಟ್ಟವರ್ಧನ ಗಜೇಂದ್ರನಾಗಿ ಸಪರ್ಯಾಶ್ಚರ್ಯಪರ್ಯಾಯಧಾರಿಣೀವಾರನಾರೀಸಹಸ್ರಪರೀತನಾ ತಪೋವನವೀಥಿಯೊಳ್ ನಡೆತರ್ಪಾಗಳ್

ಪುರುಡಿಸಿ ಪೋರದೆ ಪೆಣ್ಗಾ
ತುರಿಸದೆ ಪಿಶಿತಕ್ಕೆ ಪರಿದು ಕೊಲ್ಲದೆ ಚೇತಃ।

ಪರಿಣಾಮನಸುಖದೆ ಸುೞಿವುವು
ಕೇಱಿಕೇಱಿಯೊಳೆ ಪುಲ್ಲೆ ಮರೆ ಸಾರಂಗಂ ॥ ೧೨ ॥

ಕರಿಣಿ ಕರಾಂಗುಳಿಯಿಂ ಕೇ
ಸರಿಯು ಜರತ್ಕೇಸರಂಗಳಂ ತೊಡೆದುದು ಕೇ ।
ಸರಿಣಿ ಪೊಲೆಯೂಡುತಿರ್ದುದು
ಕರೇಣುಪೋತಕ್ಕಮಾತ್ಮಸಂಜಾತಕ್ಕಂ ॥ ೧೩ ॥

ಪರಮತಪೋನಿಧಿಗಳ್ ಸಂ
ಚರಿಸುವ ಒಟ್ಟಿಯುನಗಲ್ದು ನಟ್ಟವಿಸಿಲ್ಕಾ ।
ಯ್ದುರಗಂ ಪುಡಿಯೊಳ್ ಪೊರಟು
ತ್ತಿರೆ ಸೋಗೆಯನೆತ್ತಿ ಸೋಗೆ ಪಿಡಿದುದು ನೆೞಲಂ ॥ ೧೪ ॥

ಎಳೆವಸಲೆಯ ಮೇಲೆ ಮರ
ಲ್ದೆಳವಿಸಿಲಂ ಕಾಯುತಿರ್ಪ ಫಣಿಗಳ ಫಣಮಂ ।
ಡಳಮಂ ಮುಲುಗಿ ಪೆಲ್ವಂ
ತಳೆದುವು ಸುಖಮಗ್ನನಯನಮುಕುಳಂ ನಕುಳಂ ॥ ೧೫ ॥

ನೋಡುವ ಕಣ್ಮಲರ್ಗಮೃತಮ
ನೂಡುವ ಮುನಿವದನಶಾಂತಿರಸಪರಿಣತೆಯಂ ।
ನೋಡಿ ಸುಖಜಲಧಿಯೊಳಗೋ
ಲಾಡಿದ ತೆಜನಾದುದಾ ನೃಪಾಲನ ಹೃದಯಂ ॥ ೧೬ ॥

ತದನಂತರಂ

ಮಂದರಮಂ ಬಲಗೊಳ್ವ ಪು
ರಂದರನವೊಲಷ್ಟಮಂಗಳಾನ್ವಿತಮುರ್ಹ ।
ನ್ಮಂದಿರಮನಿಳಾಪತಿ ಬಲ
ವಂದೊಳಗಂ ಪೊಕ್ಕು ನೆಗೞ[3] ಗೀತಾತೋದ್ಯಂ ॥ ೧೭ ॥

ಜಳದಿಂ ಚಂದನದಿಂ ತಂ
ಡುಳದಿಂ ಪೂಮಾಲೆಯಿಂದೆ ಚರುವಿಂ ದೀಪಾ ।
ವಳಿಯಿಂ ಧೂಪದಿನೊಪ್ಪುವ
ಫಳದಿಂ ತ್ರೈಲೋಕ್ಯನಾಥನಂ ಪೂಜಿಸಿದಂ ॥ ೧೮ ॥

ಅಂತು ನಿವೇದಿತಪೂಜಾವಿಧಾನನಾಗಿ ಸಾಷ್ಟಾಂಗಪ್ರಣಮನಪೂರ್ವದಿಂ ಅಭಿಷ್ಟುತಿಗೆಯ್ದು ಸಿದ್ಧಶೇಷಾಕ್ಷತಸುಗಂಧಿಗಂಧಜಲಪವಿತ್ರೀಭೂತಚೇತಸನಾಗಿ ಭೂತ ಜಿನಾಲಯದಿಂ ಪೊಱಮಟ್ಟು ಗುರುಚರಣಭಕ್ತಿಭಾವಿನೀನಿರ್ದಿಷ್ಟ ವಿಶಿಷ್ಟಮಾರ್ಗನಾ ಸನ್ಮಾರ್ಗಭೂಷಣಂ ಸ್ವಯಂಪ್ರಭಪ್ರಭು ಚಲವನಳಿನೋಪಾಂತಪ್ರದೇಶಮನೆಯ್ದೆವರ್ಪಾ ಗಳ್

ಕಾರುಣ್ಯದ ಕಣಿಯೆನಿಪ ತ
ಪೋರಮಣರ ನಟ್ಟನಡುವೆ ಭಟ್ಟಾರಕನಾ
ಚಾರದ ಶೀಲಗುಣಂಗಳ ।
ಚಾರಿತ್ರದ ನಡುವಣಾತ್ಮನಿರ್ಪಂತಿರ್ದಂ ॥ ೨೯ ॥

ಮಾನಸಮೆನಿಸಿದ ಶುಕ್ಲ
ಧ್ಯಾನಂ ಪ್ರತ್ಯಕ್ಷಮಾಗಿ ತಾನಲ್ಲಿ ಸುಖಾ ।
ಸೀನತೆವಡೆವೊಲಿರ್ದಂ
ಮೌನಸುಧಾಸೂತಿ ಮಣಿಶಿಲಾಪಟ್ಟಕದೊಳ್ ॥ ೩೦ ॥

ಅಂತು ಸಕಲಜನಮನೋನಯನಕೈರವಾಕಾರಮಂ ಸ್ವಯಂಪ್ರಕಾಶ ಪ್ರಭಾಪಟಲ ಮೆಸಳ್ ಮಸಗಿಸೆ ನಿಜಂ ಸ್ವಯಂಪ್ರಕಾಶಮನನಕ್ಷರ ಮಱಿಪುವಂತುಮಿರ್ಪ ಮಹಾನು ಭಾವನಂ ಸಂಘಟಿತಕರಪಲ್ಲವನುಮವನತಶಿರಸ್ಸರೋಜನುಮಾಕುಂಚಿತ ತನುಲತಾವಿಳಾಸ ನುಮಾಗುತ್ತುಮೆಯ್ದೆವಂದು

ಚರಣಾಭ್ಯರ್ಚನವಂದನಾನು ವಿಧಿಪೂರ್ವಂ ಮೊಳ್ಗಿ ದುರ್ವಿನೀತಳೀ
ಶ್ವರವಕ್ತ್ರೇಂದುವಿನೊಳ್ ನಮೋಸ್ತುಪದದಂತಜ್ಯೋತ್ಸ್ನೆ ಕೈಗಣ್ಮೆ ಶಾಂ ।
ತರಸಾಪೂರ್ಣಮುನೀಂದ್ರಸಾಂಪ್ರಸಮುದಾಯಶ್ಲೇಷಪೀಯೂಷಸಾ
ಗರದೊಳ್ ತಳ್ತುದು ಧರ್ಮವೃದ್ಧಿರವಕಲ್ಲೋಲಾವಳೀಘೂರ್ಣನಂ ॥ ೩೧ ॥

ಅಂತು ಪರಸಿದ ಪರಕೆಗಳನಾ ಭವ್ಯರತ್ನಾಕರಂ ದಿವ್ಯಾಶೇಷಪ್ರಕ್ಷಮನ್ವಿತಂ ಕೈ ಕೊಂಡು ಸಮುಚಿತಾಸನದೊಳಿರ್ದನಂತರಮಿಂತೆಂದಂ ।

ಇದಿರ್ವಂದುದು ನಿಃಶ್ರೇಯಸ
ಪದವೀಫಲಭವನಮೇರುನಂದನಮಾಸಿಂ ।
ದಿದಱಿಂದೊಳ್ ತಣ್ಣನೆ ತಣಿದಂ
ದದಿನಾದೆನಘಾರಿ ನಿನ್ನ ಬರೆ ಕಂಡುದಱಿಂ ॥ ೩೨ ॥

ಎಂಬ ನಿರವಧಿಪ್ರಿಯಃ ಪ್ರೀತಿವಚನಂ ಪುಳಕದೊಳ್ ನನೆತು ಹರ್ಷದೊಳಲರ್ದು ಆನಂದಾಶ್ರುಭರದೊಳ್ ತುಱುಕಿ ಬಱಿಯಂ ಧರ್ಮಶ್ರವಣಪ್ರಶಂಸೋತ್ಕಂಠನಾದ ನೃಪಕಂಠೀರವಂಗೆ ಆಪ್ತಾಗಮಪ್ರಮಾಣಮಪ್ಪ ಗೃಹಸ್ಥಯತಿಮಾರ್ಗಸೂಚನಾತಾತ್ಪರ್ಯಮನಾ ಸ್ವಯಂಪ್ರಭಮುನೀಶ್ವರರ್ ಕಿಱಿದುಮಜಱೞೆ ತಿಳಿವಂತೆ ಬೆಸಸಿ

ಧರ್ಮಂ ಧಾರ್ಮಿಕನಿಂದೆ ನಿಲ್ವುದದಱಿಂದಂ ಧಾರ್ಮಿಕಾಗ್ರೇಸರಂ
ಧರ್ಮಂ ನೀಂ ನೃಪ ಬೋಧದರ್ಶನಚರಿತ್ರಾನರ್ಘ್ಯರತ್ನಾಳಿಗಾ ।
ಧರ್ಮಂ ಮಾಡುವುದಂತರಂಗಬಹಿರಂಗ ಶ್ರೀಯನೆಂದಾ ಮುನೀಂ
ದ್ರರ್ಮಿಥ್ಯಾಮಲಮಂ ಕಱಲ್ಚಿ ಕಳೆದರ್ ವಾಕ್ಚಂದ್ರಿಕಾಪೂರದಿಂ ॥ ೩೩ ॥

ಅಂತಾ ನರೇಂದ್ರಂ ಮುನೀಂದ್ರಕಾರುಣ್ಯಜಲಧಾರಾಸಾರ ಧರ್ಮಾಮೃತಾಂಬುಪಾನಪ್ರೀತ ಚೇತಶ್ಚಾತಕನಾಗಿ

ತೀರ್ದುದು ಹೃದಯಕಲಂಕಂ
ಸಾರ್ದುದು ಪುಣ್ಯಾನುಬಂಧಮಕ್ಷಯಸುಖಮಂ ।
ಪೊರ್ದಲ್ಕೆ ಪಡೆದೆನೆನಗೆ ಪು
ನರ್ದರ್ಶನಮಕ್ಕೆ ನಾಥ ತಡೆಯದೆ ನಿಮ್ಮೊಳ್ ॥ ೩೪ ॥

ಎಂದು ಸಾಮುದಾಯಿಕೀಸಭೆಯಂ ಬಲಗೊಂಡು ಮುಕ್ತಿಕಚಪ್ರಜಮಂ ಕೊಳ್ವಂತೆ ಸಿದ್ಧಶೇಷೆಯುಂ ಕೈಕೊಂಡು ಮುನೀಂದ್ರವೃಂದಾರಕಪಾದಾರವಿಂದಮಂ ಬೀೞ್ಕೊಂಡು ತದಾಶ್ರಮೋದ್ಯಾನಮಂ ಪೊಱಮಟ್ಟು

ಏಱಿದ ವಾರಣೇಂದ್ರಮದ ದುರ್ದಿನದಿಂದಮೆ ಕೂಡೆ ಕರ್ದಮಂ
ದೋಱೆ ಸಿತಾತಪತ್ರಚಯದಿಂ ಗಗನಸ್ಥಲ ಕೂಡೆ ಚಂದ್ರಮಂ ।
ದೋಱೆ ವಿಲಾಸಿನೀನಯನಕೈರವದಿಂ ದೆಸೆ ಕೂಡೆ ಪೂಗೊಳಂ
ದೋಱೆ ವಿಲಾಸದೊಳ್ ಪೊರೆಪ್ರಮೋಱಿದುದಾಗಮನಂ ನೃಪೇಂದ್ರನಾ ॥ ೩೫ ॥

ಅಂತು ಬಂದರಮನೆಯಂ ಪೊಕ್ಕು ಸೈನ್ಯಾಮಾತ್ಯರಾಜನ್ಯಕಮಂ ಕಳಿಪಿ ಕರುಮಾಡದ ಮುಂದಣ ಭದ್ರಶಾಲಾವೇದಿಕೋಪಾಂತ್ಯಮತ್ತವಾರಣೋಪಾಂತದೊಳ್ ಪಸರಿಸಿದ ಮಸುರಿಗೆಯ ಮೇಲೆ ತಾಂಬೂಲಕರಂಕವಾಹಿನೀದತ್ತವೇದಿಕಾಗ್ರಸಂದಾನಿತ ಕೋಮಲಾಂಗುಳೀಕೋರಕಾಗ್ರಂ ಪರಿಮಿತವಿದಾರ್ಗಗಳ್

ಇನನುಱಿದಪರದಿಶಾಕಾ
ಮಿನಿಯೊಳ್ ಕೂಡಿಪೊಡೆ ನೋಡಲಾಱದೆ ಪೂರ್ವಾಂ ।

ಗನೆ ಮುಚ್ಚಿದಕ್ಷಿಪಕ್ಷ್ಮದ
ತನಿಗರ್ಪೆನಿಸಿದುದು ಕೊನರ್ವ ಕತ್ತಲೆ ನಭದೊಳ್ || ೩೬ ||

ಆ ಸಮಯದೊಳ್

ಇದು ವಿದ್ಯುಲ್ಲತೆಯಲ್ಲದಾದೊಡೆ ನಿರಭ್ರವ್ಯೋಮದಿಂದೆಂತುಂ ಮೂ
ಡಿದುದಿಂದೂದಯಮಲ್ಲದಾದೊಡೆ ನಭೋಮಧ್ಯಸ್ಥಲಕ್ಕೆಂತು ಬಂ |
ದುದು ಸೂರ್ಯಾತಪಮಲ್ಲದಾದೊಡಿನನಿಂದಂ ಪಿಂತೆ ತಾನೆಂತು ನಿಂ
ದುದೆನಲ್ಕಿಳ್ಕೆಗೆತಂದುಪೋಲ್ತುದು ವಿಯತ್ಸೀಮಂತಸಿಂದೂರಮಂ || ೩೭ ||

ಆಗಳದನುದ್ಗ್ರೀವೋತ್ತಾಲಮುಖ ಸರಸಿರುಹನುಮುನ್ನಮಿತಭ್ರೂಲತಾಬಂಧತರಂಗಿತನಿಟಿಲಪಟ್ಟನುಮುತ್ತರ್ಜ್ಜನೀದಂಡಪ್ರಸಾರಿತನೇತ್ರಾಂಚಲಪತಾಕನುಮಾಗಿ ನೋಡುತ್ತುಮಿರೆಯಿರೆ

ಚಿರಮುಲ್ಕೆನ್ನಯ ತೇಜಮುಂ ಕಡೆಯೊಳೀಪಾಂಗೆಂಬುದಂ ಸಾಱುವಂ
ತಿರೆ ದುರ್ಬೋಧಜನಾಂತರಂಗತಿಮಿರಕ್ಕುದ್ದ್ಯೋತಿಯಂ ತೋಱುವಂ |
ತಿರೆ ಸಂಸಾರಸುಖಾನುಭೋಗಶತ ಪೂರೀತಾರ್ಣಪುಂಜಕ್ಕೆ ದ
ಳ್ಳುರಿ ಬಿಟ್ಟಂತಿರೆ ಬಿಟ್ಟು ತಂದುದೆರ್ದೆಗುಲ್ಕಾಪಾತಮಾತಂಕಮಂ || ೩೮ ||

ಅದಂ ಕಂಡು ಶರೀರಾದಿ ಸಮಸ್ತವಸ್ತುಗಳೊಳಸ್ಥಿರತ್ವಮನೆ ಮನದೆಗೊಂಡು ನಿರ್ವೇಗಪರನಾಗಿ ತನ್ನೊಳಿಂತೆಂದಂ

ಎನ್ನದೊಡಲೆನ್ನದೊಡಮೆಯಿ
ದೆನ್ನದು ಸಂಪತ್ತಿಯೆಂದು ಮಱುಗದೆ ಪೆಱತೆಂ |
ದೆನ್ನದೊಡಲೆನ್ನದೊಡಮೆಯಿ
ದೆನ್ನದು ಸಂಪತ್ತಿಯೆಂದೊಡಾತನೆ ಚದುರಂ || ೩೯ ||

ಅದಲ್ಲದೆಯುಂ ಜವನ ಜತ್ತಕಱುಮಂ ಪೇಱತ್ತೊಡೆ

ತೃಣಮುಂ ತೆನೆವೋದ ಬೞ
ಕ್ಕೊಣಗುವುದದಱಿಂದೆ ನರರ ಬಾೞ್ ಲಘುಕಾಲಂ |
ಹಣಿದದ ಪೊಯಿಲ್ಗೆ ಮೊದಲ್ಕಡು
ಕಣೆಯೆನ್ನದಿದೆಳವೆ ಜವ್ವನಂ ಮುಪ್ಪೆನ್ನಾ || ೪೦ ||

ನೆರಪಿದ ಪುಣ್ಯಸಂಚಯಮನಗಣ್ಯತರಂ ನೆಲೆ ನಿೞ್ಕೆ ಬಾರದಂ
ಬರತಲಮಧ್ಯವಜ್ರಮಯಮಂಡಪನೊಪ್ಪುವ ಶೈಶವಂ |
ಬರೆ ರುಜೆ ಕಂಟಕಂ ನಾಡಿಕಲಣ್ಣಗ ದಿವ್ಯಶರೀರಮಂ ನರಂ
ಕರಗಿ ಕಟಿಲ್ಪಿಪಂ ದಿವದಿನೆಂದೊಡೆ ಮರ್ತ್ಯರ ಬಾಳ್ಕೆ ನಿಷ್ಟಿಯೋ || ೪೧ ||

ಪಾತಾಳಸ್ವಕದೊಳ್ ವಿಲೋಚನಭವಾದ್ಯರ್ ಭಾವನಾಜ್ಯೋತಿಷ
ಜ್ಯೋತಿರ್ಲೋಕದೊಳರ್ಕಮುಖ್ಯರಮರರ್ ಶಕ್ರಾದಿಗಳ್ ಕಲ್ಪ ಸಂ |
ಭೂತರ್ ಕೋಟ್ಟನೆ ಬಟ್ಟಿನರ್ ಜನನ ಜಾಲಕ್ಕೇರಡಿಂ ಮರ್ತ್ಯನೇ
ಮಾತಲ್ಲಾರನನಲ್ಪರಾಗನನಲ್ಪರಾಯ್ಮನೀನಾದಪಂ || ೪೨ ||

ಇದು ದುರ್ಬೋಧಮೆನಿಪ್ಪುದಕ್ಕೆ ಕತೆ ಕಬ್ಬಂ ಹೇತು ದೃಷ್ಟಾಂತಮೆಂ
ಬುದನೇಂ ತೋಱದೆ ಕಾಣದೇ ತಿಳಿಯದೇ ಸಂಸಾರದೊಳ್ ನೀರ ಬು |
ದ್ಬುದಮೇಂ ಜನ್ಮನಮೇಂ ತರಂಗಲತೆಯೋಂ ಸಂಪತ್ತಿಯೋಂ ವಾರಿವಾ
ಹದ ಸೊಂಪೇನಿದನಿನ್ನೆಮೆಂದು ಕೇಳದೀತಕ್ಯೋದಲಿಂ ಪಾದಲಿಂ || ೪೩ ||

ಆದಲ್ಲದೆಯುಂ

ಮೊದಲೊಳ್ ಪುಟ್ಟಿದ ನೆಯ್ದ ನಾಕಿನ ಸಮಾನಂ ಬಾಲ್ದೊಳ್ ಬಟ್ಟ ಬಾ
ಲದಿಷ್ಟಂ ನವಯೌವನಂ ಮಗಮುಖಂ ಸರ್ವಪ್ರಸಾದಕ್ಕೆ ತಾಂ |
ಸದನಂ ಬಾಡಿಯು ಪೋಟ್ಟ ಬೀದಿಯು ನೆರೆದರ್ ಮುಪ್ಪಿನ್ನಗಂ ಬಟ್ಟಿನಂ
ಬದೆ ದಲ್ ಚಕ್ರಮನಿನ್ನನಾಳಿದ ಬೋಧಂ ಕೀರ್ದುಂಗದಿಂ ಸಾಲದೇ || ೪೪ ||

ನೆಟಿಲಂ ನೋಡಿದ ರೂಪಿನ
ಪೊಟಿಪದು ಕನ್ನಡಿಯನೊರ್ವ ನೋಡಿದೊಡಿರದೊ |
ಡ್ಡಟಿವುದು ನರೆತೆರೆಯಿಂ ಮು
ನ್ನುಟಿವರ್ ನೋಡುವೆಡಂತೊಪೆಂಡಿರ ಮೊಗಮಂ || ೪೫ ||

ವೀರರಸಂ ಮೊನೆಯೊಳ್ ಶೃಂ
ಗಾರರಸಂ ಮನೆಯೊಳಳವಿಗಟ್ಟಿರೆ ಜನಮಂ |
ತಾರದೊಡೆ ಪೊರಲ್ಮದು ಯಶೋ
ಭಾರದೆ ತಲೆ ಬಿರಿಯೆ ಬಿಗಿದ ಕಟ್ಟಂ ಪಟ್ಟಂ || ೪೬ ||

ಅಱಿಪಿನ ಮೋಹದಿಂ ತೊಡರ್ದು ಬಟ್ಟಿಸೆನೆಂದೊಡೆ ರಾಜ್ಯಲಕ್ಷ್ಮ್ಯನು
ನ್ನಱಿಯದದೇಕೆನಲ್ ನೆಲಸದಾಯು ಕರಂ ಚಲವೀಚಿಯಂತೆಯೇ ।
ಕುೞಿಗಪನೆಂಬ ಜೋಡೆಯನೆ ಮುನ್ನಱಿದಿರ್ಪ ವಿವೇಕಿಯಂತೆ ತಾ
ನುೞಿದೊಡಬಿಲ್ ಬೞಿಲ್ವುದು ಸುಖಂ ತನಗೊಪ್ಪುವುದಾತ್ಮಗೌರವಂ ॥ ೪೭ ॥

ಎಂದು ಪರಿಭಾವಿಸಿ ಸಕಲಸಾಮ್ರಾಜ್ಯಸುಖಾನುಭೋಗಪರಾಙ್ಮುಖನುಂ ಪ್ರವ್ರಜ್ಯರಾಜ್ಯಲಕ್ಷ್ಮೀಸಂಭೋಗಸುಖೋನ್ಮುಖನುಂ ಸಾಂಧ್ಯಸಮಯಸಮುಚಿತನಿತ್ಯನಿಯಮವ್ಯಾಪಾರನುಂ ಅರ್ಹತ್ಪರಮೇಶ್ವರಮುಖಾರವಿಂದಾವಲೋಕನನುಂ ದಿವ್ಯಗಂಧೋದಕಸೇಕಸಂತರ್ಪಿತಾಂತರಂಗನುಮಾಗಿ

ಕಡೆವೊೞ್ತಾಗೆ ಪಸಪ್ರವಾಸಗೃಹಶಯ್ಯೋದ್ದೇಶದೊಳ್ ಪಾಂಥನೊಂ
ದೆಡೆಗೆಯ್ದುಂತಿರುಳಿರ್ದು ಸಜ್ಜೆವನೆಯೊಳ್ ಶುದ್ಧಾಂತಕಾಂತಾಜನ ।
ಕ್ಕೆಡೆಯಂ ಮಾಡವವೊಲ್ ಕಡಂಗಿ ಬರೆ ನಿದ್ರಾಕಾಂತೆ ಕಣ್ಗೆಯ್ದು ಪೊ
ೞ್ತಿಡೆ ಭೂಕಾಂತನುಪಾತ್ತನಿತ್ಯನಿಯಮವ್ಯಾಪಾರಪಾರಂಗನುಂ ॥ ೪೮ ॥

ಸಭಾಭವನಮಣಿವಿಷ್ಟರಾಧಿಷ್ಠಿತನಿಷ್ಟಬಂಧುಸನಾಭಿಜನಮಂತ್ರಿಮಹತ್ತರಮಕುಟಬದ್ಧಪ್ರಸಿದ್ಧಪರಿಜನಮುಂ ಬರಿಸಿ ನಿಜಮನೋಗತೋದ್ಯೋಗಮನವರ್ಗೊಡಂಬಡೆ ತಿಳಿಪಿ ಬೞಿಯಮಾರಾಜಾಧಿರಾಜಂ ಯುವರಾಜನಂ

ಬರ್ಗೇೞಿಲೊಡಂ ವಿನಯಮೆ
ಪರಿಜಂ ಪಡೆದಂತು ಬಂದು ತನಯಂ ಭೂಭೃ ।
ಚ್ಚರಣಾಂಬುಜನಖತಾರಾ
ಪರಿರಂಭಮನಾತ್ಮನಿಟಿಲವಿಧುಗೆಸಗಿಸಿದಂ ॥ ೪೯ ॥

ಅಂತು ವಿನಯವಿನಮಿತೋತ್ತಮಾಂಗನುಮಾಗಿ ಪಾದಪೀಠೋಪಾಂತ ಮಣಿಕುಟ್ಟಿಮದೊಳ್ ಪಾರ್ಶ್ವರಾಜವಲ್ಲಭಪ್ರಸ್ತರಿತಪ್ರಚ್ಛದಾಂಚಲಮನಗರಿ ನೂಂಕಿ ಕುಳ್ಳಿರ್ದನಂ

ಪರಿದ ಕುರುಳ್ಗಳೊಳ್ ಕಳೆದ ಕತ್ತುರಿಗಾಡುವ ಚಂಚರೀಕನೋ
ಸರಿಸೆ ನಖಾಗ್ರದಿಂ ಸಮಱಿ ತಿರ್ದಿ ನವೋತ್ಪಲಕರ್ಣಪೂರಮಂ ।
ಜರಿ ನಮಿತಾಸ್ಯದೊಳ್ ಜಗುೞ್ದ ಮೆಲ್ಲನಮರ್ಚಿ ನಿಜಾಂಕಪಾರ್ಶ್ವದೊಳ್
ಬರೆತೆಗೆದಪ್ಪಿ ಕುಳ್ಳಿರಿಸಿ ದೇವನಿವಂ ನುಡಿದಂ ಕುಮಾರನೊಳ್ ॥ ೫೦ ॥

ಕ್ಷಿತಿಸಂವಾಹಿ ಸಹಾಯಿ ಜನ್ಮಸುಖದುಃಖಾಪಾತಸಂವಾದಿಸ
ದ್ಗತಿಸಂದಾಯಕನೆಂದು ತಂದೆ ಪಡೆಸಂ ಸತ್ಪುತ್ರನಂ ಸಾರಸಂ ।
ಸ್ಮೃತಿಸಮ್ಮೋಹನಪಾತ್ರನಂ ಸುತನೆ ನಿನ್ನಂ ಪೆತ್ತುಮಾಂ ಕರ್ಮಸಂ
ತತಿಯಂ ತೊಳ್ದೊಡಿಂದು ಲೋಕಪಿತೃಸಾಮಾನ್ಯತ್ವಮಂ ತಾಳ್ದಿನೇ ॥ ೫೧ ॥

ಅದಱಿಂದಂ ಪ್ರವ್ರಜ್ಯಾ
ಸುದತಿಗೆ ಕೈಗೊಟ್ಟು ತೋಳ್ಗೆ ಭೂಮಿಯ ಭರಮ ।
ಪ್ಪುದಸಹ್ಯಮನಾಗಿಸದ
ಪ್ಪುದಿದಂ ನೀಂ ತಳೆಮ ಮಗನೆ ಸಲಿಸೆನ್ನೊಲವಂ ॥ ೫೨ ॥

ಎಂದು ಬೆಸಸಿದ ಪರಮಲಕ್ಷ್ಮೀಸ್ಪೃಹನನಿಸ್ಪೃಹೋದೀರ್ಣನಮಂ ಕೇಳ್ದು ಘನರಥಂ ಘನರವಮಂ ಕೇಳ್ದ ಕಳಹಂಸಕಳಭದಂತೆ ತಳವೆಳಗಾಗಿ

ಕೀವಿದ ಕಣ್ಣನೀರ್ ಮಿಡಿದು ಪಾಯ್ವಿನರ್ದ ಓಗ್ಗಿದ ಗದ್ಗದಿಕೆ ಸಂ
ಭಾವನೆಯಂ ಕಲಿಸ್ಪಿ ದೆಸೆಗೆಟ್ಟುಱಿಸಂ ಮಱಿದೊಂದು ಮಾತುಮಂ ।
ದೇವನೊಳಿಂತುಟಿನ್ನದೆ ಕುಮಾರಕನಿರ್ದನದಕ್ಕೆ ಪಂದೆಯುಂ
ಪಾವಡರ್ದಂತೆ ಪೊಯ್ಪಡೆದನಂತೆ ಮಱಿಂಗಿದನಂತೆ ಚಿಂತೆಯೊಳ್ ॥ ೫೩ ॥

ಅಂತಿರ್ದ ಮಗನ ಮೊಗಮಂ ನೋಡಿ

ಭ್ರಾಂತರವೋಲ್ ಮಱುಗುವರೇ
ಚಿಂತಿಸುವರೆ ಪರಮಸೌಖ್ಯಲಾಭೋದಯದೊಳ್ ।
ಸಂತಸಮಂ ತಳೆಯದೆ ನೀಂ
ನಿಂತಟಿಲಲ್ ಕಲ್ತೆ ಮಗನೆ ಪರಮಾಗಮಮಂ ॥ ೫೪ ॥

ಎಂದು ಶಾಂತೋಪಲಾಲನೆಗಳಿಂ ಸಂತರ್ಜಿಸಲೊಡಮೆಂತಾನುಮವಹಿತಾಂತರಂಗನುಮಾಗಿ ಕುಮಾರನಿಂತೆಂದಂ

ಗತಿಗೆ ನಿಮಿತ್ತಂ ಪಡೆವರ್
ಸುತರಂ ಗಡ ಪೊಱಗೆ ನೆಱಗೆ ನಿಲ್ಲನವಶ್ಯಂ ।
ಪಿತುರಾಚಾರಂ ದೇವರ
ಗತಿಯಲ್ತೆನಗಿಲ್ಲ ಬೇಱೆ ಗತಿಯುಂ ಮತಿಯುಂ ॥ ೫೫ ॥

ಎಂಬುದುಂ ನೃಪೇಂದ್ರನಿಂತೆಂದಂ

ಪೊತ್ತ ಪೊಱೆ ತಿಣ್ಣಮಾದೊಡೆ
ಮತ್ತೆ ಕೆಲರ್ ಕಂಡು ಕರುಣಿಪರ್ ಪಿತೃಭವದೊಳ್ ।
ಪೆತ್ತ ಮಗಂ ಸಮ್ಮನಿಸಿಕೊ
ಳುತ್ತಿರೆ ಪೊಸತಲ್ತೆ ತಂದೆಮಕ್ಕಳ ಮೋಹಂ ॥ ೫೬ ॥

ಎಂಬುದುಂ ಮೇಘರಥಕುಮಾರಂ ಪದ್ಮರಥಮಹಾರಾಜಗಿಂತೆಂದಂ

ಈ ನೆಲದ ಬಿಣ್ಪು ದೇವರ
ಪೀನಭುಜಾಸಹ್ಯಮೆಂದು ಜೆಸಸುವೊಡೆನಗಿಂ ।
ತಾನಾಗನಾಂತ ಪೊಱೆಯುಂ
ಭೂನಾಗಂ ಪೊತ್ತು ದೇವ ನಿತ್ತರಿಸುವುದೇ ॥ ೫೭ ॥

ಎಂಬುದುಮರಸನಿಂತೆಂದಂ

ಕವಚಹರಂಗೆ ನೀತಿ ಮಕರಂದಮುಖಾಂಬುರುಹಂಗೆ ಮದ್ವಚ
ಶ್ರ್ರವಣವತಂಸಕಂಗೆ ನಿನಗಂ ಧರೆ ತಿಣ್ಣಮೆ ಕಂದ ಚಾಪಸಂ ।
ಭವಕಿರಣಕಂಟಕಾಳಿಮಭುಜಾಭುಜಗಂ ಮಣಿಮಾಡ ತಾನೆ ತಾ
ಳ್ದುವುದೆಮಗುತ್ತರಂಗುಡದೊಡಂಬಡು ಸಾಲ್ವುದು ನೀಂ ಮದಿಷ್ಟಮಂ ॥ ೫೮ ॥

ಎಂದು ಮರುಮಾತಿಂಗೆಡೆಗುಡದೆ ನುಡಿದೊಡಂಬಡಿಸಿ ಬಳಿಕ್ಕೆ

ಪುರುನಾಥಂ ಭರತೇಶ್ವರಂಗೆ ಪದೆಪಿಂದಂ ಪಟ್ಟಮಂ ಕಟ್ಟುವಂ
ತಿರೆ ಪಟ್ಟದ್ವಿಪವಾಜಿರಥರತ್ನೈಕಾತಪತ್ರಾಂಕ ಚಾ ।
ಮರಸಿಂಹಾಸನಶಂಖಖಟ್ಗಫಲಕಾದಿಕ್ಷಾತ್ರಪರ್ಯಾಯ ತೂ
ರ್ಯರವಾಘೂರ್ಣಿತಕಾಯಮಾನಮಣಿವೇದೀಮಂಡಪಸ್ಥಾನದೊಳ್ ॥ ೫೯ ॥

ನದನದ್ಯಚ್ಛನವೋದಭಾರಪರಿಪೂಜ್ಯೋತ್ಕುಂಭದಿಂ ತಾನೆ ಮಾ
ಡಿದ ರಾಜ್ಯಾಭಿಷವಂ ಸಿಜೋದ್ಯಮಲತಾಂಭಸ್ಸೇಕದಂತಾಗೆ ಕ ।
ಟ್ಟಿದನಾಮ್ರಾಯಲತಾಂತಮಾಲಿಕೆಯನಾಚಾರಾಂಬುವಂ ಸೇತುಗ
ಟ್ಟಿದನಾ ಮೇಘರಥಂಗೆ ಪದ್ಮರಥರಾಜಂ ಪಟ್ಟಮಂ ಕಟ್ಟಿದಂ ॥ ೬೦ ॥

ಪರಿವಾರಕ್ಕಸಿರ್ದಂ ಪ್ರಧಾನಪುರುಷರ್ಗಪ್ಪೈಸಿದಂ ಮಂತ್ರಿಮು
ಖ್ಯರ ಕೆಯ್ಯಂ ಪಿಡಿದಿತ್ತನಾತ್ಮಸುತನಂ ತದ್ವರ್ಗರಂ ರಕ್ಷಿಪಂ ।

ತಿರೆ ಸನ್ಮಾನಿಸುವಂತಿರಿಂದು ನುಡಿಗೊಳ್ವಂತಂತಿರಂದೋಳಿಯಿಂ
ದಿರಿದಂ ನಂದನನಂ ಬೞಿಕ್ಕೆ ತಳರ್ದಂ ಭೂಪಾಲಕಂಠೀರವಂ ॥ ೬೧ ॥

ಆ ಸಮಯದಲ್ಲಿ

ಮನದೊಳಗಂಧಕಾರದ ಕಡಲ್ ಕವಿತರ್ಪುದು ನಿನ್ನ ವಕ್ತ್ರಚಂ
ದ್ರನ ಬೆಳಗೊಮ್ಮೆ ತೋಱಿದೊಡೆ ವಲ್ಲಭ ನೀಂ ಬಿಸುಟೆಂತು ಪೋಗೆ ಜೀ।
ವನವೆಮಗೆಂತು ನಾಥ ಬರವೇೞ್ಪಿನಲಾಗದೆ ದೇವ ಸತ್ರಪೋ
ವನತರುಷಂಡಮೆಮ್ಮನೊಳಕೊಳ್ಳದೆ ಪೇೞ್ ಭುವನೈಕಭೂಷಣಾ ॥ ೬೨ ॥

ಲಲಿತವಿಲಾಸಲಾಸ್ಯರಸಮಿನ್ನೆಮಗೇಕೆಲೆ ದೇವ ವಲ್ಲಕೀ
ಕಳರವದಿಂಪನಾರ್ಪೆಸರಿಡಲ್ಕೆಱೆವರ್ ನೃಪನೀೞ ಗೀತಮಂ।
ಜುಳನಿನದಕ್ಕೆ ಮೆಚ್ಚಲಱಿದು ಮೆಚ್ಚಿಪರಾರಧಿನಾಥ ನೀಂ ತಪ
ಕ್ಕೆಳಸಿ ಒೞಿಕ್ಕೆ ಪೋದ ಬೞಿಕಾವೆಮಗೇಕೆ ನೃಪಾಲಮನ್ಯಥಾ ॥ ೬೩ ॥

ಎಂದು ಪಲುಂಬಿ ಪಂಬಲಿಸುವ ಪೆಂಡವಾಸದ ತಂಡಮಂ ಕಂಡು

ವಸುಧಾಧೀಶನ ತೇಜನಲ್ಲವೆ ಕುಮಾರಂ ನಿಮ್ಮನಾರಯ್ದು ರ
ಕ್ಷಿಸಲೀ ಮಂಗಲಯಾತ್ರೆಯೊಳ್ ದ್ರುತವಿಡಲ್ ಬಾಯ್ವಿಟ್ಟೞಲ್ವಾಗ ಸೈ।
ರಿಸಿಮಿಂ ಸ್ವಾಮಿಯ ಚಿತ್ತಮಂ ಕದಡದತ್ತಲ್ಸಾರಿಮೆಂದೊತ್ತಿ ಬ
ಗ್ಗಿಸಿದರ್ ಮಂತ್ರಿಮಹತ್ತರರ್ ನೃಪವಧೂವಾರಾಂಗನಾ ವರ್ಗಮಂ ॥ ೬೪ ॥

ತದನಂತರಂ

ಕರಿರಿಪುಪೀಠವೆಂಬ ಪೆಸರಾರೆಣೆಯುಂ ಪಲಕೊತ್ತಿ ಬಂಧುಮಿ
ತ್ರರುಗಳ ಗರ್ಜನೋಕ್ತಿಗೊಳಸಾರವೆ ಮುಂಗಡೆಯೊಳ್ ಪೊಱಟ್ಟ ಪೆಂ।
ಡಿರ ಕುರುಳೋಳಿಯೆಂಬ ತೊಡರೊಳ್ ತಡವಾಗದೆ ಸಂತತಂ ಮನಾಂ
ತರಮನೆ ಗೊತ್ತುಮಾಡಿ ಭರದಿಂ ತಳರ್ದತ್ತಧಿರಾಜಕುಂಜರಂ ॥ ೬೫ ॥

ಜಗತ್ತ್ರಿತಯಲಕ್ಷ್ಮೀವಲ್ಲಭಂ ಪುಟ್ಟಿದಂ

ಎರಡೊಡಲೊಂದೆ ಜೀವಮೆನೆ ಸಂಸೃತಿಸೌಖ್ಯಮನೊಡಿದ್ದೈ ದಿಟಂ
ನೆರೆದರ ನೀತಿಯಲ್ತೆ ಸುರಲೋಕಸುಖಂ ಬೞಿಕಿಂತಿಳೇಶ ಪಿಂ ।
ತಿರಿಸುವೆ ಮೆಯ್ಯ ಪಿಂತೆ ನೆೞಲಿರ್ಪುದೆ ಬಾರದೆ ಮಾಣೆವೆಂದು ಪೂ
ಣ್ದರಸಿಯರೇೞಿವರ್ ನೃಪನ ಕೂಡೆ ಪಲರ್ ಪಿರಿಯಂದಣಂಗಳಂ ॥ ೧ ॥

ಮತ್ತಂ

ಶಿಬಿಕಾಂದೋಳವರೂಥದಂತಿಹಯಮಂ ನೇಪಥ್ಯರತ್ನಾವಳೀ
ಶಬಲಚ್ಛಾಯೆ ಪುಸುಂಕೆ ಚಾಮರಸಿಚ್ಛತ್ರಾಳಿರೋಧೋಲತಾ ।
ಸ್ತಬಕಸ್ತೋಮಮನುಂಟುಮಾಡೆ ಸಹದೀಕ್ಷೋದ್ಯುಕ್ತರಯ್ನೂರ್ವರೇ
ೞ್ ಬರುತ್ತಿರ್ದರಿಳಾಧಿಪರ್ ಮಕುಟಬದ್ಧರ್ ಭೂಪನಿರ್ವಕ್ಕದೊಳ್ ॥ ೨ ॥

ಅವರ ವಿಲಾಸಿನೀಜನದ ರಾಣಿಯವಾಸದ ಪುತ್ರಮಿತ್ರಬಾಂ
ಧವರ ವಿಯೋಗಸಂಕಟಮನೇವೆಸಗೊಂಡಪೆನೆಂದು ನಿಂದು ಮ ।
ತ್ತವರ ಪರಪ್ರಬೋಧಿಸುವ ಕೈಲೆಡೆಮಾಡುವ ಕಣ್ಣನೀರನೊ
ತ್ತುವ ನಿಲವೇೞ್ದೊಡಂಬಡಿಸುವಚ್ಚಿಗಮಚ್ಚರಿಯಾದುದುರ್ವಿಸಲ್ ॥ ೩ ॥

ಬೞಿಕ್ಕಮಾರಾಜರಾಜಂ ರಾಜಭವನಮಂ ಪೊಱಮಟ್ಟು ರಾಜಮಾರ್ಗದಿಂ ಬಂದು ಪುರಬಹಿರ್ಭಾಗದ ನಂದನವನೋಪಾಂತದೊಳ್ ನಿಂದವರೂಥಾಂದೋಳನಾಗಿ ಸಕಲ ರಾಜಲೋಕಮಂ ಬೀೞ್ಕೊಳಿಸಿ ಮೇಘರಥಕುಮಾರನನೆಂತಾನುಂ ಸಂತಮಿಟ್ಟಿರಿಸಿ ಪಾದಮಾರ್ಗದಿಂ ಸ್ವಯಂಪ್ರಭಪ್ರಭುವಿನ ಆಶ್ರಮಾರಣ್ಯಪುಣ್ಯಾರಣ್ಯಮಂ ಪುಗುತಂದು ತನ್ಮುನೀಂದ್ರವೃಂದಾರಕನ ಸಮುದಾಯಸಹಸ್ರಮಂ ತ್ರಿಃಪ್ರದಕ್ಷಿಣಂಗೆಯ್ದು

ಗುರುಪದಸರಸಿರುಹದೊಳಾ
ನರನಾಥನ ವಿನತಮಕುಟಮಣಿಘೃಣಿಗಳನೊ ।
ಯ್ಯರಮಾದುದಾಯ್ತು ಕಟ್ಟಿದ
ಕರಂಬವಾಸಿಗದ ಕುಸುಮವಿಸರದ ಪಸರಂ ॥ ೪ ॥

ಅನಂತರಂ ಸಾಧುಸಭಾಸದಪರಿಷದ್ವಲಯದೊಳ್ ಮುನಿನಾಯಕ ಪ್ರಾಸಾದಿತಾತ್ಮನಾಗಿ

ಒದವಿರೆ ಶಾಂತರಸಂ ಚಿ
ತ್ರಪದರುಚಿ ಜವನಿಕೆವೊಲೆಸೆಯೆ ನಟನೆಯ ನೇಪ ।
ಥ್ಯದ ದೇವನೃಪತಿ ಬಹುರೂ
ಪದ ಚೋಹಮನಿೞಿಪಿದಂ ಭವಪ್ರಕರಣದೊಳ್ ॥ ೫ ॥

ನಿಲೆ ಮುಖಪದ್ಮದೊಳ್ ಪರಮಪಂಚಪದಂ ಕಮಲಾಸನಕ್ಕೆ ಪ್ಪೆ
ಸಲೆ ಬಹಿರಂತರಂಗದ ಪರಿಗ್ರಹಶಾಖೆಯಿವೆಂದು ಕುಂತಳಾ ।
ವಲಿಯನಿೞಿಪ್ಪಿದಂ ವಿಮಲಶುದ್ಧತಪಃಫಲಸೌಖ್ಯಯೋಗದೊಳ್
ತಲೆನವಿರಲ್ತೆ ಮುಟ್ಟಪಡಪೆಂಬವೊಲೂರ್ಜಿತಪುಣ್ಯಸಂಚಯಮಂ ॥ ೬ ॥

ಅಂತು ಪರಮಗುರುಪಾದಪದ್ಮೋಪಾಂತದೊಳ್ ಸಹದೀಕ್ಷಾಲಕ್ಷಿತ ಪಂಚಶತ ಪ್ರಸಿದ್ಧಮಕುಟಬದ್ಧನುಂ ನಿರ್ವೃತಿ ನಿಯಮಿತಕತಿಪಯಾಪರರೋಧಕಾಂತಾಕದಂಬನುಮಾಗಿ

ಅಳ್ಕದೆ ಚಿತ್ತದೊಳ್ ಜಿದಱಿ ಬೆಳ್ಕಿಜದುಗ್ರತಪೋನುತಾಪದಿಂ
ಬಳ್ಕದೆ ನೋಂಪಿಯಿಂ ಗೊಲಗವಂದ ಶರೀರಗುಣಾನುರೋಧದೊಳ್ ।
ತಳ್ಕಱಿದಿರ್ದು ಜೀವಶರಮಂ ಬಿಡೆ ಧಾರ್ಮಿಕ ಚಕ್ರವರ್ತಿ ತಾಂ
ಪಿಳ್ಕಿ ಬಳಿಲ್ದು ಮೇಗೊಗೆದು ತಾಗಿದುದಚ್ಯುತಕಲ್ಪಲಕ್ಷ್ಯಮಂ ॥ ೭ ॥

ಅಣಿಮಾದಿಮಣಿಗಣಂಗಳ
ಕಣಿ ಸಾಗರಸಮ್ಮಿತಾಯುವಿಂಗಾಗರಮೊಂ ।
ದಣಕದ ರಾಗದ ಭೋಗದ
ತಣಿವಿಂದ್ರತ್ವದ ಮಹತ್ವಮಚ್ಯುತಕಲ್ಪಂ ॥ ೮ ॥

ಮುತ್ತಿನ ಕಂಭದ ವಜ್ರದ
ಭಿತ್ತಿಯ ಶಶಿಕಾಂತದಭ್ರಶಿಲೆಯ ನೆಲಗಟ್ಟಿನ ಪು ।
ಷ್ಪೋತ್ತರವಿಮಾನದೊಳಗಿ
ಪ್ಪತ್ತೆರಡಂಬುಧಿಮಿತಾಯು ಸುರವರನೊಗೆದಂ ॥ ೯ ॥

ನವರತ್ನಾಭರಣಪ್ರಭಾಪಟಳದೊಳ್ನೈರ್ಮಲ್ಯತೇಜಸ್ತನು
ಚ್ಛವಿ ಸಂಪೂರ್ಣಸುಧಾಂಶುವಂ ಸುರಧನುಶ್ರೀಯಪ್ಪಿದಂತಾಗೆ ತ ।
ನ್ನ ವಿಮಾನಂ ಶರದಭ್ರವಿಭ್ರಮಮನಾದಂ ಬೀೞೆ ಕೈಕೊಂಡನಾ
ಭವನಾಗ್ರೇಸರನಚ್ಯುತೇಂದ್ರಪದವೀ ಸಾಕಲ್ಯಮಾಂಗಲ್ಯಮಂ ॥ ೧೦ ॥

ಅಣುತಮನಾಗಿ ಮೇರುಸಮನಾಗಿ ಧರಾಗುರುವಾಗಿ ನೋಟ್ಪಿನಂ
ತೃಣಸಮನಾಗಿ ಲೋಕಸದೃಶಾಯುತನಾಗಿ ಸರಾಗನಾಗಿ ವಾ।
ರಣಪತಿಯಾಗಿ ಮೋಹನತರಾಕೃತಿಯಾಗಿ ಜಿನಾರ್ಚನಕ್ಕೆ ಪೆ
ರ್ಕ್ಕಣಮನೊಡರ್ಚಿ ತೋರ್ಪ ನಣಿಮಾದಿಗುಣಂಗಳನಚ್ಯುತಾಮರಂ ॥ ೧೧ ॥

ಅನಿತೊಂದಚ್ಚರಿಯಚ್ಯುತೇಂದ್ರನೆ ಭವತ್ಸರ್ವಾಂಗಲಕ್ಷ್ಮೀಪ್ರಣೂ
ತನಗರ್ಭಕ್ಕೊಗೆದಪ್ಪನೆಂದು ಮುನಿನಾಥರ್ ಪೇಳ್ದಿರಾಕಲ್ಪಜೇಂ।
ದ್ರನನಂತಂ ಪರಮಂ ಚತುರ್ದಶಜಿನಂ ತತ್ಪುತ್ರನೆಂದಿಷ್ಟಶ
ರ್ಮನದೇಂ ಪೇಳ್ದನೊ ಸಿಂಹಸೇನನರನಾಥಂಗಂ ಜಯಶ್ಯಾಮೆಗಂ ॥ ೧೨ ॥

ಅಂತು ಕೇಳ್ದು ಸಂತೋಷಭಾಷಾಪೀಯೂಷಪೂರದೊಳ್ ಸಭಾಜನ ಪರಿಜನ ಬಂಧುಜನಮನಿತುಂ ತಂಟುಂಕಿ ತೇಂಕಾಡುವಿನಮರಸನುಮರಸಿಯುಂ ಪರಿತೋಷದ ಪರಮಕೋಟಿಯನೆಯ್ದಿ[ರಲ್], ಇಷ್ಟಶರ್ಮನವನೀವಲ್ಲಭಂಗಿಂತೆಂದಂ

ಕೃತಕೃತ್ಯರಾದಿರಾಂ ಮುಂ
ಸುತನಂ ತ್ರೈಲೋಕ್ಯನಾಥನಂ ಪಡೆವೀ ದಂ।
ಪತಿಯಂ ನಿಮ್ಮಂ ನೋಡಿದ
ಕತದಿಂದಿನ್ನೆಮಗೆ ದೇವ ಬೀಳ್ಕೊಡವೇಳ್ಕುಂ ॥ ೧೩ ॥

ಎಂಬುದುಮಾಧರಾಮರಬಿನ್ನಪಮನವಧಾರಿಸಿ

ಸಮನಿಸಿದ ಕಲ್ಪಕುಜದಾ
ರಮೆ ಪಣ್ತೆರಗಿದವೊಲಿತ್ತು ನರನಾಥನ ತೋಳ್।
ಸುಮನೋಹಕಮಂಬುದನಾ
ಮುಮಬುಮಂ ದ್ವಿಗುಣಿಸಿದುದಿಷ್ಟಶರ್ಮಂಗಾಗಳ್ ॥ ೧೪ ॥

ಒಡೆಯಳ್ ಮನಕ್ಕೆ ವಲ್ಲಭೆ
ಯೊಡೆಯಳ್ ರಾಜ್ಯಕ್ಕೆ ಮದನಮಂಜರಿಯೆನೆ ಮೆ।
ಲ್ದುಡಿಗೆಗಳಿಂ ಮಿಾಸಲ್ಗಳಿ
ದುಡಿಗೆಗಳಿಂದಂ ನನಾಂದೃವಂ ಮನ್ನಿಸಿದಂ ॥ ೧೫ ॥

ಅಂತು ಮನ್ನಿಸಿ ಬೀಳ್ಕೊಡಲೊಡಮೊಡನೆಳ್ದು ತಳ್ಕೈಸಿಕೊಂಡು ಪೊಡೆವಟ್ಟು ಸಹೋದರೀವಿಯೋಗವಿಹ್ವಳೀಭೂತಚೇತಸೆಯಾಗಿ

ಅವನವಸ್ತ್ರಾಸ್ಯಾಜ್ಞೆಯಂ ಪ್ರೋತ್ಕಳಿತಹೃದಯೆಯುಂ ಸಾರ್ದು ತಕ್ಕ್ಯೈಸಿ ಪುತ್ರೋ
ತ್ಸವವಾರ್ತಾಕರ್ತೃ ನಿಮ್ಮಗ್ರಜೆ ತಡೆದಪಳೇಂ ಬಂದಪಳ್ ತಂದಪಳ್ ನಿ ।
ಮ್ಮವರಂ ಕಂಡಪ್ಪಿನಂ ಸಂತಸದಿನವರಿನಿಂ ಪೋಗು ಬರ್ಪಂದವೇಂ ಕೈ
ರವನೇತ್ರೇ ಬೇಟಿಙ್ಕೊಡಿನ್ನೆಂದುಸಿರ್ದು ನಿಲಿಸಿದಂ ನಲ್ಲಳಂ ಸಿಂಹಸೇನಂ ॥ ೧೬ ॥

ಇತ್ತಲ್ ಸಾಕೇತದೊಳಮ
ರೋತ್ತಮನವಧಿಯಿನನಂತನಾಥೋದಯಮಂ ।
ಚಿತ್ತದೊಳಱಿದಱಿದಿಂಗಳ
ನಿತ್ತುಂಟೆನೆ ಪುಣ್ಯಜನವರಂಗೞ್ಪಲೊಡಂ ॥ ೧೭ ॥

ಆ ರಾಜಗೃಹಾಂಗಣದೊಳ್
ಹೀರೆಯ ಹೂವಿಂದೆ ಸಮೆದ ಪೊಸ ಪೂವಲಿಯೊಳ್ ।
ಕಾರಿಲ್ಲದೆಯುಂ ಕಱೆದುವು
ನೇರಾಣಿಯ ಹೊನ್ನಮೞೆ ಕುಬೇರನ ಬೆಸದಿಂ ॥ ೧೮ ॥

ಜಯಶ್ಯಾಮಾದೇವೀಸಮೇತಂ ಸಿಂಹಸೇನನಾಸ್ಥಾನಮಂಡಪದೊಳಿರ್ದ ಪ್ರಸ್ತಾವದೊಳ್

ಎಳೆಮಿಂಚಿಂ ಕಡೆದಂತೆ ಚಂದ್ರಕಳೆಯಿಂ ಕಣ್ಣೊಟ್ಟರಂಬಂತೆ ಕಂ
ಗೊಳಿಪಂಗಚ್ಛವಿ ಕಂಕಣಾಂಗದನತಂಸೋತ್ತಂಸರತ್ನಾಂಶುವುಂ ।
ಡಳನುಂ ಬಣ್ಣಿಸುತ್ತುಮಿರ್ಪನೆಗನೊರ್ವಂ ಬಂದನಾಸ್ಥಾಯಿಕಾ
ವಳಯಂ ಸೂಡಿದ ಪಾರಿಜಾತದಲರ್ಗಂಪಿಂ ತೇಂಕೆ ವೈಮಾನಿಕಂ ॥ ೧೯ ॥

ಅಂತು ಬಂದು ಸಮುಚಿತಪ್ರದೇಶದೊಳ್ ನಿಂದು ಕರಕಮಲಮುಕುಳಮಂ ನೊಸಲ್ಪೆಱೆಗೆ ತಂದು ದೇವಾ ಬಿನ್ನಪಮೆಂದಿಂತೆಂದಂ

ಅವನೀಪಾಲಕಮೌಳಿಮಂಡನಭವತ್ಸರ್ವಾಂಗಮಾಂಗಲ್ಯ ಲ
ಕ್ಷ್ಮೀವಧೂವರ್ಗದೊಳಾವುದಂ ನೆಱೆಯೆ ಮುನ್ನಂ ನೋಂತಳಾ ಪಡುವಾ ।
ಡುವ ಕೊಂಡಾಡುವ ಮಾಡುವೊಂದಿಸುವೆಸಂಗಳ್ಗಟ್ಟಿದಂ ದೇವವಾ
ರವಧೂವರ್ಗಮನೀಮಹಾಸತಿಗೆ ಪೌಲೋಮಿಮಾನೋವಲ್ಲಭಂ ॥ ೨೦ ॥

ತದನಂತರಂ

ಭೂಮಿಶ ಸಭೆಯೊಳನಿಮಿಷ
ಕಾಮಿನಿಯರನಿತ್ತ ದೇವ ಚಿತ್ತೈಸೆನುತಂ।
ವ್ಯೋಮಾಂತರದೊಳ್ ತೋಱುವ
ವೈಮಾನಿಕನಿಂದ್ರಜಾಲಿಗಂಗೆಣೆಯಾದಂ ॥ ೨೧ ॥

ಆಗಳುದ್ಧರಿತಕಂಧರನುಮುಪಸ್ತಂಭಿತಹಸ್ತಪತಾಕನುಂ ಪ್ರಾಚೀಮುಖೋನ್ಮುಖಪ್ರಕ್ರಮಾದ ಪರಿಷಜ್ಜನವಿಲೋಚನಮರೀಚಿಪಟಲಮೆ ಸೋಪಾನಮಾರ್ಗಮಾಗೆ

ಸರಸಿಜಷಂಡಮಂ ಕಱಿಯೆ ಪಾದತಳಂಗಳ ಕೆಂಪು ಸೂಸೆ ನೇ
ವುರದುಡೆನೂಲ ರತ್ನರುಚಿ ಶಕ್ರಧನುಸ್ಸುಗಳಂ ಪ್ರಭಾಪಯೋ
ಧರಭರ್ಮೊಡ್ಡುಮಾಡೆ ಕಲಶಾವಳಿಯಂ ಬಳಿಕಿಂದುಮಾಲೆಯಂ
ಪರಪೆ ಮುಖಪ್ರತಾನಮಿೞಿದತ್ತೆಲರ್ವಟ್ಟೆಯಿನಪ್ಸರೋಗಣಂ ॥ ೨೨ ॥

ಆ ನಿತಂಬಿನೀಕದಂಬಮಂ ತೆಂಬೆಲರೆಂಬ ಪಡೆವಳನಂಗಜರಾಜಂ ಗಾಳ್ದೋಱುವಂತೆ ಬೇಱೆವೇಱೆ ನಿಲಿಪಂತೆ ರಾಜಾಙ್ಗಣದೊಳ್ ತಿರ್ದಿನಿಲಿಸಿ,

ದೆಸೆದೆಸೆಯನಿತಕ್ಕಂ ದರ
ಹಸಿತಾನನವಳಯದಂತೆ ಸೊಗಯಿಪ ಪದ್ಮಾ।
ದಿ ಸರೋವರಂಗಳೊಳ್ ಪಳ
ಯಿಸಿದರಿವರ್ ದೇವ ಪೆಸರೆ ದಿಗ್ದೇವತೆಯರ್ ॥ ೨೩ ॥

ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮಿ, ಎಂಬಱುವರುಮಂ ಪೂರ್ವದಿಶಾನಾಥಂ ಸರ್ವದಿಶಾರಕ್ಷಣಾರ್ಥಂ ಕಳಿಪಿದನೆಂದು ತೋಱಿ ಪಿಂಗಿಸಿ ಮತ್ತಮಿಂತೆಂದಂ

ವಿಚಕಿಲಕುರುವಕವಕುಳ
ಪ್ರಚಯದೆ ಮ್ಗಂಡುವಿಗೆ ಚಂಪೆಯಂ ನೆಲೆಮಾಡಂ।
ರಚಿಯಿಸೆ ನೆಲಸಿದರಿವರಾ
ರುಚಕಾದ್ರಿಯ ಮೂಡಣೆಂಟು ಶಿಖರ ಪನದೊಳ್ ॥ ೨೪ ॥

ಜಯೆ, ವಿಜಯೆ, ಜಯಂತಿ, ವೈಜಯಂತಿ, ಅಪರಾಜಿತೆ, ಆನಂದೆ, ನಂದೋತ್ತರೆ, ನಂದಿವರ್ಧನೆಯೆಂಬೆಣ್ಬರುಂ ಕನ್ನೆಯರಿವರಂ ನಿಜಾಂಗನೆ ಮಂಗಲೋತ್ಸವದೊಳ್ ಭೃಂಗಾರ ಕಲಶಧಾರಿಣಿಯರಾಗಿ ಬೆಸಸಿದನೆಂದು ಪೆಸರ್ವೆಸರೊಳೆ ತೋಱಿ

ಮತ್ತಂ ರುಚಕದ ದಕ್ಷಿಣ
ಭಿತ್ತಿಯನಧಿಕರಿಸಿ ಸೂಟಕೂಟಪ್ರಾಸಾ ।
ದೋತ್ತುಂಗಸದನಮೆನೆ ತ
ಮ್ಮುತ್ತೆಣ್ಬರುಮಿರ್ಪರೆಂಟು ಕೂಟಂಗಳೊಳಂ || ೨೫ ||

ಇವರ ಪೆಸರ್ ಸುಪ್ರಣೀತೆಯುಂ, ಯಶೋಧರೆಯುಂ, ಲಕ್ಷ್ಮೀಮತಿಯುಂ ಕೀರ್ತಿಮತಿಯುಂ, ವಸುಂಧರೆಯುಂ, ಸುಸ್ಥಿತೆಯುಂ, ಸುಪ್ರಬುದ್ಧೆಯುಂ, ಚಿತ್ರೆಯುಮೆಂಬುದಿವರ ನಂಬಿಕೆಯ ಸೀಗುರಿಯು, ಕನ್ನಡಿಯು, ಪಡಿಯಱಿಕೆಯು, ಕೊಡೆಯು, ಡವಕೆಯುಡಪದಡಿಯೂಟದ ಪಡಿವೆಸಕ್ಕೆ ಬೆಸಸಿದನದಲ್ಲದೆಯುಂ

ಆ ಗಿರಿವರದಪರದಿಶಾ
ಭಾಗದ ಕುಲಿಶಾಶ್ಮಶಿಖರಮೆಂಟುಂ ನಿಜ ಸೌ ।
ಧಾಗಾರಮಾಗೆ ನೆಲಸಿದ
ರಾಗಿಣಿಯರನಾಡಿ ಪಾಡಿ ಸಲೆ ಬಗೆಗೊಳಿಸಲ್ || ೨೬ ||

ಮನದೊಲವಿಂ ಬೆಸಸಿದನೀ
ಜನಮುನಿಳಾದೇವಿ ಪೃಥ್ವಿ ಪದ್ಮಾವತಿ ಕಾಂ ।
ಚನೆ ನವಮಿಕೆ ಸೀತೆ ಸುರಾಂ
ಗನೆ ಚಂದ್ರಾದೇವಿಯೆಂಬರೆಣ್ಬರನಿಂದ್ರಂ || ೨೭ ||

ರಾರಾಜಿಪ ರುಚಕದುದೀ
ಚೀರುಚಿರತರಾಷ್ಟಶಿಖರದೊಳ್ ನೆಲಸಿದರೀ ।
ನಾರಿಯರೆಣ್ಬರ್ ಶ್ರೀ ಹ್ರೀ
ವಾರುಣಿ ಧೃತಿ ಬುದ್ಧಿ ಪುಂಡರೀಕಿಣಿ ಮತ್ತಂ || ೨೮ ||

ಮಿತ್ರಕೇಶಿಯುಮಲಂಬುಷೆಯೆಂಬರೀ ನಿತಂಬಿನಿಯರನೀ ಬಿಂಬಾಧರೆಗೆ ಧವಳ ಚಮರೀಜಪವನರಾಜನೀಜನಂಗಳ್ಗೆ ಯೋಜಿಸಿ ಮತ್ತಮಾಗಿರಿವರವಿದಿಕ್ಕಾಷ್ಠೆಗಳ ನಾಲ್ಕುಂವೆರಸು ನಾಲ್ಕುನಾಲ್ಕಾದ ಪದಿನಾಱುಂ ಕೂಟಂಗಳೊಳಿರ್ಪ ನಿತ್ಯಾವಳೋಕಾಪ್ರಮುಖ ವೈಜಯಂತೀಪರ್ಯಂತಮಪ್ಪ ಪದಿನಾಱುಮರುಮಂ ಉೞಿದ ಕುಲಶಿಖರಶೇಖರಿಯರುಮಪ್ಪ ದೇವಾಂಗನೆಯರುಮಂ ಗಲೋದಪರಿಶೋಧನಪ್ರಮುಖನಿಖಿಲ ನಿಯೋಗಭೋಗಕ್ಕೆ ಬೆಸಸಿದನೆಂದು ಬಿನ್ನವಿಸಿ ತೋಱಿ ತನ್ನೃಪಾಲಮಿಥುನಪ್ರದತ್ತ ಪಾರಿತೋಷಕ ಪರಿತುಷ್ಟಸ್ವಾಂತಂ ತದ್ವಾಸಕ್ಕೆ ಸಂದನಿತ್ತಂ ವೃಂದಾರಕಸುಂದರೀ

ಸಂದೋಹಕಮಂದಂದಿನ ತಮ್ಮ ಸೂಟಿಟಿದು ಜಗಜ್ಜನನಿಗಿನಿಸುನೆಸಂಗೆಯ್ವ ಸಮಯಂಗಳೊಳಗೆ

ಅಮರಿಯರಿಂದ್ರಲೋಕದ ರಸಾಯನವರ್ಗದೆ ಗರ್ಭಶೋಧನ
ಕ್ರಮಮನೊಡರ್ಚೆ ಕಾಂತೆ ಕುಸುಮಾಸ್ತ್ರನ ಸಾಯಕಲಕ್ಷ್ಮಿಯಂತೆ ಲೋ ।
ಕಮನೆರ್ದೆಗೊಳ್ವ ಚಂದ್ರಿಕೆಗೆ ಸೋರ್ವುಡಿ ತೋರ್ಮೊಲೆ ಮೂಡಿವಂತೆ ವ
ಕ್ತ್ರಮೃಗಜಲಂಗಳಿಂ ತೊಳೆದ ಮುತ್ತಿನ ಪುತ್ಥಳಿಯಂತೆ ತೋಱಿದಳ್ ॥ ೨೯ ॥

ಅಂತು ದಿವ್ಯಕಾಂತೆಯರೊಡರ್ಚಿದ ಪವಿತ್ರೀಕರಣ ಚೈತ್ರಗಮಂ ಜಗತ್ತ್ರಿತಯಾಂಬಿಕೆಯ ತನುಲತೆಗೆ ಕುಸುಮೋದ್ಗಮನಸಮಯಮಂ ತರಲೊಡಂ, ಚತುರ್ಥ ದಿವಸದೊಳ್

ಮೃಗಮದದಣ್ಪು ಪುಷ್ಪಕಮದಾವಳಿ ನೂಪುರಮಾಲೆ ತೀರದಂ
ದುಗೆ ತೆಗೆದಿಟ್ಟ ಕೇಸರಮೆ ಪೂಸಿದ ಸಿಂಧುರವಟ್ಟೆ ಮಸ್ತಕಂ ।
ನೆಗೆದ ಕುಚಂಗಳಾಗೆ ಕರಿಗಳ್ ಸಿರಿಯಂ ಮಿಸಿಪಂತೆ ಮಜ್ಜನಂ
ಬುಗಿಸಿದರಾನರೇಂದ್ರನ ಮನಃಪ್ರಿಯೆಗಿಂದ್ರನ ವಾರನಾರಿಯರ್ ॥ ೩೦ ॥

[ಅನಂತರಂ] ಮಂಗಲಾಭರಣಮಣಿಮಂಡಪಕ್ಕೆ ಬಂದು

ಅಮೃತಾಬ್ಧಿತರಂಗದ ಮೇ
ಲೆ ಮಲಂಗಿದ ಚಂದ್ರಕಲೆಯ ಕಳಿಕೆಯೊಲಂತಾ ।
ರಮಣಿ ನವಕ್ಷೌಮಚ್ಛ
ನ್ನಮರಾಳಿಕತೂಲತಲ್ಪದೊಳ್ ಕುಳ್ಳಿರ್ದಳ್ ॥ ೩೧ ॥

ಮಂಗಳಮಂಡನವಿಧಾನಮುಳಂಕೆವಡೆಯೆ

ಅಲಸಮೃದುಗಮನೆ ಭೂಷಣಂ
ವಿಲಾಸಮಂಡಪದಿನೆಟ್ಟಿ ಸಜ್ಜೆಗೆವಂದಳ್ ।
ಪುಲಿನತಳದಿಂದೆ ಮೆಲ್ಲನೆ
ನಲಿನಾವಾಸಕ್ಕೆ ಬರ್ಪ ಕಲಹಂಸಿಯವೊಲ್ ॥ ೩೨ ॥

ಅಂತು ಬಂದು

ಮದನನ ಚೈತ್ರಶಾಲೆಯೆನೆ ಶಾಲೆ ಬೆಡಂಗಡರ್ದಿಂದುಕಾಂತಸ
ದ್ಮದೊಳತಿಸಾಂದ್ರಚಂದ್ರಿಕೆಯ ಸೋದರಮಾದ ಮರಾಳತೂಲತ ।
ಲ್ಪದೊಳನುರಾಗದಿಂ ತಳೆದರುಜ್ಜ್ವಳಶಾರದನೀರದಾವಳೀ
ಸದನದೊಳಿರ್ದ ರೋಹಿಣಿಯ ಚಂದ್ರಮನೊಪ್ಪಮನಾ ಮನಃಪ್ರಿಯರ್ ॥ ೩೩ ॥

ಅಂತು ಸೂಟಿಗ್ಗವಂದು ಮನೋನಯನವಲ್ಲಭನ ಕೋಳ್ಗೆವಂದು ಸಮಸುಪ್ತಿಸುಖ
ದಿನಪಗಾಥತ್ರಿಯಾಮಾಯಾಮತ್ರಯತ್ರಿಪಥೆಯಾಗಿ ವಿರಾಮಾರಾಮದೊಳ್

ಉತ್ತಮದೇವಿ ನೀನೆ ಪೊಲೆವೊತ್ತದೊಳೆಂದು ಜಗತ್ತ್ರಯಕ್ಕೆ ಬೊ
ಟ್ಟಿತ್ತಿದ ಮಾಟಕ್ಕೆಯಿಂದೆ ಗುಡಿಗಟ್ಟಿ ವಿನೇಯಕರಾವಲಂಬನಂ ।
ಪತ್ತಿಸೆಯೆಂಬವೋಲ್ ಬಲದ ಕೊಂಬಿನೊಳೊಯ್ಯನೆ ಪೇಱ್ ಕೈಯನು
ನ್ಮತ್ತಗಜೇಂದ್ರಮಿರ್ದೊಡೆ ಗಜೇಂದ್ರಮದಾಲಸಯಾನೆ ನೋಡಿದಳ್ ॥ ೩೪ ॥

ಇಣೆಗಿಡಿದಿಣೆಯಂ ಕೊಳ್ಕಣೆ
ಸಣೆದು ನೆಲಂ ಬಿರಿಯೆ ಕೆಲೆದು ಮಲೆದೊಲೆದಿದಿರೊಳ್ ।
ಮಣಿಕದ ನಸೆಗಸವಸದಿಂ
ದಣಿಯುರಮಾಡುವ ಗವೇಂದ್ರನಂ ಸತಿ ಕಂಡಳ್ ॥ ೩೫ ॥

ಸಮಖುಜುವಾಗಿ ಕುಕ್ಕುರಿಸಿ ವಾಲದೆ ಬಿಂಬಿಡಿದಡ್ಡವಿಟ್ಟು ಮುಂ
ದಮರ್ದಿರೆ ಗಂಧಸಿಂಧುರಭಿದುಗ್ರಸನೋಯ್ಯಟಸ್ಪೃಕ್ಷಿಕ್ತ್ರಕ ।
ದರ್ಮಿತಮದಭ್ರಮದ್ಭ್ರಮರಮಾಳೆಗೆ ವಕ್ತ್ರಮನಗ್ರಪಾದದಿಂ
ಸಮಱ್ಕೊಳುತ್ತಮಿರ್ದ ಮೃಗವಲ್ಲಭನಂ ಮೃಗನೇತ್ರೆ ನೋಡಿದಳ್ ॥ ೩೬ ॥

ಪೊಳೆವಮರ್ದಂ ಕನ್ನಡಿಗಂ
ಕಳಶಕ್ಕಂ ಜವಳಿವೆಱೆಯೆ ಕಱೆವಂತೆರಡುಂ ।
ಬಿಳಿಯಾನೆ ಮಿಸಿಸೆ ಮೊಗಮು
ಜ್ಜ್ವಳಿಸುವ ಪೊಲೆ ಮಲೆವ ಲಕ್ಷ್ಮಿಯುಂ ಸತಿ ಕಂಡಳ್ ॥ ೩೭ ॥

ಸೌರಭಮಂ ದಳಂಗೊಳಿಸೆ ಬಣ್ಣದೆ ನುಣ್ಣಿಸೆ ರಾತ್ರಿಮಾಳಿಕಾ
ಕಾರೆ ತೊಡರ್ಚೆ ನಾರುಗಿದ ತಿಂಗಳ ತಣ್ಗದಿರಂ ನಮೇರುಮಂ ।
ದಾರದರಲ್ಗಳಂ ತನಗೆ ನೀಡಿದಳೆಂದೊಲವಿಂದೆ ನೋಡಿದಳ್
ವಾರಿಜವಕ್ತ್ರೆ ಕೈರವವಿಲೋಚನೆ ಮಾಲೆಯನಂದು ಲೀಲೆಯಿಂ ॥ ೩೮ ॥

ಗಗನಮಣಿಮುಕುರದೊಳ್ ನಿಜ
ಮೃಗಲೋಚನದುರುಳಿಗುರುಳ ಕುಡುವುರ್ವಿನ ಕ ।
ರ್ಪುಗಳ ಕಲಿತೆಯೆಂಬಿನಂ ನಗೆ
ಮೊಗದ ನೆಲಿಲ್ಗೆತ್ತು ನೋಡಿದಳ್ ಚಂದ್ರಮನಂ ॥ ೩೯ ॥

ಕುವಲಯವೈರಿ ಪಂಕರುಹಮಿತ್ರನಶೇಷರಸಾಪಹರ್ತೃವೆಂ
ದವನಿಜನಂ ಪಿಸುಣ್ಗುಡೆದೆಲೇ ಜಗದಂಬಿಕೆ ಬೇಱುಮಾಡಿದರ್ ।
ಭವದಧಿನಾಥತೇಜಮುಮನೆನ್ನುಮನಿಂ ಕೆಳೆ ಮಾಳ್ಪುದೆಂದು ಪೊ
ರ್ದುವ ತೆಱದಿಂದೆ ಮೂಡುವೆಳನೇಸಱನಂಬುಜನೇತ್ರೆ ನೋಡಿದಳ್ ॥ ೪೦ ॥

ಇನಿಯನ ಕಡುಗಾಡಿ ಮನೋ
ಜನ ಬೆನ್ನಟ್ಟಿದೊಡೆ ಬಿಸುಟ ಪೞಿಯಿಗೆಯೆನೆಕೋ ।
ಳ್ಪನಲೊಳಗೆ ಪೊಳೆವ ಮೀಂಬೊಣ
ರನಲಂಪಿಂ ಮೀನಲೋಲಲೋಚನೆ ಕಂಡಳ್ ॥ ೪೧ ॥

ಗಳದ ಸಿತಾಕ್ಷತಾವಲಿಯೊ ಮೌಕ್ತಿಕಹಾರಮೊ ಸಂದಿಸಿಟ್ಟ ಕೆಂ
ದಳಿರ್ಗಳೊ ಚೂಚುಕಚ್ಛವಿಯೊ ಪೊಂಗಳಶಂಗಳೊ ತನ್ನುರೋರುಹಂ ।
ಗಳೊ ದಿಟಮೆಂದು ಕೈ ತಡವೆ ಕಣ್ ನಡೆಯಾಡೆ ಲತಾಂಗಿ ಕಂಡಳು
ಜ್ಜ್ವಳಕಳಶಂಗಳಂ ಘನರಸಾಕಳಿತಂಗಳನುನ್ನತಂಗಳಂ ॥ ೪೨ ॥

ಪರಿಮಳಮಿಳಿದಳಿಮಾಲಾ
ಚರಣಾಹತ ಶಿಧಿಲಶಿಥಿಲದರದಳಸಂಧಿ ।
ಸ್ಫುರಿತ ಮಕರಂದಸುಂದರ
ದರದಳಿತ ಸರೋಜವನಮನಂಗನೆ ಕಂಡಳ್ ॥ ೪೩ ॥

ಮೊರೆವ ರವಂಗಳಿಂ ಪರಸುವಂತೆ ಪಯಃಕಣಕಾಂತಿಯಿಂ ನಿರಂ
ತರಮೆಳಮುತ್ತಿನಕ್ಷತೆಗಳಂ ತಳಿವಂತೆ ತರಂಗಬಾಹುವ ।
ಲ್ಲರಿಗಳಿನಪ್ಪುವಂತೆಸೆವ ಪಾಲ್ಗಡಲಂ ನಡೆನೋಡಿದಳ್ ತಳೋ
ದರಿ ವದನೇಂದುಮಂಡಲದ ಕೌಮುದಿಯಿಂ ಕಱತಗಣ್ಮಿಸಂತುಟಂ ॥ ೪೪ ॥

ತನುಮಧ್ಯೆ ಕೇಸರಚ್ಛವಿ
ವನಜಾನನೆ ಪೃಥುಸಿತಂಬೆ ಕಂಡಳ್ ನೃಪಸಿಂ ।

ಹನ ಸಿಂಹಿ ಸಿಂಹಸೇನಾ
ವನಿಪನ ಸರ್ವಾಂಗಲಕ್ಷ್ಮಿ ಸಿಂಹಾಸನಮಂ ॥ ೪೫ ॥

ಮಾನಿಸಿ ನೋಡಿದಳ್ ಸುರವಿಮಾನಮನುದ್ಧತಕೇತುಮಂಜರೀ
ಚೀನಮನಬ್ಜರಾಗಮಣಿಪುಂಜರಿತಾನಮನಿಂದ್ರಸೀಲಸೋ ।
ಪಾನಮನಾತ್ರ ಚಿತ್ರರಸಲಾಸ್ಯವಿತಾನಮನಾವೃತಾಂಚಲೋ
ದ್ಯಾನಮನಾಸಿತ ತ್ರಿದಶದಂಪತಿ ಭೂಷಣಭಾಸಮಾನಮಂ ॥ ೪೬ ॥

ಭವನಾಮರದಂಪತಿಗಳ
ನವರತ್ನಾಭರಣಕಿರಣದಿಂ ಸುರಚಾಪ ।
ಚ್ಛವಿಯನಗೆವೊಯ್ದು ಪಡಲಿಗೆ
ಯಂಪೋಲೊಪ್ಪುವ ಭೋಗಿಭವನಮಂ ವಧು ಕಂಡಳ್ ॥ ೪೭ ॥

ಕಂಜದಳಾಕ್ಷಿ ಕಾರಿರುಳಿನಾರಮೆಯಂ ಬಿಸಿಲಂ ಸುಧಾಂಶುವಂ
ಸಂಜೆಯನಾಯ್ದು ಕೊಯ್ದುರುಳಿಮಾಡಿ ರಸಂಬಿಡೆ ರಂಗರಕ್ತಿಯಿಂ ।
ರಂಜಿಸಿದಂತೆ ತೋಱೆ ಶಬಲಚ್ಛವಿ ಕಾಮನ ಬಿಲ್ಲ ಬೀಜಮಂ
ಪುಂಜಿಸಿದಂತಿರಿರ್ದ ನವರತ್ನದ ರಾಶಿಯನೊಲ್ದು ನೋಡಿದಳ್ ॥ ೪೮ ॥

ಒಗೆದಳುರ್ದು ಮಿಳಿರ್ದ ಬಲದೊಳ್
ಪೊಗೆಯದೆ ಕಿಡಿಸೂಸದಸುಗೆಯೆಳದಳಿರ್ಗಳನಾ ।
ಯ್ದಗೆವೊಯ್ದಂತಿರೆ ನಾಲಗೆ
ಸೊಗಯಿಸುವುರಿಮಾಲೆಯಂ ತಳೋದರಿ ಕಂಡಳ್ ॥ ೪೯ ॥

ಅಂತುಮಲ್ಲದೆಯುಂ

ದರದಳಿತ ಕೇತಕೀಕುಸು
ಮರಜಂಗಳೊಳಾಱೆ ಕೂಡಿ ಪೊರೆದಸಿತೇಂದೀ ।
ವರಮುಂಬುಜದೊಳ್ ಪುಗುವಂ
ತಿರೆ ನೊಗದೊಳ್ ಪುಗುವ ಬಿಳಿಯ ಕರಿಯಂ ಕಂಡಳ್ ॥ ೫೦ ॥

ಅಂತು ತನ್ನ ಕಂಡ ಕನಸುಗಳಂ ಮನಸಂದು ಮಿನುಕುವ ಮನಮನನುಭವಿಸಿ

ಸುರಸುದತೀ ಕದಂಬಕದ ಗಾಂದರದಿಂ ದನಿಯೊಳ್ ದರಸ್ಮಿತಾಂ
ಬುರುಹಮನೊತ್ತಿ ಚುಂಬಿಸುವ ತುಂಬಿಯ ಗಾವರಮಂ ಪೊಣರ್ಚಿ ನ ।

ಲ್ಲರ ಬಿಗಿದಿರ್ದ ಪಕ್ಷಪರಿರಂಭಮನೊಯ್ಯನೆ ಬಿರ್ಚೆ ಕಣ್ಗೆ ಕ
ಪ್ಪುರದ ಶಲಾಕೆಯು ಸಲಿಸುತೆಬ್ಬಿಸಲ್ ಮೃದುಶೀತಮಾರುತಂ ॥ ೫೧ ॥

ಆ ಪ್ರಭಾತೋದ್ಯೋತನದೊಳ್ ನಲ್ಲನ ತೋಳ ತಲ್ಪದಿಂ ಮೆಲ್ಲನುಪ್ಪಡಿಸಿ ನಿತ್ಯನಿಯಮಮಂಗಳಾಭರಣಪರಿಪೂರಿತಾಂತರಂಗೆಯಾಗಿ ನಿಂದು ಚಿತ್ರವಲ್ಲಭಂಗೆ ತನ್ನ ಕಂಡ ಕನಸುಗಳಂ ಪೇಳೆ ಕೇಳ್ದು ಬೋಧತ್ರಯಾಧಾರನಾ ಸ್ವಪ್ನನೆಂಬ ಸ್ವಪ್ನಮಹೀರುಹಫಲಂಗಳನನುಕ್ರಮದಿನಾಕೆಗಿಂತೆಂದು ವಿರಚಿಸಿದಂ

ಪರಿಭೃತವಂಶನೂರ್ಜಿತನುದಾತ್ತಮನಂ ಕಮಲಾಪ್ರಿಯಂ ನೃಕೇ
ಸರನತಿಶಾಂತನಭ್ಯುದಯಮೂರ್ತಿ ಸುನೇತ್ರನುಪೇತಮಂಗಲಂ ।
ಸರಸಗುಣಂ ಗಭೀರನವನೀಶ್ವರನಾನತವಜ್ರಿಭೋಗಿ ಭಾ
ಸ್ಕರನಘದಾಹಕಂ ನಮಗೆ ನಂದನನಾದಪನಂಬುಜಾನನೇ ॥ ೫೨ ॥

ನಿನ್ನ ನಗೆಮೊಗಮೆಂಬ ಸೆಜ್ಜರಮನರ್ಜುನಗಜಂ ಪೊಕ್ಕುದೆ ಪರಮಪುರುಷನವತಾರಮೆಂದ ನಿಜವಲ್ಲಭನ ವಚನಾಮೃತವರ್ಷರಸಪ್ರವಾಹಮಂ ನೆಲೆವೆರ್ಚಿಸುವಿನಂ ಉತ್ತರೋತ್ತರಮಾದ ಶುಭಮುಹೂರ್ತದೊಳ್

ದಿವದಿಂ ಕಾರ್ಮಣತ್ವೈಜಸಾವಯವನಾಕಲ್ಪಾಮರಂ ಪೂಜನೋ
ತ್ಸವ ಸೌಧರ್ಮಕೃತೋಪಹಾರ ಸುಮನಸೌರಭ್ಯದೇಶೀಯನಾ ।
ಯುವತೀಪ್ರೋಜ್ಜ್ವಲಗರ್ಭದೊಳ್ ನೆಲಸಿದಂ ಬಂದಚ್ಯುತೇಂದ್ರೇಶ್ವರಂ ಪಾ
ಡಿವದೊಳ್ ಕಾರ್ತಿಕದೊಳ್ ನಿಶಾಂತಿಮದೊಳಂತಾ ರೇವತೀ ತಾರೆಯೊಳ್ ॥ ೫೩ ॥

ಪಳುಕಿನ ಸಾಲಭಂಜಿಕೆಯ ಮಧ್ಯದೊಳಿಂದುಕಲಾಂಕುರಂ ತೆಜಂ
ಬೊಳೆದವೊಲಾವ ಬೇವಸಮುಮಾವ ವಿಕಾರಮುಮಾವ ಚಿಹ್ನಮುಂ ।
ಬಳೆಯದೆ ತಾನೆ ಬಂದು ಬಳೆದತ್ತಮೃತಾಬ್ಧಿತರಂಗಲಕ್ಷ್ಮಿಯೊಳ್
ಬಳೆನ ಮಣಿಪ್ರಭಾಪಟಲದಂತೆ ಲತಾಂಗಿಯ ಗರ್ಭವಿಭ್ರಮಂ ॥ ೫೪ ॥

ಪಿಂಗದು ವಳಿಗಳ ದೇಸಿ ಕೆ
ಉಂಗದು ಮೇಣ್ಪಾಸೆ ಮೊಲೆಯ ಮೊಗಮೆಳಗರ್ಪಂ ।
ತಾಂಗದು ತೆಳ್ಪಿಸಿಲಿನಿಸಂ
ಪೊಂಗದು ನಿಪ್ಪೊಸತು ಸತಿಯ ಗರ್ಭವಿಲಾಸಂ ॥ ೫೫ ॥

ಸುದತಿಯ ಗರ್ಭಗೌರವಮನೇವೆಸಗೊಂಡಪೆ ಚಾರಣರ್ ವಿದೇ
ಹದ ಮುನಿಪುಂಗವರ್ ತಮಗೆ ತತ್ತ್ವಪದಾರ್ಥದೊಳೊಂದು ಸಂದೆಯಂ ।

ಪುದಿದಿರೆ ಬಂದು ತಾಯನೊಲವಿಂ ಬಲವಂದೊಡೆ ಸುಪ್ರತೀತಮ
ಪ್ಪುದು ಗಡ ಗರ್ಭದರ್ಭಕನ ನಿರ್ಭರಬೋಧಮಹಾಪ್ರಭಾವದಿಂ ॥ ೫೬ ॥

ಅಂತುಮಲ್ಲದೆಯುಂ

ದಿವದಿಂ ಸಲ್ವಮೃತಾನ್ನಪಾನವಸನಾಲೇಪಸ್ರಜಂ ದೇವವಾ
ರವಧೂವರ್ಗದ ಮೆಚ್ಚೆ ಮೆಚ್ಚೆ ಬೆಸಕೆಯ್ವಟ್ಟುಂಬೆಸಂ ನೆಟ್ಟನಾ ।
ತ್ಮವರಂ ಮನ್ನಿಸಿ ಮಾಳ್ಪಿಲಂಪು ಮುದಮಂ ತಂದೀಯೆ ತನ್ನಂಗಿಯೊಳ್
ನವಮಾಸಂ ನವಮಾಸರಕ್ಕೆ ದೊರೆಯಾಯ್ತುತ್ಸವೋತ್ಸಾಹದಿಂ ॥ ೫೭ ॥

ಅಂತು ಧರ್ಮವೃದ್ಧ್ಯೇಧಮಾದ ಕಾಲದೊಳ್

ಶಶಿಸೂರ್ಯಾದಿ ನವಗ್ರಹಂಗಳಿರೆ ತಂತಮ್ಮುಚ್ಚದೊಳ್ ಶುದ್ಧಲ
ಗ್ನಶುಭಶ್ರೀಗಗನಾಂತರಾಲತಲಮಂ ನಿಷ್ಕಲ್ಮಷಂ ಮಾಡೆ ಕೂ ।
ಡೆ ಶಿವಾಖ್ಯಾನವಿಶಿಷ್ಟಯೋಗಮೊಸೆದಿರ್ದಾಷಾಢಕೃಷ್ಣತ್ರಯೋ
ದಶಿಯೊಳ್ ರೇವತಿಯೊಳ್ ಜಗತ್ತ್ರಿತಯಲಕ್ಷ್ಮೀವಲ್ಲಭಂ ಪುಟ್ಟಿದಂ ॥ ೫೮ ॥

ಜಿನಜನ್ಮಾಭಿಷೇಕಂ

ಶ್ರೀವನಿತೆಗೆ ಸೊಂಪು ವಚ
ಶ್ರೀವನಿತೆಗೆ ಪೆಂಪು ಕೀರ್ತಿವನಿತೆಗೆ ಸೊಬಗು ।
ದ್ಭಾವಿಸುವಿನಮೊಗೆದನಿಳಾ
ಪಾವನಚರಿತಂ ವಿನೇಯಜನಮುಖತಿಲಕಂ ॥ ೧ ॥

ಏೞ ಪುಲೋಮಜಾರಮಣ ಪುಟ್ಟಿದನೀಗಳನಂತನಾಥನೀ
ರೇೞನೆಯಕ್ಷಯಂ ಪರಮನೆಂದು ಕನನ್ಮಣಿಪೀಠಕಂಪನಂ ।
ಪೇೞೊಡಂ ಬೞಿಕ್ಕವಧಿಯಂ ತಿಳಿದಾಗಳಯೋಧ್ಯೆಯತ್ತಲಾ
ಗೇೞಡಿಯಿಟ್ಟು ಮೂಮೆ ಪೊಡೆವಟ್ಟು ಶತಕ್ರತು ಸಾನುರಾಗದಿಂ ॥ ೨ ॥

ಜನ್ಮಮೃತಿವಿರಹಿತಂಗೆ ಜ
ಗನ್ಮಂಡನಮಣಿಗೆ ಭಕ್ತಿಭರಚರಿತಮನಂ ।
ಜನ್ಮಾಭಿಷೇಕಮೆಂಬು
ದ್ಯನ್ಮಹಮಂ ಮಾಡಲಾಗಳುದ್ಯತನಾದಂ ॥ ೩ ॥

ಅನ್ನೆಗಮತ್ತಲ್

ಅಭವಂ ಶ್ರೀಮದನಂತನಾಥನುದಯಂಗೆಯ್ದಿರ್ದುದಂ ಶಂಖದುಂ
ದುಭಿಕಂಠೀರವಘಂಟಿಕಾಪ್ರಕರನಾದಂ ಸಾಱುವಂತಾಗೆ ಭ ।
ಕ್ತಿಭರಾನಮ್ರಕಿರೀಟರಾ ಭವನವಾನವ್ಯಂತರಾ ಜ್ಯೋತಿಷ
ಪ್ರಭುಕಲ್ಪೇಂದ್ರಚತುರ್ನಿಕಾಯದಿವಿಜರ್ ಕೈಕೊಂಡರುತ್ಸಾಹಮಂ ॥ ೪ ॥

ದೇವೇಂದ್ರವೃಂದವೊಂದೆ ಪಂತಿಯಿಂ ತಿಂತಿಣಿವಡೆದು ಅಯೋಧ್ಯಾಮುಖನಾಗಿ ತಳರ್ದು, ನಿಲೆ ತತ್ಪುರೋಭಾಗದಲ್ಲಿ

ಇೞಿಪಿ ಮದೇಭದಿಂ ಪೆಱಗನೇಱಿದಳಂ ವಿವಿಧಾರ್ಚನಂಗಳಂ
ಬೞಿಯೊಳೆ ತಂದ ಮಾಂಗಲಿಕಧಾರಿಣಿಯರ್ ನಿಜವಾಹನಗಳಿಂ ।
ದಿೞಿಪೊಡೆವೋಗೆ ಪೋಗು ಬಿಜಯಂಗೆಯಿಸೆಂದು ಪುಲೋಮಜಾತೆಯಂ
ಕಳಿಪಿದನಿಂದ್ರನಿರ್ದು ಮಹಿಪಾಲಗೃಹ ಪ್ರಘಣಾಂತರಾಳದೊಳ್ ॥ ೫ ॥

ಅಂತು ಬೆಸಸಲೊಡಂ

ಇದಿರ್ವಂದೆಱಗಿದ ಸಂಭವ
ಸದನದ ದೌವಾರಿಕಾಕರ ಸ್ಕಂದಸಮಾ ।
ಸ್ಪದಮಾಮಹಸ್ತೆ ಪೊಕ್ಕಳ್
ತ್ರಿದಶೋತ್ತಮೆ ರೂಪುಗಱದು ಜನನೀಗೃಹಮಂ ॥ ೬ ॥

ಅಂತು ಪುಗಲೊಡಂ ಮಗಮಗಿಸಿ ನೆಗೆವ ದಿವ್ಯದ್ರವ್ಯಧೂಪಕಲಾಪಸೌರಭಸಾರದಿಂ ಸುರಭಿವಿಹಾಸಮಿರ್ಪಂತಿರ್ದ ಸೂತಿಕಾನಿಕೇತನದೊಳ್ ಮಂಗಳವಸದನಮನಂಗೀಕರಿಸಿ ದಂಗಪರಿಮಳಮಂಗಳಾಚಾರಮೆಸೆಯೆ ಕಪ್ಪುರದ ಲೆಪ್ಪದ ದೇವತೆಯಂತೆ ಕಣ್ಗೆಸೆದಿರ್ದ ಜಿನೇಂದ್ರಜನನಿಯಂ ಹರ್ಷಾಶ್ರುಪಿಹಿತಲೋಚನಮರೀಚಿನಿರ್ನೀನಾಭಿಷೇಚನಮನೊಡರ್ಚೆ ನೀಡುಮಚ್ಚರಿವಟ್ಟು ನೋಡಿ /

ಮಿಱುಗುವ ಕಾಯಕಾಂತಿ ಗೃಹದೀಪಕಲಾಪದ ರಶ್ಮಿಜಾಲಮಂ
ಮಱಸಿಯೆ ಸೋರ್ಕೆಯೊಳ್ ತೊಳಗುತಿರ್ದ ಜಿನೇಂದ್ರನ ಪೆತ್ತ ತಾಯ್ಗೆ ತಾ ।
ನೆಱಗಿದಳಿಂದ್ರಕಾಂತೆ ಶುಭರತ್ನಮನಾಂತ ನಿಧಾನಲಕ್ಷ್ಮಿಗೊ
ಲ್ದೆಱಗುವ ದೀಪವರ್ತಿಯವೊಲಾಗತಕಂಧರೆ ಸಾನುರಾಗದಿಂ ॥ ೭ ॥

ತದನಂತರಂ

ಬಾಲಮೃಗಾಂಕನಂ ಕುಮುದಲಕ್ಷ್ಮಿ ಕುಶೇಶಯಲಕ್ಷ್ಮಿ ತಿಗ್ಮರು
ಗ್ಮಾಲಿಯನಕ್ಕಱಿಂ ಬಳಸುವಂತೊಸೆದಳ್ ಬಲಗೊಂಡನಂತ ಜಿ
ದ್ಬಾಲನನಾ ಲತಾಂಗಿ ಜನನೀಭುಜದಾಮ ಸುಧಾವಿಲೋಲಕ
ಲ್ಲೋಲಲತಾವಿಲಂಬಿತ ನಮೇರುನವಾಂಕುರ ಕೋಮಲಾಂಗನಂ ॥ ೮ ॥

ಇದು ಚಿತ್ತದ ಚಿಂತಾಮಣಿ
ಇದು ಕಣ್ಗಳ ಕಾಮಧೇನುವಿದು ಸೌಖ್ಯದ ಸಂ ।
ಪದಮಿದು ಮೂಲೋಕದ ಭಾ
ಗ್ಯದ ಜಾಟಿಸ್ದೊದಲೆಂದು ನೋಡಿದಳ್ ಜಿನಶಿಶುವಂ ॥ ೯ ॥

ಕಡೆಗೋಡಿವರಿವ ಕಾಂತಿಯ
ಕಡಲೊಳಗಣ ಮಣಿವೊಲೆಸೆವ ಶಿಶುವಂ ಶಚಿ ಕಂ ।
ಡೊಡೆಯರ ತೊಡವಂ ತೊಟ್ಟನೆ
ಬಡವಂ ಕಂಡಂತಿರಲೆತ್ತಲಣ್ಮದೆ ನಿಂದಳ್ ॥ ೧೦ ॥

ಅಂತು ನಿಂದು ಕಲ್ಯಾಣೋದ್ಯೋಗವಿಲಂಬನಭೀತಿ ಕಲಿತನಮಂ ಕೈಗೆ ಮಾಡೆ

ತಳಿರ್ಗಳ್ ಪುಣ್ಯಮಹೀಜದ
ಫಳಮಂ ತಳೆವಂತೆ ಕೆಂದಳಂ ತಳೆಯಲೊಡಂ ।
ಪುಳಕಾಂಕುರಮೊಗೆದೊತ್ತುವ
ನಳಿತೋಳ್ಗಳಿನಂಜುತೆತ್ತಿದಳ್ ಬಾಲಕನಂ ॥ ೧೧ ॥

ಮಾಯಾನಿದ್ರೆಯನಿಟ್ಟಳ್
ತಾಯಲರ್ಗಣ್ಗಳ್ಗೆ ಸೋಂಕಿಲೊಳ್ ತಂದಿಟ್ಟಳ್ ।
ಮಾಯಾಶಿಶುವಂ ತ್ರಿಜಗ
ಜ್ಜಾಯನನಾಸೂತಿಭವನದಿಂ ಬೞಿಕೊಯ್ದಳ್ ॥ ೧೨ ॥

ದಿಕ್ಕಿನೊಳಂ ವಿಯತ್ತದೊಳಂ ಗಿಡಿದಂತಿರೆ ನಿಂದ ದೇವಲೋ
ಕಕ್ಕತಿವಿಸ್ಮಯಂ ನೆಗೞ್ದೆ ನೋಡುವ ಕಣ್ಗಮೃತಾಂಜನಂಬೊಲ ।
ಣ್ಪೊಕ್ಕುದನಂತಜಿಜ್ಜಿನಸುಧಾಂಶುವ ಮೆಯ್ಸಿರಿ ಮೂಱುಲೋಕಮುಂ
ತೆಕ್ಕನೆ ತೀವಲಾರ್ಪ ಪರಮಾತ್ಮನ ಶಕ್ತಿಗಿದಾವ ಕೌತುಕಂ ॥ ೧೩ ॥

ಕೆಳದಿಯರಾಂತ ಬೆಳ್ಗೊಡೆಯ ಬೆಳ್ನೊರೆ ಬೀಸುವ ಚಾಮರಂಗಳು
ಚ್ಚಳಿಸುವ ತುಂತುರಾಗೆ ಸುರಕೋಟಿಯ ಕವ್ವರಿಗೊಂಡು ಕಾಣ್ಬ ಕ ।
ಣ್ಗಳ ಬೆಳಗೆಂಬ ಪಾಲ್ಗಡಲೊಳರ್ಭಕನಂ ತಳೆದಿಂದುಲೇಖೆಯುಂ
ತಳೆದ ತರಂಗಲಕ್ಷ್ಮಿ ನಡೆತರ್ಪವೊಲಿಂದ್ರನ ಕಾಂತೆಯೊಪ್ಪಿದಳ್ ॥ ೧೪ ॥

ಅಂತು ಸಾರ್ಕೆಗೆ ವರಲೊಡಂ

ಎಱಗಿದ ಕೊಂಬೆಱಲ್ವ ಕಿವಿ ತಗ್ಗಿದುರೋಮಣಿವಾಯು ಕುಂಭದೊಳ್
ನಿಱಿಸಿದ ಪುಷ್ಕರಂ ನೆಗೞ್ವ ಕಿಂಕರಣಂ ಬೆರಸಿಂದ್ರವಂದಿತಂ ।
ಗೆಱಗಿದ ದಿವ್ಯದಂತಿ ಮಡಿದಿತ್ತ ಪದಾಗ್ರಮನೇಱಿ ಮೂಜಗ
ಕ್ಕೆಱೆಯನನಾ ಪುಲೋಮಸುತೆ ರಾಗದೆ ತನ್ನೆಱೆಯಂಗೆ ನೀಡಿದಳ್ ॥ ೧೫ ॥

ಮಣಿಮುದ್ರಾಜ್ಯೋತ್ಸ್ನೆ ಪೂವಂ ಕೆದಱಿ ತಳಿಯೆ ಹಾರಾಂಶುಗಳ್ ಸೇಸೆಯಂ ಕಂ
ಕಣಝುಂಕಾರಂ ಕರಂ ಮಂಗಲಮನೆಸಗೆ ಶೀತಾಂಶುವಂ ಸಾಂಧ್ಯಲಕ್ಷ್ಮೀ ।
ಪ್ರಣಯಂ ಕೈಕೊಳ್ವವೊಲ್ಸಂದಿಸೆ ಕರತಲರಾಗಂ ತ್ರಿಲೋಕೈಕಚೂಡಾ
ಮಣಿಯಂ ಪೌಲೋಮಿ ತಂದಿತ್ತೊಡೆ ಕುಲಿಶಧರಂ ರಾಗದಿಂದೆತ್ತಿಕೊಂಡಂ ॥ ೧೬ ॥

ಅಂತೆತ್ತಿಕೊಂಡು ಕಣ್ಣಿನಿ
ತಂ ತಣ್ಣನೆ ತಣಿಯೆ ನೋಡಿ ನಿರ್ವೃತಿಲಕ್ಷ್ಮೀ ।
ಕಾಂತನ ಕೇಸಡಿಗಳನಿಂ
ದ್ರಂ ತಳೆದಂ ಮಕುಟದೊಡನೆ ತಳಿರ್ವಾಸಿಗನಂ ॥ ೧೭ ॥

ಅನಂತರಮನಂತದಿವ್ಯದ್ರವ್ಯಪರಿಪೂರಿತಗಂಗಾಂಬುಶಿಂಜಿತಮುಮಂ ಚಿತ್ರಾಂಚಲ ಪಂಚರತ್ನವಿಲಸಿತ ಸಮೀಚೀನ ಚೀನಾಂಬರಾಚ್ಛಾದಿತಮುಮಪ್ಪ ನಿಜಪರ್ಯಂಕವಿಷ್ಟರ ದೊಳಧಿಷ್ಠಿತಂ ಮಾಡಿದಾಗಳ್

ದೇವರದೇವಂ ನೆಗೞ್ದೈ
ರಾವತಪೂರ್ವಾಸನಾಧಿರೂಢಂ ಮೆಱೆದಂ ।
ದೇವೇಂದ್ರನಂಕದೊಳ್ ಹೈ
ಮಾವನಿಧರ ಪುಷ್ಯರಾಗಮಣಿಶಿಖರದವೊಲ್ ॥ ೧೮ ॥

ಮಂಡಳಿಪ ಕಂಕಣಚ್ಛವಿ
ಪಾಂಡುಚ್ಛತ್ರಕ್ಕೆ ವಿಲಸನಮಂ ಕುಡೆ ಜಗತೀ
ಮಂಡನಮೂರ್ತಿಗೆ ಮಾಣಿಕ
ದಂಡದ ಕೊಡೆವಿಡಿದನಾಗಳೀಶಾನೇಂದ್ರಂ ॥ ೧೯ ॥

ಅರುಣಾಂಭೋಜವನಂಗಳೊಳ್ ಕುಳಿರ್ವ ಹಂಸೀಮಾಲೆವೊಲ್ ಚಾಮರಂ
ಕರಕಂಕೆಲ್ಲಿದಳಂಗಳೊಳ್ ಪೊಳೆಯೆ ಕೊಂಕಿಂ ಬಿಂಕಮಿಂಬಾಗೆ ಸಿಂ ।
ಧುರದೊಳ್ ಬಿಂಚಿಯುಮಂ ಮಲಂಗಿ ಜಿನನಾಥಂಗಿಕ್ಕಿದರ್ ಚಾರುಚಾ
ಮರಮಂ ನಿಂದು ಸನತ್ಕುಮಾರನುಮತರ್ಕ್ಯೋತ್ಸಾಹಿ ಮಾಹೇಂದ್ರನುಂ ॥ ೨೦ ॥

ಆಗಳ್ ತುಂಗಮೃದಂಗತಾಳಜಯಘಂಟಾಘಂಟಿಕಾಶಂಖಭಂ
ಭಾಗಂಭೀರಮಹಾರವಂ ಭುವನಮಂ ನಾದಾತ್ಮಕಂ ಮಾಡೆ ದಿ
ಗ್ಭಾಗಂ ಪಲ್ಲಟಮಾಗೆ ಪಿಂಗಿಸುವವೊಲ್ ಕೈನೀಡಿ ಸೈನ್ಯಂಗಳಂ
ಪೋಗಲ್ವೇೞ್ದು ಮರಾದ್ರಿಗಭ್ರಗಜಮಂ ಜಂಭಾರಿ ಬಿಟ್ಟೈಕ್ಕಿದಂ ॥ ೨೧ ॥

ಸುರನಿಕುರುಂಬಮಯೋಧ್ಯಾ
ಪುರದಿಂ ನೆಗೆದಮರಗಿರಿಗೆ ನಡೆಯಿಟ್ಟುದು ಸು ।
ಟ್ಟುರೆಗಾಳಿಗೆ ಸುಯ್ಯಾಣದ
ತೆರೆಯಂ ಪೊತ್ತೆತ್ತಿ ಬಿಟ್ಟಿದಂತಿರೆ ನಭದೊಳ್ ॥ ೨೨ ॥

ಆಗಳ್

ಜಿನಜನ್ಮೋತ್ಸವಮಂ ಮನಂದಣಿಯೆ ನೋಡಲ್ ಗೊಂದಣಂಬೆತ್ತುದಾ
ನನಮುಂ ತಾನೆನೆ ಮೂಱುನಾಲ್ಕು ಘಟಿಯಂ ದೇವೇಂದ್ರನಂತೇೞ್ ಬ।
ರ್ಪನೊ ಪೇೞೆಂದನೆ ದೇವಕೋಟಿ ನೆಗೞಲ್ಕಾಡಿತ್ತು ಕೋಡಾಳಿಗ
ಟ್ಟಿನ ತಟ್ಟೆಂದನೆ ಹತ್ತಿ ಪೆತ್ತುದು ಮಹಾಮೈಕುರ್ವಣೋತ್ಸಾಹಮಂ ॥ ೨೩ ॥

ಆದೆಂತೆಂದೊಡೆ

ವದನಂ ಕೋಡೆಂಟಱಿಂ ವಾಸವರದನಿಗೆ ಮೂವತ್ತೆರಳ್ಪೊಗೊಳಂಗಳ್
ರದನಕ್ಕೊಂದೊಂದು ನೀರೇಜಿನಿ ಕೊಳಕೊಳದೊರೊಂದು ಮೂವತ್ತೆರಳ್ಪಿ।
ತ್ರದರಲ್ಮೂವತ್ತೆರಳ್ತಿಲ್ಲತೆಗೆಸೞೆಸೞೊಳ್ ನರ್ತಿಪರ್ ದೇವಿಯರ್ ಸೋಂ
ಕದೆ ಮೂವತ್ತಿರ್ವರೇನದ್ಭುತಮಯಮೊ ಜಿನೇಂದ್ರಾಭಿಷೇಕಪ್ರಯಾಣಂ ॥ ೨೪ ॥

ಸುರಿವ ನಮೇರುಭೂರುಹದ ಪೂಮಳೆಯುಂ ಶತಕೋಟಿನರ್ತಕೀ
ತರುಣಿಯರಿಕ್ಕುತಿರ್ಪ ಕುಸುಮಾಂಜಲಿಯುಂ ಪಟವಾಸಚೂರ್ಣದೊಳ್।
ಪೊರೆದೆರಲ್ಪಟ್ಟಿಯೊಳ್ ಕುಸುಮಕುಟ್ಟಿಮಮಾದೊಡದಂ ಸುಮೇರುಮು
ಟ್ಟಿರಿಸಿದುದಿಂದ್ರನಾಜ್ಞೆ ಮೆೞೆವಂತಿರೆ ಸೇನೆ ವಿಲಾಸಯಾನಮಂ ॥ ೨೫ ॥

ಅನಿತು ನೆಗೞ್ತೆವೆತ್ತ ಪರಮೋತ್ಸವದೊಳ್ ಲವಲೀತಮಾಲನಂ
ದನಕಬರೀಭರಂ ಮೆಱೆಯೆ ಮೇರುಮಹೀಧರನಚ್ಚಮಲ್ಲಿಕಾ।
ಘನಕುಸುಮಂಗಳಂ ನಡುವೆ ಸಂಪಗೆದೀವಿ ತುಱುಂಬಿನಿಂದಳಂ
ಬಿನಮೆಸೆದತ್ತು ಪಾಂಡುಕಶಿಲಾತಳಮಧ್ಯದ ಸಿಂಹವಿಷ್ಟರಂ ॥ ೨೬ ॥

ಅಂತು ಪೆಱೆಯ ನಡುವಣ ಕಱೆಯಂತೆ ಮೆಱೆವ ಸಿಂಹವಿಷ್ಟರಮನಲಂಕರಿಸುವಿನೆಗಮಷ್ಟಯೋಜನೋತ್ಸೇಧಮುಂ ಶತಯೋಜನಾಯಾಮಮುಂ ಶತಯೋಜನವಿಸ್ತಾರಮುಮಾದ ಚಂದ್ರಕಾಂತಶಿಲಾಪಟ್ಟಕಮೆ ಘಟ್ಟಿಸಿದ ಕುಟ್ಟಿಮತಲಮಾಗೆ

ಹರಿ ಪೇೞ್ದಿಂ ವಿಶ್ವಕರ್ಮಂ ಸಮೆದನದಱ ಮಸ್ತೋತ್ಕರಂ ಸ್ವರ್ಗಪೂಜ್ಯಂ
ನರರಿನ್ನೀವಣ್ಣಿಪರ್ ಪುತ್ತಳಿಗಳದಱ ಕಂಬಂಗಳೊಳ್ ಪಾಡಲುಂ ಬಿ।
ತ್ತರದಿಂ ನಿಂದಾಡಲುಂ ಮಂಗಳಪರಿಕರಮಂ ನೀಡಲುಂ ಮಜ್ಜನಾಂಭೋ
ಭರಮಂ ಕೈಮಾಡಲುಂ ಬಂದಪುದೊಡನೊಡನಿಂದ್ರಾಣಿ ಕೈಕೊಳ್ವ
ಸೂೞೊಳ್ ॥ ೨೭ ॥

ಅಂದು ವೃಷಭಾದಿಜಿನರ್ಗೆ ಪು
ರಂದರನೊಡರಿಸಿದ ಸೂಚೀಯಾನಕ್ರಮದಿಂ।

ಚಂದೋಗಂ ಪಡೆ ಚಂದಂ
ತಂದುದು ಜಿನಮಜ್ಜನಕ್ಕೆ ಜಿನಮಜ್ಜನಮಂ ॥ ೨೮ ॥

ಎಂದು ಪೊಗೞ್ತೆಗಳುಂಬಮುಂ ತುಂಬಮುಮಾದ ಮಜ್ಜನಮಂಡಪದ ತೋರಣದ್ವಾರೋಪಕಂಠದೊಳ್ ನಿಂದು ಮಂಗಳಾಚಾರಚಾರುಸಂಗೀತಕವಾರಣೋದೀರಿತಮಾಂಗಲ್ಯಪಠನಪಟಹಪ್ರಧ್ವಾನಮೆಸೆಯೆ, ರತ್ನಮಂಡಪಪಾಂಡುಕಶಿಲಾಮಧ್ಯಾಧ್ಯಾಸಿತಹೈಮಸಾಮಜಾರಿವಿಷ್ಟರದೊಳ್ ದೇವಾದಿದೇವನಂ ದೇವರಾಜಂ ಪೂರ್ವಾಭಿಮುಖನಾಗಿ ಬಿಜಯಂಗೆಯ್ಸಿ ಬೞಿಕ್ಕೆ

ಹರಿಯಂ ಶಿಖಿಯಂ ಯಮನಂ
ನಿರುತಿಯನಪ್ಪತಿಯನನಿಳನಿಂ ಧನದನನೀ ।
ಶ್ವರನನವರವರ ದೆಸೆಯೊಳ್
ಪರಿವಾರಕಲತ್ರಪುತ್ರಶಸ್ತ್ರಸಮೇತಂ ॥ ೨೯ ॥

ಇರಿಸಿ ಚತುರ್ನಿಕಾಯಸುರಸ್ತೈನಿಕರಂ ಕರೆದಂಗರಕ್ಷರಾ
ಗಿರಿಸಿ ವಿಶೇಷವಸ್ತುಪರಿಚರ್ಯೆಗೆವೇೞ್ದು ಬೞಿಂದಿಂದ್ರರಂ ಪುರಂ ।
ದರನಮೃತಾಂಶುಕಾಂತ ನವರತ್ನಸುವರ್ಣಘಟಂಗಳಿಂದಮು
ರ್ವರನಿರವೇೞ್ದು ನಿರ್ತೆರದಿನಬ್ಧಿವರಂ ತರಲೆಂದು ದುಗ್ಧಮಂ ॥ ೩೦ ॥

ಹಾರಿವಡೆದೆಸೆದುದಮರರ
ನೇರಾಣಿಯ ಪೊಂಗಡಂಗಳೆರಡುಂ ತರದಿಂ ।
ವಾರಿಧಿಯನೆಯ್ದೆ ಮೊಗೆಯಲ್
ಮೇರುಮಹೀಧರಮೆ ತೋಳ್ಗಳಂ ನೀಡಿದವೊಲ್ ॥ ೩೧ ॥

ಆ ದಿವಿಜಾಧಿಪರ್ ಸುರಿವ ಪಂಚಮವಾರ್ಧಿಯ ಪಾಲ್ ವಿಲೋಚನಾ
ಹ್ಲಾದಿ ಮುಸುಂಕೆ ಚಂದ್ರಿಕೆ ಮುಸುಂಕಿದ ಮಾಣಿಕಜೋತಿವೊಲ್ ಸಿತಾಂ ।
ಭೋದಮೆೞಲ್ದ ಮೇರುವಿನ ಗೈರಿಕಶೃಂಗದವೊಲ್ ಸುಧಾಂಶುವಂ
ಭೇದಿಸಿ ನಿಂದ ಮಂಗಳನವೊಲ್ ಮೆಱೆದಂ ಭುವನೈಕಮಂಗಳಂ ॥ ೩೨ ॥

ಹರಿನೀಲೋಪಲಕುಂಭಮಂಬುದಚಯಂ ಗಂಭೀರಭೇರೀಮೃದಂ
ಗರವಂ ಗರ್ಜಿತಮುದ್ಧಕಂಕಣಮಣಿ ಪ್ರದ್ಯೋತಿವಿದ್ಯುಲ್ಲತಾ ।
ಚ್ಛುರಮೆಂತಂತಿರೆ ತೀರ್ಥಕೃತ್ಪರಮಸಾರಕ್ಷೇತ್ರದೊಳ್ ಭೋರೆನು
ತ್ತಿರೆ ಪರ್ಜನ್ಯನಿನೋಜ್ಯಮೇಂ ಕಱೆದುದೋ ಹಸ್ತಂ ಪಯಃಪೂರಮಂ ॥ ೩೩ ॥

ನೆರೆದ ಸುರಾಸುರವ್ರಜದ ನೋಡುವ ಕಣ್ಗಳ್ ಪುಣ್ಯಪುಂಜಮಾ
ವರಿಸಿದುದೆಲ್ದಿ ಪಾಂಡುಕಶಿಲಾತಳಕಾಂತಿ ಕವಲ್ದು ಮೇಲೆ ಪಂ ।
ಜರಿಸಿದುದಪ್ಪಿಕೊಂಡುದಮೃತಾಂಗನೆಯಕ್ಕಿಱಿಳುರ್ಕೆಯೆಂಬಿನಂ
ಸುರಿವ ಪಯಃಪ್ಲವಂ ಮೆಱೆದುದಾ ಜಿನಪುಂಗವನಂಗವಟ್ಟದೊಳ್ ॥ ೩೪ ॥

ಶಿರದೊಳ್ ಸೂಸಿದ ಸೇಸೆಯಂತೆ ಕೊರಲೊಳ್ ಮುಕ್ತಾಫಲಶ್ರೇಣಿಯಂ
ತುರದೊಳ್ ಚಂದನಚರ್ಚೆಯಂತೆ ಕಟಿಯೊಳ್ ತಳ್ತುಟ್ಟ ಬೆಳ್ಪಟ್ಟೆಯಂ ।
ತೆರಡುಂ ತೋಳಿಡೆಯೊಳ್ ಮೃಣಾಳವಳಯಶ್ರೀಯಂತೆ ಚೆಲ್ವಾಯ್ತು ಮಂ
ದರಧಾರಾಗತಿಯಿಂ ಜಿನೇಂದ್ರನಭಿಷೇಕಸ್ನಿಗ್ಧದುಗ್ಧಪ್ಲವಂ ॥ ೩೫ ॥

ಆ ಮಹಾಭಿಷಣವಣಾಂತರದೊಳ್

ಪಸುಳೆಗೆ ತಕ್ಕ ಮಜ್ಜನಮಿದಲ್ತು ಪುರಂದರನಷ್ಟಯೋಜನ
ಪ್ರಸರದ ಕುಂಭಕೋಟಿಗಳಿನಂಬುಧಿಯಂ ಬಱಿಕೆಯ್ದನೆಂದು ಶಂ ।
ಕಿಸುವಮರರ್ಕಳೇಱಿದ ವಿಮಾನಮೆ ಗಾಳಿಯ ತೂಳದಂತಿರಾ
ಗುಸಿರ್ವುಸಿರಿಂದೆ ನಂಬಿದರಮರ್ತ್ಯರನಂತವೀರ್ಯಮಂ ॥ ೩೬ ॥

ಘೋರೆಂದು ಕವಿದು ಸವನ
ಕ್ಷೀರಂ ನಾಲ್ದೆಸೆಯನಿಱಿದು ಪರಿದುದು ದಿವಿಜರ್ ।
ಮೇರುಮಹೀಧರಮಲ್ಲದು
ತಾರಮಹೀಧರಮಿದೆಂದು ಪೊಲಗಿಡುವಿನೆಗಂ ॥ ೩೭ ॥

ಪಿರಿದು ಪರಕಲಿಸಿ ಮೇರುವ
ನರುಹನ ಮಜ್ಜನಪಯಃಪ್ಲವಂ ಮುಸುಕಲೊಡಂ ।
ಮರನೆನಿತೊಳವನಿತ್ತುಂ ಪಾ
ಲ್ಮರನಾದುವು ಧರೆಯೊಳಂತೆ ಪಾಲ್ಮರನೊಳವೇ ॥ ೩೮ ॥

ಪಂಚಮಜಲಧಿಯ ಪಾಲ್ಗಡ
ಲಂಚಿರಮಾದೊಡೆ ಬಱಿಕ್ಕೆ ತೀರ್ಥಜಲಂಗಳ್ ।
ಪಿಂಚಿದುವಿಲ್ಲೆಂಬಂತಿರೆ
ಮುಂಚಿದರಲ್ಲಲ್ಲಿಗೆಯ್ದಿ ಮೊಗೆಯಲ್ದಿವಿಜರ್ ॥ ೩೯ ॥

ಅಂತು ತಂದು ವೃಂದಾರಕವೃಂದಮುಮವಟಯಿಸುವಾಗಳ್

ಗಗನಾಸ್ಫಾಟಿಕಕುಂಭಸಂಭೃತಸರಸೊಸ್ರೀತಸ್ವಿನೀದಿವ್ಯವಾ
ರಿಗಳಿಂದುದ್ಗತದೇವದೇಹಸುರಭಿಶ್ರೀವಾಸಿತಾಚ್ಛಾಚ್ಛಶೋ ।
ಭೆಗಳಿಂ ನಾಕಜನಾಥರಿರ್ವರುಮುಮೂರ್ತಧ್ಯಾನಸಾರಸ್ಯಮಂ
ಜಗದಾತ್ಮಂಗೆ ನಿವೇದಿಸುಂತೆಸಗಿದರ್ ಗಂಧೋದಕಸ್ನಾನಮಂ ॥ ೪೦ ॥

ನಾದೇಯಮವಾರಿ ದಿವ್ಯಾ
ಮೋದಂ ತಳ್ಪೊಯ್ದು ಪೊಂಗೆ ಕಂಪಾಯ್ತೆಂಬಂ ।
ಕಾದುದು ಸುವರ್ಣಗಿರಿ ಗಂ
ಧೋದಕದಿಂ ತ್ರಿಭುವನೈಕಚೂಡಾಮಣಿಯಾ ॥ ೪೧ ॥

ತದನಂತರಂ

ದೇವಾಂಗದಿಂದೆ ತೊಡೆದಳ್
ದೇವಾಂಗನೆ ರತ್ನಮುಕುರಮಂ ತೊಡೆವವೊಲಾ ।
ದೇವಾಂಗಮನೊಲ್ದೆ ಬಿಗುವ
ದೇವಾಂಗವಿಭೂಷಣಾಂಶು ಮಾರ್ಪೊಳೆವಿನೆಗಂ ॥ ೪೨ ॥

ಅನಂತರಮಭಿಷವಣಮಣಿಸಿಂಹಾಸನದಿಂದಲಂಕರಣವಿಷ್ಟರಮಂ ವಿಷ್ಟಪತ್ರಯಾಲಂಕಾರದಿಂದಮಲಂಕರಿಸಿ

ತೊಡವಿಂಗೆ ತೊಡವು ರತ್ನದ
ಬಿಡುವಿಂಗೆಸೆವೊಪ್ಪಸಲಗೆ ಕಾಂತಿಗೆ ಕೈಗ ।
ನ್ನಡಿ ತೀರ್ಥಕರಕುಮಾರನ
ಬೆಡಂಗು ಬೆಳ್ಮಾಡಿದಪುದಲಂಕರಿಸುವರಂ ॥ ೪೩ ॥

ಎಂದಚ್ಚರಿವಟ್ಟು ಮೆಚ್ಚಿ ಪೊಗಟ್ಬು ಪರಮೌದಾರಿಕ ದಿವ್ಯಶರೀರಸೌಂದರ್ಯಮನೊಸೆದು ಬಿಡೌಜನಂಗನೆ ಮಂಗಳಪ್ರಸಾಧನನಮಂ ಜಗನ್ನಾಥನಿಂ ಸನಾಥಂ ಮಾಡಿದಾಗಳ್

ಅರಳೆಲೆ ಮಾಂಗಾಯ್ ಕಿವಿಯೊಳ್
ಕೊರಲೊಳ್ ತಳತಳಸಿ ಪಾರಿಜಾತ ಕುಜಾತಂ ।
ಕರದೊಳೆ ಕೈಮಂದಂತಿರೆ
ಪರಮನ ಪೊಸಬಾಲಭಾವಮೇನೊಪ್ಪಿದುದೋ ॥ ೪೪ ॥

ಕಡಗದ ಗೆಜ್ಜೆಯ ಕಂಕಣ
ದುಡೆವಣಿಯ ಜೆಡಂಗು ಸಕಲಮಂಗಳವಧು ಕಾ।
ಲ್ವಿಡಿದಪ್ಪಿಕೊಂಡು ಕೆಯ್ಯಂ
ಪಿಡಿದವೊಲೆಸೆದುದು ಜಿನಂಗೆ ಮೌಕ್ತಿಕಖಚಿತಂ ॥ ೪೫ ॥

ಅತಿಶಯಮೆಂದೂರ್ವಶಿ ರಂ
ಭೆತಿಲೋತ್ತಮೆಮಂಜುಘೋಷೆಮೇನಕೆಮೆರಸಾ।
ರತಿಯೆತ್ತಿದಳಭವನ ದಿ
ವ್ಯತನುಗೆ ಶಚಿ ನೋಡೆ ನೋಡೆ ವಿಸ್ಮಯದಿಂದಂ ॥ ೪೬ ॥

ಅಷ್ಟವಿಧಕರ್ಮವೈರಿಯ
ನಷ್ಟವಿಧಾರ್ಚನೆಗಳಿಂದಮರ್ಚಿಸಿ ಭರದಿಂ।
ಸಾಷ್ಟಾಂಗಮೆಱಗಿ ಬೞಿಗಿಯನು
ಭೀಷ್ಟಸ್ತುತಿಗೆಯ್ವಂ ತ್ರಿಭಂಗಿಭಣಿತೆಯಿನಿಂದ್ರಂ ॥ ೪೭ ॥

ಸಮನಂತರಂ

ಅಲರ್ದ ಸರೋಜಷಂಡಮೆಳನೇಸಱನರ್ಚಿಯಿನೆತ್ತಿದಂತೆ ಕ
ಣ್ಮಲರ್ವಿನಮೆಯ್ದೆ ತಣ್ಮಲರ್ವಿನಂ ನಡೆನೋಡಿ ಕಿರೀಟಲಕ್ಷ್ಮಿಯುಂ।
ನಲಿನಲಿದಾಡುವಂತೆ ತಲೆದೂಗಿ ನಿಜಾಂಕದೊಳಿಂದಿರಂ ಜಗ
ತ್ತಿಲಕನನಿಟ್ಟು ಮೇರುನಗದಿಂ ತಳರ್ದಂ ವ್ಯಧಿರೂಢಸಿಂಧುರಂ ॥ ೪೮ ॥

ಪರಮಾರಾಧ್ಯನ ಕಾಯಕಾಂಚನರುಚಿವ್ಯಾಸಕ್ತಿಯಿಂ ಕಣ್ಣ ಮೆ
ಯ್ಸಿರಿ ಹೊನ್ನಾವರೆ ಹೂತವೊಲ್ ಮೞಱಿವಿನಂ ದೇವಾಂಗನಾಚಾರುಚಾ।
ಮರವೃಂದೋದ್ಗತಮಂದಮಾರುತಚಲದ್ಗಂಧೋದಭಾರಾಳಕಾಂ
ಕುರನೆಟ್ಟಂದನಯೋಧ್ಯೆಗುತ್ಸವದಿನಿಂದ್ರಾಣೀಮನೋವಲ್ಲಭಂ ॥ ೪೯ ॥

ಅಂತು ಬಂದಾ ಪುರಗೋಪುರಾಂತರಾಳದೊಳನೇಕನಾಕಿನಿಕಾಯಮಂ ನಿಲಿಸಿ ಕಲ್ಪಾಮರೇಂದ್ರಸಮಾಜಂ ಬೆರಸು ರಾಜಮಂದಿರಮಂ ಪೊಕ್ಕು ಕರುಮಾಡಕ್ಕೆ ಪರಭಾಗಮಾಗೆ ತನ್ನ ಬೆಸದಿಂ ಮುನ್ನಮೆ ಸಮೆದ ಸಾತ್ವಿಕಭಾವದಂತೆ ಸಮುಜ್ಜೃಂಭಿತಸ್ತಂಭಮಱುಮನನರ್ಘ್ಯರತ್ನದಂತೆ ರಂಗರಮಣೀಯಮುಮಪ್ಪ ಮಣಿಮಂಡಪದ ಮಧ್ಯವೇದಿಕೆಯ ಸಿಂಹಾಸನದೊಳ್ ಜಿನಸಿಂಹಕಿಶೋರಕನನಿರಿಸಿ ಮಾಂಗಳಿಕಪರಿಕರಂಬೆರಸು ತನಗಿದಿರೆಳ್ದ ಸಿಂಹಸೇನಮಹಾರಾಜನುಮಂ ಜಯಶ್ಯಾಮಾಮಹಾದೇವಿಯುಮನಭಿವಂದಿತಚಾಟು

ಚಾತುರ್ಯದಿಂ ಸಂತೋಷಂಬಡಿಸಿ ಮಂದರಾಚಳಚೂಳಿಕಾಚರಿತಜನ್ಮಾಭಿಷವಣ ಕಲ್ಯಾಣಮುನವರ್ಗೆ ವಿದಿತಂ ಮಾಡಿ ಸಿಂಹಾಸನೋಭಯಪಾರ್ಶ್ವಪ್ರದೇಶದೊಳ್ ದೇವಾದಿದೇವಪದರಾಜೀವಸೇವಾವಿಲಾಸದಿನಿರ್ದಲ್ಲಿ

ಪದೆವಂ ಲೋಕಮನೀಜಗದ್ಗುರು ದಯಾಲೋಕಾಮೃತಾಸಾರದಿಂ
ಕಿಡೆ ಕರ್ಮಾನಳನಾ ಜವಂಜವಿಗಳೆಲ್ಲಂ ಸೌಖ್ಯಜನ್ಮಂಗಳಂ।
ಪಡೆವನ್ನಂ ನೆಗಟ್ದೀ ಮಹಾಮಹಿಮನಂ ತಾಯ್ತಂದೆವಿರ್ ಪುಣ್ಯದಿಂ
ಪಡೆದಿರ್ ನಿಮ್ಮ ಮಹತ್ವಮಾ ತ್ರಿಭುವನಪ್ರೋತ್ತಂಸಿಕಾಭೂಷಣಂ ॥ ೫೦ ॥

ಎಂದಿಂದ್ರನಭಿವಂದಿಸಲೊಡಂ

ಪರಮಸುಖಾಮೃತಂ ನಯನನಿಮ್ನಗೆಯಂ ಕರೆಗಣ್ಮಿವಂತಿರು
ಬ್ಬರಿಸೆ ಮುದಶ್ರುಪೂರಮಮರೇಂದ್ರವಚೋಮಲಯಾನಿಲಂ ನವಾಂ।
ಕುರಮನೊಡರ್ಚೆದಂತೆ ಪುಲಕಾಂಕುರಮಂ ತನುವಲ್ಲಿ ತಾಳ್ದೆ ಮಾ
ತರಪಿತರರ್ ಕುಮಾರಮುಖದರ್ಶನದಿಂ ಪಡೆದರ್ ಪ್ರಮೋದಮಂ ॥ ೫೧ ॥

ಆಗಳ್

ತಾಳದ ವಾದ್ಯದ ನೃತ್ಯದ
ಚಾಳಿಪ ಪಂಚಮದ ಮಂಗಳಾಚಾರದ ಸ।
ಮ್ಮೇಳದಿನಮೃತಪಯಃಕ
ಲ್ಲೋಳಿನಿಯೊಳ್ ಮುಳುಗಿಸಿತ್ತು ಸುರನರಸಭೆಯಂ ॥ ೫೨ ॥

ಗತಿಗೆಟ್ಟಾಡುವ ಸೊಕ್ಕನಿಕ್ಕಿದಪುದಾಸಂಗೀತಕಂ ದೇವನೂ
ರ್ಜಿತಪುಣ್ಯೋದಯಮೆಂಬುದಪ್ರಮಿತಮಾತಂ ರಾಗಿ ಮತ್ತಂತರಂ।
ಗತರಂಗಂ ನೆಲೆವೆರ್ಚೆ ಮಾಣ್ಬನೆ ಮಿಸೇಯಂ ಕಟ್ಟಿದುಟ್ಟಿಟ್ಟ ದೇ
ವತರಂ ಮಂಡಿಸಿಕೊಂಡ ಗೆಜ್ಜೆ ಮಿಗೆ ರಂಗಂಬೊಕ್ಕನಾಖಂಡಲಂ ॥ ೫೩ ॥

ಪಿಡಿದ ಜನಸಿಕೆಯ ಮಱಿಯೊಳ್
ಕುಡುಮಿಂಚಿನ ಬಳ್ಳಿಮುಗಿಲ ತೆಳ್ಪಿರೆಯೊಳ್ ಕ।
ಣ್ಗೆಡಱುವೊಲಡರೆ ತೋರ್ದುವು
ತೊಡವಿನ ಬಿಡುವುಂ ಬಿಡೌಜನಂಗಚ್ಛವಿಯುಂ ॥ ೫೪ ॥

ತನು ಮಜ್ಜುಭಾನಮೊಳ್ ಮೆಱೆಯೆ ರೂಪಿನ ಮೊಗ್ಗಱ ರೇಖೆ ಡಾಳಮೊಳ್
ನನೆಕೊನೆವೋಗೆ ಬಂದು ಕುಸುಮಾಂಜಳಿಯಂ ಬಳವ್ವಿರಿ ಸೂಸೆ ಪೂ।

ವಿನಮಟಿಗಳ್ ಜಿನಾರ್ಭಕನ ಪಾದನಖಚ್ಛಲದಿಂದೆ ನಿಂದು ಚಂ
ದ್ರನ ಬೞಿಸಂದ ತಾರಗೆಯೊಳೋರಗೆಯಾದುವು ನೃತ್ಯರಂಗದೊಳ್ ॥ ೫೫ ॥

ಪ್ರಣಯಾಲಂಬ ವಿಧಾಯಿ ವರ್ತನವಿಧಂ ಕರ್ಣಾಮೃತಂ ಘರ್ಘರೀ
ಕ್ವಣಿತಂ ಕೌತುಕಹೇತು ಚಿತ್ರನಟನಂ ಕೈವಾರವಾರಂದನು ।
ಲ್ಬಣಕಂ ಗೀತದ ಮಾತನಾನುಷಮುದೇಂ ಪಂಚಾಂಗವೊಪ್ಪಿತ್ತೊ ಪೇ
ರಣಿ ಸಂಕ್ರಂದನನಲ್ಲದಿಲ್ಲೆ ನಿಸಿದತ್ತಾ ತಾಂಡವಾಡಂಬರಂ ॥ ೫೬ ॥

ನಯನಾನಂದಮನಿತ್ತುದಿಂದ್ರನಟನ ಪ್ರಾಗಲ್ಭ್ಯದಿಂ ಕೂಡೆ ಚಾ
ರಿಯೊಳುಲ್ಲಾಳದ ಬೇಗದೊಳ್ ಕರಣನೈಷನ್ಯಂಗಳೊಳ್ ದೇವಕಾಂ ।
ತೆಯರಲ್ಲಾಡದೆ ಸಂದ ಸೆಳ್ಳಿಗುರ ಸೂಚೀನರ್ತನಂ ಬಾಹುಶೋ
ಭೆಯ ಜಕ್ಕಂದೊಟಿವಂಶಮಂಡಲದ ಲಾಸ್ಯಂ ತನ್ನ ಮೆಯ್ಯ್ಯದ್ದವಂ ॥ ೫೭ ॥

ನಿಂದ ಭರಕ್ಕೆ ಧಾತ್ರಿ ನಡುಗುತ್ತಿರೆ ಮೆಟ್ಟೆ ಲಯಕ್ಕೆ ದಿಗ್ಗಜಂ
ಪಿಂದಡಿಯಿಟ್ಟು ಬೆರ್ಚುತಿರೆ ಪಿಂದೆಸೆಗಳ್ ತಡನಾಗೆ ತಾಂಡವಾ ।
ನಂದದಿನಾಡುವಲ್ಲಿ ಹರಿ ನೀಡಿದ ತೋಳ್ಗಳೊಳಾಡಿದತ್ತು ಜ
ಕ್ಕಂದೊಟಿವಂ ಭ್ರಮದ್ಭ್ರಮರದಿಂದಮರಪ್ರಮದಾಕದಂಬಕಂ ॥ ೫೮ ॥

ಅದನೇವೇೞ್ದಪೆನಾಜಿಸೇಂದ್ರಮಹಿಮಾವಷ್ಟಂಭಮಂ ಮೂಱುಲೋ
ಕದೊಳಂ ಪುಟ್ಟಲೊಡಂ ಮಹೋತ್ಸವರಸಂ ತಳ್ಪಂಕಗುಟ್ಟಿತ್ತು ತೀ ।
ರ್ದುದು ದುಗ್ಧಾಂಬುಧಿ ಮೇರುಪೀಠಮೆನೆ ಮಿಂದಂ ಚಿಣ್ಣನಿಂದ್ರಾಣಿ ಪಾ
ಡಿದಳೆಟ್ಟಾಡಿದನಿಂದ್ರನಿಂದ್ರರೆ ಗಡಂ ಕೈವಾರಮಂ ಮಾಡಿದರ್ ॥ ೫೯ ॥

ಅಂತು ಲೋಕಾಶ್ಚರ್ಯಮುಮಪೂರ್ವರಸಮಾಧುರ್ಯಮುಮಾಗೆ ವೃತ್ರವೈರಿ ನೃತ್ಯವಿಲಾಸಮಂ ಮೆಱೆದನಂತರಮನಂತಚರಿತ ವಿಜಯಿಯಪ್ಪುದರಿನನಂತನಾಥನು ಮೆಂಬ ಪರಮವಚನಶ್ರುತ ಪೂರ್ಸ್ವಂಗಳಂ ಸಕಲ ಮಂಗಳಂಗಳಂ ಪೆಸರ್ಗೊಂಡೆತ್ತಿ ಸಲ ಪುವ ಧಾತ್ರೀನಿಯೋಗಕ್ಕಮರ್ತ್ಯಮಹತ್ತರಿಕೆಯರುಮಂ ಡಿಂಭಕ್ರೀಡಾತಿರಂಭಕ್ಕೆ ತಕ್ಕ ವೃಂದಾರಕದಾರಕರುಮಂ ನಿಯೋಜಿಸಿ ತದೀಯ ಪಿತೃದ್ವಂದ್ವಮಂ ಪೂಜಿಸಿ

ದಿವಿಜೇಂದ್ರೇಭದ ಜೆಂಗೆನಂದು ವಿನಯಪ್ರಾಧಾನ್ಯಮಾಸ್ತ್ಯೋಕ್ತಿಯಿಂ
ಭವನೇಂದ್ರಾದ್ಯಮರೇಂದ್ರರಂ ಕಳಿಪಿ ಕಲ್ಯಾಣಕ್ರಿಯಾಕಾರಕ ।
ಸ್ವವಿವೇಕಂ ಕೃತಕೃತ್ಯಭಾವಮೆರ್ದೆಯೊಳ್ ತಳ್ತೊಪ್ಪಿಸಂ ಪೊಕ್ಕನು
ತ್ಸವದಿಂ ಬಂದಮರಾವತೀನಗರಮಂ ಸಾಹಿತ್ಯರತ್ನಾಕರಂ ॥ ೬೦ ॥

ಅನಂತೇಶ್ವರನಾಥನುಂ ಸ್ವಯಂವರನಾದಂ

ಶ್ರೀಧಾತ್ರಿಯಾದವೋಲವು
ರೀಧಾತ್ರಿಯರಪ್ಪುತರಸದೆ ಬಳೆಯಿಸೆಯುವ್ವಾ।
ಭ್ರಾದಂ ಮತಿಶ್ರುತಾವಧಿ
ಬೋಧಂ ಬಳೆದಂ ವಿನೇಯಜನಮುಖತಿಲಕಂ ॥ ೧ ॥

ಪರಮಪವಿತ್ರನಂ ಪರುಷವೇಧಿಯ ತೊಟ್ಟಿಲೊಳಿಟ್ಟು ನಚ್ಚಿನ
ಚ್ಚರಿಯರನಂತ ಜೋ ಅನಘ ಜೋ ಮದನದ್ವಿಪಸಿಂಹ ಜೋ ಚರಾ।
ಚರಪರಮೇಷ್ಠಿ ಜೋ ಭುವನಭೂಷಣ ಜೋ ಜಗದಾತ್ಮ ಜೋ ಜರಾ
ಮರಣವಿದೂರ ಜೋ ಎನುತೆ ಜೋಗುಳಮಂ ಶ್ರುತಿಗೂಡಿ ಪಾಡಿದರ್ ॥ ೨ ॥

ಪಡೆದ ಪಿತೃದ್ವಯಕ್ಕೆ ಕಡುಸಂತಸಮಂ ಪಡೆಯಲ್ ವಿಬೋಧಮಂ
ಮಡಗಿ ನೆಗಟ್ಟಿ ಮುಗ್ಧತನಮಂ ಪರಮೇಶ್ವರನಿತ್ತಲಿತ್ತಲಿಂ।
ದೊಡೆ ಮೊಗನೋಡಿ ನಕ್ಕನಡರ್ದಂ ಜನನೀಘನಜಂಘೆಯಂ ತೊದ
ಳ್ನುಡಿನುಡಿದಂ ತಳರ್ನಡೆಗಳಂ ನಡೆದಂ ಚಿಟುಕಿಟ್ಟೊಡಾಡಿದಂ ॥ ೩ ॥

ತೊದಳಿಸದ ತೊದಲ್ ಕೊಂಕಿ
ಲ್ಲದ ದಟ್ಟಡಿ ರಾಗಮಿಲ್ಲದೊಳ್ನಗೆ ಕಿಸುರಿ।
ಲ್ಲದ ಮುದ್ದಾಟಂ ಮುಳಿಸಿ
ಲ್ಲದ ಕಾಟಂ ಬಾಲಭಾವಮಚ್ಚರಿ ಜಿನನಾ ॥ ೪ ॥

ಅಂತು ಮೆಱೆದು ಕರಣಜಾಳ ಜಾಡಿಕಾಱ ಶೈಶವಪ್ರಾವೃಷೇಣ್ಯಮೋಸರಿಸಲೊಡಂ ಮತಿಶ್ರುತಾವಧಿಬೋಧಪ್ರದ್ಯೋತನಪ್ರಭಾವದಿಂ ಸಹಪಾಂಸುಕ್ರೀಡಿತರಾದಮರಕುಮಾರರೊಳ್ ಕುಮಾರಶೇಖರಂ

ಇದು ಶಬ್ದಾಗಮನಿರ್ಣಯಂ ನಿಗಮವಿೞಾಪಾಂಗರ್ಥಶಾಸ್ತ್ರಕ್ಕೆ ಕಾ
ವ್ಯದ ಭೇದಂಗಳನಿತ್ತು ನಾಟಕರಸಂ ಭಾವಂಗಳೀಯಂದಮಿಂ।
ತಿದು ಮರ್ಮಂ ಕಲೆಗಾಗಮಾನ್ವಯಮಿದೆಂಬಾಮ್ನಾಯದಿಂ ದಾರಕ
ತ್ರಿದಶರ್ ಪ್ರಶ್ನಕರಾಗೆ ತಾಂ ತಿಳಿಪುವಂ ತ್ರಿಜ್ಞಾನರತ್ನಾಕರಂ ॥ ೫ ॥

ಪರಮೌದಾರಿಕದೇಹಜಾತಿಶಯಮಿರ್ಪ್ಪುದುಂತು ನಿಸ್ವೇದಸೀ
ಕರವಾಕ್ಷೀರಸಿತಾಸ್ರಜಂ ಕುಲಿಶನಾರಾಚದಿ ನಿರ್ಭೇದ್ಯನು ।
ದ್ಧುರವೀರ್ಯಂ ವಿಮಲಂ ಸುಲಕ್ಷಣಯುತಂ ಸೌಗಂಧಿಕಂ ಮೋಹನಾ
ಕರವಾದರ್ಶಿತ ಶತ್ರುಲೋಕಹಿತಭಾಷಂ ದೇವಚಕ್ರೇಶನೊಳ್ ॥ ೬ ॥

ಅದಲ್ಲದೆಯುಂ

ಇದು ಸಂದೇಹಮೆ ದೇಹದೊಳ್ ಚರಮದೇಹಂಗುಂಟು ಶೀತಕ್ಕೆ ಕೋ
ಡದ ವಾತಕ್ಕಲುಗಾಡದಾತಪದ ಕೋಳಿಂ ಕಾಯದುಗ್ರಾಗ್ನಿ ಪ ।
ತ್ತಿದೊಡಂ ಬೇಯದ ಕಂಟಕಾಮಯಸಮೂಹಂ ತೋಱದೊಂಬತ್ತು ಭೇ
ದದ ನಂಜೇಱದ ಮುಪ್ಪುಬಾರದ ಯುವತ್ವಂ ತೀರದುತ್ಕರ್ಷಣಂ ॥ ೭ ॥

ಸಡೆದರೊ ಪುಷ್ಯರಾಗದಳದಿಂ ಕಡೆಯಾಣೆಯ ಪೊನ್ನಪಟ್ಟಿಯಿಂ
ಕಡೆದರೊ ಬಾಲಭಾನುಕರದಿಂ ಕರುವಿಟ್ಟರೊ ಬಳ್ಳಿಮಿಂಚಿನೊ ।
ಳ್ಗ್ಗಡಿಯನೆ ಕೊಂಡು ಕಂಡರಣೆಗೆಯ್ದರೊ ಪೇೞೆನೆ ಕಣ್ಗೆವಂದು ಕೈ
ಯ್ವಿಡಿವುದು ಚಿತ್ರಮುಂ ನುತಶತಾರ್ಧಧನುಸ್ತನು ಶಾಂತಿಕಾಂತನಾ ॥ ೮ ॥

ತರುಣೀಲೋಕಾವಲೋಕಭ್ರಮಿತಮಧುಕರಂ ಬಂಧುಗೋತ್ರಾನುರಾಗಾ
ಕರಲೀಲಾಪಲ್ಲವಂ ಮಾತರಪಿತರಹೃದಾನಂದಮುಂದಸ್ಮಿತಪ್ರ ।
ಸ್ಫುರಿತಪ್ರತ್ಯಗ್ರಮುಂ ಜನ್ಮನದ ದೆಸೆಗದೇಂ ಬಂದನೋ ಪಾರಿಜಾತಾಂ
ಕುರಮಿಂದ್ರೋದ್ಯಾನದೊಳ್ ಬೆಳ್ಪಳನೆ ಬಳೆದು ಕೆಯ್ವಂದವೊಲ್ ತೀರ್ಥನಾಥಂ ॥ ೯ ॥

ವನಿತಾವಶ್ಯಾಂಜನಂ ಹೃತ್ಕಮುದನಯನನೀರೇಜನೀಮೋಹನಂ ಕೋ
ರನ ರೂಪೀರೂಪೆ ಸಾಲ್ಗುಂ ಜಗಮನೆಱಗಿಸಲ್ ವ್ಯರ್ಥಮಿರ್ಕ್ಕೆದುವೆಂದಾ ।
ತನಗಿನ್ನೆಂತೆಂದೊ ಮೇಣಾನಱಿಯೆನಭವನಾಕಾರಮಂ ಕಾಣ್ಕೆ ದುಂ ಕ
ಬ್ಬಿನಬಿಲ್ಲಂ ಪೂವಿನಂಬಂ ರತಿಯ ವದನಮುಂ ನೋಡಿ ಸುಯ್ವಂ ಮನೋಜಂ ॥ ೧೦ ॥

ಅಂತು ನನೆಗಣೆಗಳ ಕೂರ್ಪುಮಂ ಕಬ್ಬಿನಬಿಲ್ಲ ಪೊಡರ್ಪುಮಂ ಮಲಯಮಾರುತನ ಬೆಂಬಲಮುಮಂ ಚೈತ್ರಮಿತ್ರನ ಬೆಂಬಲಮುಮಂ ಮಕರಕೇತನ ಪೆಂಪುಮಂ ರತಿಯ ಸೋಂಕಿನ ಸೊಂಪುಮಂ ದರ್ಪಕನ ದರ್ಪಂಬೆರಸೆಱಕಮಳಿಕೊಂಡು ಗಂಡೇಱಿದ ಗಂಡಗಾಡಿ ರೂಡಿವಡೆಯೆ ತೀವಿದ ತಿಂಗಳ ಬೆಳಗಿನೊಳಗೆ ತೇಂಕುವ ರಾಕಾಶಶಾಂಕನಂತೆ

ಶಾಂತನುಂ ನಿರ್ವಿಕಾರನುಂ ನಿರೀಹಿತನುಂ ನಿರ್ಮಲನುಮಪ್ಪಾಗಿ ಲೋಕಾವಲೋಕನಂಗಳ
ಪುಣ್ಯಪುಂಜವೆನಿಸಿ ರಂಜಿಸುವ ಕುಮಾರನಾಕಾರಮಂ ನೋಡಿ

ಬಳೆದಂ ಜನ್ಮನಮಾಯುಷ್ಯ ಪೊಯ್ತೀಳಪೆಯೊಳ್ ಸಪ್ತಾರ್ಧಲಕ್ಷಾಬ್ದಮಂ
ಗುಳಿಸಂಗಂ ಕುಲಕನ್ಯಕಾಜನದೊಳಾಗಲ್ವೇಟ್ಕು ಮುಂತಿಲ್ಲ ಮ ।
ತ್ಕುಳವಿಸ್ತಾರಮಿದರ್ಕೊಡಂಬಡಿಪೊಡೀತಂ ವೀತರಾಗಂ ವಿನಿ
ಶ್ಚಳನೆಂಬಂತನಿತಾಯುಷ್ಯ ಸಿಂಹನರನಾಥಂಗಂ ಜಯಶ್ಯಾಮೆಗಂ || ೧೧ ||

ಅಂತಲ್ಲದೊಡಂ

ಜಿನನಂ ಸೋಲಿಪ ಪೆಂಡಿರಾರ್ ಪರಮನಂ ತೋಳ್ಸತ್ತಿನೊಳ್ ಕಾವ ಕಾ
ಮಿನಿಯಾರ್ ದೇವರದೇವನಂಕತಲದೊಳ್ ಮಾದೇವಿಯಾಗೊಪ್ಪುವಂ ।
ಗನೆಯಾರ್ ಕೇಳ್ದಡೆಯಿಲ್ಲ ಕಂಡ ಕುಜುಪಿನ್ನಿಂತಪ್ಪ ಪೆಣ್ಣಂ ಕುಮಾ
ರನೊಡಂಬಟ್ಟೊಡಮೆಂದ ಭೂಪತಿಗದೋರ್ವಂ ಸೈನಿಕಾಗ್ರೇಸರಂ || ೧೨ ||

ಸಿಂಹಾಸನತಳಾತಳಿತಮಾದ ಭದ್ರಾಸನದೊಳಿರ್ದ ಭದ್ರಬಳನೆಂಬಂ ಸಂಘಟಿತ ಕರಪಲ್ಲವನಾಗಳಿಂತೆಂದಂ

ದೇವನ ಜಾತೋತ್ಸವದೊಳ್
ತಾನೆಲ್ಲಂ ಬಂದರಂದು ಕಿಱುಗೂಸು ಭವ ।
ದ್ದೇವರನ ಕೀರ್ತಿಶೇಖರ
ದೇವನ ಸುತೆ ರತ್ನಮಾಲೆ ದೇವರುಮಱಿವಿರ್ || ೧೩ ||

ದೇವರ ಜಿಸದಿಂ ಶೇಖರ
ದೇವನ ದಿಗ್ವಯಕ್ಕೆ ಪಡಿಬಲಂ ನಡೆದಿರ್ದಾ ।
ನೀವಧುವಂ ಕಂಡೆಂ ದೇವರ
ದೇವನ ಮಾದೇವಿಯಾಗಲಾಕೆಯೆ ತಕ್ಕಳ್ || ೧೪ ||

ಸುರನರಖಚರೋರಗಸುಂ
ದರಿಯರ್ಗಾ ತರುಣಿಯಂಗಲತಿಕೆಯ ಲಾವ ।
ಣ್ಯರಸಪ್ರವಾಹಲವಮುಂ
ದೊರೆಕೊಳ್ವೊಡೆ ನಿನ್ನ ಪಾದದಾಣೆಡಲವ್ಮೆಂ || ೧೫ ||

ತೀವಿದ ಯೌವನಭರಮುಂ
ಲಾವಣ್ಯರಸಂ ತುಱುಂಕೆ ನಯಮುಳಿಬಳಿವೊಂ ।
ದಾವುದುವೆಳವೆಲ್ದಿಂಗಳ
ಭಾವಿಸಿದ ಸುಧಾಂಶುಕೇಳಿಯಂ ಮುಱಿಯಿಸಿದಳ್ ॥ ೧೬ ॥

ಎಂದು ಜಗಜ್ಜನನಿಯುಮಿತನುಳ್ಳುದನೆ ನುಡಿದೊಡನಾಕನ್ನೆಗೀ ವರ್ಣನ ಮನಿಪ್ಪನ್ನ ವಾಸ್ತವನಾಪದಾರ್ಥಮುಂ ತಾವಕೀನಮಿನ್ನುತ್ತರಮಿಲ್ಲುತ್ತರೋತ್ತರಂ ಮಾಳ್ಪುದೆನಲೊಡಂ ಭೂವಲ್ಲಭಂ ನಿರತಿಶಯಾನುರಾಗ ನಿರ್ಭರಚಿತ್ತಂ ನಿಶ್ಚಿತಾಲೋಚನ ನಾಗಿ

ದೇವಿಯರ ವಂಶವೆಂಬುದು
ಯೌವನರತ್ನಕ್ಕೆ ರೋಹಣಾಚಲಮಿದು ಸಂ ।
ಭಾವಿತವೇನುಂಗುರದೊಳ್
ಕೇವಣಿಸಿದ ರತ್ನಮಾಯ್ತು ಚಿಂತಾರತ್ನಂ ॥ ೧೭ ॥

ಎಂದು ಕೀರ್ತಿಶೇಖರಧರಾರಮಣಂಗೆ ಹಸ್ತಾರ್ಕನಂತೆ ಕನ್ಯಾಸಮನ್ವಿತಂ ಬರ್ಪಂತು ಬಱಿಯಟ್ಟಿ ಬಱಿಯಂ ನಿಜವಲ್ಲಭೆನೆರಸು ಕುಮಾರಶೇಖರನಿರ್ದ ಕಳಾವಿಲಾಸಭವನಕ್ಕೆ ಬಂದು ತಮ್ಮ ಬರವಿಂಗೆ ತದಾತ್ವಿಕ ಪ್ರಸಂಗಮುಂ ಪರಿಹರಿಸಿರ್ದ ಪರಮೇಶ್ವರನ ಮೃಗೇಶ್ವ ರಾಸನೋಪಾಂತಕಾಂತಕನಕಮಣಿಪೀಠಮುನನಲಂಕರಿಸಿ ತತ್ಸಮಯ ಸಮುಚಿತಾನು ನಯಭಾವಂ ಸಂಭಾವನೆವಡೆಯೆ ಮೆಲ್ಲನೆ ಪೊರ್ದಿ ಸಿಂಹಸೇನಮಹಾರಾಜಂ ದೇವರಾಜಾ ರಾಧ್ಯಂಗಿಂತೆಂದಂ

ಇದು ರತ್ನಾಕರಮೆಂಬ ಪೆಂಪುದಧಿಗಾಯ್ತಾಕೌಸ್ತುಭಶ್ಲಾಘ್ಯರ
ತ್ನದ ರೂಢೋದಯದಿಂಪೇ ನಿನ್ನುದಯದಿಂವೆಮ್ಮೊಳ್ ಜಗದ್ಗಾರಮಂ ।
ವಿದಿತಂ ತಾನೆಸಿಸಿತ್ತು ಸಲ್ಗೆ ನುಡಿಯಲ್ವೇಟ್ಟಿತ್ತಿದಂ ವಿಶ್ವಲೋ
ಕದಯಾವಲ್ಲಭ ಕೇಳ್ದು ಮನ್ನಿಸು ಮದೀಯಸ್ವಾಂತಿಕೋದಂತಮಂ ॥ ೧೮ ॥

ವಿಮಲಾಧೀಶ್ವರ ತೀರ್ಥಸಂತತಿಲತಾವ್ಯುಚ್ಛೇದಮಾದಲ್ಲಿ ಧ
ರ್ಮಮುಖಂಗಂಡುದು ದೇವ ನಿನ್ನುದಯದಿಂದೀಲೋಕಮಿಕ್ಷ್ವಾಕುವಂ ।
ಶಮುಮಾದಿಪ್ರಭುವಿಂದಮಿಂದುವರೆಗಂ ಸಂದಿರ್ದುದೀ ಕ್ಷಾತ್ರಧ
ರ್ಮಮುಮಂ ಧರ್ಮಮುಮಂ ಸಮುದ್ಧರಿಸು ನೀಂ ತ್ರೈಲೋಕ್ಯರಕ್ಷಾಮಣೀ ॥ ೧೯ ॥

ಅದುಕಾರಣದಿಂ ಮಾಡುವ
ಮದುವೆಗೊಡಂಬಡುವುದೆನ್ನ ನೋಡುವ ಕಣ್ಣಂ ।
ಪಡೆವ ಮನಕ್ಕಂ ಮಾಳ್ಪುದು
ಮುದಮಂ ಧರೆಗುಭಯಭವಹಿತಂ ಪ್ರಭುಚರಿತಾ ॥ ೨೦ ॥

ಅಂತು ಬಿನ್ನವಿಸಲೊಡಮನಂತನಾಥನಂತರ್ಗತದೊಳಿಂತೆಂದು ಭಾವಿಸಿದಂ

ತವಿಸಲ್ವೇಳ್ಪುದು ಜನ್ಮ
ಕ್ಕವಶಿಷ್ಟಾನಿಷ್ಟಯೋಗವಂ "ಭವಿತವ್ಯಂ ।
ಭವತಿ" ಎನಿಪ್ಪುದು ದಿಟಮಿಂ
ದಿವರ ದುರಾಗ್ರಹಮನಿಂತು ಮನ್ನಿಸಿ ಕಳೆವೆಂ ॥ ೨೧ ॥

ಎಂದು

ಪರಿಭಾವಿಸೆ ಬಳಿಯಂ ದೇವ
ವರ ದೇವನ ಮೊಗದೊಳೊಗೆಯೆ ನಗೆಯ ಮುಗುಳ್ ಕ ।
ಣ್ಬರಿ ನೆಲಸಿ ಕೆಟ್ಟುದೇನೆಂ
ದರಲೆ ಬೆರಲ್ ತಿಳಿದರಭವನನುಮತಿಯನವರ್ ॥ ೨೨ ॥

ಅಂತು ತಿಳಿದ ಮಾತಾಪಿತರರ್ ಮನದ ಕೊನೆಯೊಳನುರಾಗಘಟ್ಟಿಕೆಯಿಂ ಗುಡಿಗಟ್ಟಿದ ಸಮನಂತರಂ

ಅಮರೇಂದ್ರಂಗಮರೀಮಹತ್ತರಿಯರಿಂ ಪೇಳ್ದಟ್ಟೆ ವೈವಾಹಿಕೋ
ದ್ಯಮಮಂ ತಾಂ ಮಯ ವಿಶ್ವಕರ್ಮಸಹಿತಂ ದೇವೇಂದ್ರನಿಂದ್ರಾಣಿ ದಿ ।
ವ್ಯಮನೋಹಾರಿಣಿಯರ್ ಸಮಂತು ಬರೆ ಬಂದೊಡ್ಡೈಸಿದರ್ ನೇತ್ರಹಾ
ರಿ ಮನಃಕೌತುಕಮಪ್ಪಿನಂ ಜಗತಿಜಾತೋದ್ವಾಹಮಂ ಗೇಹಮಂ ॥ ೨೩ ॥

ಅದಲ್ಲದೆಯುಮಿತ್ತಲ್

ಅಂತಟ್ಟೆ ರಾಯಭಾರಿ ದಿ
ನಾಂತರಮೆಡಗೆಯ್ಯದೆಯ್ದಿ ಪದ್ಮಪುರಕ್ಕಾ ।
ಸಂತೋಷ ಪರಮಸೀಮೋ
ದಂತಮನೋಲಗದೊಳವನಿಪತಿಗಱಪಲೊಡಂ ॥ ೨೪ ॥

ಪರಮಶರೀರನಾಪರಮನಂಬುಜಮಂಬುವಿನಲ್ಲಿ ಪುಟ್ಟಿಯುಂ
ಪೊರೆಯದವೊಲ್ ಭವಾನುಭವಸೌಖ್ಯಪರಾಙ್ಮುಖನೆಂತು ಮಾಟ್ಕುಮೆಂ ।
ದರಸಿಯುಮಾಪ್ತರುಂ ಕೆಳೆಯರುಂ ಪರಿವಾರಮುಮಳ್ಕೆ ಕೀರ್ತಿಶೇ
ಖರನಿದನೆಂದನೆಲ್ಲರ ಮನಸ್ತಮಮಂ ದಶನಾಂಶು ಗೆಲ್ವಿನಂ ॥ ೨೫ ॥

ಜಿನರಾಜಂ ತೊರೆದಿಂದೆ ದೀಕ್ಷೆಗೊಳಲೀಪೋ ಕೆಟ್ಟಿನಾಂ ತೀರ್ಥನಾ
ಥನ ಕೆಯ್ಯಂ ಪಿಡಿವೊಂದು ಪುಣ್ಯಮಿಱಿದತ್ತೇಕಕ್ಷಣಂ ದೇವದೇ ।
ವನ ಮಾದೇವಿಯೆನಿಪ್ಪ ಪೆಂಪು ಕಿಱಿದಲ್ತೀ ವೈಭವಕ್ಕೆನ್ನ ನಂ
ದನೆ ನೋಂತಳ್ ಭಾಗ್ಯಮೆನಗಾಯ್ತೆಂ ಪಾವನೋದ್ವಾಹಮಂ ॥ ೨೬ ॥

ಎಂದು ತಱಿಸಂದು ತನ್ನಯ
ನಂದನೆಯೊಡವರೆ ಸಮಸ್ತರಾಜನ್ಯಕಮೆ ।
ಟ್ಟೆಂದಂ ಸಿರಿಯೊಡವರ್ಪರ
ವಿಂದಾಕರನಂತಯೋಧ್ಯೆಗುತ್ಸವದಿಂದಂ ॥ ೨೭ ॥

ಪರಿಣಯವಿಲಾಸಮಾದ ಪರಿಣಯನಭವನ ಭದ್ರಶಾಲಾಭ್ಯಂತರ್ವಲಯಜಮಂಗಳಮಂಡನಮಂಟಪಂಗಳೊಳಿಂದ್ರಾಣಿಯುಮಿಂದ್ರಮಹತ್ತರಿಯರುಮಿತ್ತ ರತ್ನಮಾಲೆಯುಮನತ್ತಲಮರೇಂದ್ರನುಮಖಿಲದಿಕ್ಪಾಲಕರುಮಪ್ಸರೆಯರುಮನಂತನಾಥನುಮನಾಶ್ಚರ್ಯಮಳಂಕೆಗೊಳ್ವಿನಮಲಂಕರಿಸಿದಾಗಳ್

ಪಾಸಿದ ದಳಿಂಬಮಗುರ್ಗಳ
ಕೇಸಡಿಗಳ ಚರಣಭೂಷಣಂಗಳ ರುಚಿಯಿಂ ।
ಬಾಸಣಿಸಿ ಚಿತ್ರಪಟಮಂ
ಪಾಸಿದವೊಲಿರೆ ವಧೂವರರ್ ನಡೆತಂದರ್ ॥ ೨೮ ॥

ಬಂದು ಸಮಭ್ಯರ್ಚಿತಾಷ್ಟಮಂಗಲಕಲಾಪಮುಮಾಲಂಬಿತಭೃಂಗಾರಕಲಶದರ್ಪಣಸ್ವಸ್ತಿಕವಿಸ್ತಾರಮುಂ ಚತುರ್ಭದ್ರಾಭಿಮುಖನೀಲಮಣಿ ಸೋಪಾನಪಂಙ್ತಿಕಾಂತಮುಮಾದ ವೇದಿಕಾಮಧ್ಯದೊಳ್

ಪೊಂಬಟ್ಟೆಯ ಬೋರೆಯದೊಳ್
ತಂಬಿದ ಬಿಡುಮುತ್ತಿನಕ್ಕಿಯಂ ಮೆಟ್ಟಿರ್ದಂ ।
ದೇಂ ಬಗೆವುಗಿಸಿದುದೋ ಹೇ
ಮಾಂಬುಜದ ಮರಾಳಮಿಥುನಮಂ ತನ್ಮಿಥುನಂ ॥ ೨೯ ॥

ಅಂತು ನಿಲಲೊಡಂ ಸಕಲಜನದ ಕಳಕಳವಂ ನಿಲಿಸಿ ಶುಭಮುಹೂರ್ತ ಪ್ರಸ್ತಾವನೋನ್ಮುಖರಾಗಿರ್ದಾಗಳ್

ಕಿವಿವೇಟಮನಿಱಿಸುತ್ತಿರೆ
ನವವನಂ ನೋಡುವಪ್ಪು ವೃತ್ಸಳಿಕೆಯಿನೇಂ ।
ಯುವತಿಯ ಕಣ್ಣುಂ ಮನಮುಂ
ಜವಸಿಕೆಯುಂ ಕನ್ನಮಿಕ್ಕಲಡಹಡಿಸಿದುದೋ ॥ ೩೦ ॥

ಸಮನಂತರಂ

ಪರಮಾರಾಧ್ಯ ಜಗತ್ರಯಾಧಿಪತಿಯೈ ನೀಂ ನಿನ್ನದಲ್ಲನ್ಯಮೀ
ಧರೆಯೊಳ್ ನೋಡುವಡಾವುದಿತ್ತೆನೆನಲಾನಾರೆಂದು ಸಿಂದಟ್ಟಿಱಿಂ ।
ತರುಣೀರತ್ನವನೊಪ್ಪುಗೊಟ್ಟು ಜಲಧಾರಾರೇಖೆಯಿಂ ಕೀರ್ತಿಶೇ
ಖರರಾಜಂ ಪಡೆದಂ ಜಿನೇಂದ್ರಪದಪಂಕೇಜಕ್ಕೆ ವಾರ್ನಾಳಮಂ ॥ ೩೧ ॥

ಅನಂತರಮನಂತನಾಥಂ ಕಲ್ಪಲತೆಯೊಳ್ಪುವಡೆದ ಪಾರಿಜಾತಂ ಸೈಕತದೊಳೆಸೆವಂತೆ ದುಗುಲದಿಂ ಪಾಸಿದ ಪಟ್ಟವಣೆಯ ಪಸೆಯನಲಂಕರಿಸೆ ಸಿಂಹಸೇನಮಹಾರಾಜಂ ಬೆರಸು ಮುಂದೆ ನಿಂದು

ಇನನುದಯಮುಪ್ಪಿನಂ ಚಂ
ದ್ರನ ಕೆಲಸಂ ನಭದ ಬೆಳಕಮುಲ್ಲಲ್ಲು ಧರಾ ।
ವನಮಿನ್ನಿನ್ನುದಯಾವೃತ
ದೆ ನಿಮಿರ್ಚು ಜಗಜ್ಜನಾಭಿಲಾಷಾಲತೆಯಂ ॥ ೩೨ ॥

ಎಂದು ಪರಮೇಶ್ವರಂಗಿದಂ ನುಡಿಯುತ್ತುಮಿಟ್ಟ ಮಕುಟದ ಕಟ್ಟಿದ ಬಾಸಿಗದ ದೆಸೆಗಧಿಷ್ಠಾನಮಂ ಕಟ್ಟುವಂತೆ ಭಾಳಪಟ್ಟದೊಳ್ ಸಾಮ್ರಾಜ್ಯಪಟ್ಟಮಂ ನಿಟ್ಟೆಗೊಳಿಸಿದಿಂ ಬೞಿಕ್ಕೆ

ಬಲಗೊಂಡಾನತನಪ್ಪವೊಲ್ ಹುತವಹಂ ದೇವಾಧಿದೇವಂಗೆ ತ
ನ್ನೊಲವಿಂ ಜ್ವಾಲೆಯನಾನುಲೋಮವಿಧಿಯಿಂ ಪ್ರತ್ಯಾನತಂ ಮಾಳ್ಪಿನಂ ।
ಬಲದಿಂದಂ ಬರೆ ವಾಮೆ ವಾಮದೆಡೆಗೇಂ ತ್ರೇತಾನಳವ್ಯಾಜದಿಂ
ಬಲಗೊಂಡಂ ಪರಮಾರ್ಥವೇದವಿದುರಂ ರತ್ನತ್ರಯಜ್ಯೋತಿಯಂ ॥ ೩೩ ॥

ಆ ಸಮಯದೊಳ್

ಇನಿಯನನೆಯ್ದೆ ಸಮ್ಮುಖದೊಳೀಕ್ಷಿಸಲಣ್ಮದೆ ಮುಗ್ಧೆ ಪಾರ್ಶ್ವದಿಯಾ
ಯಿನಿ ತೆಱಪಾಗೆ ನೋಟ್ಪ ನಯನೇಂದ್ರಿಯದೊಳ್ ಸಕಲೇಂದ್ರಿಯಂಗಳಂ ।
ಕೊನೆವೆರಲಂ ತಡಂಗರಿಸಿದಂಗುಲಿಯೊಳ್ ಸಕಲಾಂಗಮುಂ ಸಲಿ
ಪ್ಪನಿತುವರಂ ಕಡಂಗಿ ಕರೆಗಣ್ತಿದಳುಣ್ಮಿದ ಘರ್ಮವಾರಿಯಿಂ || ೩೪ ||

ಪರಮಾರಾಧ್ಯನ ಸಂಭವಾಭಿಷವದೊಳ್ ನಾವಿರ್ವರುಂ ಭೂರಿ ಭೂ
ಧರಮುಂ ಮುಂ ಬಲಗೊಂಡ ಪಾಂಗನಿಟಿಸಲ್ ಸಾಲ್ದಪ್ಪುದಿಂತೀವಧೂ ।
ವರರಿಂದೀ ಮುಖವಹ್ನಿಯುಂ ಬಲಗೊಳ್ವೈರ್ಯರ್ಮೆಂದೊರ್ವರೊ
ರ್ವರ ವಕ್ತ್ರಾಬ್ಜಮನಾ ಪುಲೋಮಜೆಯುಮಾದೇವೇಂದ್ರನುಂ ನೋಡಿದರ್ || ೩೫ ||

ಅಂತು ಪರಿಪೂರ್ಣವೈಭವ
ಸಂತಸದಿಂ ರತ್ನಮಾಲೆ ಪೇರುರದೊಳ್ ಚೆ ।
ಲ್ವಂ ತಳೆಯೆ ಸೋಲ್ತು ಪೊರ್ದಿದ
ನಂತೇಶ್ವರನಾಥನುಂ ಸ್ವಯಂವರನಾದಂ || ೩೬ ||

ಅರಸಂ ಮನ್ನಿಸೆ ರತ್ನಮಾಲೆ ಮಹಿಷೀಸಂಪತ್ಸಭಾಶಾಲೆ ರಾ
ಗರಸಾಂಭೋದಿತರಂಗಮಾಲೆ ಹೃದಯಾಲೋಕದ್ವಯಿಾಲೀಲೆ ಪೇ ।
ರುರದೊಳ್ ಲಕ್ಷ್ಮಿಗೆ ತೋಳೊಳಗ್ಗದ ಜಯಶ್ರೀಗಾಸ್ಯದೊಳ್ ವಾಣಿಗು
ರ್ವರೆಯೊಳ್ ರಾಜ್ಯರಮಾನಿತಂಬಿನಿಗೆ ತಾಂ ಪೆತ್ತಳ್ ಸಪತ್ನೀತ್ವಮಂ || ೩೭ ||

ಚರರಿಂ ಹೇರಿಗರಿಂ ಸ್ವಕೀಯ ಪರಕೀಯ ಪ್ರಾಜ್ಯಮಂ ರಾಜ್ಯಮಂ
ಪರಿಕಿಪ್ಪಂತುಟಿ ತನ್ನ ದೇಶಜನವಾಪ್ತಂ ಸ್ವಾಮಿಯೆಂದಟ್ಟಿಱಿಂ ।
ದರಿಭೂಪರ್ ಮದಮುಂ ಬಿಸುಟ್ಟು ಪರಮಾರಾಧ್ಯಂ ಜಗದ್ಬಂಧುವೆಂ
ದಿರೆ ಭೂಕಾಂತೆಯನಂತರಂಗಬಹಿರಂಗಾಸಕ್ತಿಯಂ ಮಾಡಿದಂ || ೩೮ ||

ವಿಶ್ವಪ್ರದೀಪಕವೆಂಬಭದ್ರದೊಳಾಯ್ತು ಕೇವಲ
ವಿಬೋಧೋದ್ಬುದ್ಧಭಾನೂದಯಂ

ವಸುಧಾಮಂಡಳಮೆಯ್ದೆ ತೆತ್ತಿಸುವ ಚೈತ್ಯಂಗಳ್ಗೆ ದಾನಕ್ಕೆ ಪಾ
ತ್ರಸಮೂಹಂ ದಿಟಮೆಯ್ದುದೆಯ್ದುದು ದಿಶಾಚಕ್ರಂ ನೃಪೇಂದ್ರಾಜ್ಞೆಗಾ ।
ಗಸಮುಂ ಲೋಕಮುಮೆಯ್ದದೀತನ ಯಶಃಶ್ರೀನರ್ತನಕ್ಕೆಂಬಿನಂ
ಪಸರಂ ಬೆತ್ತುದು ಸಾರ್ವಭೌಮವಿಭವಂ ಭೂಪಾಲಸರ್ವಜ್ಞನಾ ॥ ೧ ॥

ಅಂತು ನಿತ್ಯನಿರಂತರಸುಖಾನುಭವಭೋಗರಾಗಾವಿಳಾಸಪರಿಮಳಾಧಿವಾಸಿತ ಕುವಳಯಂ ಕುವಳಯದಳವಿಲೋಲಲೋಚನೆಯಪ್ಪ ರತ್ನಮಾಲಾ ಮಹಾಮಹಿಳೆಗೆ

ಉದಯಿಸಿ ರೂಪಲಕ್ಷಣವಿಲಾಸಗುಣಾವಳಿ ತನ್ನೊಳೆಚ್ಚಸೊ
ತ್ತಿದುದೆನೆ ತೋರ್ಪಿನಂ ವಿಜಯನೆಂಬ ಕುಮಾರನ ಯೌವರಾಜ್ಯಸಂ ।
ಪದದೊಳಮಾಧಿರಾಜ್ಯನಿಜಲೀಲೆಯೊಳಂ ಪಿತೃವೃದ್ಧರಾಜ್ಯಸಂ
ಪದದೊಳಮೊಪ್ಪಿದಂ ಸಿರಿಯ ಮುಪ್ಪುರಿವೊಲ್ಬುವನೈಕಭೂಷಣಂ ॥ ೨ ॥

ಜಸದಿಂ ಮೌಕ್ತಿಕಮೌಳಿಯಂ ದಿಗಧಿಪರ್ ಸಿಂದೂರಸೀಮಂತಮಂ
ದೆಸೆವೆಂಡಿರ್ನಿಜತೇಜದಿಂ ಮಹಿಮೆಯಿಂ ರಾಜನ್ವತೀನಾಮಮಂ ।
ವಸುಧಾವಲ್ಲಭೆ ತಾಳ್ದೆ ತಾಳ್ದಿದನನಂತಂ ಸಾರಸಂಸಾರಸಂ
ತಸದಿಂದಂ ಪದಿನೈದು ಲಕ್ಕೆಬರಿಸಂ ಸಾಮ್ರಾಜ್ಯಸೌಖ್ಯಂಗಳಂ ॥ ೩ ॥

ಅಂತು ಜಗತ್ಪೂಜ್ಯಮಾದ ರಾಜ್ಯಲಕ್ಷ್ಮೀಸಪ್ತಾಂಗಸಂಗತಿಯೊಳ್ ಹರ್ಷರಸಪುಳಕಸಸ್ಯಮನುತ್ಕರ್ಷಂಮಾಡಲು ಕಾರುಣ್ಯಧಾರಾವರ್ಷಪುಣ್ಯಘನಾಘನಮನೋಲಗಿಸಿ ಘನತೆಗಾಲಂಬನಮಾಗಲವಸರಂಬಡೆದಂತೆ

ಒದವಿದ ಕಾರೊಳದ್ರಿಗಳ ಬೇಗೆ ತೆರಳ್ದುದು ಮೇಡಹುಂಡನಾ
ದುದು ಬಿಸಿಲೇಟಿಗೆ ಕಟ್ಟಿದುದು ಸಂಬಳಮಂ ಕಳಹಂಸಮಾಳೆ ಮೆ ।
ಟ್ಟಿದುದು ತುಡುಂಕೆ ಸೋಗೆ ಮೊಳೆಯೊಳ್ಪಡುಕುತ್ತಿದೆ ಮಿಂಚುಕೆಚ್ಚಲೊ
ತ್ತಿದುದು ಪಯೋಧರಾವಳಿ ತಳರ್ನಡೆಯಿಟ್ಟುದು ಪಶ್ಚಿಮಾನಿಳಂ ॥ ೪ ॥

ವಿಶ್ವಪ್ರದೀಪಕಮೆಂಬಭ್ರದೊಳಾಯ್ತು ಕೇವಲವಿಬೋಧೋದ್ಬುದ್ಧ ಭಾನೂದಯಂ

ಕೆಂಗೊನರ್ವೋಯ್ತು ಸಲ್ಲಕಿ ಕದಂಬಮರಲ್ದುದು ಜಂಬು ದೋರೆವ
ಣ್ಣೊಂಗಲನಾಂತುದತ್ತ ಕತ್ತರಂ ಪರಲೊತ್ತಿದುದಿತ್ತ ಕೇತಕಂ ।
ಪೊಂಗಳಿಗಟ್ಟಿತೆಂದು ಪಲವೊಯ್ಯೆಯಿನೀಕ್ಷಿಸುವಂತಿರಾದುವೆ
ತ್ತಂ ಗಿರಿಕುಂಜದೊಳ್ಕುಣಿದು ಕೂಗುವ ಸೋಗೆಯ ಕಣ್ಣ ಪೀಲಿಗಳ್ ॥ ೫ ॥

ಪೂತೆಜಗಲುಮುದಬಿಂದುಗೆ
ಬಾತೆಜಗಲುಮಿಟ್ಟ ಪೊಟ್ಟೆಗೋತೆಳಿಗಲುಮೇಂ ।
ಕೇತಕಮುಂ ಚಾತಕಮುಂ
ಪೋತಕಮುಂ ಕಾರಮುಗಿಲೊಳಡಹಡಿಸಿದುವೋ ॥ ೬ ॥

ವಾಸವಚಾಪಮೆಂಬ ಮಣಿಮಂಟಪದೊಳ್ ಮೊಳಗೆಂಬ ವಾದ್ಯಮಂ
ಘೋಷಿಸಿ ಮೇಘವೆಂಬ ತೆರೆಯಿಂದೆ ತಟಿನ್ನಟಿ ಬಂದು ನಾಟ್ಯವಿ ।
ನ್ಯಾಸದೆ ಕೊಂಕಿ ನಿಂದು ಕುಸುಮಾಂಜಳಿಯಂ ಕುಡೆ ಮುತ್ತುಮಾಣಿಕಂ
ಸೂಸಿದುವೆಂಬಿನಂ ಪರೆದುವಾಲಿವರಲ್ಗಳುಮಿಂದ್ರಗೋಪಮುಂ ॥ ೭ ॥

ಇನನಿದಿರೆಟ್ದ ಕಾರ್ಮುಗಿಲ ಬಾರಿಗೆ ಬಿಟ್ದನೊ ತಳ್ತ ಬಳ್ಳಿಮಿಂ
ಚಿನ ಬಲೆಯಲ್ಲಿ ಸಿಕ್ಕಿದನೊ ಹೊಯ್ವ ಸಿಡಿಲ್ಗೊಳಗಾಗಿ ನಿಂದನೋ ।
ಘನಜಳಧಾರೆಯಿಂ ಕರಗಿಹೋದನೋ ತನ್ನನೆ ಕಾಣನೆಂದು ಪ
ದ್ಮಿನಿ ನಲವಾಡಿದಳ್ ಮಧುಕರಧ್ವನಿಯಿಂ ಪಲವಾಗಿ ಬಾಡಿದಳ್ ॥ ೮ ॥

ಅಂತು ಮೊಗಮಂ ನೋಡಲಿಳೆಯೆ ಕಣ್ದೆಱೆದಂತೆ
ಮಣಿಬೀಡು ರಜ ಧರಣಿಯೊಳ್ನೆಗೆದುವೋರಂತೆ
ಕಲ್ಲಿಪೊಗರೆಯೊಳಿಟ್ಟ ಕಾರ್ಮುಗಿಲ ಮೊಟ್ಟೆಗಳ್
ತಾಮೆನಿಸಿ ಪರ್ಬಿದುವು ಪೆರ್ಜೇನ ಪುಟ್ಟುಗಳ್
ತರದೆ ಪಾಱಿದುವು ಬೆಳ್ವಕ್ಕಿ ನೂಲ್ದೆಗೆದಂತೆ
ನೆರೆದ ಕಾಮನಬಿಲ್ಗೆ ಬಿಳಿಯುದಿರು ಬಿಗಿದಂತೆ
ಕರಡಿ ಕೈಯಿಟ್ಟೆಡೆದು ತಿನಲೆ ವಲ್ಮೀಕಮಂ
ಕೈಯಿಟ್ಟು ಬರೆದೆಗೆದುದೋಱಲೆಯನನೇಕಮಂ
ಸಿಡಿಲ ದನಿಗಗಿದು ಶಬರನನಪ್ಪಿದಳ್ ಶಬರಿ
ಬೆಂಬಿಡಿದು ಸೋಗೆನವಿಲೊಳ್ ಸೆಣಸುತಿರೆ ಕಬರಿ
ಬಸಿಱನಪ್ಪಿದ ಮಱಿಗಳಂ ಹೊತ್ತು ಸಾಲ್ಗೊಂಡು
ಮರದ ಪೊಟಲ್ಗೆ ಸಾರ್ದುವು ಕೋಡಗದ ಹಿಂಡು

ಪೊಕ್ಕಿ ಕುಕ್ಕಲಿಸಿ ಜೋಂಪಿಸಿ ಕಲ್ಲ ಪೊಗರೊಳಂ
ನೆಮ್ಮಿ ಪುಲಿ ಸಮನಿರ್ದುವು ಕಟವಾಯ ಸವಿಗಳಂ
ನಿಱಿಸಿರ್ದು ತೆರೆಯಿರ್ದು ಕಿಱುವಱಲ ದಿಣ್ಣೆಯೊಳ್
ಪರಿವ ಬರಿವೊನಲೆಸೆದವೋರೊಂದು ತಾಣದೊಳ್
ನೆಲವೃತ್ತಿನೊಳ್ಪೊನಲು ಪುಗೆ ಪಾವು ಪೊಱಮಟ್ಟು
ಪಡೆಗಳಂ ಕೊಡೆಗಳಂತೆತ್ತಿದುವು ಕಡೆಪಟ್ಟು
ಮೆಱೆವ ಮೇಷಾಂಗಮುಂ ನಲ್ಲರ್ಗೆ ರಾಗಮುಂ
ಸುರತಸುಖಭೋಗಮುಂ ವಿರಹಿಗುದ್ವೇಗಮುಂ

ಅಂತು ಬಂದ ವರ್ಷಾಗಮದೊಳ್ ಪರಿವ ಮುಗಿಲ ಪಾಱುವ ಬಳಾಕದ ಸುರಿವ ಕರಕದ ಸೂಸುವ ತಂದಲ ಸುಳಿವ ತಂಜೆಲರ ಸುತ್ತುವ ಚಾದಗೆಯ ಬಿತ್ತರಂ ಬಡೆದ ವಿಯತ್ತಳಮೆಂಬ ಚಿತ್ರಶಾಲೆಯಲ್ಲಿ

ಗಗನೀ ಚಿತ್ರಿಕೆ ಬಾಲಭಾನುಕರಮಂ ಕಣ್ಣಿಟ್ಟು ಕೊಯ್ದಿಟ್ಟ ಬ
ಟ್ಟಗೆಯಿಂ ಕಜ್ಜಳಸಜ್ಜಿತಾಬ್ದಫಳಕಪ್ರಾಗ್ಭಾಗದೊಳ್ ದಿಟ್ಟಗಂ ।
ಬಗೆಗಂ ಕೌತುಕಮಪ್ಪಿನಂ ಬರೆವವೊಲ್ಪೆಲ್ವಾದುದಂ ನೋಡಿದಂ
ಜಗದೀಶಂ ನವನಾಗಬಂಧಘಟನಾ ಸೌದಾಮಿನೀಧಾಮಮಂ ॥ ೯ ॥

ನೋಡಿದ ಕಣ್ಗಳ್ ತಱಗೆಮೆ
ಗೂಡದ ಮುಂ ಪರಿದು ಪೋಣ್ದು ಸೊಂಕಿದ ನಭಮು ।
ಳ್ಕಾಡಿಸಿದುದು ಮಸ್ತಕಮುಂ
ಮಾಡಿದುದು ದೇವನಂಗುಳಿಚ್ಛೋಟನಮಂ ॥ ೧೦ ॥

ಇದೇಂ ಭ್ರಮೆಯೊ ಮಾನವರ್ಗಮುಮ ಜೀವನಂ ಜೀವನ
ಪ್ರದಕ್ಕೆ ದೊರೆ ಜವ್ವನಂ ದಿವಿಜಚಾಪದಿಂ ಚಾಪಳಂ ।
ಪೊದಟ್ಟಿ ಸಿರಿಯೆಂಬುದಿಂತೊಗೆದ ಮಿಂಚುವೋದಂಚೆಯೊ
ಳ್ಸದೃಕ್ಷಮೆನಲೊಲ್ಲರೀ ಭವಮೊಳುಂಡೊಡಂ ಕಂಡೊಡಂ ॥ ೧೧ ॥

ಘನರುಚಿಯೆಂದೊಡಂ ಸುರಶರಾಸನಮೆಂದೊಡಮಬ್ಜಪತ್ರಜೀ
ವನಕಣಮೆಂದೊಡಂ ಹೊನಲ ಬುದ್ಬುದಮೆಂದೊಡಮೆಯ್ದೆ ತೋರ್ಪ ಮಿಂ ।
ಚಿನ ಪೊಳಪೆಂದೊಡಂ ಜಲಧರೋಪಲವರ್ತುಲಮೆಂದೊಡಂ ಜಡಾ
ತ್ಮನುಮಱಿದಿಕ್ಕೆ ಮಾನಸರ ಮಾನಸವಾಳ್ಗೆ ಭಿಧಾನಮೆನ್ನಿರೇ ॥ ೧೨ ॥

ಮಱೆಯುಂ ಕಾಲನಿದೇಕೆ ಪ್ರೇಮಜವಿರೆಂದೂರ್ದಂಗುರಂ ಪೊಯ್ವವೊ
ಲ್ವಱೆ ಪೊಯ್ದೆತ್ತುವ ಬಂಧುವರ್ಗಶಬವಂ ಕಂಡುಂ ಕೆಲರ್ಚಿಂತಿಸರ್ ।
ಮಱೆಮೆಯ್ಯಂ ಪಲವಾದ ಪೋದ ಭವಮಂ ಜಾತಿಸ್ಮರರ್ಕಂಡೊಡಂ
ಮಱೆಪದಿರ್ಪರ್ಗಡ ಕಾಣದರ್ಕಳಿವರೆ ವ್ಯಾಮೋಹಬಂಧಂಗಳ್ ॥ ೧೩ ॥

ಊಡಿದೊಡುಡಿಸಿದೊಡಂ ಕೊಂ
ಡಾಡಿದೊಡಂ ಮತ್ತಮುಳಿವ ತನು ಉಳಿದಪುದೇ ।
ಕೋಡಗದ ಕೆಯ್ಯ ಮಾಲೆಗೆ
ಬಾಡಿರ್ದಪುದೆಂದು ಬಱಿದೆ ನೀರ್ದಳಿವಂದಂ ॥ ೧೪ ॥

ಅಂತು ನಿಜಾಂತರಂಗದೊಳ್ ಬಗೆದು ಶರೀರಭೋಗನಿರ್ವೇಗಪರವಾಗಿ ಸಭಾಭವನಕ್ಕೆ ಬಂದು ಸಾಮ್ರಾಜ್ಯಭಾರಮಂ ವಿಜಯಕುಮಾರನೊಳ್ನಿಲಿಸುವ ಬಗೆಯಿಂ ಮಂತ್ರಿಪುರೋಹಿತಾಂತರ್ವಂಶಿಕಾದಿಪರಿಜನವನಿತುಮಂ ಬರಿಸಲೊಡಂ

ಜನಕಂ ಶ್ರೀಸಿಂಹಸೇನಂ ನಿಜಜನನಿ ಜಯಶ್ಯಾಮೆ ಬಂಧುಪ್ರತಾನಂ
ತನುಜಾತರ್ ಮಂತ್ರಿಗಳ್ಮಂಡಳಿಕಮುಕುಟಬದ್ಧರ್ಕಳೆಂದೆಲ್ಲರುಂ ಬಂ ।
ದು ನಿಜಶ್ರೀಪಾದಪೀಠಾಂತದೊಳಿರೆ ಹೃದಯೋದ್ಯೋಗನುಂ ಪೇಳ್ದು ಕಾರು
ಣ್ಯಸಿದಾನಂ ಪುಣ್ಯಸಿಂಧುಪ್ಲವಮೊಗೆತರೆ ದಂತಾಂಶುವಿಂತೆಂದನಾಗಳ್ ॥ ೧೫ ॥

ಆವೆಡೆಯೊಳುಮಿಲ್ಲ ಸುಖಂ
ಕೈವಲ್ಯದೊಳಲ್ಲದನ್ನೆಗಂ ದೇಹಿಗಳಂ ।
ತೀವುವ ಕೆಡಹುವ ಯಂತ್ರಘ
ಟಾವಳಿಗಳ ಹೊರಳಿಯಂತೆ ವಿಧಿ ತಿರುಗಿಸುಗುಂ ॥ ೧೬ ॥

ಕ್ರಮದಿಂದುತ್ತಮಮಧ್ಯಮಾಧಮವಿಧಕ್ಷೇತ್ರಂಗಳೊಳ್ಪುಟ್ಟಿ ಭೋ
ಗಮನುಣ್ಬಾರ್ಯರ ಬಾಳ್ಕೆ ಪಲ್ಯಗಣನಂ ಪಲ್ಯೋಪಮಂ ಸಾಗರೋ ।
ಪಮಿತಂ ಜ್ಯೋತಿರನಂತಕಲ್ಪಜರೊಳಾಯುಃಪಿಂಡಮೆಂಬಾಗಳ
ಪ್ಯು ಮನುಷ್ಯರ್ಕಳ ಜಾತಿವ್ಯತ್ಯಸಮಯಂ ಪೋ ಲೆಕ್ಕಿಸಲ್ಕಕ್ಕುದೇ ॥ ೧೭ ॥

ಅಂತುಮಲ್ಲದೆಯುಂ

ಅದನೇಗೇಳ್ದಪಿರಣ್ಣ ನಾರಕರನಂತಾನಂತದುಃಖಂಗಳೊಳ್
ಕುದಿಯುತ್ತಿರ್ಪ ದುರಂತದುಃಸ್ಥಿತಿಗಳಂ ಪೇಳ್ವಂಗೆ ಮೆಯ್ಯೊಡೆ ಪೇ ।

ಟ್ಟಿದು ಕೇಳ್ವಂಗಣವೆತ್ತಿ ತುತ್ತನಿೞಿಸಲ್ಕ್ಯೆವಾರದವೊ್ಯಂದು ಕ
ರ್ಮದ ಸಾಮರ್ಥ್ಯಮೆ ದೇಹಿಗೆಯ್ದಿಸುವುದಂತಾ ನಾರಕಾವಸ್ಥೆಯಂ ॥ ೧೮ ॥

ಓಳಿಯಿನಿರ್ದುವೇೞು ನರಕಂಗಳೊಳಗ್ರಿಮರತ್ನಶರ್ಕರಾ
ವಾಳುಕಪಂಕಧೂಮರುಚಿ ನಾಲ್ಕೆಡೆಯೊಳ್ಕರನಿತ್ತು ಸೀಸಕು ।
ತ್ಕೀಳಮೆನಿಪ್ಪಘರ್ಮಮುೞಿವಿರ್ದ ಸಮೇತತಮಸ್ತಮಃ ಪ್ರಭಾ
ಭೀಳಮಹಾತಮಃ ಪ್ರಭೆಯೊಳಾರಸಮಂ ಬಲಿವಂತುಶೀತಳಂ ॥ ೧೯ ॥

ಅಲ್ಲಿ

ಪಿಡಿವರ್ಕಟ್ಟುವರಿಕ್ಕಿ ಮೆಟ್ಟುವರೊೞಲ್ವಂತುರ್ದುವಗುರ್ದುವರ್
ಸುಡುವರ್ ಸುಂಟಗೆಕಾಸುವರ್ಬರಿಯ ಬಾಡಂ ತೋಡುವರ್ಕೊಯ್ದು ಬೆ ।
ನ್ನೆಡೆಯಿಂದಂತದನುರ್ಚುವರ್ಸಮನೆ ಸೀೞ್ವರ್ಕುತ್ತುವರ್ ನೆತ್ತರಂ
ಕುಡಿವರ್ ಕೋಪದೊಳೆಯ್ದೆ ರೂಪಿಡೆ ವಿಭಂಗಜ್ಞಾನಮಾವೈಕರದಿಂ ॥ ೨೦ ॥

ಕೊಯ್ಯೆ ಪೊಸಳ್ಚೆ ಕುತ್ತೆ ಮೊಱದಿಕ್ಕೆ ಪಡಂಗಡಿದೊಟ್ಟೆ ನೆತ್ತಿಯಂ
ಪೊಯ್ಯೆ ಬೞಲ್ದು ವೈತರಣಿಯಂ ಪುಗೆ ಕಾಯ್ದುಱಲೋಹವಾರಿ ಚುಂ ।
ಚುಯ್ಯೆನೆ ಸುಟ್ಟು ಹುಣ್ಣರಳೆ ಮೆಯ್ಯನಿತಂ ಬಗಿಯಾಗಿ ಬಾಯ್ಗಳಿಂ
ಹುಯ್ಯಲನಿಕ್ಕುವಂ ಕೊಳೞ್ ಕೊಳ್ಗುದಿಗೊಂಡು ಮಗ್ಗುವರ್ ॥ ೨೧ ॥

ಅಱಿನಂ ಮಱದಾಚಾರಮ
ನುೞಿಪೊಲ್ದಂತೆಸಗಿ ಬಿೞ್ದರೆ ನರಕದೊಳಿಂದಿೞ್ ।
ದಿೞಿದಿೞಿದು ಸುಡುವ ತೆಱದಿಂ
ದೞಿಪುವುದು ಭವಂಗಳಂ ವಿಭಂಗಜ್ಞಾನಂ ॥ ೨೨ ॥

ಆ ವಿಭಂಗಜ್ಞಾನದಿಂ ಜಾತವಾದ ಪರಸ್ಪರೋದೀರಿತ ವೈರಂಗಳೊಳ್ಚಂಡಕೋಪರ್ವಾಟ್ಟು ದಂಡಖಂಡನಂಗಳಲ್ಲದೆಯುಂ ಕರಾಳರಪ್ಪ ತಳಾಱರೂಕ್ಷರಾಕ್ಷಸರ್ಪಿಡಿದು

ತನಿಗಳ್ಪ ತವಕಿಗಂ ಬಾ
ಡಿನ ಬಾಕುಳನೀತನೆಂದು ಲೋಹದ ರಸಮಂ ।
ತನು ಕುಡಿಯೆ ಕುಡಿಯಿಪರ್ಕ
ಲ್ಲನೆ ಕಾಸಿದ ಕೆಂಡಮಂ ಮೊಗಂಗಿಡಿಗಿಡಿವರ್ ॥ ೨೩ ॥

ಪುಸಿನುಡಿವಂಗೆ ಬಾಯ್ನಗಮೆಯ್ದದು ನಾಲಗೆಯೊಂದು ಸಾಲದೆಂ
ದೆಸೞಿಸೞಾಗಿ ಸೀೞ್ದು ನಿಡುನಾಲಗೆಯಂ ಕಟದೆಲ್ವು ಸೀೞಿತ ಸೀ ।
ೞಿಸಿ ಕಟಿವಾಯ್ಗಳಂ ಹುಸಿದೊಳಾದ ಫಳಂ ಸವಿನೋಡಿದೆಂದು ಗಾ
ತ್ರಿಸುವರನೇಕ ರೂಕ್ಷವಿಷತಿಕ್ತಕಠೋರಮೆನಿಪ್ಪ ಖಾರಮಂ ॥ ೨೪

ಕರೆದಪಳೆಂದೊಡಾ ಸುಳಿದಳೆಂದೊಡೆ ಮಾಲೆಯನಿತ್ತಳೆಂದೊಡಾ
ಸೆಸದೆ ಬಾಯ ತಂಬುಲಮನಟ್ಟಿದಳೆಂದೊಡೆ ಮೆಲ್ವ ಬಾಯ್ಗಳು ।
ಬ್ಬುರಿಸುವ ಮೂಗಿನೊಳ್ಪರಿವ ಕಣ್ಗಳೊಳಾಲಿಪ ಕರ್ಣದೊಳ್ತಗು
ಳ್ದಿರಿಪುವಯಶ್ಶಲಾಕೆಯನೆ ತೆತ್ತಿಸುವರ್ ಪರವೆಣ್ಗೆ ಕೂರ್ಪರಂ ॥ ೨೫ ॥

ನೇರಿದುವಿದೆ ಬೆಟ್ಟಿದುವಿದೆ
ತೋರಿದುವಿದೆ ಚಕ್ಕನಪ್ಪಿಕೊಳ್ಳೆಂದಿಟುವರ್ ।
ಜಾರೆಯರ ಮೊಲೆಗೆ ಕೂರ್ಪರ
ಪೇಡುರದೊಳ್ಕನಲೆಕಾಯ್ದ ಲೋಹದ ಗುಂಡಂ ॥ ೨೬ ॥

ನರಕಂಗಾಣವ ಕಣ್ಗಳತ್ತಣದು ಘೋರಾಕಾರದುರ್ವಾರದು
ಸ್ತರದುಃಖಾಕರಮೆಂದು ಬಿತ್ತರಿಸಲೇಕೀ ಲೋಕದೊಳ್ತೀವೆ ಹೇ ।
ೞಿರೆ ಕುತ್ತಂ ಪಗೆ ಮುಚ್ಚು ನಿರ್ಧನತೆ ದೈನ್ಯಂ ಯಾಚ್ಞೆ ಭೂಪಾಲ ತ
ಸ್ಕರ ದಾಯಾದ ವಿಷಾಗ್ನಿ ಬಾಧೆಯಿವು ಕೇಳೀ ನಾರಕಾವಸ್ಥೆಯಂ ॥ ೨೭ ॥

ಬೇಡರ ಕೋಲ್ಗೆ ವಾಗುರಿಗೆ ಶಸ್ತ್ರಕೆ ಕೂಳಿಗರೆಳ್ದ ನಾಯ ಕೊ
ರ್ದಾಡೆಗೆ ಸೇಣ್ಗೆ ಚಮ್ಮಟಿಗೆಗಂಕುಶಕಕಿಟ್ಟೊಳಗಾಗಿ ಬೆಟ್ಟದರ್ ।
ಬಾಡಿಸುವೇಱಿ ಬಾಡಿಸುವ ಹೇಱುವ ಕಟ್ಟುವ ಕುಟ್ಟುವಾವಗಂ
ಹೊಡುವ ದುಃಖದಿಂ ತಿರಿಕಜಾತಿಯು ಕೋಟಲೆ ಕುಂದದೊರ್ಮೆಯುಂ ॥ ೨೮ ॥

ಇದು ಜೀವಕ್ಕೆ ಚತುರ್ಗತಿಭ್ರಮಣಮಿಂತೀ ಭ್ರಾಂತಿಗಂ ಕರ್ತೃವಾ
ವುದು ಕರ್ಮಂ ಬೞಿಸಲ್ವ ಕರ್ಮರಿಪುವಂ ಗೆಲ್ವೊಂದು ಬಲ್ಗೈದುವಾ ।
ವುದೊ ಸದ್ದರ್ಶನದೀಕ್ಷೆ ದೀಕ್ಷೆಯ ಫಲಂ ಕೈವಲ್ಯಮಿಂ ಪೇೞಿದಾ
ವುದುಮಿಲ್ಲೆಂದನಿದಂ ವಿನೇಯಜನಚಿತ್ತಾಂಭೋಜಿನೀಭಾಸ್ಕರಂ ॥ ೨೯ ॥

ತಡೆಯದು ಜವ್ವನಂ ಪದವಿ ನಿಲ್ಲದು ಕೊಲ್ಲದೆ ಮತ್ತೆ ಕುತ್ತವೋ
ಗಡಿಸದೊಡಂ ಕಿಡಲ್ಪರಸಿ ಪುಟ್ಟದುದೆಂದೞಿದೀ ಪ್ರಪಂಚಮಂ ।

ಬಿಡುವ ಮನೀಷೆಯಂ ಕೆಡದ ನಿತ್ಯಸುಖಂ ಬಿಡದಾರ್ಗದೇಂ
ಕಿಡುವುದೆ ಕೆಟ್ಟಪೋಗಿ ಕಿಡದಂತುಟು ಬರ್ಪೊಡೆ ಲಾಭಮೆನ್ನಿರೇ ॥ ೩೦ ॥

ಇಂತಿರೆ ಬೆಸಸಿದ ದಿವ್ಯೋ
ದಂತಾಮೃತವರ್ಷಮೆಸಗೆ ಹರ್ಷಮನವಸೀ ।
ಕಾಂತನನಂತಮನಂತಂ
ಗಿಂತೆಂದರ್ ವಿನಯವಿನಮಿತೋಜ್ಜ್ವಲಮಕುಟರ್ ॥ ೩೧ ॥

ಪರುಷಮೆ ಮುಟ್ಟೆ ಕರ್ಬುನಮೆ ನಿನ್ನ ಪದಾಂಬುಜಸೇವಕರ್ಗೆ ಸಂ
ಸರಣ ನಿಪಾತಮೇಂ ಬಳಿಕ ದೇವರದೇವರಲೋಕಮೆಮ್ಮನಿಂ ।
ತಿರಿಸದೆ ಬರ್ಪುದೆಂದೆಮಗೆ ನೀಂ ದಯೆಗೆಯ್ದುದನುಜ್ಞೆಯಂ ಕೃಪಾ
ಪರ ಪರಮಾರ್ಥವೇದವಿದ ವೇದವಿದಧ್ವನಸಾಯತತ್ಪರಾ ॥ ೩೨ ॥

ಪೃಥುಹೃದಯರ್ ಸಾಸಿರ್ವರ್
ಪೃಥಿವೀಶರ್ ಬಗೆದರಿಂತು ನುಡಿವಘಸಂಘೋ ।
ನ್ಮಥನಂಗೆ "ಯಥಾ ರಾಜಾ
ತಥಾ ಪ್ರಜಾ"ಯೆಂಬಿನಂ ಸಭಾಜನಮನಿತುಂ ॥ ೩೩ ॥

ಅವಧಿಯಿನಭವನ ನಿಷ್ಕ್ರಮ
ಣವಿಶೇಷೋತ್ಸವಮನುದಱಿದು ನಿಜಪೌಲೋಮಿ ।
ಭವನವನಜ್ಯೋತಿಃ ಕ
ಲ್ಪವಾಸದಿಕ್ಪಾಲಜಾಲ ಹೇಳಾಲೋಳಂ ॥ ೩೪ ॥

ಕೆದಱುತ್ತಂ ಕುಸುಮೋಪಹಾರಚಯಮಂ ನಾನಾವಿಮಾನಪ್ರತಾ
ನದ ರತ್ನಾಂಶುಗಳಿಂದಮಿಂದ್ರಧನುವಂ ಬೀಱುತ್ತುಮೈರಾವತೋ ।
ನ್ಮದ ಸೌರಭ್ಯಸುಗಂಧಿಗಂಧಸಹನಂ ಮುಂದಟ್ಟುತಂ ಬಂದನಾ
ತ್ರಿದಶೇಂದ್ರಂ ನಿಖಿಳಾಮರಪ್ರಮುಖಸಪ್ತಾನೀಕಿನೀಸಂಯುತಂ ॥ ೩೫ ॥

ಅಂತು ಚತುರ್ನಿಕಾಯ ನಿಕಾಯಸಮೇತಮಾ ಸಾಕೇತಪುರಕ್ಕೆ ವಂದರಮನೆಯಂ ಪೊಕ್ಕು ಸಭಾಭವನಮನಳಂಕರಿಸಿರ್ದ ಭುವನತ್ರಯಾಭರಣನ ಪಾದಪೀಠದೊಳ್ ಕೆದಱುವ ಪಾರಿಜಾತಪ್ರಸೂನಪ್ರತಾನಕಾನತಕಿರೀಟಮಣಿಗಣಚ್ಛವಿಗಳಿಂ ಕದಂಬದಳದ ಬಂಬಲಂ ಪಡೆದು ಪರಿನಿಷ್ಕ್ರಮಣಮಂಗಳೋದ್ಯೋಗಮನೇಕಮುಖದಿಂ ಪೊಗೞ್ದು ತನ್ನ ಬೆಸದಿಂ

ಸವೆದ ಪುಣ್ಯಜನೇಶ್ವರನ ಪುಣ್ಯಪುಂಜದ ಪಂಜರದಂತಿರ್ದಭಿಷವಣ ಮಂಡಪಕ್ಕೆ ಭುವನಮಂ ಡಪಮಾಣಿಕ್ಯಕಳಶನಂ ತಾನೆಕ್ಕೈಗೊಟ್ಟು ಬಿಜಯಂಗೆಯ್ಸಿ ಮಂಗಳಪ್ರಖ್ಯಾನುಲೇಪನಾಲಾ ಪರಿಕರಪರೀತ ಕರಸರಸಿರುಹೆಯರನಪ್ಸರಸೆಯರಂ ಮಜ್ಜನಪೀಠದಿಕ್ಕೆಲದೊಳ್ನಿಲಿಸಿ ವೃಂದಾ ರಕದುಂದುಭಿಗಭೀರಮಂಗಳಾಚಾರಚಾರುನಿರ್ಘೋಷಂ ಮಾರುತಮಾರ್ಗಮಂ ಮೂವಳ ಸುವಳಿಸೆ

ಇದು ಜನ್ಮಾಭಿಷವಕ್ಕಮುಜ್ಜ್ವರಿ ಸಮೇರುಪ್ರಷ್ಠಿ ಶಾಯಾಸಮಿ
ಲ್ಲದೆ ಚೆಲ್ವಾಯ್ತೆನೆ ದುಗ್ಧವಾರಿನಿಧಿಗಂಗಾಸಿಂಧುಸೀತಾನದೀ ।
ನದ ದಿವ್ಯಾಂಬುಗಳಿಂ ಸುಧರ್ಮನುಮಜಿಂದ್ರರ್ನಿಂದು ಕೂಗಾಡೆ ಮಾ
ಡಿದನಾಸೇಚನಮಂ ಜಗತ್ಪತಿಗೆ ಸತ್ಕಾರ್ಯಂ ತ್ರಿಕಲ್ಯಾಣದೊಳ್ ॥ ೩೬ ॥

ಅನಂತರಮನಂತಕರ್ಮವಿಜಯಂಗೆ ರಾಜ್ಯಾಭಿಷೇ
ಚನಂ ನೆಱೆಯೆ ಪಟ್ಟಮಂ ನೆರೆದು ಕಟ್ಟಿ ಬೊಟ್ಟಿಟ್ಟರಂ ।
ದನಂತಪದಪಂಕಜದ್ವಯದ ರೇಣುವಿಂದಾತನಾ
ವಿನಮ್ರನಿಟಿಲಾಗ್ರದೊಳ್ ಸಚಿವರುಂ ಚಮೂನಾಥರುಂ ॥ ೩೭ ॥

ಉೞಿದುರ್ವೀತಳರಾಜ್ಯಮಂ ಬಿಸುಟು ನಮ್ಮಂ ಪೋದಪಂ ಸ್ವಾಮಿಯುಂ
ದಟಿಲಲ್ಕಾಗದು ಘಾತ್ಯಘಾತಿವಿಜಯಪ್ರಸ್ಥಾನಮೆಂದಟ್ಟಿಱಿ ।
ಗ್ಗಱಿಯುಂ ಮಾಱೆ ಜಗದ್ವರಂ ತಿಳಿಸಿದಂ ತಾಮೆಲ್ಲರುಂ ಮಾಟ್ಟಿದಂ
ಪ್ರೊಟಿಲುತ್ಸಾಹಮನೆಂದು ಕೂಡೆ ಪಡೆಮಳ್ಳಂ ಡಂಗುರಂಬೊಯ್ಸಿದಂ ॥ ೩೮ ॥

ಅವನೀಭೂಷಣನಂಗಸಂಗಮೆಮಗಿನ್ನಿಲ್ಲಿಂದೆ ಕಣ್ತ್ರೀವಿ ನೋ
ಡುವಮೆಂಬಂತಿರನಂತಭೂಷಣಮಣಿಪ್ರದ್ಯೋತಿ ಕೈಗಣ್ಣೆ ಪೊ ।
ಣ್ಮಿಸಂ ವಾಸವನೊಲ್ದಲಂಕರಿಸಿ ಪೌಲೋಮೀಮುಖಾಮರ್ತ್ಯ ವಾ
ರವಧೂಕೋಟಿಗಳಿಂ ಮಹಾಮಹಿಮನಂ ನೀರಾಜನಂ ಮಾಡಿದಂ ॥ ೩೯ ॥

ತದನಂತರಂ

ಪುಳಕಂ ಕೈಮಿಗೆ ನೋಡಿ ನೋಡಿ ಮಗನಂ ಹರ್ಷಾಶ್ರುವಿಂ ಸೇಸೆಯಂ
ತಳಿಯುತ್ತುಂ ತೆಗೆದಪ್ಪಿಕೊಂಡು ಪರಸುತ್ತುಂ ನಿಂದ ತಾಯ್ತಂದೆಯಂ ।
ಲಲಿತಾಪಾಂಗದಯಾಸ್ಮಿತಪ್ರಸರದಿಂ ತಳ್ಕೈಸಿ ಬೀಳ್ಕೊಂಡು ಮಂ
ಗಳಲಕ್ಷ್ಮೀಮಸೃಣೋಪಮಂ ಶಿವಿಗೆಯಂ ಶ್ರೀನಾಥನೊಲ್ದೇಱಿದಂ ॥ ೪೦ ॥

ನೀರಾಜಿಸುವಾರಾಧಿಸು
ವೋರಂತಿರೆ ನಿಂದು ನೋಟ್ಪ ಪೌರರ ನಯನೋ ।

ಟಾರಚ್ಛವಿಯೊಳ್ ದುಗ್ಧಪ
ಯೋರಾಶಿಯು ನಾವೆಯಂತೆ ನಡೆದುದು ಯಾನಂ || ೪೧ ||

ಆಡುವ ಖೇಚರಾಮರನರ ಪ್ರಮದಾಕರಲಾಸ್ಯಮೆತ್ತಲುಂ
ಪಾಡುವ ಸಿದ್ಧಕಿಂಪುರುಷಕಿನ್ನರಕನ್ನೆಯರಿಂಪುವಾದ್ಯದೊಳ್ |
ಕೂಡುವ ಯಕ್ಷರಾಕ್ಷಸರ ಕೆಯ್ಯ ಘಟಾವಣೆ ದಿವ್ಯಯಾತ್ರೆಯೊಳ್
ಕೂಡೆ ಮಹೋತ್ಸವಂಬಡೆದುವಂದು ಸಹೇತುಕನಂದನಂಬರಂ || ೪೨ ||

ಆ ನಂದನದ ಮಧ್ಯಪ್ರದೇಶದೊಳ್

ನನೆಗಂ ಕೆಂದಳಿರ್ಗಂ ಫಳಕ್ಕಳಿವೃಂದಂ ಕೋಕಿಲಂ ಕೀರಮೆಂ
ಬಿನಿತುಂ ತಪ್ಪುತಡಂ ಕದುರ್ಗಂಕಲನೆಗಂ ಭೂಜಂಗಳಂ ಮುತ್ತೆ ಮುಃ |
ತ್ತಿನ ಮಾಣಿಕ್ಯದ ಪಚ್ಚೆಯುಚ್ಚಿವೆಳಗಿಂ ಬೆಚ್ಚಂತೆ ಚೆಲ್ವಾಯು ದೇ
ವನ ದೀಕ್ಷಾವಣಿಮಂಡಪಂ ಧನದಕೃತ್ಯಂ ಶಕ್ರಸತ್ಕಾರಿತಂ || ೪೩ ||

ಆ ಮಂಡಪದ ಮಕರತೋರಣದ್ವಾರೋಪಕಂಠದೊಳ್ನಿಂದು ದೇವರಾಜಂ ರಾಜಾಧಿರಾಜನಿಂದಿಳಿದು ಮನುಜದಿವಿಜಯಕ್ಷರಾಕ್ಷಸವಾನವ್ಯಂತರಾನಂತಕೋಟಿದುಂದುಭಿಧ್ವಾನಂ ಬಾನಮೆಸೆಯೆ ಬಳ್ಳಿಬಳೆಯೆ ಬಂದು ಪೊಕ್ಕು

ಸೊಪೆಲ್ಲೋವೆ ಮೆಱೆವ ಮಣಿಮಾ
ಡದ ರತ್ನದ ನಡುವಣಿಂದುಕಾಂತಶಿಲಾಪ |
ಟ್ಟದ ಮೇಲಭವಂ ವಿಧುಬಿಂ
ಬದ ಮೇಲಣ ಲಕ್ಷ್ಮಬಿಂಬಮೆನೆ ಕುಳ್ಳಿರ್ದಂ || ೪೪ ||

ಅಂತು ಪೂರ್ವಾಭಿಮುಖನಾಗಿ ಕುಳ್ಳಿರ್ದು

ತೊಲಗಿಸಿದ ವಸ್ತ್ರವಿಭೂಷಣ
ಕುಲದಿಂ ತ್ರಿಭುವನವಿಭೂಷಣಂ ನಿಜಸುಖ ಸ |
ತ್ಫಲಭರಿತಮಾಗಿ ಸೊಗಯಿಸಿ
ದಲೆಲೆಕ್ಕದ ಪಾರಿಜಾತಮಿರ್ಪಂತಿರ್ದಂ || ೪೫ ||

ಆಗಳ್ ಪುಳೋಮಜಾತಾಸಮೇತಮಿಂದ್ರಾಣಿವೃಂದಮನಿತುಂ ನೀರಾಜನಭಾಜನವ್ಯಗ್ರಹಸ್ತಪ್ರವಾಳೆಯರಾಗಿ ಸುತ್ತಿಱಿದು ನಿಂದಿರೆ ಮಾಂಗಲ್ಯವಸ್ತುಸಂಗತಹಸ್ತರಾಗಿ ದೇವೇಂದ್ರರೊಡನೆ ತಳ್ತಿರೆ ಸೌಧರ್ಮೇಂದ್ರನುಮೀಶಾನೇಂದ್ರನುಂ ಮಂಗಳಮಂಟಪ

ವಿಶ್ವಪ್ರದೀಪಕವೆಂಬಭ್ರದೊಳಾಯ್ತು ಕೇವಲವಿಬೋಧೋದ್ಬುದ್ಧಭಾನೂದಯಂ
ದುಭಯದ್ವಾರದೊಳ್ ಪೆಱಿಗಣೊಳಗಣ ಕಳಕಳವುಂ ನಿವಾರಿಸುತ್ತುಮಿರೆ

ಸಮತೆ ಸಮಸ್ತಭೂತದೊಳೊಡಂಬಡೆ ಪಂಕರುಹಾಸನಕ್ಕೆ ಸಂ
ದಮರ್ದಿರೆ ಸೌಷ್ಠವಂ ನೃಪತಿ ಪಂಚಪದಾಂಚಿತ ಪಂಚಮುಷ್ಟಿ ಪಂ ।
ಚಮಗತಿಯೆಯ್ದಿಸಲ್ ನೆಱೆವುದಂ ತಱಸಂದಪವರ್ಗಮಾರ್ಗದೊಳ್
ಸಮನಿಸಿದಂದದಿಂ ಕಿೞಿಪಿದಂ ಕುಟಿಲಾಳಕಜಾಳಕಂಗಳಂ ॥ ೪೬ ॥

ಇತ್ತ ನಮಸ್ಸಿದ್ಧೇಭ್ಯಯೆ
ನುತ್ತಂ ಪತಿ ಕಿತ್ತ ಕುಂತಳಂಗಳನಿಂದ್ರಂ ।
ಮುತ್ತಿನ ಪಡಲಿಗೆಯೊಳ್ ತಳೆ
ದಿತ್ತಂ ಪಾಲ್ಗಡಲ ಸಿರಿಗೆ ನೀಲದ ತೊಡವಂ ॥ ೪೭ ॥

ಆ ಬಾಹ್ಯಾಭ್ಯಂತರವೆಂಬ ತಿರೋಧಾನಂ ತೆಗೆದು ಪರಮಪಾವನತಪಸ್ತರುಣಿಯ ವಿವಾಹಮಹೋತ್ಸವಮನಾಂತ ಪರಮಪುರುಷನಂ ನಿವಾಳಿಸುವ ಅರ್ಚಿಸುವ ಪೊಡೆಮಡುವ ಪೊಗೞ್ವ ಸಕಳಜನದ ಜಯಜಯಧ್ವಾನಂ ದಿವಿಜಾನಕಧ್ವಾನದೊಡನತ್ತಳಗಮಾಗೆ

ಶ್ರೀದ್ವೈತೆಯಂ ಬಿಸುಟ್ಟು ತ
ಪೋದ್ವೈತೆಗನಂತನಾಥ ಜಿನಪತಿಯುಂ ತಾ ।
ನಾದಂ ಜ್ಯೇಷ್ಠದ ಕೃಷ್ಣ
ದ್ವಾದಶಿಯಪರಾಹ್ಣಸಮಯದೊಳ್ ರೇವತಿಯೊಳ್ ॥ ೪೮ ॥

ಸಾಕ್ಷಿತ್ರಾಯಕನಾಗಿ ಮು
ಮುಕ್ಷುಮಹಾಪದಮನಾಂತ ಮುನಿಭರ್ತೃಗೆ ಬೋ ।
ಧಾಕ್ಷಿಮನಃಪರ್ಯಯಮುಂ
ತಾಕ್ಷಣದೊಳೆ ತೆಱದೆಸೆದುವು ಕಣ್ದೆಱೆವಿನೆಗಂ ॥ ೪೯ ॥

ಆ ಪರಮೇಶ್ವರನ ಚರಣಸರಸಿರುಹಮಂ ಭಕ್ತಿಭರದಿನರ್ಚಿಸಿ ಪೂಜಿಸಿ ಪೊಗೞ್ದು ಪೊಡೆಮಟ್ಟಾಡಿ ಪಾಡಿ ಪರಿಪುಷ್ಟಾಂತರಂಗನಾಗಿ

ನಯನಾಂಭೋಘೃತವರ್ಧಿತೇಶ ವಿರಹಾಗ್ನಿಜ್ವಾಲೆಯಂ ರತ್ನಮಾ
ಲೆಯನಿಂದ್ರಾಣಿಯುಮಿಂದ್ರನುಂ ಪದೆಪಿನಿಂ ಸಂತೈಸಿ ತಾಯ್ತಂದೆಯುಂ ।
ನಯದಿಂ ರಾಜಗೃಹಕ್ಕೆ ತಾಂ ಕಳಿಪಿ ಪೋದಂ ದೇವದೇವೇಶನಂ
ಘ್ರಿಯುಕ್ತಾನತನಾಗುತುಂ ಶತಮುಖಂ ದೇವೇಂದ್ರವೃಂದಾನ್ವಿತಂ ॥ ೫೦ ॥

ತದನಂತರಂ

ವಿಮಳಾಧೀಶ್ವರಧರ್ಮಸಂತತಿಯನಿತ್ತಲ್ಮರ್ಮಭೂಮಧ್ಯದೊಳ್
ಸಮಯಾಚಾರದ ಮಾರ್ಗವರ್ತನದ ಪಾಂಗಿಲ್ಲೆಂಬ ಕಾರುಣ್ಯಭಾ ।
ವದೆ ಹೃತ್ಪ್ರೇರಕವಾಗೆ ಭವ್ಯಜನಭಾಗ್ಯೋಪಾಪ್ತಿಯಂ ಪಾಲಿಸ
ಲ್ಕೆ ಮುನೀಂದ್ರಂ ತಳರ್ದಂ ದ್ವಿತೀಯದಿನದೊಳ್ ಷಷ್ಠೋಪವಾಸಾಂತ್ಯದೊಳ್ ॥ ೫೧ ॥

ಅಂತು ತಳರ್ದು ಅಯೋಧ್ಯಾಮುಖನಾಗಿ ಬರ್ಪಲ್ಲಿ

ಇದೆ ಬರುತಿರ್ದಪಂ ಮುನಿಪನೆಂಬ ಮುನೀಂದ್ರನಿವೇದಕಂಗೆ ತಾ
ಕೊಡೆದುದನಿತ್ತು ನಾರವನಿತಾಜನಪುತ್ರಕಳತ್ರಮಿತ್ರಸ ।
ಮೃದಸಹ ಮಂಗಳಾಸಕಪ್ರೋಜ್ವಳಮಂಗಳಬಂಧಹಸ್ತನಂ
ದಿದಿಗೊರ್ಳಲೆಲ್ದನಾಗಳೆ ವಿಶಾಖನೃಪಂ ಪರಮಾನುರಾಗದಿಂ ॥ ೫೨ ॥

ಆ ವಿನೇಯಜನಜಂಗಮಪಾರಿಜಾತ ನಂದನಮೆಂಬಂತೆ ಪೊಳೆವ ತೋರಣದ ಮಿಳಿರ್ವ ಕೆಂಗುಡಿಯ ಕಳಶಮುಕುರಸ್ತಬಕದ ಫಳಕುಸುಮವಿಸರದ ಮಂಗಳಗಾನದ ದುಂದುಭಿಧ್ವನಿತಕೋಳಾಹಳದ ಮಹೋತ್ಸವವಚ್ಚರಿವಡೆಯೆ ಚೆಚ್ಚರಮಿದಿರ್ಗೊಂಡು

ಮೃದುಪದಪಂಕಜಂ ನಡೆದು ಕೆಂಪು ಮಿರಲ್ದು ನಿಜಾರುಣಾಂಶು ಪಾ
ಸಿದ ದುಗುಲಕ್ಕೆ ಬಾಸರದ ಮಾಸರಮಂ ಕುಡೆ ಬಂದ ಯೋಗಿಪೂ ।
ಪದ ನಿಧಿಯಂ ಗೃಹಾಂಗಣದೊಳೀಯೆ ಮುದಶ್ರುಜಳಂಗಳರ್ಘ್ಯಪಾ
ದ್ಯದ ಬಹುಮಾನಮಂ ನಿರ್ಮಿಸಿದಂ ಪೊಡೆವಟ್ಟು ವಿನೇಯಭೂಷಣಂ ॥ ೫೩ ॥

ಅಂತು ಗುರುಭಕ್ತಿಪೂರ್ವಕಂ ವಂದಿಸಿ ನಿಲ್ವುದೆಂದು ನಿಲಿಸಿ ನಿಜ ಗೃಹಾಂತರ್ವನ ಶುದ್ಧಪ್ರದೇಶಮಧ್ಯಸ್ಥಿತಕಲ್ಯಾಣಪೀಠದೊಳ್ ಸಕಲಕಲ್ಯಾಣಭಾಜನಂ ಬಿಜಯಂಗೆಯ್

ಪದಪಂಕೇಜದಳಂಗಳಂ ತೊಳೆದು ತತ್ಪುಣ್ಯಾಂಬುವಂ ಪೊತ್ತು ಮ
ಸ್ತದೊಳಾರಾಧಿಸಿ ವಿಶ್ರುತಾಷ್ಟವಿಧದಿಂ ಶುದ್ಧಾನ್ನಮಂ ಮೆಲ್ಲನಿ ।
ಕ್ಕಿದನಾ ಭೂಪತಿ ಕೆಯ್ಯೊಳಿಕ್ಕಿದನೆ ಪಾತ್ರಕ್ಷೇತ್ರದೊಳ್ಬಿತ್ತನಿ
ಕ್ಕಿದನಾ ಬೀಜದಿನಪ್ಪ ಸತ್ಫಲಮನಂತಿಂತುಂತೆನಲ್ಬರ್ಕುಮೇ ॥ ೫೪ ॥

ಅಂತು ನಿರಂತರಿತ ಪರಮತಪಶ್ಚರಣಧಾತ್ರಸಂಧಾರಣಪಾರಣಾನಂತರಂ

ಸಾಮಯಿಕಪ್ರಾಯಶ್ಚಿ
ತ್ತಾವಮೌನಿಕನಕ್ಷಯಂ ಭವೇದ್ದಾನವೆನಃ ।
ತ್ತಾಮುನಿಪಂ ಕೆಯ್ಯೆತ್ತಿದೊ
ಡಾ ಮನೆಯೊಳ್ನೆಗೆದುದಿಂತು ಪಂಚಾಶ್ಚರ್ಯಂ ॥ ೫೫ ॥

ಅಂತು ಪಂಚಾಶ್ಚರ್ಯಂ ನೆಗಟಿ³ ಪೊಟಿಲನಿತುಮಾತನಂ ಪೊಗಟಿ³ ತನ್ಮುನೀಂದ್ರ ವೃಂದಾರಕಂ ಸಾಧುಸಂಘಸಮೇತಂ ಸಹೇತುಕವನಕ್ಕೆ ಬಿಜಯಂಗೆಯ್ವಾಗಳ್

ಎನಗಿಂ ದೈಹಿಕಪಾರಮಾರ್ಥಿಕಸುಖಂ ಕೈಸಾರ್ದುದಿಂದೆಯ್ದೆ ಪಾ
ವನಮಾಯ್ತೆನ್ನ ಮನುಷ್ಯಜನ್ಮಮೆಸಕಂಬೆತ್ತೆನ್ನ ಗಾರ್ಹಸ್ಥ್ಯಮಿಾ ।
ದಿನದೊಳ್ ಸೌಷ್ಟವಮಾದುದಾನೆ ಕೃತಕೃತ್ಯಂ ದೇವ ನಿನ್ನಂಘ್ರಿಕೋ
ಕನದಂ ಪೆಟ್ಟದುದೀಗೃಹಪ್ರಘಣಮಂ ತ್ರೈಲೋಕ್ಯಚಿಂತಾಮಣೀ ॥ ೫೬ ॥

ಎಂದು ಗದ್ಗದೀಭೂತೇಪ್ಸಿತಕಂಠಕಂದಳನುಂ ಹರ್ಷೋತ್ಕರ್ಷಿತ ಬಾಷ್ಪವಾಃಪೂರನುಂ ಪುಳಕಕಳಿಕೋತ್ಕಳಿತತನುಲತಾದಂಡನುಮಾಗಿ ವನಜವನದ ರುಚಿಯಂ ಮೆಚ್ಚಿ ಬಿಡಲಾಱದ ಮಱಿಯಂಚೆಯಂತೆ ಕಾರುಣ್ಯಜಲಧಿಯ ಗೌರವನಾ ವಿಶಾಖನೃಪಾಲನಗಲಲಾಱದೆ ಕಳಿಪುತ್ತುಂ ಕಳಿಯೆ ಪೋಗಿ ತದಾನುಗ್ರಹಮಂ ಮಿಾಱಲಣ್ಮದೆ ಕಣ್ಮಲರ ಮಾಲೆಯುನೆ ಬೞಿಗಳಿಪಿ ಬಂದನಿತ್ತಲ್

ಚರ್ಯಾತಿಚಾರಮಾರ್ಗದೊ
ಳೀರ್ಯಾಪಥಶುದ್ಧಿ ನೆಗಟಿ³ ನಿಂದಂ ಜಗದಾ ।
ಚಾರ್ಯಂ ಮೇರುಮಹೀಧರ
ಧೈರ್ಯಂ ತದ್ವನದ ಧವಳಶುದ್ಧೋಪಲದೊಳ್ ॥ ೫೭ ॥

ಅಂತು ಮಾಸ್ಯೈಕಮಾತ್ರಪ್ರಕಲ್ಪಿತ ಪ್ರತಿಮಾಯೋಗನಿರತನಿರ್ದಲ್ಲಿ

ದಿವಿಜಾರಾಧ್ಯನ ನಿಂದ ಮುನ್ನಡಿಗೆ ವಾನವ್ಯಂತರರ್ ಮಾಟ್ಪಿರ
ಷ್ಟವಿಧಾಭ್ಯರ್ಚನಮಂ ವನಪ್ರಮದೆಯರ್ ಮೆಟ್ಟಿರ್ದ ಕಲ್ಮಾಯ್ತುಗ್ಗವಿಾ ।
ಸವಿತದ್ಯೋತಿಯಿನೆಂದು ಕೆಂದಳಿರ ಜೊಂಪಂ ಶೀರ್ಷದೊಳ್ ಪಾದಪ
ಲ್ಲವದೊಳ್ ಪಂಕಜಮಾಂಕೆಯಾಗೆ ಪೇಟಿ³ವರ್ ತಂತಮ್ಮ ಸದ್ಭಕ್ತಿಯಂ ॥ ೫೮ ॥

ಅದಲ್ಲದೆಯುಂ

ಅರಗಿಳಿ ಪಣ್ಗೆ ಬಂಡುಣಿಸಲಪ್ಪುವು ತುಂಬಿ ಮರಿಲ್ದರಲ್ಗೆ ತುಂಬಿ ರೆಖೋಂ
ಕರಿಸವು ಕೋರಕಕ್ಕೆ ಕುಕಿಲೆನ್ನವು ಕೋಗಿಲೆ ಮಂದಮಾರುತಂ।
ತರುಲತಿಕಾದಳಂಗಳಲಿವಂತಲುಗಾಡದು ತತ್ತ್ರಪೋವನಾಂ
ತರದೊಳಗಾ ಜಿನೇಂದ್ರಮುನಿನಾಥ ಸಮಾಧಿವಿರೋಧಭೀತಿಯಿಂ ॥ ೫೯ ॥

ಮತ್ತಮಾಮುನೀಂದ್ರಚಂದ್ರನೆಂಬ ಹಿಮವನ್ಮಹೀಧರದಿನೊಗೆದ ಶಾಂತರಸಮರುತ್ತರಂಗಿಣೀ ಪ್ರವಾಹಂ ಸ್ಥಾವರಜಂಗಮಂಗಳೊಳನಂಗವಿಕಾರವೈರಸ್ವಭಾವದಾವಪಾವಕ ನಿರಸನಮನೊಡರ್ಚಲೊಡನೆ

ಶರಭಂ ಕೇಸರಿಗಳ್ಗೆ ಕೇಸರಿ ಕರೀಂದ್ರಂಗಳ್ಗೆ ಕಾಡಾನೆ ಬೇ
ಡರ ಕರ್ಪಿಂಗೆ ಪುಳಿಂದರರ್ಬಿಸುವ ಶಾರ್ದೂಲಕ್ಕೆ ಶಾರ್ದೂಲಮು।
ಚ್ಚರಿ ಸಾರಂಗಮೃಗಕ್ಕೆ ಚಿತ್ರಕಮೃಗಂ ಪಾವಿಂಗೆ ಪಾವಲ್ಲಿ ಮುಂ
ಗುರಿಗಳ್ಗಂಜದೆ ಬಟ್ಟೆ ಪೊರ್ದಿದವಲಂಪಿಂ ಜಾತಿವೈರಂಗಳಂ ॥ ೬೦ ॥

ಅಂತುಮಲ್ಲದೆಯುಂ

ಕವದಿಂ ನಾಲ್ಕೆರಡು ವಿಭೇ
ದವನಾಳ್ದು ಮುನಿಯೊಳೆಸೆದುದು ಕವಲಿಂ ಕವಲಿಂ।
ವಿವಿಧಮೆನಿಪ್ಪ ಮತಿಶ್ರುತ
ಮವಧಿಮನಃಪರ್ಯಯಂ ಚತುರ್ವಿಧಬೋಧಂ ॥ ೬೧ ॥

ಅಷ್ಟಗುಣಸಿದ್ಧಪದವಿಗ
ಮಷ್ಟಮಹಾಪ್ರಾತಿಹಾರ್ಯರುಚಿಗಂ ಸವ್ಯ।
ಗ್ದೃಷ್ಟಿಯು ನೋಟ್ಪಣುಕೆಂಬಿನ
ಮಷ್ಟಮಹಾಋದ್ಧಿಯಂ ಮುನೀಶ್ವರನಾಂತಂ ॥ ೬೨ ॥

ಅಂತು ಸಮನಿಸಿದ ಚತುರ್ವಿಧಾಗಮಶುದ್ಧಿಯೊಳಷ್ಟವಿಧಋದ್ಧಿಯೊಳಮಧಿಕೃತನಾಗಿ ಬಱಿಯಂ

ಕ್ರಮದಿಂದಾಗಮಯುಕ್ತಿದುರ್ಧರತಪಂ ಶತ್ತ್ವಂ ಷಡಾವಶ್ಯಕಂ
ಸಮಯಾಚಾರವಿಡಂಬರಾಗಮೆನಸುಂ ಮೆಯ್ವೆತ್ತು ಸನ್ಮಾರ್ಗದೊಳ್।
ಸಮುದಾಯಂ ನಿಲೆ ಧೀರನೇಕಕನನಂತಂ ಭವಪುಣ್ಯಾನುರು
ದ್ಧಮನ ಂಧರ್ಮವಿಹಾರದೊಳ್ ತಳರ್ದನಾ ಪುಣ್ಯಾಶ್ರಮಾರಣ್ಯದಿಂ ॥೬೩॥

ಅಂತು ತಳರ್ದು ವಿಹಾರಿಸುವಲ್ಲಿ

ಅಣಿಮಾದ್ಯಷ್ಟಗುಣಂ ಚತುರ್ವಿಧವಿಬೋಧಂ ತೀರ್ಥಕೃನ್ನಾಥನೆಂ
ದೆಣಿಸಂ ತನ್ನನನಾಥನಂತೆ ಬಗೆದೆಲ್ಲಾ ಪ್ರಾಣಿಯುಂ ತನ್ನ ಕ।
ಣ್ಬೊಣರಿಂದೋವುನನಿಂತುಟಾತ್ಮಹಿತಮೆಂದೆಂಬೀತನೊಳ್ ತನ್ನ ಮೇ
ಲಣ ಮೋಹಂ ತನಗೆಂತುಟೆಂದಱಿಯೆನೀ ತ್ರೈಲೋಕ್ಯಮಾಣಿಕ್ಯನಾ ॥ ೬೪ ॥

ಮಾಣದೆ ತಪದಿಂ ಮುನಿಗೀ
ರ್ವಾಣನ ತನು ತಪ್ತಮಾಗಿಯುಂ ಕಂದದೆ ನೇ।
ರಾಣಿಯು ಪೊಳೆಪಂ ತಳೆದುದು
ಮಾಣಿಕಮುಂ ಬೆಳಗಿದಂತೆ ದಹನಕ್ರಿಯೆಯಿಂ ॥ ೬೫ ॥

ರೋಗಿಗಳ ರೋಗಮೆಲ್ಲಮ
ನಾಗಳ್ ಕೆಡಿಸುವುದು ತನ್ನ ತನುವಿನಮಳಸು।
ಯೋಗಮೆನಿಪೌಷದರ್ಧಿಯಿ
ನಾ ಗುಣನಿಧಿ ಸಕಲಗುಣಶುಭಂಕರನಾದಂ ॥ ೬೬ ॥

ರಸಹೀನಂ ಕೆಯ್ಗೊಳೊಳಂ
ರಸಮಯಮಪ್ಪುದಂ ವಿಚಿತ್ರಮೇಂ ಕಾಣಲೊಡಂ।
ಪಸಿಯುಂ ತೃಷೆಯುಂ ಕೆಡುವುದು
ರಸಋದ್ಧಿಯಿನಾ ಮುನೀಂದ್ರಚಂದ್ರನ ಮುಖಮಂ ॥ ೬೭ ॥

ಅಂತು

ಪರಿಮಿತಯೋಗಯೋಗ್ಯತರಮಪ್ಪ ನದೀನದಮಧ್ಯಶೈಲಶೇ
ಖರಶಿಲೆಯೊಳ್ಮಹಾಗಹನದೊಳ್ತರುಮೂಲದೊಳಿರ್ದು ಯೋಗಮಂ।
ನಿರವಿಸಿ ಭವ್ಯಸಂತತಿಗೆ ಪುಣ್ಯಮನಾರ್ಜಿಸಿದಂ ಮುನೀಶ್ವರಂ
ಚರಿಯಿಸೆ ಖೇಡಖರ್ವಡಮಡಂಬದ ಪತ್ತನದಂತರಾಳದೊಳ್ ॥ ೬೮ ॥

ಅಂತು ಮಾರ್ಗಪ್ರವರ್ತನಾಥಂ ಛದ್ಮಸ್ಥಕಾಲಮನೆರಡುವರ್ಷಂಬರಂ ಧರ್ಮ ವಿಹಾರಂ ಮೌನವ್ರತದಿಂ ಕಳಿಪಿ ಸಕಲಕೇವಲಬೋಧಲಾಭದ ಮೂಲಧನಮಂ ಮಡಗಿ ದೆಡೆಗೆ ಬರ್ಪಂತೆ ಮಹಾವ್ರತಹೇತುವಪ್ಪ ಸಹೇತುಕವನಕ್ಕೆ ಮಗುಳ್ದು ಬಂದು ಧವಳ ವಿಮಳಮಪ್ಪ ವಿಪುಳಾವನೀರುಹದ ಮೂಲಸೊಳ್ಸಿದ್ಧಶಿಲಾತಳಪ್ರತಿಬದ್ಧಮೆನಿಸ ಶುದ್ಧೋ

ಶಿಲೋಪರಿಮತಳದೊಳ್ ಬದ್ಧಪಲ್ಯಂಕಾಸನನುಂ ಪೂರ್ವಾಭಿಮುಖನುಮಾಗಿ

ಮನಮಿರೆ ಪುರ್ವಿನ ಮೊದಲೊಳ್
ಮನದೊಳಗಿರೆ ವಾಯು ಕರಣತತಿ ವಾಯುವಿನೊ।
ಳ್ಕುನಿದಿರೆ ಪದ್ಮಾಸನದೊ
ಳ್ತನುವಿರೆ ಯೋಗೀಂದ್ರನಾತ್ಮಚಿಂತೆಯೊಳಿರ್ದಂ ॥ ೧೯ ॥

ಸಕಲದ್ರವ್ಯಪದಾರ್ಥತತ್ತ್ವಭೃತಲೋಕಾಲೋಕಕಿಂಚಿತ್ಕರಂ
ಡಕಮಂ ಕೆಯ್ಯೊಳಗಿಟ್ಟು ಕಾಣಿಸುವುದೀ ಪ್ರದ್ಯೋತಿ ದಿವ್ಯಾಂಗದೀ।
ಪಿಕೆಯೊಳ್ ನಿಶ್ಚಳನಾಗಿ ನಿಂದು ಬೆಳಗಿತ್ತೆಂಬಂತೆ ವಿಶ್ವಪ್ರದೀ
ಪಕಮೆಂಬಭ್ರದೊಳಾಯ್ತು ಕೇವಲವಿಬೋಧೋದ್ಬುದ್ಧಭಾನೂದಯಂ ॥ ೨೦ ॥

ಜರೆ ರೋಗಂ ತೃಷೆ ನಿದ್ರೆ ಮೃತ್ಯು ಜನನಂ ಸ್ವೇದಂ ಮದಂ ಚಿಂತೆ ಭೀ
ತಿ ರತಿ ಗ್ಲಾನತೆ ವಿಸ್ಮಯಂ ಕ್ಷುಧೆ ವಿಷಾದಂ ಮೋಹನಂ ದ್ವೇಷ ರಾ।
ಗ ರಸಂಗಳ್ಪದಿನೆಂಟು ದೋಷಮಿವರಿಂದಂ ಪಿಂಗಿದಾಪ್ತಂ ಜಗ
ದ್ಗುರು ನಿಃಕೇವಳಬೋಧರೂಪನೆಸೆದಂ ಸಾಹಿತ್ಯರತ್ನಾಕರಂ ॥ ೨೧ ॥

ಭವ್ಯಸಸ್ಯಾವಳಿಗಳ್ಗಾಗಿಸಿದಂ ಧರ್ಮಾಮೃತ ವರ್ಷಾಗಮಮುಮಂ

ಶ್ರೀಕಾಂತೆಯ ಲೋಚನಕುಮು
ದಾಕರಮನಲರ್ಚಿ ವಿಮಳಕೇವಳಬೋಧಾ।
ಲೋಕದೆ ನಿರ್ಮಳಪೂರ್ಣಸು
ಧಾಕರನಾದಂ ವಿನೇಯಜನಮುಖತಿಲಕಂ ॥ ೧ ॥

ಪುದಿದುದು ದೇವತೂರ್ಯರವಮೆಣ್ದೆಸೆಯಂ ದಿವದಿನ್ನಮೇರುಪು
ಷ್ಪದ ಸರಿ ಬಂದು ಘುಯ್ಯನೆಱಗಿತ್ತು ವಿಯತ್ತಳದೊಳ್ಪೊದಟ್ಟಿದೊ।
ಪೊರ್ದಲೊಳೆ ದೇವಕೋಟಿ ಜಯ ಮನ್ಮಥಭಂಜನ ಜೀವಕರ್ಮದು
ರ್ಮದಹರ ನಂದನಂದ ಭುವನತ್ರಯಭೂಷಣ ಎಂಬ ಘೋಷಣಂ ॥ ೨ ॥

ಜಿನಚಂದ್ರನ ಬೋಧವಿಲೋ
ಚನಚಂದ್ರಿಕೆ ಬೆಳಗೆ ಮೆಚ್ಚಿ ತಲೆತೂಗುವವೊ।
ಲನಿಮಿಷಪತಿಗಾಸನಕಂ
ಪನಮಾದುದು ಮುಗಿದುವೊಡನೆ ಕರಸರಸಿರುಹಂ ॥ ೩ ॥

ಅಂತು ಸಕಳವಿಮಳಬೋಧಸ್ವರೂಪಂ ಸತ್ಪಥದೊಳುದಯಂಗೆಯ್ದಿರ್ದುದಂ ಸುಧರ್ಮಂಗವಧಿಬೋಧಾಕ್ಷೇಪವಿಕ್ಷೇಪಂ ಪ್ರತ್ಯಕ್ಷಂ ಮಾಡಲೊಡಮಾದಿಶಾಮುಖಕ್ಕೇೞಡಿಯಂ ನಡೆದು ಪೊಡೆಮಟ್ಟು ನಿಂದು ಧನಾಧ್ಯಕ್ಷನಂ ಸಮವಸರಣ ವಿರಚನೆ ನಿರೂಪಿಸಿ

ಪ್ರತಿಹಸ್ತ್ರಾಮರಕಾಮಿನೀಸಮುದಯಂ ಮಾಣಿಕ್ಯದೀಪಾಕ್ಷತಾ
ಕ್ಷತಮಂದಾರನಮೇರುದಾಮ ನವರತ್ನಾಮಂತ್ರವೈಚಿತ್ರ್ಯದೊಳ್।
ಶತಪತ್ರಂ ಶತಕೋಟಿ ಕೂಡಿ ಬರೆ ಪೌಲೋಮೀಸಮೇತಂ ಶತ
ಕ್ರತು ನಿರ್ವರ್ತಿಸಲಳ್ಕಱಿಂ ತಳರ್ದನಾ ಚಾತುರ್ಥ್ಯಕಲ್ಯಾಣಮಂ ॥ ೪ ॥

ಅಂತೆಯ್ದೆವಂದು ಗಗನಸ್ಫಟಿಕಪ್ರಕಾರಕ್ಕಳಂಕಾರಮಾದ ಹಾರಿತಕ ಹಿರಣ್ಮಯ ದ್ವಾರ ಗೋಪುರಮಂಟಪದಿಸೊಳಪೊಕ್ಕು

ಅಗರುವ ಧೂಪಧೂಮಲತೆಯುಂ ಹರಿನೀಲವಿಭೂಷಣಾಂಶು ದೀ
ಪಿಗೆಗಳ ಮಾಲೆಯುಂ ಮುಕುಟಶೋಣಮಣಿಪ್ರಭೆ ಮೌಕ್ತಿಕಾಚ್ಛರ।
ಶ್ಮಿಗಳುದಹಾರಮಂ ನಯನಕಾಂತಿ ಲತಾಂತಮನೀಯೆ ಮೂಮಿ ಕೈ
ಮಿಗೆ ಬಲವಂದು ಗಂಧಕುಟಿಯುಂ ಮೆರೆದಾಹರಿಧೂಮವೇಳೆಯುಂ ॥ ೫ ।

ಅಂತು ಬಲವಂದು ನವಮಣಿ
ಸಂತಾನದೊಳಗೆಸೆಯೆ ಬೆರಕೆಗೆಂಪು ವಿಕಸ।
ತ್ಸಂತಾನಲತಾಂತಂಗಳ್
ಕಂತುಹರಂಗಿತ್ತ ರತ್ನಕುಸುಮಾಂಜಳಿಯುಂ ॥ ೬ ।

ಸಿಂಹಪೀಠೋಪಾಂತಮಣಿಕುಟ್ಟಿಮಲಕ್ಷ್ಮಿಗೆಸರ್ವಾಂಗಾಲಿಂಗಿತಮನಿತ್ತುಹರ್ಷೋ
ತ್ಕರ್ಷಪುಳಕಜಾಳಕಂ ಮುನ್ನೀಱ ಬಱಿಕಮೆೞ್ದು ಸಮುಚಿತ ಪ್ರದೇಶದೊಳ್ನಿಂದ
ಕಿಂಚಿದವನತಕೋಟೀರಭಾರನುಂ ಮುಕುಳಿತಕರಸರೋಜನುಂ ವಿಕಸಿತಾದರಪಾಣಿಪಲ್ಲ
ವನುಮಾಗಿ

ಜಯ ಜಯ ಜಯ ಪರಮೇಶ್ವರ
ಜಯ ಜಯ ಜಯ ಪರಮಪುರುಷ ಜಯ ಜಯ ಜಯ ದು।
ರ್ಜಯ ಮನ್ಮಥ ಮದಭಂಜನ
ಜಯ ಜಯ ಜಯ ದೇವದೇವನಂತಜಿನೇಂದ್ರಾ ॥ ೭ ।

ನಿನ್ನಱಿವು ನಿನ್ನ ಮಾರ್ಗಂ
ನಿನ್ನಾಗಮಯುಕ್ತಿ ನಿನ್ನ ಮಹಿಮೋನ್ನತಿಯಿ।
ಲ್ಲೆನ್ನಮನವಱಿಯೆ ಮಿಕ್ಕರೊ
ಳಿನ್ನಂ ನಿನ್ನಂತೆ ಮಾಡನಂತಜಿನೇಂದ್ರಾ ॥ ೮ ।

ನಿನ್ನನೆ ಬಿಡದಾರಾಧಿಸಿ
ನಿನ್ನಯ ಗಣಕೋಷ್ಠದೊಳಗೆ ನೆಲಸಿದ ಬಹುವಿ।
ದ್ಯೋನ್ನತರ್ಗೆಣೆಯಿಲ್ಲೆಂದೊಡೆ
ನಿನ್ನನ್ನರ್ದೇವರಾರನಂತಜಿನೇಂದ್ರಾ ॥ ೯ ।

ಮುನಿದೊಸೆವ ಕೊಡುವ ಕೊಳ್ವಾ
ತನೆ ದೇವಂ ಸೇವಕಂಗವಿಲ್ಲದ ನಿನ್ನಂ।
ನೆನೆದನೆ ನಿಜಪದವಿಗೆ ಭಾ
ಜನನಪ್ಪನದೆಂತೂ ಪೇಟಿನಂತಜಿನೇಂದ್ರಾ ॥ ೧೦ ।

ಅಱಿವೆ ತನುವಾದುದಾದೊಡ
ಮಱಿವೈ ನೀಂ ನಿನ್ನ ಗುಣಮನಿನ್ನಱಿವವರಾ ।
ರಱಿಯದೊಡೇಂ ನೀನಾನೆಂ
ಬಱಿವಱಿತಮೆ ಸಾಲ್ಪುದೆನಗನಂತಜಿನೇಂದ್ರಾ ॥ ೧೧ ॥

ವೇಱೆಡೊಲಿಸುವಿಱಿದು ಸಲಿಸುವ
ಕುಱುಪಿಲ್ಲದ ನಿನಗೆ ದೇವನೆಂದಱಿಯುವರೇ ।
ಕೆಱಗಿದಪರೆನ್ನ ಪುಣ್ಯದಿ
ನಱಿದೆಱಗಿದೆನರ್ಹನೆಂದನಂತ ಜಿನೇಂದ್ರಾ ॥ ೧೨ ॥

ಜಿನ ನಿನ್ನಂ ಪೂಜಿಪನೊ
ಳ್ಪನವರತಂ ಪೊಗೞ್ವ ಸುಖಮೆ ಮೋಕ್ಷಂ ಮೋಕ್ಷಂ ।
ನಿನಗಕ್ಕನಂತಕರ ಲೋ
ಚನ ಜಿಹ್ವಕನಪ್ಪೆನಕ್ಕನಂತಜಿನೇಂದ್ರಾ ॥ ೧೩ ॥

ಎಂದನೇಕಪ್ರಕಾರದಿಂ ಸ್ತುತಿಸಿ ಬೞಿಕ್ಕಂ

ನವರತ್ನದ ರಾಶಿಗಳಿಂ
ವಿವಿಧಾಂಬರಭೂಷಣಂಗಳಿಂ ಶಂಖಮಹಾ ।
ರವದಿಂ ಸಂಗೀತಸಮು
ತ್ಸವದಿಂ ಮುಕ್ತಾತಪತ್ರಚಾಮರಚಯದಿಂ ॥ ೧೪ ॥

ಭೃಂಗಾರಕಲಶದರ್ಪಣ
ತುಂಗಧ್ವಜಸುಪ್ರತಿಷ್ಠತಾಳಾಷ್ಟ ಮಹಾ ।
ಮಂಗಳದಿಂ ನವನಿಧಿಗಳಿ
ನಂಗಜಹರನಂ ಸುರೇಂದ್ರನಾರಾಧಿಸಿದಂ ॥ ೧೫ ॥

ಅಂತನೇಕ ಮಂತ್ರಪ್ರಮುಖಪೂಜಾವಿಧಾನದೊಳಂ ವಾಕ್ಪೂಜಾವಿಶೇಷದೊಳ ಮಾರಾಧಿಸಿ ಗಣಕೋಷ್ಠದೊಳಗಣ ವಿಶೇಷಕರನಾಗಿರ್ದ ಜಯನಾಥಗಣಧರದೇವ ಸಮಕ್ಷಮದೊಳಿರ್ದು ಪರಮಧರ್ಮಾಭಿಷೇಚಾಭಿಮುಖವಾಗಲೊಡಮನಂತಜಿದ್ವಲ್ಲಭನ ವದನಮಂಡಲಮೆಂಬ ಹಿಮವದ್ವಾರಶಿಖರವಳಯದಿಂ ದಿವ್ಯಭಾಷಾನಿಮಿಷಾನಿಮಿಷ ತರಂಗಿಣೀಪ್ರವಾಹಂ ತಾಲುಸಂಘಟ್ಟನಮುಮಧರಸಂಘಟ್ಟನಮುಮಿಲ್ಲದೆಯುಂ ದೂರಾ ಸನ್ನಂಗಳೊಳವ್ಯಕ್ತಮುಲ್ಲದೆಯುಂ ಗಂಭೀರಮಧುರಶ್ರವ್ಯಗುಣಾನುಪಮಾಳಂಕೃತಿಗೆ ಸಲ್ಲ

ಡೆಯುಂ ದೇವಬಾಷಾಧಿ ಸಕಲದೇಶಭಾಷಾತ್ಮಕಮಪ್ಪುದಱಿಂ ನರ್ಧಮಾಗಧಿಯೊಳ್ ನಿಲ್ಲ
ಡೆಯುಂ ಯಥಾಪ್ರಕಾರಮಿಂತವತರಿಸಿದುದು

ಪರಮಾರ್ಹನ್ಮುಖಚಂದ್ರಮಂಡಲವಚಶ್ಚಂದ್ರಾತಪಾಸಾರದಿಂ
ತೆರೆಸೂಸುತ್ತಿರೆ ಹರ್ಷಬಾಷ್ಪಸಲಿಲಂ ಮೆಯ್ಯೆಲ್ಚಿರ್ಪ ರೋಮಾಂಚ ಶೀ।
ಕರ ಜಾಳಂ ನಲಿದಾಡೆ ಚಿತ್ರಜಳಸತ್ವವ್ರಾತಮಾನಂದ ನಿ
ರ್ಭರಸಂದರ್ಭಮುದಾತ್ತನೂರ್ಜಿತ ಯಶೋಲಕ್ಷ್ಮೀಸುಧಾಸಾಗರಂ ॥ ೧೬ ॥

ಅನ್ನೆಗಮಿತ್ತಲ್

ಪರಿಸಿಷ್ಟಶ್ರಮಣಮೊಳಭವಂ
ಧರಣೀರಕ್ಷಣಮೆ ಸಕಲಪುರುಷಾರ್ಥಮಿಂದೆಂ।
ದಿರಿಸಿದೊಡೆಯೋಧ್ಯೆಯೊಳಗಿ
ರ್ದರಸುತನಂಗೆಯ್ವುಸಂತು ವಿಜಯಕುಮಾರಂ ॥ ೧೭ ॥

ತಂದೆಯುನಗಲ್ದ ವಿರಹಂ
ನಂದವೆ ಕಾಪಾರ್ಸಶಿಖಿಯೊಲೊಳಗೊಳಗಟಲಿಲಂ।
ಸಂಧಿಸೆ ನಿಲಲಾಱದೆ ನಿಜ
ಮಂದಿರಮೊಳ್ ರಾಜ್ಯಸುಖಪರಾಙ್ಮುಖನಾದಂ ॥ ೧೮ ॥

ಮಂತ್ರಿಮಹತ್ತರರೊಳ್ ಸಂ
ಯಂತ್ರಿಸಿ ಸಾಮ್ರಾಜ್ಯಭಾರಮಂ ತಳರ್ದಂ ನಿ।
ರ್ಮಂತ್ರಂ ನಿಸ್ಸಂಗಂ ನಿ
ಸ್ತಂತ್ರಂ ಕಾಣ್ಬಲ್ಕೆಱಿಂ ಜಗತ್ತ್ರಯಗುರುವಂ ॥ ೧೯ ॥

ಇನ್ನೆಡೆಯಿಂದಂ ಮಗಟೆ೩೦
ತನ್ನಯ ರೂಪಿಂದೆ ನಿಂದನಂತೋಹಂ ಎಂ।
ಬನ್ನವರಮೆಂದು ಪೂಣ್ದೆ ನಿ
ಸಂ ನಿಲ್ಲದೆ ರಾಜಭವನದಿಂ ಪೊಱಮಟ್ಟಂ ॥ ೨೦ ॥

ಅಸುಸಂಧಾರಣಮಾತ್ರಮ
ನಸಂಗದಿಂ ತಾಳ್ದಿ ಮಿಕ್ಕುದಂ ತ್ಯಜಿಯಿಸಿದಂ।
ಕುಸುಮವಿಲೇಪನಭೂಷಣ
ವಸನಾಶನಪಾನಸುರತಶಯನಾದಿಗಳಂ ॥ ೨೧ ॥

ಕಟ್ಟಿದ ಸುವ್ರತಸೂತ್ರಂ
ನೆಟ್ಟಿದ ಕೆಪ್ಪುರ್ಗಟ್ಟವಲ್ಕಲಂ ನೊಟ್ಟಿಯ ಕೋಲ್ ।
ನಟ್ಟ ಬಿಸಿಲ್ಗೆತ್ತಿದ ಕೊಡೆ
ಕಟ್ಟಾಯತನಾಗಿ ಚಳಯದಿಂ ಪೊಱಮಟ್ಟಂ ॥ ೨೨ ॥

ನಾಡೊಳ್ ನಗರಗ್ರಾಮಂ
ಜೇಡ ಖರ್ವಡ ಮಡಂಬ ಪತ್ತನಮೆಂಬೀ ।
ಬೀಡುಂದಾಣದೊಳೆಲ್ಲಂ
ನೋಡುತ್ತುಮನಂತನಾಥನಂ ನರನಾಥಂ ॥ ೨೩ ॥

ಎನಿತಾನುಮಱಸಿ ಕಾಣದೆ
ತನು ತಾಱಿ ಒಱಲ್ದೆಱಲ್ದು ಬೆಂಬೞಿವಿಡಿದೊಂ ।
ದನುಮಾನದಿಂ ಸಹೇತುಕ
ವನದೆಡೆಗೆ ಮಗುೞ್ದು ಬಂದನಾ ವಿಜಯನೃಪಂ ॥ ೨೪ ॥

ಆ ವನದ ನಟ್ಟನಡುವತಿ
ಪಾವನತಳದಲ್ಲಿ ಪರಿದು ಪರ್ವಿರ್ದಶ್ವ ।
ತ್ಥಾವನಿಜಂ ಶಶಿಕಾಂತ
ಗ್ರಾವಮನೊಳಪಾಯ್ದು ಕಣ್ಗೆವಂದಿರೆ ಕಂಡಂ ॥ ೨೫ ॥

ಮಂದಾರದಲರ್ಗಳಿಂ ಹರಿ
ಚಂದನದಿಂ ಮುತ್ತಿನಕ್ಕಿಯಿಂ ಮಾಣಿಕದಿಂ ।
ನಂದದ ಸೊಡರ್ಗುಡಿಗಳಿನಾ
ಗಂದಮನೊಡರಿಸುವ ಪರಿಕರಂಗಳನದಱೊಳ್ ॥ ೨೬ ॥

ಅಂತಲ್ಲಿ ಕಂಡು ಗಮನ
ಶ್ರಾಂತಿಯನಾಱಿಸುವ ಬವಸೆಯಿಂ ಕುಳ್ಳಿರೆ ಭೂ ।
ಕಾಂತಂ ಬಂದರದೊರ್ವರ್
ಶಾಂತಿಶುಭಾಚಾರ್ಯರೆಂಬ ದಿವ್ಯಮುನೀಂದ್ರರ್ ॥ ೨೭ ॥

ಅರಣ್ಯವಾಸರೇಕವಿ
ಹಾರವ್ರತಶೀಲಗುಣವಿದಾನ ನಿಧಾನ ।

ಕರ್ಣರುಣ್ಯಾತ್ಮರ್ಬರೆ ಕಂ
ಡಾ ರಾಜಕುಮಾರನೆಡೆಗೆ ಪರಸಿ ಬಟುಕ್ಕಂ ॥ ೨೮ ॥

ತೊಳಪ ದಶನಾಂಶು ಜಾಹ್ನವಿ
ತೊಳೆಯೆ ತನೂದುಃಖಪಂಕಮಂ ಮೃದುಮಧುರೋ।
ಜ್ಜ್ವಳವಾಣೀದುಂದುಭಿ ಬೆಂ
ಕೊಳೆ ದುರಿತಮೃಗಂಗಳಂ ದಯಾನಿಧಿ ನುಡಿದಂ ॥ ೨೯ ॥

ಅರಳಿಯ ಮರವಿದು ನಿನ್ನಯ
ಗುರು ನಿಂದೆಡೆಯಾ ಸುಧಾಂಶುಕಾಂತೋಪಳದೊಳ್।
ಪರಮಜ್ಞಾನವಿಧಾನಂ
ದೊರೆಕೊಂಡುದು ಸುರರುಮಸುರರುಂ ಪೂಜಿಸಿದರ್ ॥ ೩೦ ॥

ಇದಱಿಂ ಬಟುಕ್ಕಮೊಗೆದಂ
ಬುದಮಾರ್ಗದೊಳಿರ್ದನರ್ಕಕೋಟಿಪ್ರಭೆ ಸ।
ನ್ನಿದಮಾದ ದಿವ್ಯದೇಹದಿ
ನೊದವಿದ ನುಣ್ಬೆಳಗು ಬೆಳಗೆ ದಿಗವನಿತಳಮಂ ॥ ೩೧ ॥

ಸಮವಸರಣದಿಂ ಪೊದಟ್ಟಿ
ಷ್ಟಮಹಾಪ್ರತಿಹಾರವೈಭವಂ ಮೂವತುನಾ।
ಲ್ಕು ಮಹಾತಿಶಯಂ ತ್ರಿಭುವನ
ರಮಣಂಗೆ ಜಿನಂಗೆ ಮೆಱೆವುವುಟಿದವರ್ಗೊಳವೇ ॥ ೩೨ ॥

ಆಗಳ್ ಧರ್ಮವಿಹಾರದಿ
ನಾಗಸಮೊಳ್ನಡೆದು ಭವ್ಯಸಸ್ಯಾವಳಿಗ।
ಳ್ಗಾಗಿಸಿ ಧರ್ಮಾಮೃತವ
ರ್ಷಾಗಮಮಂ ತೀರ್ಥನಾಥನಿರ್ದಪನಲ್ತೇ ॥ ೩೩ ॥

ನೀನತಿಭರದಿನನಂತಂ
ನಾನೆಂಬನ್ನೆವರಮಱಿಸುವೈ ತಂದೆಯುನೆಂ।
ಬೀ ನಿಯಮದೆ ನಿನ್ನಂ ನಿನ
ಗಾ ನಿಯಮಂ ಸಫಳಮಪ್ಪ ನೋಂಪಿಯನುಸಿರ್ವೆಂ ॥ ೩೪ ॥

ಪುರುನಾಥ ದಿವ್ಯಭಾಷಾ
ವಿರಚನೆಯೊಳ್ ವೃಷಭಸೇನಗಣಧರದೇವರ್ ।
ಭರತಂಗೆ ಪೇೞ್ದಿರುತ್ತ್ತವು
ಪುರಾಣಸಂಸಿದ್ಧಮಪ್ಪನಂತವ್ರತಮಂ ॥ ೩೫ ॥

ನೀನುಂ ನೋಂತೀ ನೋಂಪಿಗೆ
ಭೂನಾಯಕರೊಳಗೆ ಕರ್ತೃವಾಗಿ ಯಶಶ್ರೀ
ದಾನಶ್ರೀ ವಿಭವಶ್ರೀ
ಮಾನಶ್ರೀವೆರಸು ತಾಳ್ದು ರಾಜ್ಯಶ್ರೀಯಂ ॥ ೩೬ ॥

ಇಲ್ಲಿಗಿದೆ ನೂಱುಯೋಜನ
ದಲ್ಲಿ ಮಹಾಸಮವಸರಣವಿಭವದಿನರ್ಹ
ದ್ವಲ್ಲಭನಿರ್ದಪ್ಪ ನೀಂ ಪೋ
ಗಲ್ಲಿಗನಂತನನೆ ಕಂಡು ಸುವ್ರತನಪ್ಪೈ ॥ ೩೭ ॥

ಪ್ರಚುರತರ ಭಾದ್ರಪದ ಶು
ದ್ಧ ಚತುರ್ದಶಿ ನಾಳೆ ನೋನೆ ವನದೇವತೆಯರ್ ।
ಖೇಚರಗತಿಯಿಂದಮೊಯ್ವರ್
ಸಚರಾಚರಗುರುವನೊಂದುನಿಮಿಷದೆ ಕಾಣ್ಬೈ ॥ ೩೮ ॥

ಎಂದಾ ಮುನಿ ನೋನಿಸೆ ನೋಂ
ತಂದಾಗಳೆ ಸಮವಸರಣಮಂ ಪೊಕ್ಕತ್ಯಾ ।
ನಂದಮಯಮಾಗೆ ಕಂಡಭಿ
ವಂದಿಸಿದಂ ತ್ರಿಭುವನೈಕಚೂಡಾಮಣಿಯಂ ॥ ೩೯ ॥

ನುತಿಯಿಂ ನತಿಯಿಂ ಪೂಜಾ
ತತಿಯಿಂ ಭಜಿಯಿಸಿ ಬೞಿಕ್ಕೆ ವಿಜಯಂ ನಿಜಸಂ ।
ಸೃತಿಸುಖಮುಮನಕ್ಷಯಪರ
ಗತಿಸುಖಮುಮನಾಂತು ರಾಜ್ಯಲಕ್ಷ್ಮಿಯೊಳಿರ್ದಂ ॥ ೪೦ ॥

ತಲೆವ್ರೋಗಿಯುಂ ಬಸಿದು ಬೀೞದೆ ಸೈರಿಸರಲ್ತೆ ಕಾಮುಕರ್

ಮದನಪತಾಕೆಯೆಂಬ ಖಚರಾಂಗನೆ ದಿವ್ಯಸಭಾಂತರಾಳಮಂ
ಮದನಹರಂಗೆ ಪೊಕ್ಕೆಱಗಿ ಮುಖ್ಯಗಣಾಗ್ರಣಿಗಲ್ಗೆ ಭಕ್ತಿಭಾ ।
ವದೆ ಗುರುಭಕ್ತಿಪೂರ್ವಮಭಿವಂದಿಸಿ ಸುತ್ತೆ ಬರುತ್ತೆ ಘೂಳಿಶಾ
ಳದ ಕಡೆವಾಡದೊಳ್ಕೆಳದಿಯಂ ಸಭೆಗೆಯ್ದೆ ಬರುತ್ತಮಿರ್ದಳಂ ॥ ೧ ॥

ಚಿತ್ರಲತೆಯೆಂಬ ಮತ್ತಮರಾಳಗಮನೆಯುಂ ಕಂಡು ಕೆಯ್ಯಂ ಪಿಡಿದು ನಿಲಿಸಿ ತದ್ಗೋಪುರಮಂಡಪಪ್ರಥಮಭೂಮಿಕಾರತ್ನವೇದಿಕೆಯ ಮುತ್ತಿನ ಮತ್ತವಾರಣಮ ನಿರ್ವರುಂ ನೆಮ್ಮಿ ಕುಳ್ಳಿರ್ದು

ಕೇಳೆಲೆ ತಂಗಿ ಚಿತ್ರಲತೆ ನೀಂ ಪೆಱಗಿರ್ಪುದೆಮೆಂದು ನಿನ್ನನಾಂ
ಕೇಳಿ ಲತಾವನೀತಳದೊಳಾ ಕೃತಕಾದ್ರಿಯೊಳಾ ಗಣಾಂಗನಾ ।
ಮಾಳೆಯೊಳಾ ಸರೋವರದೊಳಾ ವನವೀಥಿಯೊಳಾ ಸುನೃತ್ತಗೀ
ತಾಳಯದೊಳ್ತೊಳಲ್ದಱಸಿ ಕಾಣೆನೆ ಪೇೞ್ದಪೆನೆಂದು ಕೇಳ್ವುದಂ ॥ ೨ ॥

ಎಂಬುದುಮಾ ಚಿತ್ರಲತೆಯಂತೆ ಕರ್ಣಸುಭಗಮಾದ ವೃತ್ತಕಮಂ ಕೇಳಲಭಿಮುಖಿಯಪ್ಪುದುಂ ಮದನಪತಾಕೆಯಿಂತು ಪೇೞ್ದಪಳೆಂದು ಸಮವಸರಣಮಂಡಲಮೆಂಬ ಸನ್ಮಾರ್ಗಮಂಡಳದೊಳುದಿಸಿದ ಚಂದ್ರಮಂಡಳದಂತೆ ಮಂಡಳಿಸಿ ಪೊಳೆವ ಧವಳಕಾಯಕಾಂತಿಕೌಮುದೀಪ್ರಭೆಗೆ ಸುಪ್ರಭೆಯುಂ ತೆರಳ್ಚಿ ಸುಪ್ರಭನೆಂಬ ನಾಲ್ಕನೆಯ ಬಲದೇವಂ ಬಂದು ದೇವದೇವನನೇಕಾರ್ಚನೆಗಳಿಂದರ್ಚಿಸಿ ಪೊಡೆವಟ್ಟು ಜಯಗಣನಾಥಧರರೊಳ್ ತನ್ನ ಪೂರ್ವಜನ್ಮವೃತ್ತಕಮಂ ಬೆಸಸು ನಿಜಾನುಜಾತಂ ತ್ರಿಖಂಡಮಂಡಳಾಧೀಶ್ವರಂ ಚತುರ್ದಶ ವಾಸುದೇವನೆನಿಸಿದ ಪರಮಪುರುಷೋತ್ತಮನ ವೃತ್ತಕಮಂ ಬೆಸಗೊಳಲೊಡನಾ ಗಣಧರಾಧೀಶ್ವರರಿಂತೆಂದು ಬೆಸಸಿದರಿಂತೆಂದೊಡೆ

ಮೇಱುವಿನರ್ಥಮಂ ಜನನಿಧಾನಮನುನ್ನತದ ಜಂಬುದ್ವೀಪಮಂ
ವಾರಿಧಿಸರ್ಪನಪ್ಪಿದುದು ವಾರಿಧಿವೇಷ್ಟಿತಭೂಮಿಭಾಗದೊಳ್ ।
ಭಾರತವರ್ಷಮೊಪ್ಪಿದುದು ಭಾರತವರ್ಷದ ತೆಂಕವಕ್ಕದೊಳ್
ಧಾರಿಣಿಗುಜ್ಜ್ವಲಶ್ರವಣಕುಂಡಲಮಾಯ್ತು ಸುರಮ್ಯಮಂಡಳಂ ॥ ೩ ॥

ಆರಮನೆಗೆಂಬುವೆತ್ತ ರಣಮಂಡಳಮಾ ರಣಮಂಡಳಕ್ಕೆ ಬಿ
ತ್ತರಿಸಿದ ಬೀದಿವೀಥಿಗಳ ತೌದಲೆಗೊಪ್ಪುವ ಮಂಡಪಂ ಮನೋ।
ಹರತರಮಂಡಪಕ್ಕೆ ಕರುವಿಟ್ಟವೊಲಿರ್ಪ ಸುಧಾಗೃಹಂಗಳ
ಚ್ಚರಿಯೆನೆ ಚೈತ್ರಚಂದ್ರಮರೆ ಚಿತ್ರಿಸಿದಂತೆಸೆದಿರ್ಪುದಾ ಪುರಂ ॥ ೪ ॥

ತಿಳಿಗೊಳದೊಳ್ತಿಬಿಂಬೊಳೆದು ತಣ್ಣನೆ ಪಣ್ಣನೆ ಬಂದ ಮಾಮರಂ
ಗಳ ತಳಿರ್ಜೊಂಪದೊಳ್ನುಸುಟ್ದು ಮೆಲ್ಲನೆ ಮೆತ್ತನೆ ಮೊಟ್ಗೆ ಹಿಗ್ಗಿ ಪೂ
ಗಳ ಪೊಸಗಂಪಿಗಲ್ಲಿ ಸುಟಿದಿಮ್ಮನೆ ಕಮ್ಮನೆ ತೀಡಿ ಜೇಟದೊ
ಳ್ಪೊಳೆವುದು ಕೂಟಮಂ ಪ್ರಿಯರ್ಗೆ ತತ್ಪುರನಂದನಮಂದಮಾರುತಂ ॥ ೫ ॥

ಅನಿತೊಳ್ಪೆಸೆವ ಸುರಮ್ಯಾ
ವನಿಗಂ ಪೌದನಪುರಕ್ಕಮಧಿಪತಿ ವೀರಾ।
ರಿನೃಪಾಲಶಿರಃಕರಪಾ
ಣಿ ನಿಷ್ಪಿಷ್ಟಭುಜಾಕೃಪಾಣಕಂ ವಸುಷೇಣಂ ॥ ೬ ॥

ಊರ್ವಶಿ ರಂಭೆ ಮೇನಕಿ ತಿಲೋತ್ತಮೆಯೆಂಬರ ಹಾವಭಾವಮಂ
ಪೂರ್ವಿನ ಕೊಂಕು ಕಣ್ಮಲರ ಕಾಂತಿ ಕದಂಪಿನ ತೆಳ್ಪು ಸಾಲ್ವುದೋ।
ರೋರ್ವರ ಗೆಲ್ವುದಕ್ಕೆಸಿಸಪ ರಾಣಿಯ ಮಾಸದ ದೇಸೆಯಾಸೆಯು
ಯ್ಯೂರ್ವರೊಳಂ ಸುನಂದೆ ಪಿರಿಯಳ್ ವಸುಷೇಣನ ಚಿತ್ತವೃತ್ತಿಯಾ ॥ ೭ ॥

ಜಯವಧು ಬಾಹುಪೂರಕದ ಮೇಲೆ ಮಲಂಗಿದ ತೋಳ್ಗಳಂ ಮನಃ
ಪ್ರಿಯ ದರಹಾಸದೊಳ್ನಲಿವ ವಕ್ತ್ರಮನೂರ್ಜಿತಲಕ್ಷ್ಮಿ ಹಾರಮು।
ಷ್ಟಿಯೊಳೊಲೆದುಯ್ಯಲಾಡೆ ಪಿರಿದಾದರಮಂ ನಡೆನೋಡುಮಂ ಸುನಂ
ದೆಯ ಮುಖಬಿಂಬಮೆಂಬ ಮಣಿದರ್ಪಣದೊಳ್ ವಸುಷೇಣಭೂಭುಜಂ ॥ ೮ ॥

ಅಂತು ಸಕಲ ರಾಜ್ಯಾಂಗಲಕ್ಷ್ಮಿಯೊಳಂ ವಿನೋದವಿಳಾಸಂ ದೇಸೆವಡೆದಿನಮಿಷ್ಟ ವಿಷಯಕಾಮಸುಖಾನುಭವವಿಭೂತಿಯಿಂದಮಿರ್ದೊಂದು ದಿವಸಂ

ನಿಜನೈಹಾಳೀವಿನೋದಸ್ಮೃತಿಕರಿತಮನಂ ವಾಹಳೀಭೂಮಿಯೊಳ್ ಸಾ
ಮಜಮಂ ಬಂದೇಱಿತಕ್ಕಿಂಬಿಡುವ ಹಿಡಿವ ಮಾಕೆರ್ಳ್ಪ ಕೈಕೊಳ್ಪಮಾದ್ಯ।
ದ್ಗಜಚಾತುರ್ದಂತ ಮೇಳಾಪದೆಸೆಣಿಪೊಡೆವೊಟ್ಟೈಸಿ ತಟ್ಟೆಪ್ಪ ಸೂಟ್ ಭೂ
ಭುಜಮಂ ದೇವೇಂದ್ರನಂ ಧಿಕ್ಕರಿಸಿ ಮೆಱೆದನಾಥೋರಣಂ ಧಾರಿಣೀಶಂ ॥ ೯ ॥

ಅಂತೇಱಿ ಪೆಱಿಸಿ ವಾಹಳೀವಿನೋದಾವಸರದೊಳೊರ್ವಂ ಪೂರ್ವಪರಿಚಿತ ಪ್ರಸನ್ನಾಕಾರಂ ಸುದರ್ಶನನೆಂಬೊಂ ಬಂದು ವಸುಷೇಣಮಹಾರಾಜಂಗೆ ದರ್ಶನೋಪಾಯನಮನಿತ್ತು ಪೊಡೆವಟ್ಟು ನಿಂದು ದೇವರದೇವನ ಸಹೋದರಂ ಸಹಪಾಂಶುಕ್ರೀಡಾನುಬಂಧಸಂಗತಬಂಧು ಮಕರಗ್ರಾಹಪುರವರಾಧೀಶ್ವರಂ ಮಲಯಮಂಡಲೇಶ್ವರಂ ಚಂಡಶಾಸನದೇವಂ ದೇವರಂ ಪಲದೆವಸಂಗಲ್ಲಿರ್ದು ನೆನೆದು ನೋಡಬ್ಬರುತ್ತುಮವಸರಮನಱಿಯಲೆನ್ನಟ್ಟಿದನೆಂಬುದುಮತಿಪ್ರೀತಿಯಿಂ ವಿಸ್ತಾರಿತವಿಲೋಚನನಾಗಿ ಬೇಗವಿಾಗಳೆ ಬರವೇಳೆಂದಾತ್ಮನರ್ಮಸಚಿವಂಬೆರಸಾತನಂ ಕಳಿಸಿ ಬಳಸಿನಿಂದ ಗಂಧಸಿಂಧುರಘಟಾಪಟಲಮನಿರ್ಕೆಲಕ್ಕೆದೆಗೆದ ಪಸಾರಿತುರಂಗಬಳನುಮಾಸ್ಥಾನೀಕೃತರಾಜಸುತ ಸಮಾಜನುಮಾಗಿ ನಿಂದಾಗಳ್.

ಕ್ಷಿತಿರಂಗಂ ಭಟಕೋಟಿಪಾದತುರಗಶ್ರೇಣೀಖುರವ್ರಾತಸಾ
ತ್ಕೃತಮಾಶಾವಳಿ ಭೂಷಣಾಂಶುಮೃಗನಾಭೀಸಾರಸೌರಭ್ಯಸಾ ।
ತ್ಕೃತಮಭ್ರಂ ಚಮರೀಜಕೇತುಪಟಲಶ್ವೇತಾತಪತ್ರೌಘಸಾ
ತ್ಕೃತಮೆಂಬಂತಿರೆ ಚಂಡಶಾಸನನೃಪಂ ಬಂದಂ ಮಹೋತ್ಸಾಹದಿಂ ॥ ೧೦ ॥

ಅಂತು ಬರಲೊಡಮಿರ್ವರುಂ ವಾಹನಗಳನಿೞಿದು ರೋಮಾಂಚಸಂಚಯಂ ತೊಟ್ಟಂಗಿಗಳ ತಟ್ಟುರ್ಚಿ ಪೆರ್ಚಿದ ಮುಯ್ಪಿನೆಡೆ ಪೊಟ್ಟೆಸೊಡೆಯೆ ಪರಸ್ಪರಾಲಿಂಗನಂಗೆಯ್ದು ತತ್ಸಮಯಸಮುಚಿತಭಾಷಣಸಂಭಾವನಾನಂತರಂ ವಸುಷೇಣಮಹಾರಾಜಂ ತನ್ನ ಪಟ್ಟದ ಮದವೇದಂಡಮಂ ಚಂಡಶಾಸನನನೇಱಿಸಿ ಬೇಱೊಂದು ಭದ್ರಗಜಮಂ ತಾನೇಱಿ ಮಹಾವಿಭೂತಿವೆರಸೊಡಗೊಂಡು ಬಂದು

ಪುರಲಕ್ಷ್ಮೀಲಲನಾಪ್ರಶೋಭೆ ಮದನಾರೀಮಂಗಳಾಚಾರಚಾ
ರುರವಂ ಪೌರಜನಾವಲೋಕನವಚಃಕೌತೂಹಲಂ ಪೆರ್ಚೆ ಮಂ ।
ದಿರಮಂ ಪೊಕ್ಕು ಸಮಸ್ತವಸ್ತುಸುಖಸನ್ಮಾನಂಗಳಿಂದಂ ಮನಂ
ಬೊರೆದಂ ಭೂಪತಿ ಬಿದ್ದು ಪಲ್ಲಟಿಸಿತೆಂಬಂತಾ ಮನೋಮಿತ್ರನಂ ॥ ೧೧ ॥

ಸರಸಕಾವ್ಯವಿನೋದಗೋಷ್ಠಿಯಿನೊರ್ಮೆ ನಾಟಕನಾಟಿಕಾ
ಪರಿನಟದ್ರಸಭಾವಭಂಗಿಯಿನೊರ್ಮೆ ಗೀತದ ವಾದ್ಯದ ।
ಚ್ಚರಿಯ ನೃತ್ಯದ ಕೇಳಿಯಿಮ್ಮುದದೊರ್ಮೆ ಜಟ್ಟಿಗರಪ್ಪ ಮ
ಲ್ಲರ ಪೊಣರ್ಕೆಯಿನೊರ್ಮೆ ಪೊತ್ತುಮನೊರ್ಮೆ ಮೇಷವಿಶೇಷದಿಂ ॥ ೧೨ ॥

ಒಮ್ಮೆ ವಾಹವಿಳಾಸಕಂದುಕಕೇಳಿಯಿಂ ಗಜಯುದ್ಧದಿಂ
ದೊರ್ಮೆ ವಾರುವದಂಕದಗ್ಗದ ಕಾಳೆಗಂಗಳಿನೊರ್ಮೆ ಮ ।

ತ್ತೊರ್ವೆ ಚಿತ್ರವಿಚಿತ್ರಕೌತುಕದಿಂದಮಿಂತು ನೆಗೞ್ಚಿದಂ
ಕೊರ್ವೆಯಿಂ ವಸುಷೇಣಭೂಪತಿ ಚಂಡಶಾಸನಭೂಪನೊಳ್ ||೧೩||

ಅಂತು ನಿರ್ವಿಕಲ್ಪಮುಂ ನಿರಂತರಿತಮುಮಾದ ಸೌಹಾರ್ದಕದೊಳಪ್ಪೈಕಸದನದ ಸಹಪಂಙ್ತಿಭೋಜನದ ಸಹವಿಳಾಸಕ್ರೀಡಿತದ ಸಮಯಂಗಳೊಳಗೆ ವಸುಷೇಣನಂಗನೆ ಸುನಂದಾದೇವಿಯ ಭಾವಂಬಡೆದ ಕುಸುಮಕೋದಂಡನ ವಶೀಕರಣ ಕಾಂಡಂ ಕೀೞ್ಪೆಯಿಟ್ಟು ಗಱಿಗಟ್ಟಿ ತಿರ್ದಿ ಬಣ್ಣವಿಟ್ಟಂತೆ ಕಣ್ಣ ತವಕಮುಂ ಕಡೆಗೋಡಿವರಿಯಿಸುವ ರೂಪಿಂಗನುರೂಪಮಾಗಿ ತಿಳಿಕಿತಮಾದ ಮದನ ಮತ್ತಗಜದುತ್ತರದೇಸೆಯಂತೆ ಚಿತ್ರಮುಂ ತೊತ್ತಱಮುಱಿದೇಱುಂಜವ್ವನಕ್ಕಳಂಕಾರಮಾಗಿ ಕೈಮಾಡಿ. ಸುಱಿದ ಕಾಮದೇವನ ಕರವಾಳಂತೆ ಕಣ್ಣೊಳ್ ಪೊಳೆದಿರ್ದೆಯೊಳುಳ್ಕಿಕೊಳ್ಕುಬೆಳ್ಕುಗೊಳಿಸುವ ವಿಲಾಸದೊಳಂ ವಿಳಾಸಕ್ಕೆ ದಯಂಬಡೆದು ಮನ್ಮಥಚಕ್ರವರ್ತಿಯ ಸಮ್ಮೋಹನಶಕ್ತಿಯಂತೆ ಭಾವಕರ ಬಗೆಯ ಬಯ್ಕೆಯನಗೆಯೆತ್ತಿ ಸೂಱೆಗೊಳ್ವ ಕಳಕಳಾಪ್ರೌಢಿಯೊಳಂ ದುರಾತ್ಮಕನಪ್ಪ ಚಂಡಶಾಸನನ ಕಣ್ಮಲರ್ ಕವಿದು ಕವ್ವರೆಗೊಂಡು ಮುಂಡಳಿಸಿ ಬಳಸಿ ಸೋಲಕ್ಕಾಲಂಬನಂ ಪಡೆವರ್ದೆಗಾದದವಱಲುಂ ತನುವಿಂಗೆ ತಾಪಮುಮೊಡನೆ ಬಳೆವಳೆಯೆ

ಕೆಳೆಯನ ಪಂಙ್ತಿಭೋಜನದೊಳೊರ್ವೆ ವಿಳಾಸದೆ ಬಡ್ಡಿಸುತ್ತುಮಿ
ರ್ಪೆಳೆಯಳ ತೋಳ ಮೂಲದ ಪೊಗರ್ಮಣಿಬಂಧದ ಚೆಲ್ವು ಕೋಮಲಾಂ ।
ಗುಳಿಗಳ ಕೊಂಕು ಕಣ್ಗೆ ಕುಡೆ ಕೌತುಕಮಂ ಭ್ರಮೆಗೊಂಡು ಕಾಮುಕಂ
ವಳಿಗೆಯನೆತ್ತಿ ಬೊಟ್ಟೆಡಲೊಡರ್ಚೆ ಬಱಿಕ್ಕೆ ಪೊಗೞ್ತೆಗಿಕ್ಕಿದಂ ||೧೪||

ಅದಲ್ಲದೆಯುಂ

ನಗೆಗಣ್ಣಲ್ಲಳ ಕೂಟಮಂ ಪಡೆದುವಿಂಪಂ ಶ್ರೋತ್ರಮೀಂಟೆತ್ತು ಮಾ
ತುಗಳಿಂ ನಾಸಿಕೆಗಾಯ್ತುವಳ್ಸುಱಿದ ಸೂಱ್ಗೋಳ್ ಸೌರಭಂ ಸ್ವಾದು ನಾ ।
ಲಗೆಗಾಯ್ತಾಕೆಯ ಹಸ್ತಪಲ್ಲವರಸಾಸ್ವಾದ್ಯಂಗಳಿಂ ಸೋಂಕುಮಾ
ಸೆಗೆ ಪಕ್ಕಾಗದೆ ನಿಂದ ಪಲ್ಲವಕನಂಗಕ್ಕಾಯ್ತುನಂಗಜ್ವರಂ ||೧೫||

ಅಂತು ಕಂತುಸಂತಾಪಕ್ಕೆ ಪಕ್ಕಾಗಿ ಕುಕ್ಕುಳಗುದಿದುರ್ಕದೊಳಸೊಳಗೆ ಜೀವ ಹೃದಯಮುಂ ಪದವಡಿಸಲಾಱದೆ ತನಗೆ ಬೀಡುಂದಾಣಮಾದ ಮಾಡದ ಪೆಱಗಣ ನಂದನ ವನದ ಮಾಕಂದ ಭೂರುಹದ ಮಂದಚ್ಛಾಯೆಯೊಳ್ವೀಸುವ ಕುಱುಮೆಯ ಬಿಜ್ಜಣಿಗೆಯೊಳಂ ಪಾಸುವ ಬಾಳೆ ಪ್ರವಾಳತಳ್ಪತಳದೊಳಂ ಸೂಸುವಾಲಿನೀರ್ತುಂತುಱೊಳಂ ಪೂಸುವ ಚಂದನಸ್ಥಾಪಕದೊಳಂ ವಸಂತಸಮಯಾನುರೂಪಭದ್ರಶಿಶಿರೋಪಚಾರಚಾರು

ಜಾತುರತ್ನಂ ಮೊಱಳಿಯೆ ಮನ್ನಲ ಮುಱುಗುತ್ತಮಿರ್ದ ತನ್ನವಸ್ಥಾಂತರಮನಱಿದು ಮಱಿಯದಂತೆ ಬೆಸಗೊಂಡ ಸುದರ್ಶನನೆಂಬ ಕೆಳೆಯಂಗಿಂತೆಂದಂ

ನುಡಿಯಲ್ಕಾರದು ತೀರದು
ನುಡಿಯದೊಡೆಲೆ ಕೆಳೆಯ ನಿನಗೆ ಬೆಂದ ಮನಂ ಸಂ।
ಡೆಡೆಯೆನ್ನದೆ ಪೇೞ್ದಪೆನೀ
ಕಡುನಂಟನ ಸತಿಯ ರೂಪು ಸೋಲಿಸಿತೆನ್ನಂ ॥ ೧೬ ॥

ಭ್ರಮೆ ಪತ್ತಿತು ಮನಕ್ಕೆ ಕಣ್ತೆರಿವಿ ಬಿಟ್ಟಂತೇನುಮಂ ಕಾಣಮಂ
ಗಮನಂಗೋರ್ಬ್ಬವಕ್ಕಿ ಸುಟ್ಟಪುದು ಕಾಣೆಂ ಪ್ರಾಣಸಂಧಾರಣೋ।
ದ್ಯಮಮಂ ಪೇೞ್ಸಖ ಬಾೞ್ವುಪಾಯಮೆನಗಿನ್ನೆಂತೋರ್ಪೆ ಕಾರುಣ್ಯದಿಂ
ರಮಣೀಲೋಚನಚುಂಬನಂ ಕಳೆಗುಮೇ ನಟ್ಟಿರ್ದ ಹೃಚ್ಛಲ್ಯಮಂ ॥ ೧೭ ॥

ಆಗಳುಮಾಂ ತಳೋದರಿಗೆ ಮೇಖಲೆಯಾಗಿ ನಿತಂಬದೊಳ್ ಕುಚಾ
ಭಾಗದ ಮೇಗೆ ಹಾರಲತೆಯಾಗಿ ರದಚ್ಛದಪಲ್ಲವಂಗಳ್।
ರಾಗವಿಶೇಷಮಾಗಿ ಪೊಳೆವೊಳ್ದುಡೆಯೊಳ್ನಱಿಯಾಗಿ ಬಂದು ಸಂ
ಭೋಗಿಪ ಪುಣ್ಯಮಿಲ್ಲೆನಗಮಾಗೊಡೆ ಸಲ್ಲಿದೆ ಗಂಡನಿರ್ದೊಡೇಂ ॥ ೧೮ ॥

ಎಂದು ತನ್ನ ಹೃದಯಕವಾಟಮಂ ತೆಟ್ಟಂದೆಱೆದತ್ತಳಗನಾದುತ್ತುಂಡಮೇಟಮಂ ಬಯಲೊಳಿಕ್ಕಿ ಬಾಯುಳಿದ ನಿಜಪತಿಯ ನುಡಿಗೆ ಸುದರ್ಶನನೆಂದಂ ಮೇರೆಗೞಿದ ಬೞಿಕಾರ ಸ್ವೈರಣೆಯುಮೊರೆವೋಗದಿರವು; ಪರಿವ ಮನಕ್ಕೆ ಪಗ್ಗಮಿಲ್ಲಂ; ನೋಡುವ ಕಣ್ಗಳ್ಗೆಡೆಗಟ್ಟಿಲ್ಲ ಮಲ್ಲದೆಯುಂ

ಒಡೆಯನ ಕಾಪು ಕಟ್ಟಣಕಮೆಂದೊಡೆ ಬಂಧುಗಳಾಪ್ತರಾಗದಂ
ದೊಡೆಯನಿಮಿತ್ತಮಿಾಯಳವಳೆಂದೊಡಸಾಧ್ಯಮಿದೆಂದೊಡಲ್ಲಳೆಂ।
ದೊಡೆ ಮೊಱೆಯಾಗದೆಂದೊಡೆ ಪರಾಂಗನೆಯೆಂದೊಡೆ ಸಾಮ್ಯಮಲ್ಲಮೆಂ
ದೊಡೆ ತಲೆವೋಗಿಯುಂ ಬಸಿದು ಬೀೞದೆ ಸ್ವೈರಿಸರಲ್ತೆ ಕಾಮುಕರ್ ॥ ೧೯ ॥

ಆದೊಡೇನಾದುದಾ ನಿತಂಬಿನಿಯೊಳ್ ನಮ್ಮ ಮನೋರಥಸಿದ್ಧಿಗವಕಾಶಮುಂಟ ದೆಂತೆಂಬೆಯಪ್ಪೊಡೆ

ನಯದಿಂ ಕೋಕಿಳನಾದೆ ನಿಮ್ಮರಸರಿಂತೇಕಾರಣಂ ಬಂದರಿ
ಲ್ಲಿಯ ಕಾರ್ಯಾಂತರಮೇಂ ಪ್ರಯಾಣದಿನಮಿನ್ನೆಂದೆಂದು ತಾಂ ಪೆತ್ತ ತಂ।

ದೆಯ ಮಿತ್ರಂಗೊಡವುಟ್ಟಿದಣ್ಣನ ಸಹಾಯಂಗಾಡುವಂತೀಗಳೆ
ನ್ನಯ ಕೂಡಾಡಿವಳಿಂತಿರ್ದೇನಳಿಪೊ ವೇಣ್ ನಿರ್ಸೋಹವೋ ಭಾವಿಸಾ ‖ ೨೦ ‖

ಎಂಬುದುಮಾರಸನಾ ಕೃತ್ರಿಮೋಪಚಾರಮನೊಲವೆಂದೆಂತು ಕೈಕೊಳಲ್ ಬಂದಪುದು

ಆ ಮದಿರಾಕ್ಷಿ ತನ್ನಿನಿಯನಿರ್ದಪೊಲೆನ್ನೊಡನಾಸೆಗಯ್ವಳಾ
ಕೋಮಳಗಾತ್ರಮುಂ ಸವಿವ ಕಣ್ಮಲರ್ಗೆನ್ನಯ ಗಂಡಗಾಡಿ ಶೋ |
ಭಾಮಹಮಾಗದೆಂದೊಡೆ ಸಖಂ ನೃಪ ನೀಂ ಬರೆ ಮಾಣ್ಬ ಜೋಡೆಯರ್
ಕಾಮನ ತೋಳೊಳಿರ್ದ ರತಿ ಶಂಭುಕುಮಾರನುಮಂ ಬರುಂಟಳೇ ‖ ೨೧ ‖

ಅದಲ್ಲದೆಯುಮಿಂದುದೇವ ನೀನುಮಾತನುಮಾರೋಗಿಸಿ ಕೈಘಟ್ಟಿಗೊಳುತ್ತು ಮೇಕ ಮರಾಳತೂಳತಳ್ಪಾಸನದೊಳ್ ಪರಸ್ಪರಂ ಸುಖಸಂಭಾಷಣಾವಿಶೇಷದಿನಿರ್ದಲ್ಲಿ ನಿನ್ನ ಪೆಜಗೆ ಕುಳ್ಳಿರ್ದೆನ್ನ ಕಣ್ಗೆ ತೆಱಪಾದುದಾ ಸರೋಜನಯನೆ ವಿನೋದವಿಳಾಸಾಭಿನಯದೊಳಿರ್ದು

ಮನಮುಂ ಮುಂದಿಟ್ಟು ಮಾತಂ ಮನದೆಗೊಳಿಸಿ ಕಂಡೂತಿಯಾದಂತಿರಾಲಿಂ
ಗನದಿಂಪಂ ಚುಂಬನಾಸ್ವಾದನಸುಖಮುಮನಂತಪ್ರವಿಷ್ಟಾಂಗಸಂಪಾ |
ದನಮುಂ ಮೇಲ್ವಾಯ್ದು ಮಾಡಲ್ನವಕಿಪ ನವಭಾವಾತಿರೇಕಂಗಳಿಂ ಕಾ
ಮಿನಿ ನಿನ್ನಂ ನೋಡಿವಳ್ಗಂಡನ ನೆವದಿನದಂ ಕಂಡರಿಲ್ಲಕ್ಕುಮಾಗಳ್ ‖ ೨೨ ‖

ಎಂದಾಕೆ ತನ್ನ ವಲ್ಲಭಂಗಭಿನವಪುರುಷಸಂಗೋಷ್ಠಿ ಸಮನಿಸಿ ನಿಜಾತ್ಮವಲ್ಲಭನ ಸುಖಾನುಭವಕ್ರೀಡೆಗೆಡೆವಡೆಯದೆ ಸಿಡಿಮಿಡಿಗೊಳುತ್ತಿರ್ದ ಭಾವಮನಾ ವಿನಯಮುದಾಳಿಯುಂ ಮತ್ತಿಗೆ ಪತ್ತಿಸುವಂತೆ ನುಡಿದು ಮನದ ಪಿಶಾಚಕ್ಕೆ ವಚನರಚನಾಧೂಪಮುಂ ತೋಱೆ ವಿರಹವಿಕಾರಮುಂ ಕೆಳರ್ಚೆ ನಿನ್ನೊಳಾಕೆಯುಂ ಕೂಡುವುಪಾಯಮನೀಗಳೆ ಮಾಡಿದಪೆನೆಂದು ಪೋಗಿ ಬಟಿಕಮಾ ಧೂರ್ತನಾಡುತ್ತುಮಿರ್ದನಿತ್ತ ವಿರಹಾರ್ಥಂ ಬಾಡುತ್ತುಮಿರ್ದಂ

ಒರ್ವೆ ಸಭಾವಿಭೂಷಣಮುಹಾಕವಿಲೀಲೆಗಳಿಂದೆ ತಮ್ಮುತೀ
ರ್ವಮರ್ಮದದಿಂದಮಿರ್ದರಿರೆ ಕತ್ತರಿವೀಲಿಯ ಜೇಂಟೆಯುಂ ಮರು |
ತ್ಕಾರ್ಮುಕಮುಂಬುದಂ ತಿಳಿಪಂದಂಗಿಗೆಯಕ್ಕನೆ ಕೋಲ ಮಿಂಚು ತಾಂ
ಕಾರ್ಮೊಗಮೆಂಬಿನಂ ಸತಿಗೆ ದೀವರ ಜೇಂಟೆಯ ಮುಖ್ಯನಾಯಕಂ ‖ ೨೩ ‖

ಬಂದು ಕೆಯ್ಯೊಳಿರ್ದಲಗಿನ ಕೋಲುಮಂ ಕಟ್ಟದಲಗುಮಂ ದೂರಾಂತರದೊಳ್ ಕೀಳ್ವಾಳನ ಕೆಯ್ಗೆ ನೀಡುತ್ತುಮೆಯ್ದೆನಂದು ಪೊಡೆವಟ್ಟು ನಿಂದು

ಕತ್ತುರಿಮಿಗಮುಂ ಪಂದಿಯು
ಮುತ್ತಂ ಪೊಂಬುಲಿಯು ಪೂಮಲನಾಸೆಯು ಕೊಂಬಂ ।
ಕುತ್ತಿಟಿಪಡಸಿ ಪಿಡಿದುಗಿ
ದೆತ್ತಿದುಮಂ ಪತಿಗೆ ಕಾಣ್ಕೆಗೊಟ್ಟಿಂತೆಂದಂ || ೨೪ ||

ಪುಲ್ಮುಱಿದುದು ಬೆಳಸುಡುಗಿ ಬ
ಯಲ್ಮಸಗಿದುದಡವಿ ಕರಿಕುವರಿದುದು ಮೇಪಿಂ
ಪುಲ್ಮಿಗಮುಂ ಬೆಳ್ಮಿಗಮುಂ
ಪಲ್ಮಿಗಮುಂ ತಣಿದುವೆಯ್ದೆ ಕಾಪಿನ ಪೊಲದೊಳ್ || ೨೫ ||

ದೇವ ಮತ್ತಮಾಂಸಮುದುಟಿಯೆ ಪಡಪದ ಪಿಳುಕುಟಿಯೆ ಕೊಳಂಬೆಯು ಕೂಕಂ ಬದ ಕೋಡಂಬೆಯು ಮುಡಿಗೆಯು ತಾಣಂಗಳೊಳ್ ಮೇದು ಮೆಯ್ವೆರ್ಚಿ ಸೊಡವಿಂಗೆ ಸೋಲ್ತು ಕೊಡಪೆ ಕವಲ್ತು ಮೇದು ತಣಿದು ಕೋಟಿಕಿಟ್ಟಾಡುವ ಮೃಗಂಗಳೊಳಿಂದು ಪತ್ತಿಸಿದ ಹರಿಣನ ಗೋರಿಯು ಹರ್ಷದ ಹರವಸದ ಭಾವಪ್ರಪಂಚಮಂ ಭಾವಕರ ಬಲ್ಲಹನೆ ಬಂದು ನೋಡಲ್ವೇಟ್ಕುಮೆನೆ ವಸುಷೇಣ ವಸುಮತೀಪತಿ ಸಖನ ಮುಖಮಂ ನೋಡಲೊಡಮಾತಂ ನೋಡಲಕ್ಕುಂ ಬಿಜಯಂಗೆಯ್ಯಿಮೆಂದಲ್ಲಿಂ ತಳರ್ದು

ಪರಿಮಿತವಾಜಿ ವಾರಣ ಪದಾತಿ ವರೂಥ ಕದಂಬ ಕಾಮಿನೀ
ಪರಿಚಿತ ರಾಜಪುತ್ರನಿಚಯಂ ಧರಣೀಪತಿ ಚಂಡಶಾಸನಂ ।
ಬೆರಸು ವನಾಂತರದೊಳ್ತೆರೆಯ ಕೋಪಿನ ಸೋಹಿನ ನೀರಬೇಂಟೆಯುಮ
ರ್ವರೆಗಳನೀಕ್ಷಿಸುತ್ತೆ ಬರೆ ಮುಂತಣ ಚೂತವನಾಂತರಾಳದೊಳ್ || ೨೬ ||

ಬಿರಿದೆರ್ದೆ ಬಿಟ್ಟ ಬಾಯುಲರ್ದ ನಾಸಿಕೆ ಪತ್ತಿದ ಗೋಣು ಸುತ್ತಿ ಕೆ
ಮ್ಮರಿಸುವ ದಿಟ್ಟಿ ಕೆತ್ತುವೊಡಲೆತ್ತಿದ ಕಂಠಮೆಟಲ್ದ ಕರ್ಣಮು ।
ಬ್ಬರಿಸುವ ಮೆಯ್ಮವಿರ್ಪನಿವ ಮುಂಬದನೊಪ್ಪಿರೆ ಧೀಪದೊಳ್ಮರ
ಲ್ದೆರಲೆಯ ಭಾಮುಮುಚ್ಚರಿಯನಟ್ಟಿಗೊಡರ್ಚಿದುದಾ ನೃಪೇಂದ್ರನಾ || ೨೭ ||

ಅದಂ ಕಂಡು ಚಂಡಶಾಸನನಂತರ್ಗತದೊಳಿಂತೆಂದಂ

ಹರಿಣೀಲೋಚನೆ ದೀವದಾ ಹರಿಣನೇಂ ಪೆರ್ಗಾಡಿದೀ ಬೀಡು ಬಿ
ಣ್ಪರಿಗಳ್ಕೇಣ್ಮರಿ ಶಂಬರಾರಿ ಶಬರಂ ಪುಲ್ಲಂಬು ಕೆಲ್ಲಂಬು ಮ ।
ದ್ವಿರಹಾವಸ್ಥಿತಿ ಗೋರಿಗೋಟಗೆಯೆನಿಪ್ಪಂತಾದುದೆಂತಾಗಿಯುಂ
ನೆರೆಯಲ್ತೀರದು ಗೋರಿ ಸಾಯದೆನವೇಡೀ ನೋವೆ ಸಾವಲ್ಲವೇ || ೨೮ ||

ಆ ವಿನೋದವಂ ನೀಡುಂ ನೋಡಿ ಪೊಗೞ್ದು ಪೋಪುದುಮರಸನರಸಿವೆರಸು
ಬೋನಮನೀ ನಂದನವನಕ್ಕೆ ಬರವೇೞೆಂದು ಸೂೞಾಯ್ತರನರಮನೆಗೆ ಕೞಿಪಿ ಕಾಪು
ಗಾಡಿನೊಳ್ ಸೋಹಿನ ಬೇಂಟೆಯ ಬಿನದದಿನೀರ್ವರ ರಥಮುಂ ಬೇಱೆವೇಱಾದಲ್ಲಿ ಚಂಡ
ಶಾಸನಂ ವಸುಷೇಣನರಸಿ ಬರ್ಪ ಬಟ್ಟೆಯತ್ತಲೆ ಸಾರ್ದುಕೊಂಡಿರ್ಪಿನಂ ಪರಿಮಿತಾಂಗ
ರಕ್ಷಪರೀತೆಯುಂ ಪ್ರಧಾವತ್ಕತಿಪಯಚೇಟಿಕಾಪುರೋಭಾಗೆಯುಂ ಡೋಲಾದಂಡಕೋ
ಭಯ ಭಾಗಸಂಭಾಷಿತ ಸಹಚರೀಯುಗಳೆಯುಮಾಗಿ ನಿಜವಲ್ಲಭನಟ್ಟಿದ ಬೞಿಗೆ ಬರುತ್ತು
ಮಿರ್ದ ಸುನಂದಾದೇವಿಯುಂ ಕಂಡು

ಕಡೆಗಣ್ಗಳ್ಪರಿದೆಯ್ದೆ ಮತ್ತೆ ಮನಮುಂಗೋಪಾಂಗಸಂಗಕ್ಕೆ ದಾ
ೞಿಡೆ ಕಾಯ್ದುಳ್ಳಿರ್ದೆಗೂಡುವಾಯೆ ಪಿರಿದೊಂದೌತ್ಕಂಠ್ಯದಿಂ ಕಂಠದೊ।
ಳ್ಮಿಡುಕುಣ್ಮುತ್ತಿರೆ ಮೇಲೆವಾಯ್ದು ಭರದಿಂದಂ ನಲ್ಲಳಾಂಡೋಳದಿಂ
ಕಡುಕೆಯ್ಯಂ ತೆಗೆದಿಟ್ಟುಕೊಂಡು ರಥದೊಳ್ಬಂದಂ ಮನೋವೇಗದಿಂ ॥ ೨೯ ॥

ಎಂದು ಪೇೞ್ವ ಕಥಾಂತರದೊಳಾತಂಗಾ ತಳೋದರಿಯೊಡಂಬಟ್ಟಂತಳೆಗೆತ್ತು
ಚಿತ್ರಲತೆಯಿಂತೆಂದಳ್

ಸುದತಿಯರೆಂಬ ಪಾಪಿಗಳು ಮಾಡದುದೇನೆನೆ ಮತ್ತೆ ತಂಗಿಯುಂ
ಮದನಪತಾಕೆಯೆಂದಳವಳಿಂದೆ ಪತಿವ್ರತೆಯಿಲ್ಲ ನೋಡ ಲೋ।
ಕದೊಳದನಾಡದಿರ್ಕರುಳ ಕತ್ತರಿ ನಂಟರ ಮಾರಿ ತುತ್ತುಮಿಂ
ಚಿದೊಡನುಂಡು ಮತ್ತೆ ತೊಡೆ ಮಿಂಚಿದೊಡಾ ಖಳನಿಂತು ಮಾಡಿದಂ ॥ ೩೦ ॥

ಅಂತು ಪಿಡಿದುಯ್ವಾಗಳುರಗಂ ಪಿಡಿದಂತೆ ಬೆದಱಿ ಪಾವು ಪಿಡಿದಂತಿರೊದಱಿ
ಕಡುಜರ ಪತ್ತಿದಂತು ಕಳವಳಿಸಿ ಠಕ್ಕುಪತ್ತಿದಂತೆ ಮತಿಗೆಟ್ಟು ಸಿಡಿಲ್ಪೊಡೆದಂತೆ ಹಮ್ಮು
ದಂಬೋಗಿ ಸುನಂದೆಯಾಗಿಯು ವಸುನಂದೆ ಕಿಱಿದಾನುಂ ಬೇಗದಿಂ ಬೞಿಕ್ಕೆ ಕಾಮ
ಕಾಂಡಖಂಡಿತಹೃದಯಂ ಚಂಡಶಾಸನಂ ವಿಶ್ವಾಸಘಾತಕಂ ಕಾತರತೆಯಿಂ ತನ್ನಂ
ಪಿಡಿದುದನಱಿದು

ಇನನಂ ವಂಚಿಸಿ ಚಂಡಶಾಸನನವಂ ಕಳ್ದೊಯ್ದಪಂ ನಾಥನಂ
ಗನೆಯಿಂದೆನ್ನ ಸುನಂದೆಯುಂ ಸುಭಟರಣ್ಮಿಂ ವೀರರಡ್ಡೈಸಿಮೆ।
ನ್ನಿನಿಯಂಗೆಯ್ದಿಸಿಮೂರ ನಾಡ ಜನಮೀ ಪೆಣ್ಬುಯ್ಯಲಂ ಹಾ ಸುಷೇ
ಣನೃಪಾ ಹಾ ನೃಪನೀಱಿ ಎಂದಬಲೆ ಬಾಯ್ವಿಟ್ಟೞ್ತು ಹುಯ್ಯಲ್ಚಿದಳ್ ॥ ೩೧ ॥

ಪರವೆಣ್ಣಾಟಿಸಿ ಕಳ್ದ ಕಾತರನನಾರುಂ ಕಾಣರಾರುಂ ಕನ
ಲ್ದರಿದಿಕ್ಕರ್ ಧರೆ ನುಂಗದೇಂ ನೊಣೆಯರೇ ದಿಗ್ದೇವಿಯರ್ ತನ್ನನೇ ।
ಗಿರಿಗಳ್ ಬೆಂದೆನನಾಥೆಯಾದೆನೆನಗಿನ್ನಾರಾಸೆಯಾರ್ ಕಾವರಾರ್
ಶರಣೆಂದಾ ಕಳಕಂಠನಾದೆ ಬಸಿಱಂ ಬಾರೇಟ್ಟಿನಂ ಮೋದಿದಳ್ ॥ ೩೨ ॥

ಮುನಿಸುಂಟಾದೊಡೆ ಮುಟ್ಟಿಮೂದಲಿಸಿ ಬಲ್ಪಿಂ ನಿನ್ನ ಬಾಳಾತನಾ
ತನ ಬಾಳ್ನಿನ್ನ ಕಪಾಲದೊಳ್ಬರೆದು ಮುಂತೆಟ್ಟಿರ್ಪುದಿನೊಪ್ಪುವಾ ।
ಳ್ತನಮುಂ ಗಂಡರ ಪಿಂದೆ ಕಳ್ಳುದರಿದೇ ಸ್ತ್ರೀಬಾಲೆಯುಂ ಬೂತೆ ಪಾ
ಟ್ಟಿನೆಯೊಳ್ ನಾಯ್ ಘೃತಭಾಂಡಮಂ ತೆಗೆನವೊಲ್ಕಳ್ದೊಯ್ವುದಾಳ್ವಾಟಿಯೇ ॥೩೩॥

ಎಂದನೇಕಪ್ರಕಾರ ಪ್ರಲಾಪಾಕ್ರಂದನಂ ಸ್ಯಂದನವೇಗದಿಂ ದೂರಂ ಸಾರಪ್ಪ ಸಾರಂ ದೂರಮಾಗಿ ಪೋಗುತಪ್ಪಾಗಳವಂ ಸುರಮ್ಯವಿಷಯದ ಕಡೆಯ ಕಾಪಿಂಗೆ ವಸುಷೇಣನಿರಿಸಿದ ಪೆಸರ ಸಾಮಂತಂ ಸಿಂಹಚೂಡಂ ತನ್ನ ಪೋಟಿಲ ಪೊಜವೋಟಿಲ ನಂದನೋಪಾಂತದ ಗರುಡಿಯೊಳಗೆ ಪಲಕೆಲಂಬರ್ ಪಲಗೆವಿನ್ನಣಂಗಳೊಡನೆ ಕಾಮನ ಪರ್ವತದಂತೆ ಮಾರ ಚಿತ್ರ ಭಿತ್ತಿಯೊಳ್ ಪಿಡಿಯುತ್ತಮಿರ್ದ ಕಡುಗಲಿ ಕೇಳ್ದು ನರತುರಬಳಗದ ನೆರಮನೊಲ್ಲದೆ ಸೆರಗಿನೊಳಲ್ಲದೆ ಬೆರಗಿನನೊಳಸಲ್ಲದೆ ಕೆಯ್ಯ ಪಲಗೆಯೊಳಂ ಕಟ್ಟಿದ ಕಠಾರದೊಳಂ ಪಿಡಿದ ಕೂರಸಿಯೊಳನುಯ್ದುಸಿ ಪರಿದು ಹರಿಣಿಯಂ ಪಿಡಿಮುಯ್ವ ತರಕ್ಷುವಿನಂತೆ ತರುಣಿಯಂ ಪಿಡಿದುಯ್ವ ಚಂಡಶಾಸನಂ ದೂರದೊಳ್ಕಂಡು ಗಜಱ ಘರ್ಜಿಸಿ

ಇದಿರಾಗಿತ್ತಿತ್ತಲಣ್ಣಣ್ಮೆಟಿಯಟಿ ರಥಮಂ ಕ್ವೆದುಗೊಳ್ ಪೋ
ಗದಿರೆನ್ನಂ ಕಂಡು ಬೆನ್ನಂ ಕುಡುವರೆ ಸುಭಟರ್ ಸಿಂಹಚೂಡಂಗೆ ಮಾಱಿೞ ।
ದ್ದಿದ ವೀರರ್ ಮತ್ತೆ ಜೀವಂಬೆರಸುಟಿದವರಿಲ್ಲೆಂದುಮುಟ್ಟಿರ್ದ ಲೇಸ
ಕ್ಕಿದೆ ಮೇಲ್ಬಿರ್ದೆನ್ನ ಬಾಹಾಪರಿಘದ ಬಲೆಯೊಳ್ಸತ್ತ್ರಯಿನ್ನೆತ್ತ ಪೋಪೈ ॥ ೩೪ ॥

ಎಂದು ಮುಟ್ಟಿ ಮೂದಲಿಸಿ ಕಟ್ಟಿದಿರ್ಗೆವಂದು ಮೆಟ್ಟಿ ತಱುಂಬಿದ ಸಿಂಹಚೂಡನಂ ಸೂತದ್ವಿತಯನಾಗಿ ಪೋಗುತ್ತಂ ಕಂಡು ತೇರಂ ನಿಲಿಸಿ ಸಾರಥಿಯುಂ ವಾರಿಜವದನೆಗೆ

ಕಾಪುವೇಟ್ದು ಕಿಱ್ಱಿ ಬಾಳೊಳಮತ್ತಪರದೊಳಮುವನೀತಳಕ್ಕೆ ಲಂಘಿಸಿ ಚಂಡಶಾಸನ ನಿಂತೆಂದಂ

ವಾನರನೇಂ ಸೆಳೆವುದೆ ಪೇ
ರಾನೆಯು ಕಯ್ಪಿಡಿದ ಕರ್ಬನಾಂ ಪಿಡಿದವಳಂ ।

ನೀನೆ ಬಿಡಿಸುವೆಯ ಸಾಯದೆ
ಪೋ ನಿನ್ನಂ ನಿನ್ನ ಪತಿಗೆ ಪುಯ್ಯಲ್ಗಳಿದೇಂ || ೩೫ ||

ಎಂದ ನುಡಿಗೆ ಕಳಕಳಿಸಿ ನಕ್ಕು ಸಿಂಹಚೂಡನಿಂತೆಂದಂ

ವಸುಷೇಣನೃಪನ ಮುಂದ
ಣ್ಗೆ ಸುನಂದಾದೇವಿವೆರಸು ನಿನ್ನಯ ನೆತ್ತ |
ರ್ಬಸಿವ ತಲೆ ಕಾಣ್ಕೆಯಾಗಿರೆ
ಬಿಸುಟಲ್ಲದೆ ಸಿಂಹಚೂಡನೇಂ ಪೋದಪನೇ || ೩೬ ||

ರಸೆ ಪೊಱುವುದೆ ಪರವೆಣ್ಗಾ
ಟಿಸಿದೊಡೆ ಕಳ್ದೊಯ್ದು ಕೂಡಿ ತಂದೈ ಪುಲ್ಮಾ |
ನಸನಾದ ಚಂಡಶಾಸನ
ವೆಸರಂ ಚಂಡಾಲ ನೀರೊಳಿಂತರ್ದವರೇ || ೩೭ ||

ಎನಲೊಡಂ ಚಂಡಶಾಸನನಿಂತೆಂದಂ

ನೀನೆನಗೆ ಬುದ್ಧಿವೇೞಲ
ದೇನಪ್ಪೈ ಬಾಳ ಬಾಯೆ ಪಲ್ಗಡಿಸಿಕೊಳ |
ಲ್ನೀನಾರ್ದೆ ಬರ್ದುಂಕಿದ ಬೞಿ
ಕೇನಾದೊಡಮೆನ್ನು ಮುನ್ನಮಾಯತಮಾಗಾ || ೩೮ ||

ಎಂದೊರ್ವರೊರ್ವರಂ ಮೂದಲಿಸಿ ನುಡಿಯುತ್ತುಮಿರ್ವರುಂ ಭೂಮಾನದಳವಿಯೊಳ್ ಪರಿಯಲನುಗೆಯ್ವಾಗಳ್

ಬೆಳೆದಡವಿಯೆ ಕಳನಾದುದು
ನಳಿನದಳೇಕ್ಷಣೆಯು ಚಿತ್ರಮರಸಾಯ್ತಾಶಾ |
ಲಳನೆಯರೆ ನೋೞ್ಪರಾದರ್
ಬಳಯುತರರಸಂಕವಾದರಂತಾ ಕ್ಷಣದೊಳ್ || ೩೯ ||

ಆಗಳೊಡನಂದು ನೋೞ್ಪ ನೋಟಕರ್ ತಮ್ಮೊಳಿಂತೆಂದರ್

ಇಳೆಯೊಳಗೆ ಸಿಂಹಚೂಡನೆ
ಫಳಕಾರಂ ಚಂಡಶಾಸನಂ ಬಗೆವೊಡೆ ಭೂ |

ತಳದೊಳ್ ಕೃತಘ್ನನಿವರತಿ
ಬಳರಿರ್ವರ ಸೋಲಗೆಲ್ಲವರಸನ ಪುಣ್ಯಂ || ೪೦ ||

ಇತ್ತ ಸುನಂದೆ ನಿಜಾಂತರ್ಗತದೊಳಿಂತೆಂದಳ್

ತಲೆಗಾಯಿಂ ಭಟನಂ ಪೊಣರ್ಚಿ ಪೊಡೆದಿಕ್ಕಿಂ ದ್ರೋಹನಂ ನೇಸಱಿಂ
ನೆಲನೇ ವ್ಯೋಮಮೆ ವಾಯುದೇವ ಸೆಱೆಯಿಂದಂ ತಪ್ಪಿದಂದೆನ್ನ ನಾಂ ।
ಬಲಿಗೆಯ್ವೆಂ ನಿಮಗೆಂದು ಪೆಸ್ಕೊರಗಿ ಮಯ್ ಕಯ್ಗಣ್ಮೆ ಕಣ್ಗೆಟ್ಟು ಕೋ
ಟೆಗಿಗೊಂಡಳ್ಕಿರ್ದ ಡಕ್ಕೆವಾಯ್ದು ಸತಿ ನಿಂದೌತ್ಸುಕ್ಯಮಂ ತಾಳ್ದಿದಳ್ || ೪೧ ||

ತತ್ಸಮಯದೊಳ್ ಸಿಂಹಚೂಡಂ

ಅಂಜದೆ ನಿಂದವಧರಿಸಲೆ
ಕಂಜದಳಾಯತ ವಿಲೋಲಲೋಚನೆ ಪಗೆಯಂ ।
ಮುಂ ಜವನೆಡೆಗೊಪ್ಪಿಸಿ ಬೞಿ
ಯಂ ಜನಪತಿಯೆಡೆಗೆ ನಿನ್ನನೊಯ್ದೊಪ್ಪಿಸುವೆಂ || ೪೨ ||

ಎಂದವಷ್ಟಂಭಮೆಸೆಯೆ

ಬಲದೊಳ್ಪತ್ತಿದ ಮುಂಡೆ ಚಮ್ಮಟಿಗೆ ಕೈವೀಣಂ ಬೆಡಂಗಾಗೆ ಮೆಯ್
ಗಲಿ ಪೊಕ್ಕೆತ್ತಿದೊಡೊಡ್ಡಿ ದೊಡ್ಡಣದ ಕೈಗೊಂಬಾಳದಿಂ ಪೋದ ಸು ।
ಯ್ಯಲಗಂಚೆತ್ತಿರೆ ಬಾಹುಪೋರಗಡೆ ಪೊಯ್ದಂ ಭೂಪನಾ ವೀರನಂ
ತಲೆಯುಂ ಮುಂಡಮುಮೊರ್ಮೆ ದಲ್ ಪಲಗೆಯೊಳ್ ಬಯ್ತಿಟ್ಟವೊಲ್
ಬೀೞ್ವಿನಂ || ೪೩ ||

ಅಂತು ಪೊಯ್ದು ರಥಕ್ಕೆ ಪಾಯ್ದು ಸಾರಥಿಯು ಚೋದನಾವೇಗದಿಂ ಗಾಳಿಗೆ ಗಱಿಮೂಡಿದಂತೆ ಮನಕ್ಕೆ ಮಡಪೊಗೆದಂತೆ ಮುಹೂರ್ತಮಾತ್ರದಿನೆಯ್ದಿ ತನ್ನ ಮಾರ್ಗಮಂ ಪೊಕ್ಕನನ್ನೆಗಮಿತ್ತಲ್

ತರವೇಟ್ಟಿಟ್ಟಿಗ ಜೋನಮಾಗಳೆ ರಸಾಳೋದ್ಯಾನಮಂ ಪೊಕ್ಕುದೇ
ಕರಸಂ ಬಾರನೊ ಚಂಡಶಾಸನನಪೆತ್ತಲ್ಪೋದನೋ ದೇವಿಯುಂ ।
ಬರುತಂ ತಳ್ವಿದನಂಗರಕ್ಕರಿದಿರ್ವೋಗಿನ್ನೀಮೆನುತ್ತಂ ಮಹ
ತ್ತರರಿರ್ಪನ್ನೆಗಮೆಯ್ದೆ ನಂದನವನೀನಾಥಂ ತದುದ್ಯಾನಮಂ || ೪೪ ||

ಬಂದು ವರೂಥದಿಂದಿೞಿದು ಭೋಜನಶಾಳಿನಿಕಾಯಮಾನಪ್ರತಾನ ಸಂಫುಲ್ಲ ಮಲ್ಲಿಕಾಮಂಡಪದ ಮುಂದೆ ನಿಂದು

ಬಂದಳೆ ದೇವಿ ಪಂಙ್ತಿಗೆಡೆಮಾಡಿಸಿದಪ್ಪಳೆ ಚಂಡಶಾಸನಂ
ಬಂದನೆಯೆಂದು ಮಂದಿರಮಹತ್ತರರಂ ಬೆಸಗೊಳ್ವನಂ ನೃಪಂ ।
ಬಂದುದು ಚೇಟಿಕಾಸಹಚರೀಜನಮುಂ ಶ್ಲಥಕೇಶಪಾಶಮಾ
ಕ್ರಂದಿತವಕ್ತ್ರಮಾಹತಕೃಶೋದರಮಾಕುಳಿತಾಶ್ರುಲೋಚನಂ ॥ ೪೫ ॥

ಅಂತು ಶೋಕರಸಮೆ ರೂಪುಗೊಂಡಂತೆ ಬರ್ಪ ನಿಜಾಗ್ರಮಹಿಷೀಪರಿಜನಮಂ ದೂರದೊಳ್ಕಂಡಿದೇನೆಂದತಿಚಕಿತಚಿತ್ತನುಂ ವಿಸ್ಫುರಿತವಿಲೋಚನನುಮುದ್ಬದ್ಧ ಭ್ರೂಲತಾಮೂಲನುಮುತ್ತಾನಿತ ಕರಪತಾಕನುಮಾಗುತ್ತಮಿರೆಯಿರೆ

ಹಾ ಲಲಿತಾಂಗಿ ಹಾ ಕುಸುಮಕೋಮಳೆ ಹಾ ಕಳಹಂಸಯಾನೆ ಹಾ
ನೀಳಸರೋಜಲೋಚನೆ ಸುನಂದೆ ನೃಪೇಂದ್ರನ ರಾಜ್ಯಲಕ್ಷ್ಮಿ ಭೂ ।
ಪಾಲನ ಭಾಗ್ಯಲಕ್ಷ್ಮಿ ವಸುಷೇಣನ ಮಂಗಳಲಕ್ಷ್ಮಿ ರಾಜಚಾಂ
ಡಾಲನ ಬಾಹುರಾಹುಗಿಳನಂ ನಿಸಗೆತ್ತಣಿನೆತ್ತ ಬಂದುದೋ ॥ ೪೬ ॥

ಎಂದು ಬಾಯೞಿದೞುತ್ತುಂ ಬಂದು ಮುನ್ನಡಿಯೊಳ್ಕೆಡೆದುಂ ಪುಡಿಯೊಳ್ಪೊರಳ್ವ ವಿಳಾಸಿನೀಸಮೂಹದೊಳಗೆ ರಾರಾಜಿತರತ್ನಪಾದುಕಗ್ರಾಹಿಣಿಯಪ್ಪ ಬಾಳಕಿಯುಮೊರ್ವಳ್ ದೇವರಟ್ಟಿದ ಬೞಿಗೆ ದೇವಿಯುರ್ಬರುತ್ತುಮಿರೆ ಚಂಡಶಾಸನಂ ಕಂಡೆೞ್ದು ಪಿಡಿದು ಕೈಸೆಱೆವಿಡಿದು ಬಂದಿಕಾಱನಂತೆ ಕೊಂಡುಪೋದಂ

ಪಡಲಿಡೆ ಪೊಯ್ದಂ ದೇವಿಯ
ಗೆಡೆಗುಡದಡ್ಡೈಸಿದಂಗರಕ್ಕರನೆಮ್ಮಂ ।
ಪಿಡಿದುಯ್ವಂ ಕಿಱಿಡಡೆಯುಂ
ನಡೆಗೆಟ್ಟ ಬೞಿಕ್ಕೆ ಬಿಟ್ಟಿನಾ ನಿಸ್ತ್ರಿಂಶಂ ॥ ೪೭ ॥

ಎನೆ ಕೇಳ್ದುಕ್ಕಿದ ಕೋಪವಹ್ನಿಗೆ ವಿಯೋಗೋದ್ರೇಕಶೋಕಪ್ರಭಂ
ಜನಸಂತಾಪಮನುರ್ಕೆಯುಂ ಪಡೆಯೆ ಕಿಂಕರ್ತವ್ಯತಾಮೂಢನೊಂ ।
ದಿನಿಸಂ ಜೀವಿತಶಂಕೆ ಭೋಂಕನೞಿದಳ್ಪೊಡುತ್ತುಮಿರ್ದಾತ್ಮನಾ
ಥನನಾಪ್ತರ್ಪಚಿಪರ್ಣಿಜಾಂಶುಕತಿರೋಧಾನಾವಿಲಂ ಮಾಡಿದರ್ ॥ ೪೮ ॥

ಮಳಯರುಹದ ಕರ್ಪೂರದ
ಪಳಿಕಿನ ಪನಿನೀರ ಕದಲಿದಳದಿಙ್‌ಸಿಲ ತ ।
ಣ್ಗಳಸದ ತಿಳಿನೀರ್ಗಳ ಶೀ
ತಳತೆಯಿನನನಿಪನನಾಪ್ತರುಜ್ಜೀವಿಸಿದರ್ ॥ ೪೯ ॥

ಅಂತು ಪರಾಮರ್ಶಿತಹೃದಯನಾದ ನೃಪಾಳನಂ ನರ್ಮಸಚಿವರಿಂತೆಂದರ್

ಮದವದ್ವೈರಿಕುಳಂ ಭವದ್ಭುಜವಿಭಾಸ್ವತ್ಖಡ್ಗಧಾರಾನದಿ
ನದದೊಳ್ಮುನ್ನ ಮುಳುಂಕದುದ್ಧತರದುರ್ಗಂ ನಿನ್ನ ಕೋಪಪ್ರತಾ ।
ಪದವಜ್ವಾಳೆಗಳಿಂ ಮುಳುಂಕದೆ ವೃಥಾ ಶೋಕಾಬ್ಧಿಯೊಳ್ಧೀರರಂ
ದದಿ ನೀನಿಂತು ಮುಳುಂಕಲಪ್ಪುದೆ ಧರಿತ್ರೀಪಾಲ ಚೂಡಾಮಣೀ ॥ ೫೦ ॥

ಆ ಪ್ರತಿಬೋಧವಚನಂ ವಲ್ಲಭಾವಿಯೋಗಸ್ವೈಕ್ಲಬ್ಯ ವಲ್ಮೀಕ ಸುಪ್ತಕೋಪವ್ಯಾಳ ಪ್ರತ್ಯುತ್ಥಾಪನದಂಡಮಾಗೆ ಧರಾಧಿನಾಥನಿಂತೆಂದಂ

ಬಂಡಣದೊಳಟ್ಟಿದು ಪೆಂಡಿರ್
ಭಂಡಾರಂ ಪೋದಡದು ವಿಧಾತೃವಶಂ ಬಲ್ ।
ಗಂಡಂಗೆ ಸಂತಸೊಕಮಾ
ಪೆಂಡತಿ ಕೋಳ್ಪಟ್ಟು ಮಗುಳೆ ಪುಗುವೆನೆ ಪೊಱಲಂ ॥ ೫೧ ॥

ಪ್ರಾಣಪ್ರಿಯೆಯಿಲ್ಲದೆ ನಿಃ
ಪ್ರಾಣನುಮೆಂತುಣ್ಮುದೀಗಳೀಯೊಡಲಹಿತ ।
ಪ್ರಾಣಾನಿಲನಿಂದೆನ್ನ ಕೃ
ಪಾಣಾಹಿಯನೂಡಿ ಒಱಕನೂನುಂಡಪ್ಪೆಂ ॥ ೫೨ ॥

ಎಂಪೆತ್ತಿ ನಡೆಯಲುತ್ತವಳಿಸಿದ ಸಮಯದೊಳ್

ನೆರೆದಾಪ್ತರ್ಸಚಿವರ್ಚಮೂಪತಿಗಳಂದಾಳೋಚನಕ್ಕೆಂದು ಬಂ
ದಿರೆ ಕಂಡಿಂಗಿತಮಂ ನೃಪಂ ನುಡಿದನಿನ್ನೇಮಾತೊ ಕಿರ್ಚಿರ್ದೊಡಂ ।
ಗರ ನಾದಂ ಗಡ ಮಾಱಿ ಹೊಕ್ಕ ಮನೆಯೊಳ್ಪರ್ವಂ ಗಡಾಳೋಚಮೇಂ
ಬೆರಗೇಂ ಬೆಂಬಲಮೇಂ ಸ್ವರಾದಿಬಲಮೇಂ ನೀಂ ಪೇೞ್ವುದೇಂ ಕೇಳ್ವುದೇಂ ॥ ೫೩ ॥

ಎಂದು ಮುಂದನಾರಯ್ಯದೆ ಪಿಂದಂ ಪಾರದೆ ಮುಂದೆ ನಿಂದ ನಿಜಸ್ಯಂದನಮನೇಱಿ ಸುಟ್ಟುರೆ ಮುಸಗಿಟ್ಟುರಿಗೊಂಡನಾ ವ್ಯತಿಕರದೊಳ್

ರಣಾಂಭಸೋತ್ಕಟಂ ಧರೆ ಪಡಮಂ ಮಗುೞ್ದಂತೆ ಚತುಸ್ಸಮುದ್ರಮು
ಲ್ಬಣವಿಕಟೋತ್ಕಟಂ ಮುಸಗಿ ಪೇಲ್ಗವಿದಂತೆ ದಿಶಾಚತುಷ್ಟಯಂ ।
ಪ್ರಣಿಹಿತಿಹೇತಿ ತಿಂತಿಣಿಸಿದಂತೊಡಮಂದುದು ಪಣ್ಣಿದಾನೆ ಪ
ಲ್ಲಣಿಸಿದ ವಾಜಿ ಪೂಡಿದ ರಥಂ ಕವಚಂ ಬಿಗಿದಾಪ್ತಸೈನಿಕಂ ॥ ೫೪ ॥

ಅಂತು ಬಂದ ಚತುರಂಗಪೃತನಾಸಮೂಹಸಹಿತಂ ವಸುಷೇಣಂ ಸಾಮಂತಲಕ್ಷ್ಮೀ ಸೀಮಂತನೆನಿಪಂ ಸಿಂಹಚೂಡಂಗೆ ಬೀಡುಂದಾಣಮಾದ ಮಾಣಿಕ್ಯಪುರಮನೆಯ್ದೆ ವರ್ಪಾಗಳ್ ಪೊಡೆವ ವೀರವಜ್ಜೆಯ ಪಿಡಿವ ಬಿರುದಿನ ಕಾಳೆಯ ಸುತ್ತಿಱಿವ ಮುತ್ತಿನತಟ್ಟೆಯ ತಲೆಗೆ ಮುಂದಲೆಯಾಗಿ ಲೆಂಕರ್ ಕುಡುವ ಪಿಡಿದಲೆಯ ಸಹಗಮನಸಮುತ್ಸುಕತೆಯಂ ಕೈವಿಡಿಸೆ ಕೈ ಗುಡುವ ಕೈದುಂಬರ್ಪ ಕೈವಿಡಿದ ಪೆಂಡಿರ ತಂಡದ ನಡುವೆ ಪೊತ್ತ ಪೊನ್ನ ಪರಿಯಾಣದೊಳಗೆ ಜೋಳವಾೞಿಯ ನಿರ್ವಹಣದ ನಿಬ್ಬಣಕ್ಕೆ ಬೀರಸಿರಿ ಪೊತ್ತ ಪೊಂಗಳಸದಂತೆ ತಳತಳಿಸಿ ತೋರ್ಪ ಪಂದಲೆಯಂ ಕಂಡು ನಿಂದು ನೋೞ್ಪಾಗಳ್

ಮುರಿದಣ್ಪೆಕ್ಕಿದ ಗಡ್ಡಮಿಾಸೆ ಮುಡಿಕಟ್ಟಂ ತಳ್ತ ಕೆಂಬಟ್ಟೆ ಕ
ತ್ತುರಿಯಂ ತೂಱುವ ಚುಂಚುಮಿಾಸೆ ಸುಲಿಪಲ್ದಷ್ಟಾಧರಂ ಭ್ರೂಕುಟಿ ।
ಸ್ಫುರಿತಂ ಕೈಮಿಗೆ ಭೂತಳಕ್ಕೆ ಪರಿವೇಷಂಗೊಂಡು ಬೀೞ್ತಂದ ಭಾ
ಸ್ಕರನಂತಿರ್ದುದು ಸಿಂಹಚೂಡನ ಶಿರಂ ಪೊಂಬಟ್ಟೆನಾಳ್ವಟ್ಟೆಯೊಳ್ ॥ ೫೫ ॥

ಪಗೆಯಂ ಕಂಡಳಿಯಾಸೆಗೆಯ್ದು ಪೊರೆದಾಳ್ದಂಗಾತುರಂ ಮುಟ್ಟೆ ಮೆಯ್
ದೆಗೆದಾಸ್ಥಾನದೊಳಾರ್ದು ಪಾರ್ದು ನೆರವಂ ಸಂಗ್ರಾಮದೊಳ್ ಜೋಳವಾ ।
ೞಿಗೆ ಕಯ್ಯಾಂಪಳೆ ಪೇಳೆಸಾೞಿಪೆನಸುಂ ಮುಯ್ಯಾಂಪ ಸಾಮಂತರಂ
ನಗುವಂತಿರ್ದುದು ಸಿಂಹಚೂಡನ ಶಿರೋಬ್ಜಂ ದಂತರುಕ್ಕೇಸರಂ ॥ ೫೬ ॥

ಅಂತು ಪೊತ್ತು ಬಂದ ವೀರಂ ವೀರಪುರುಷನ ಶಿರೋಂಬುರುಹಮಂ ಧಾರಿಣೀಪತಿಗೆ ನಿವಾಳಿಸಿ ನಿಂದು ವಸಿತಾಕರಣವಾರ್ತೆಯಂ ಸೂಚಿಸಿ ಬೞಿಯಮಿಂತೆಂದಂ

ಕಾದಿದ ಕಾಳೆಗಂ ಜವನ ಜತ್ತಕುೞಿಕ್ಕೆ ಸಮಾನಮಾದುದೇ
ನಾದೊಡಮೇಂ ಬರ್ದುಂಕಿ ಪಗೆ ಪೋದ ಬೞಿಕ್ಕೆ ವೃಥಾನುವಾದಮಿ ।
ನ್ನಾದ ದಯಾಜನಕ್ಕೆ ತೋಱಿದಂಕರಲೆಂಕರ ಗೊಂದಣಕ್ಕೆ ತ
ಳ್ಪಾದಪುದುರ್ವರಾಧಿಪತಿ ಬೀೞ್ಕೊಡು ಕೂಡುಗೆ ಸಿಂಹಚೂಡನೊಳ್ ॥ ೫೭ ॥

ಎಂಬುದುಮರಸಂ ನಿಜಾಂತಃಕರಣಖೇದಕ್ಕಂ ವೀರಶಾಸನಪ್ರವಾಸಕ್ಕಂ ಮೂದಲೆಯಂತಿರ್ದ ತಲೆಯುಂ ನೋಡಿ ನೀಡುಮೊದವಿದಟಿಲಂ ಸಮುಚಿತೋಪಚಾರಂ ವಚನಕಾರುಣ್ಯಪ್ರಸಾದಪ್ರದಾನಪ್ರಸಂಗದಿಂ ಸಂತರ್ಜಿಸುತ್ತುಮಿರೆ

ತುಱಿಲಾಳ್ ಮದ್ಗೋತ್ರಭವಂ
ಕಱಿದಂ ಕಲಿ ಸಿಂಹಚೂಡನೆಂದವಯವದೊಂ।
ದಱಿಲಿಂದೆ ಕೆಂಪು ಮಿಗೆ ನೀರ್
ಇಱಿವಂತಿರೆ ಸೂರ್ಯನಪರಜಲಸಿಧಿಗಿಱಿದಂ ॥ ೫೮ ॥

ಆ ಸಂರಂಭದೊಳ್

ಪಱವೆಣ್ಣಂ ತಂದನೋ ತಂದನೊ ಪೆಸರ್ಗಿಡೆ ಪೆರ್ಮಾರಿಯುಂ ನಮ್ಮ ದುರ್ಗ
ಕ್ಕರಸಂ ಸೇನಾಸಮಗ್ರಂ ನಿಜಗಲಿ ವಸುಷೇಣಂ ವಧೂವಿಹ್ವಲಂ ದ।
ಳ್ಪರಿದಾಳಿಟ್ಟಂತಿದಂ ಸುಟ್ಟುರಿಪದಿರಿಸನೇಗೆಯ್ವೆವೆಂತಿರ್ಪೆವೆತ್ತ
ಲ್ಪರಿವೆಂ ನಾವೆಂದು ಪೌರರ್ಕದಿದರ್ದಿದರಳ್ಕಾಡಿ ತಳ್ಳಂಕಗೊಂಡರ್ ॥ ೫೯ ॥

ನೊಣೆಯಲ್ಲಂಗಲಿಳಾತಳಂ ಮುಱಿದು ಮೂಱಿಟ್ಟಂತೆ ದುರ್ಗಕ್ಕೆ ನಿ
ಚ್ಚಣಿ ಸಾಚರ್ಗಂದೂರೆ ವೀರಸೇತು ನಡೆಸಾರಂಬದ್ಧರಂ ಗೆಗ್ಗ ಡೆಂ।
ಕಣೆ ಗುಮ್ಮಂ ಪಡಿಗೋಂಟೆಯೆಂಬ ಬಹು ಕೋಟಾಯಂತ್ರಸಾಮಗ್ರಿ ತಿಂ
ತಿಣಿಗೊಂಡಂತಿರೆ ಲಗ್ಗಗಾರ್ದ ವಸುಷೇಣಂ ಸಾರ್ದ ಸೂಳ್ಪೈಸಿದಂ ॥ ೬೦ ॥

ಅಂತು ಸೂಚಿಸುವ ನಿಸ್ಸಾಳಭೇರೀಢಕ್ಕಾಮೃದಂಗಕೋಳಾಹಳವೆತ್ತಿ ಪೊತ್ತುತಂದಿಳಿಪುದೆನಿಸಿ ಗುಡವಿಡಂಬಿತಪಿಪೀಲಿಕಾಜಾಲಮಂತೆ ಮುತ್ತಿ ಮುಸುಱಿ ಪತ್ತಿಕಟ್ಟಾಯದ ಕಡುಗಲಿಗಳೆಲ್ಲಮುಣ್ಮುಣ್ಮಿನಿಂದು ಮುಮ್ಮುಳಿಯಾಗೆ ಪೋಯ್ತು ಪೋಯ್ತು ದುರ್ಗಮಿನ್ನೇನೆಂದೊಳಗೆಲ್ಲಮೆಯ್ದೆ ಸರಕುಗಟ್ಟಿ ಪೊಱಗೆಲ್ಲಮೆಯ್ದೆ ಗುಡಿಗಟ್ಟಿ ಸೀರೆಯುಂ ಬೀಸಿ ಬೊಬ್ಬಿಱಿವಾಱಿ[3] ತೊಟ್ಟನೆ ಕಂಡು

ರಣಮಂಡಲದೊಳ್ಪೆಱತೆಗೆ
ದಣಿಯುಂ ತೆಗೆ ನೆಱೆದ ಬಿಲ್ಲವೋಲಿರ್ದ ಭಟಾ।
ಗ್ರಣಿ ಪರಿದು ದಂಡೆಗೊಂಡ
ಡ್ಡಣದಿಂದಂ ಚಂಡಶಾಸನಂ ಕೈಕೊಂಡಂ ॥ ೬೧ ॥

ಅದನಾಗಳ್ಕಂಡು ಕಣ್ಣಿಂದುರಿ ಬರೆ ಪೊಗೆ ಪುರ್ವಿಂದಮುರ್ವೇಱೆ ಭೋಂಕ
ಲ್ಮದಮಾತಂಗಾರಿ ಪುರ್ವಾಸನದಿನಿೞಿದು ಮೆಯ್ವೆತ್ತ ವಜ್ರಾಂಗಿ ಕಯ್ಯೆ ।
ತ್ತಿದ ಕೊಂತಂ ದಂಡೆಗೊಂಡಡ್ಡಣಮಿರೆ ವಸುಷೇಣಂ ಭರಂಗೆಯ್ವುದುಂ ಪೋ
ದುದು ಪೊತ್ತಿಂ ಕಾಲಿಡಲ್ಕತ್ತಲೆ ಕದಡಿದುದೆಂದಾಪ್ತರಡ್ಡೈಸಿ ನಿಂದರ್ ॥ ೬೨ ॥

ಆಗಳೆರಡುಂ ಪಡೆಗಳಪಹಾರತೂರ್ಯಂ ಮೊೞಗೆ ಪೆಱತೆಗೆಯಲೊಡಂ ವಸುಷೇಣಂ ಬಂದು ನಿಜನಿವೇಶಿತಸ್ಕಂಧಾವಾರಮಂ ಪೊಕ್ಕನಿತ್ತ ಚಂಡಶಾಸನಂ ಮಂಡಳಿಸಿ ಪಿಡಿದ ಕೈದೀವಿಗೆಯ ಬೆಳಗಿನೊಳ್ ಸುನಂದೆಯುಂ ತಂದು ಸೆಱೆಯಿಟ್ಟ ಮಣಿಮಾಡಕ್ಕೆ ಬಂದು

ಘನನಿಶ್ವಾಸತರಂಗಿತಾಳಕಿಯನಗ್ರಪ್ರಾಂತವಾರ್ಬಿಂದು ಲೋ
ಚನಪಕ್ಷ್ಮಾವಳಿಯಂ ವಿಯೋಗದಹನಪ್ಲುಷ್ಟಾಧರಚ್ಛಾಯೆಯಂ ।
ವಿನತಪ್ರಾಹ್ಣಸುಧಾಂಶುಬಿಂಬಮುಖಿಯಂ ಚೀನೋತ್ತರೀಯಾವಗುಂ
ಠನ ನಿರ್ಭಿನ್ನ ಕಪೋಲಪಾಂಡುರುಚಿಯಂ ಸಾರ್ದಂ ತದುರ್ವೀಶ್ವರಂ ॥ ೬೩ ॥

ಆಗಳ್

ಬಿದಿಯೆಂಬ ಮದಗಜಂ ನೃಪ
ಸದನಸರೋವರದೊಳೆಱೆದು ಸೆಳೆತಂದು ವನಾಂ ।
ತದೊಳಿಕ್ಕಿದ ಬಾಳಮೃಣಾ
ಳದವೊಲ್ ಸತಿ ಕೊರಗಿ ಕಣ್ಗೆ ಕರಮೆಸೆದಿರ್ದಳ್ ॥ ೬೪ ॥

ಅಂತು ಸಾರ್ದು ತನ್ನೊಡವಂದು ಬಾಗಿಲೊಳ್ ನಿಂದ ಪರಿಜನಮುಮಂ ಕೆಲಬಲದೊಳಿರ್ದ ಪಸಾಯಿತರುಮಂ ಪರಿಹರಿಸಿ ಕೃತಕವಿನಯೋಪಚಾರಮೆಸೆಯೆ ಚಂಡಶಾಸನಂ ಸುನಂದಾದೇವಿಗಿಂತೆಂದಂ

ನಯದಿಂ ನಿನ್ನೊಳೊಡಂಬಡಂ ಪಡೆಯದಿಂದೌತ್ಸುಕ್ಯದಿಂ ತಂದ ಸ
ಲ್ಗೆಯನೀಂ ಮನ್ನಿಸು ಕಾಮಿ ಕಣ್ಣೞಿವಸಲ್ಲಾಂ ಗಂಡುದೊಳ್ತೆನ್ನ ರಾ ।
ಣಿಯುಮಾಸಂ ಪರಿಚಾರಕಾದಿ ನಿನಗೀ ಸಾಮ್ರಾಜ್ಯಲಕ್ಷ್ಮೀಸುಖೋ
ದಯದೊಳ್ವಲ್ಲಭೆಯಾಗಿ ನೀನಿರುದಲನ್ನೀಲಾಬ್ಜಲೋಲೇಕ್ಷಣೇ ॥ ೬೫ ॥

ನುಡಿಯಲೊಡವಿಂತು ಪೇೞ್ದಿಡ
ನುಡಿಯಂ ತನ್ನಿದಿರೊಳಾ ಖಳಂ ಕಡೆಗಣ್ಣಿಂ ।
ಕಿಡಿಸೂಸೆ ಘೃತಾಹುತಿಯಂ
ಪೊಡೆವ ಶಿಖಿಜ್ವಾಲೆಯಂತೆ ಬಾಲೆ ಕನಲ್ವಳ್ ॥ ೬೬ ॥

ಅಂತು ಕನಲ್ದೊನಲ್ದು ಸ್ವೈರಿಸಲಾಱದೆ

ಸೆಱೆಸಿಕ್ಕಿಂ ಪಿಡಿತಂದ ದೇಸಿಗಿತಿಯಂ ಭೋಗೋಪಭೋಗಂಗಳಂ
ಮೆಱೆದುಂ ಕಾಣದನಾಥೆಯಂ ನುಡಿವವೊಲ್ಕಿನ್ನೊಂದು ಸಂಪತ್ತಿಯಿಂ ।
ಜಱಚುತ್ತಿರ್ದಪೆ ಪಾಣ್ಬ ನಿನ್ನ ತಲೆಯುಂ ಕಾರಾಗೃಹದ್ವಾರದೊಳ್
ಮೆಱೆವಾಗಳ್ ನುಡಿ ನಾಳೆ ನೀನೆನಗೆ ಮಾಡಲ್ವೇೞ್ಪ ಸತ್ಕಾರಮಂ ॥ ೬೭ ॥

ರಮಣಸಿರಿ ಪಾಣ್ಬನೊಳ್ಪತಿ
ರಮಿಯಿಸಿದಪ್ಪಳೆ ವೃಥಾನುಮಾವದೆ ಫಳಮೇಂ ।
ಕಮಳಿನಿ ದಿನಪತಿಗಲ್ಲದೆ
ಸಮನಿಸಿ ದೋಷಾಕರಂಗೆ ಮೊಗಮಿತ್ತಪಳೇ ॥ ೬೮ ॥

ಎಂದು ಜೆಟ್ಟಿವೆಟ್ಟಿಪೆ ಬಯ್ದು ಬಿಟ್ಟು ಬಿದಿರ್ದು ನುಡಿದ ಸುನಂದೆಯ ನುಡಿಗೆ ಚಂಡಶಾಸನನೇವೈಸಿ ಮುಳಿಸುದೆ ಲಜ್ಜೆಯಿಂ ಚಳಿಯುದೆ ಮತ್ತಮಿಂತೆಂದಂ

ಕೆಳೆಗೆಟ್ಟಾಂ ಪಗೆಯಾದೆನಾಗೆ ವಸುಷೇಣಂ ಪೋದನಿನ್ನಿನ್ನ ಕ
ಯ್ಯೊಳದಂ ನಂಬಱಿಯನಾಸೆಯಿಂ ನಮೆಯದಿರ್ ಬೇಡಾಗ್ರಹಂ ಸತ್ತು ಸ ।
ತ್ಪಳಮುಂ ತೋಱುವ ಜಾಱೆಯಾಗದಿರು ಪಾತಿವ್ರತ್ಯದಿಂ ಬತ್ತಿ ಬಾೞ್
ದಳಿರಾಗುತ್ತಿರವಾಳ್ದಿರಾತ್ಮಪುರಸೌಖ್ಯಶ್ರೀವಿಳಾಸಂಗಳಂ ॥ ೬೯ ॥

ಎಂಬುದುಮಾ ಕುಟಿಲನಾಕೆಯೊಳ್ ತೆಱಪುಗಾಣದೆ ಮುಳಿದು ಮಾಡದೆ ಮತ್ತಮಿಂತೆಂದಂ

ಬಿಡೆನಾಂ ನೀಂ ಸಯೆ ಸಾವೆನಲ್ಲದುೞಿಯೆಂ ನೀನೊಲ್ದ ಡೇನೊಲ್ಲದಿ
ರ್ದೊಡಮೇಂ ನಾನೆರಡಿಲ್ಲದೊಲ್ಲೆನದಱಿಂ ಬೇಱೂರ ಬೇಟಕ್ಕೆ ಬಾಯ್ ।
ಬಿಡಲಾಱೆಂ ಸೆಱೆಯಿಂದಮೆನ್ನ ಮನೆಯೊಳ್ನೀನಿರ್ದೆಯೆಂಬಾಸೆಯು
ಳ್ಳೊಡೆ ಸಾಲ್ಗುಂ ಬೞಿಕಪ್ಪುದಕ್ಕೆ ರಿಣದಿಂದಂಭೋಜಪತ್ರೇಕ್ಷಣೇ ॥ ೭೦ ॥

ಎಂದು ತನ್ನ ಮನದೞಪನಡರೆ ಚಾಳಿಸಿ ನುಡಿದು ಪೋಗುತ್ತುಂ

ಪರಿಚಿತೆ ನೀಂ ತಳೋದರಿಗೆ ಮೆಯ್ವಳಿಯಿಂ ಮನಮಂ ತೊಡಂಕಿ ಸಾಂ
ತ್ವರಿಪದಿನಿಳ್ದತಂವಬಿಲನಾಱಿಸು ತೋಱಿಸು ಭೀತಿಯಂ ಮನಂ ।
ಕೊರಗದೆ ಮತ್ತೆ ಸಂತವಿಡು ಗಂಡನ ಪಂಬಲನೊಯ್ಯನಾಗಿನಿಂ
ದರುಣಿಕೆಯಂಬಳಂ ನಿಱಿಸಿ ಕಾಂತೆಯ ಕಾಪಿನೊಳಾ ನೃಪಾಳಕಂ ॥ ೭೧ ॥

ಕಟ್ಟಿತನಾರ್ಗಂ ಕಳೆಯಲ್ಕೆಟ್ಟನೆ ಬಾರದು

ನೇಸರ್ಮೂಡಲೊಡಂ ಮುನ್ನ ಮಾಡಿರ್ದ ವಿರಹಪರಿತಾಪಂ ತೀರದೆಯುಮೇತಱೆಠೊಳವಾ ತಳೋದರಿಯನೊಡಂಬಡಿಸಲ್ಕಾರದೆಯುಮಾಕಿತವಂ ತನ್ನ ಕೈತನದೊಳ್

ಪತಿಯಿರೆ ಪಿಂಗದಾಸೆ ಮನದೊಂದಱಿಯಾಸೆಯಿನೆನ್ನನೊಲ್ಲಳೀ
ಸತಿಯಿರವಂ ಮರಳ್ಚಿದಪೆನೆಂದು ಬಿಸುಗುಡೆ ಚಂಡಶಾಸನಂ ।
ಪ್ರತಿಬಳಮುಯ್ದು ಕೆಟ್ಟುದಱಿಂ ವಸುಷೇಣನೃಪೇಂದ್ರನೆಂಬ ಸಂ
ಗತಿಯನೊಡರ್ಚಿದಂ ಜನವ ಕಣ್ಬೆರಗಪ್ಪಿನಮಿಂದ್ರಜಾಲಿಗಂ ॥ ೧ ॥

ಆ ವ್ಯತಿಕರಮಂ ಕಂಡು ನಮ್ಮರಸನಿರುಳಿನ ಕಲಿಯು ಕಾಳೆಗದೊಳ್ ಮಂತ್ರಿಬೀಡಂ ತೊತ್ತಳಿಮಱಿದು ಪಗೆಯು ಪಂದಲೆ ಕೆಯ್ಗೆವಂದುದಿನ್ನೇನಿನ್ನೇನೆಂದು ಕೋಟೆಯೊಳಗೆ ಜನಂ ಕೋಟಿತೆಱದಿಂ ನಾಟಕಂ ನಲಿದು ಬೊಬ್ಬಿಱಿಯುತ್ತಿರೆ ಸುನಂದಾದೇವಿಯಿರ್ದ ಸೆಱೆವನೆಗೆ ತಾನೆವಂದು

ವಸುಷೇಣನೆ ಪತಿಯೆನಗಂ
ದು ಸುನಂದೆ ಪಿಡಿಲ್ವೆ ನಾಡ ಸೋವದಿಕೆಯನೀ ।
ಬಸಿವ ತಲೆಗೆನುತಮೀಡಾ
ಡಿಸಿದಂ ಮಾಯಾವಿ ಪತಿಯ ಮಾಯದ ಶಿರಮಂ ॥ ೨ ॥

ಅಂತು ತಂದಿಱಿಪಿದ ಶಿರಮುಮಂ ಕಳ್ದು ತಱಿವ ಮಣಿಮಕುಟಕೇಯೂರಮಂಡಳಾದೀಪನಮಂಡನಮುಮಂ ಪೇರುರದೊಳೋರಂತೆ ಮೆಱೆವ ತೋರಮುತ್ತಿನ ಹಾರಮುಮಂ ಕಾಣಲೊಡಂ

ಹೃದಯದೊಳಿರ್ದ ವಲ್ಲಭನನಾಕ್ಷಣಭೀತಿಯನೀಕ್ಷಿಸಂತೆ ಮು
ಚ್ಚಿದುವಲರ್ಗಣ್ಪೊಣರ್ ತಡವಿ ನೋಡುವವೋಲ್ಕುಚಮಧ್ಯದಲ್ಲಿಗಾ ।
ದುದು ಕರಪಲ್ಲವಂ ಸರಮನಾಲಿಸುವಂತೆ ಮೊಗಂ ಮಲಂಗಿತಂ
ಗದೊಳೆರ್ದೆ ಶೂನ್ಯಮಾಗಱಿಸುವಂತಸು ಪೋಯ್ತು ಸಿತಾಬ್ಜನೇತ್ರೆಯಾ ॥ ೩ ॥

ಬಱಿಯುಟ್ಟೆ ಬಂದು ಮುನ್ನಂ
ಪುಱಿವಗೆಗೊಳಗಾವಳೆಂದು ಸಾವಾಹಿಗಳಂ ।
ಕಱಿಪಿದನಲ್ಲಂ ತಲೆಯಂ
ಬಱಿಯುಟ್ಟಿದನೆಂದು ಪೋದುದಸು ಶಶಿಮುಖಿಯಾ ॥ ೪ ॥

ಇನಿಯನಿರೆ ನೋಡೆ ಮತ್ತೊ
ರ್ವನ ಕಣ್ಗಂ ಬಗೆಗವೊಪ್ಪಿದಪ್ಪುದು ಸುಡಲೀ ।
ತನುವನಿದನೆಂದು ಜೀವಂ
ಮುನಿದಂತಿರೆ ಬಿಟ್ಟು ಪೋಯಿತಸು ಶಶಿಮುಖಿಯಾ ॥ ೫ ॥

ಆಗಳಾವ್ಯತಿಕರಮಂ ಕಂಡತಿಚಕಿತಹೃದಯನುಮಾಕುಳಿತವಿಳೋಕನುಮಾಗಿ

ಸ್ಮರನೊಳ್ದಾಯಿಗನಾಗಿ ಬೆಂದ ವಿಧಿಯೊಂದಂ ಮಾಡಿದಂ ಕೂಡುವೆಂ
ಬೆರಗಿಂದೆಂದಿದನಿಂತು ಮಾಡೆ ಮರಣಂ ಮೂಡಿತ್ತು ಹೋ ಬೇದೆನಾ ।
ಮರಿಪೆನ್ನಂದಿದೆನೆಂದು ಬಂದು ಭರದಿಂ ತಟ್ಟಿಕ್ಕೃಸೆ ತಳ್ತಾಂತು ತ
ತ್ತರುಣೀಗಾತ್ರದ ಸೋಂಕು ಸಮ್ಮನಿಸೆ ಮೂರ್ಛಾಪನ್ನನಾದಂ ಖಳಂ ॥ ೬ ॥

ಅವನಂ ಚಾಮರದಡಪದ
ಡವಕೆಯ ಕೀಲ್ವೊಳಳಿದಂಗನೆಯರ್ಬೀ ।
ಸುವ ಬಿಜ್ಜಣಿಗೆಯ ಮಳೆಯುಜ
ನವಜಳಕಣದೆಲರ ಸೋಂಕಿನಿಂ ನಿಲೆ ಪಿಡಿದರ್ ॥ ೭ ॥

ಅಂತು ಮೂರ್ಛೆಯಿಂದೆಚ್ಚತ್ತು ಬೆಚ್ಚನೆ ಸುಯ್ದು ಬೆಬೆದೆ ಬೆಂದು ನೊಂದು ನಿಂದಿಸಿಕೊಂಡು ಮಾಣದೆ

ನೋಡಿ ಕನಲ್ದು ಬಾಯ್ಮುನಿದು ಮೋನದಿನೇಕೆಲೆ ದೇವಿ ನೀಮ್ಮನಂ
ನೋಡುವೆ ಸಾವಿನಿಂ ಸರಸವಾಡುವರೇ ಮಱುಮೆಯ್ಯೊಳಾದೊಡಂ ।
ಕೂಡದೆ ಮಾಣೆನಬ್ಜದಳಲೋಚನೆ ನಿನ್ನೊಡನೆಂದು ಮೆಯ್ಗೆ ಮೆ
ಯ್ಗೂಡುವೆ ಧೂಮಸೌಧಗೃಹದೊಳ್ ಶಿಖಿಪಲ್ಲವರಾಗತಳ್ಪದೊಳ್ ॥ ೮ ॥

ಎಂದು ಬಾಯಱಿದು ಪಱಿಯಿಸಿ ಬಸಮಱಿದಸುವೊಱೆಯಾಗಿ ಮನಮನಱಿದು ಕಳವಳಿಸಿ

ಎನಗಿನ್ನೋಲಗಸಾಲೆಯೇಕಿದು ವಿಮಾನಂ ನಂದೆಯಂ ಲೋಲಲೋ
ಚನೆಯಂ ಕುಳ್ಳಿರಿಸಿಲ್ಲಿ ಕೂಡೆ ಬಱಸಲ್ಬಂತಃಪುರಸ್ತ್ರೀಯರಾ ।
ಳ್ತನಮಂ ತೋಱುವ ಲೆಂಕರೊಳ್ಪಡಿಯವೇಟ್ಟಿಪ್ಪುದ್ಯಾಜನಂ ಬರ್ಕೆ ಚಂ
ದನಸಂಧಾವಿಧದಿಂದಮೆನ್ನ ವಿರಹಾಗ್ನಿಜ್ವಾಲಾಗ್ನಿಯಂ ನಂದಿಪೆಂ ॥ ೯ ॥

ಎಂದು ತನ್ನ ಲಕ್ಷ್ಮೀಭವನಮೆನಿಸುವುಪರಿಮಂಡಪಮನೆ ಚಿತ್ರಕ್ಕೆ ಮಾಡಿ ಸುನಂದಾದೇವಿಯುಂ ತಾನುಮೇಕಾಸನದೊಳ್ಕುಳ್ಳಿರ್ದು ರಾಣಿಯವಾಸದ ಪೆಂಡವಾಸದ ಭಾಷೆಯ ಲೆಂಕರ ಭಾರತಿನಿಕರದೋಲಗದ ಕೇಳೀವಿಳಾಸಮಂ ಕೆಳಗೆ ತಗುಳ್ಚಿದ ಹುತವಹಜ್ವಾಲಾಕಲಾಪಮಂ ಮೆಚ್ಚಿದಂತೆ ಮೂರ್ಛೆಗೊಳ್ವಿನಮೊಡನೞಿಯುಲ್ಪರಿಚ್ಛೇದಿಸಿದ ಕುಲಸ್ವಾಮಿಯವಸಾನ ಸಮಯಮಾಗೆ

ನಗೆಗಂ ನಾಣ್ಚದೆ ನಮ್ಮನೊಲ್ಲದೆ ಪರಸ್ತ್ರೀಗೊಲ್ದವಳ್ಪೆತ್ತೊಡಾ
ಕೆಗೆ ತಾಂ ಪ್ರಾಣಮನಿತ್ತಪಂ ಗಡರಸಂ ನೋಡಕ್ಕ ಮಾವಿಂಗೆ ಮ।
ಲ್ಲಿಗೆಗಳ್ಕ್ಕಾರ್ತೊಡೆ ಮಾವು ಕೊರ್ತುದು ವಸಂತಶ್ರೀಗೆನಿಪ್ಪಂತೆ ಲ
ಜ್ಜೆಗೊಡಲ್ಮನ್ಮಳಿವ್ರೋಪದಿನ್ನುೞಿವಿದಕ್ಕೇಗೆಯ್ವುಮುಜ್ಜೀಕ್ಷಣೇ ॥ ೧೦ ॥

ಆ ಮಾತಂ ಮಾರ್ಕೊಂಡು ಕುಲವತಿಯುಂ ಶೀಲವತಿಯುಮೆನಿಸಿದ ವಿದಗೆಯೊರ್ವಳಿಂತೆಂದಳ್

ಪೞಿಗೇವಯ್ಯುವ ಪಾಪಮೆಂಬ ಪೆಜನೇಣ್ಗಾಟಿಪ್ಪುದಾ ಮಾಯುದೊಂ
ದೞಿಪೆಂಜೋಜೆಯುಧೀಶವೃತ್ತಿಯುಧಿಪಂಗೇನಾದುದಾದಲ್ಲಿ ಮೆ।
ಯ್ನೞಲಂತಪ್ಪುದು ನಮ್ಮ ವೃತ್ತಿ ನಮಗಿನ್ನಾಮಾತದೇಕೆಂದು ಪಿಂ
ದುೞಿವೊಂದಾಸೆಯುನೊಲ್ಲದೆಯ್ದೆ ನೆಱಪಿತ್ತಂತಃಪುರಸ್ತ್ರೀಜನಂ ॥ ೧೧ ॥

ಕ್ರಮದಿಂ ಕೆಯ್ಯೆಡೆಗೊಟ್ಟಿನೀ ಹರಿಣಿಯಂ ಕೊಂಡಾಡಿಸೀ ರಾಜಕೀ
ರಮನೋವೀಕಳಹಂಸನಂ ಸಲಹು ನೀನೀ ಸೋಗೆಗಾಗೆಲ್ಲಮಂ।
ನಮಗಿನ್ನೆಮ್ಮ ಸಮಾನಮೆಂದು ಕೆಲರಾಳೀಜಾಲಮಂ ಬೇಡಿ ತ
ಟ್ಟಿತ್ತೆಮೆಯಿಂದಂ ಕರೆಗಣ್ಮ ಸೂಸಿ ಕಡುಕೆದಲ್ ಕೆಯ್ಯೊಡ್ಡಿ ಕಣ್ಣೀರ್ಗಳಂ ॥ ೧೨ ॥

ಅಂತು ನಿರಂತರಿತಮಾದ ಶೋಕರಸಾವೇಗದೊಳ್

ನೆರೆದುದು ಲೆಂಕತಂಡಮೊಡಮಂದುದು ರಾಣಿವಾಸಮೊಲ್ದಳಂ
ಕರಿಸಿದನಾ ಧರಾಧಿಪತಿಯೋಲಗಸಾಲೆಗೆ ಮಂದುದಾ ತನೂ।
ದರಿಯ ವಿಶೇಷಭೂಷಿತಶರೀರಮನೇಕವಿಮಾನಯಾನಮು
ಬ್ಬರಿಸಿದುದಾದುದಿಂತು ಕರುಣಾದ್ಭುತರೌದ್ರರಸಾಕರಂ ಪುರಂ ॥ ೧೩ ॥

ಅನ್ನೆಗಮಿತ್ತಲ್

ವಸುಷೇಣಂ ಲಗ್ಗೆಮಾಡಲ್ಕ್ಕಗಸಿ ಪೂಗಿಸಿ ದುರ್ಗಕ್ಕೆಭವ್ರಾತಮಂ ಪ
ಣ್ಣಿಸಿ ವಾಹವ್ಯೂಹಮಂ ಪಲ್ಲಣ್ಣಿಸಿ ಸುಭಟರಂ ಕೈದುಕೊಳ್ವಂತಿರಾ ಘೋ।

ಪಿಸಿ ರಾಜಾವಾಸದಿಂ ತಾಂ ಪೊಱಮಡುತಮಿದೇಂ ಕೋಟಿಯೊಳ್ಕಾಮಿನೀವೀ
ರಸಮೂಹೋದ್ರೇಕಶೋಕಾಕುಳಬಹಳರವಂ ತಿಣ್ಣಮಾಯ್ತೆಂದನಾಗಳ್ ॥ ೧೪ ॥

ಚರನೆಯ್ತೆಂದೊರ್ವನಾ ವೃತ್ತಕಮನುಸಿರ್ದೊಡುರ್ವೀಶ್ವರಂ ಪ್ರಾಣನಾಥಾ
ಮರಣೋದಂತಾಭ್ರವಹ್ನಿಸ್ಫುಟಿತಹೃದಯನುಚ್ಛ್ವಸನಿಶ್ವ್ವಸಮೂಢಾಂ ।
ತರಿತಂ ಬಾಷ್ಪಾಂಬುನಿಷ್ಪಂದಿತನಯನಯುಗಂ ಖೇದದಿಂ ಕೀಲಿಸಿರ್ದಂ
ಕರುವಿಟ್ಟಂತಿರ್ದಮಿಟ್ಟರ್ಬರೆದು ಕರಿಯ ಮೇಲಿಟ್ಟರೆಂಬಂತಿರಿರ್ದಂ ॥ ೧೫ ॥

ಅಂತು ಕಿಱಿದು ಬೇಗಮಿರ್ದಂತೆಂತಾನುಂ ತನ್ನ ಶಾನಱಿದು ಬಾಯುಟಿದುದಾ ಕಾಶ ವಚನನಿಂತೆಂದಂ

ಆನಱಿದೆನೆಂದು ಪುಸಿದೊಡೆ
ಮಾನಿನಿ ನೀಂ ಕಱಿದ ನಿನ್ನ ಸಾವನೆ ಕಂಡೆಂ ।
ತಾನುಱಿದೆಂ ನಿರ್ಲಜ್ಜರ್
ದೀನಕೃಪಾಣರ್ ಕೃತಘ್ನರಾರೆನ್ನಿಂದಂ ॥ ೧೬ ॥

ಅನಂತರ ಪಾರ್ಷ್ಣಿಕಗ್ರಾಹಕನಾಗಿ ತನ್ನಂ ನೆಮ್ಮಿಸಿಕೊಂಡಿರ್ದ ದಯಿತಸಾಮಂತನೊಳಿಂತೆಂದಂ

ಇನಿಯಳ್ ಪೋದ ಬಱಿಕ್ಕಮೆನ್ನಿರವು ತಾರಾಮಂಡಲಂ ಪೋದ ಲೋ
ಚನಮಿರ್ಪಂತೆ ಸುಗಂಧ ಪೋದ ಕಳಿವೂವಿರ್ಪಂತೆ ತೀವಿರ್ದ ಜೀ ।
ವನವೆಲ್ಲಂ ನೆಱೆಪೋದ ಕೊಟ್ಟುಗೆಱೆ ತಾನಿರ್ಪಂತೆ ದೈನ್ಯಕ್ಕೆ ಭಾ
ಜನಮಿರ್ದೇನಸುವೋದ ಬಾಟಿಪ್ಪಿಣನಿದೇನ್ನಾನಿರ್ದೊಡಂ ಬಿಟ್ಟೊಡಂ ॥ ೧೭ ॥

ಅಂತುಮಲ್ಲದೆಯುಂ

ಇದಱೊಳ್ಪಲ್ಲಭೆ ಕಾದಿ ಕೊಳ್ವ ಧನಮಾ ಪ್ರಾಣೇಶ್ವರೀರತ್ನಮಿ
ಲ್ಲದ ಪಾಳ್ಗೋಟೆವಿದೇಕೆ ಕೋಟಲೆಗೋಳಲ್ಕಾ ಶತ್ರು ಸಾಯಲ್ಕಡಂ ।
ಗಿದಪಂ ತಾಂ ಗಡ ಕೊಲ್ವುದಾರನಕಟೀ ಬೇಳಂಬಮಿನ್ನೇಕೆ ಸಾ
ಯದೊಡಂ ತೀರದೆ ಕಾಯಮುಂ ತೊಱೆಯಲಿನ್ನುಂ ರಾಜ್ಯದೊಳ್ಬಾಳ್ವುದೇಂ ॥ ೧೮ ॥

ಮುನಿಸಪ್ಪಂ ತೆಱದಿಂದಮುಪ್ಪುದದಱೊಳ್ ಸ್ತ್ರೀಸಂಭವಂ ತಿಣ್ಣಮಾ
ಮುನಿಸಂ ತಂದನ ಕಂಶಪೀಠತಳದೊಳ್ತಂದಿಟ್ಟು ರಕ್ತಾಂಬುಮ ।

ಜ್ಜನನಂ ಮಾಡಿಸಿ ಮಸ್ತಕಾಂಬುರುಹದಿಂದಂ ಪೂಜೆಗೆಯ್ದಾಂತೊಡಾ
ತನ ಕೊರ್ವಾಳ್ಕಿರವಾಳ್ದಲುಂತು ಮರವಾಳ್ಪ್ಪೊರ ಪ್ಪೈಲಾರನಾ ॥ ೧೯ ॥

ಎಂದು ಕೊಕ್ಕರಿಸಿ ಮಾಣದೆ

ಏಱ ಬರೆಗೊಂಡ ಜೂದುಂ
ಗಾಱನವೊಲ್ ಲಗ್ಗೆಮಾಡಲೊಲ್ಲದೆ ಪಡೆಯಂ।
ಸಾಱಿಸಿ ಮುಂತಂ ಪಿಂಗುವ
ನೀಱಿಯುವೊಲ್ ತೆಗೆಯುವೇಟ್ಟಿನಾ ವಸುಷೇಣಂ ॥ ೨೦ ॥

ಅಂತು ಪರವಿಗ್ರಹದ ಮೇಲಣ ತೋಳ್ವಲನುಮಂ ನಿಜವಿಗ್ರಹದ ಮೇಲಣ ಬಾಳ್ವ ಬಮುಮೋಸರಿಸದೆ ಸುತ್ತಿಱಿವ ಮುತ್ತಿದ ಬೀಡಂ ತೆಗೆಯಿಸಿ ಮಗುಟ್ದು ಬರ್ಪಾಗಳ್

ಬಿರುದಿನ ಕಾಳೆ ಬಾರಿಸುವ ಬೀರದ ಡೌಡೆ ತೆರಳ್ದ ಕೇತನೋ
ತ್ಕರದ ವಿಡಂಬನೊಲ್ಲಸುಲಿತಪ್ಪ ಚತುರ್ಬಲದುರ್ವು ಕೂರ್ಪಿನಿಂ।
ದುರಿವರಿವಸ್ತ್ರಶಸ್ತ್ರಕಿರಣಂ ವಸುಷೇಣನೊಳಾದುವೆಯ್ದೆ ಕೊ
ಕ್ಕರಿಕೆಗೆ "ದುಃಖಿತೇ ನಸಿಮ ಸರ್ವಮುಸಹ್ಯ"ಮೆನಿಪ್ಪ ನೀತಿಯಂ ॥ ೨೧ ॥

ಅಂತು ನಿರ್ವೇಗಪರನಾಗಿ ಮಗುಟ್ದು ಬಂದಸ್ತಂಗತಪ್ರಭೆಯಂತೆ ನಿಜಮಂಡಲಮಂ ಪೊಕ್ಕು

ನಡುನಾಡ ತೀರ್ಥಮೆನಿಸ
ಲ್ಪಡೆದಿಂದ್ರಪ್ರಣಯಮೆಂಬ ಪರ್ವತಕಟಕಂ।
ಬಿಡಿದು ನಿಜಕಟಕಮಂ ತಾಂ
ಬಿಡಿಸಿ ಮಗಂಗಿತ್ತು ಕೊಡೆಯುಮಂ ಪಟ್ಟಮುಮಂ ॥ ೨೨ ॥

ಸಮಭಾಗಂ ಬರೆ ಹಸ್ತಿವಾಜಿಸಹಿತಂ ಭಂಡಾರಮಂ ಪರ್ಚುಗೊಂ
ಡು ಮಗಂಗರ್ಧಮನಿತ್ತು ಚೈತ್ಯನಿವಹೋದ್ಯಾನಕ್ಕೆ ತಾಂ ಬಂದು ಧ।
ರ್ಮಮನುದ್ಯೋಗಿಸೆ ಸಂಯಮೋಪಕರಣಕ್ಕರ್ಹತ್ಪದಾಭ್ಯರ್ಚನ
ಕ್ಕೆ ಮನೋರಾಗದಿನಿತ್ತನಿತ್ತು ಗಜವಾಜಿಸ್ತ್ರೀಸಮಾಜಂಗಳಂ ॥ ೨೩ ॥

ಇವು ಘಟಿಕಾಸ್ಥಾನಂ ಮ
ತ್ತಿವು ತೀರ್ಥಸ್ಥಾನಮೆಂಬ ರೂಢಿಯ ಭಗನ।

ಧ್ಭುವನಕ್ಕಲಂಘ್ಯಮುಟಿಲುಂ
ತವೆ ಮುಂಕ್ಕೊಡೆಯೆತ್ತಿಬಿಟ್ಟನಾ ವಸುಷೇಣಂ ॥ ೨೪ ॥

ಲಲನಾವಿಯೋಗಹೇತು
ಚ್ಛಲಮೆರ್ದೆಯೊಳ್ನಟ್ಟ ಶೂಲದಂತಿರೆ ತಪದಿಂ ।
ಗೆಲೆ ಜೀರ್ಣಮಾಗೆ ತನು ಕೂ
ರಲಗಿನ ಪಱಿದೊವಲೊಲಿರ್ದನಂತಾ ಮುನಿಪಂ । ॥ ೨೫ ॥

ಅಂತು ತಪಸ್ತಪ್ತಶರೀರನಾಗಿ ನಿಜಾಯುರವಸಾನದೊಳೊಂದು ತಿಂಗಳ್ವರಂ ಮರಣಮಂಡಲದಂತಿರನಶನಕ್ಷೇತ್ರನಾಗಿ ನೋಂತು ಕಡೆಯೊಳೆನ್ನ ತಪಃಫಲನುಂಟ ಪ್ಪೊಡಾನನ್ಯಜನ್ಮದೊಳಾರ್ಗಮಜೇಯನುಮತಿಸುಭಗರೂಪಸೌಂದರ್ಯನುಮಶೇಷಧರಾ ವಲ್ಲಭಜ್ಯಾಯನುಮಾಗಿ ಪುಟ್ಟುವನಕ್ಕೆಂದು ನಿಶ್ಚಯಿಸಿ

ತೋಱಿ ನಟಿಯಿಸುವ ಜೋಹವ
ನೇಱಿಸಿ ಕೊಳಲಿರ್ದ ಜೋಹದುದ್ದೆಸದಿಂದಂ ।
ಜಾಱಿಸುವಂತಿರೆ ತಪದಿಂ
ತಾಱಿದ ತನುವಂ ನಿಧಾನದಿಂ ಮುನಿ ಬಿಟ್ಟಂ ॥ ೨೬ ॥

ಅಂತು ಮುಡುಪಿ

ಕಟ್ಟಿತನಾರ್ಗಂ ಕಳೆಯ
ಲ್ಕೆಟ್ಟನೆ ಬಾರದವೊಲಂತು ನೆಗೞ್ದುಗ್ರತಪಂ ।
ಕಟ್ಟಿದ ಪುಣ್ಯದ ಫಳದಿಂ
ಪುಟ್ಟಿ ಸಹಸ್ರಾರಕಲ್ಪದೊಳ್ ಸುರನಾದಂ ॥ ೨೭ ॥

ಮದನೋದ್ದೀಪನ ಪಿಂಡದಿಂ ಕಡೆದರೋ ಕಣ್ಣಿಟ್ಟರೋ ಚಂದ್ರಬಿಂ
ಬದ ಸೌಂದರ್ಯದೆ ಬಣ್ಣವಿಟ್ಟರೊ ವಸಂತಶ್ರೀವನಾಮೋದಸಾ ।
ರದಿನೆಂಬಂತಿರೆ ಕಂಪು ಸೊಂಪು ಸೊಬಂಗಿಂಪಂ ಪೆತ್ತ ವೃಂದಾರಕಂ
ಪದಿನೆಂಟಬ್ಧಮಿತಾಯು ನಾಲ್ಕುಮೊಟಿನುದ್ದಂ ಕೂಡೆ ಕಣ್ಗೊಪ್ಪಿದಂ ॥ ೨೮ ॥

ನವರತ್ನವಿಮಾನಚ್ಛವಿ
ದಿನಮುಂ ಬಾಸಣಿಸೆ ಧವಳತನುರುಚಿಯಿಂ ವಾ ।
ಸವಚಾಪದ ಮಂಡಪದೊಳ್
ನವೇಂದುವಿರ್ಪಂತಿರಿರ್ದನಾ ದಿವಿಜೇಂದ್ರಂ ॥ ೨೯ ॥

ಪಾಡುವ ಸುರಗಣಿಕಾಜನ
ಮಾಡುವ ದೇವಾಂಗನಾಜನಂ ಭಾಜನೆಯಂ ।
ಮಾಡವಮರೀಜನಂ ತೇಂ
ಕಾಡಿಸುವುದು ರಾಗರಸದೊಳಮರನ ಸಭೆಯಂ ॥ ೩೦ ॥

ಅಂತಾ ದೇವಂ ದೇವಲೋಕಸುಖಾನುಭವಸುಧಾಂಬುಧಿಯೊಳೋಲಾಡುತ್ತಮಿರ್ದಲ್ಲಿ ತನ್ನಿಂ ಮುನ್ನಂ ಪ್ರತೀಂದ್ರನಾಗಿ ಪುಟ್ಟಿರ್ದ ಮಹಾಬಲಚರಾಮರೇಂದ್ರಂ ಪ್ರಾಕೃತಜನ್ಮದೊಳ್ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ಬಡಗಣತಡಿಯ ವತ್ಸಕಾವತೀವಿಷಯದೊಳಾನಂದಪುರಮನಾಳ್ವ ಮಹಾಬಳನೆಂಬ ಮಹೀವಳಯವಲ್ಲಭನಾಗಿರ್ದು

ರಸೆಗೆಲ್ಲಂ ಶ್ರೀಪ್ರಭಾಪಾಲನ ಜಿನರ ಸಭಾನವ್ಯದಿವ್ಯಾಂಬುದಂ ಧ
ರ್ಮಸುಧಾಂಭೋವರ್ಷಮಂ ಮಾಣದೆ ಕಱೆವೆಡೆಯೊಳ್ ತನ್ನ ಹೃಚ್ಚಾತಕಂ ಸೇ ।
ವಿಸೆ ಸಮ್ಯಕ್ತ್ವಮಂ ನಿರ್ಮಲಘನರಸಮಂ ನಿರ್ಭರಾನಂದದಿಂದಾ
ಱಿಸಿ ಕೊಂಡತ್ತಂಗಭೋಗಾವನಿಚರಣತೃಷಾಪೀಡೆಯಂ ಕ್ರೀಡೆಯಿಂದಂ ॥ ೩೧ ॥

ಅಂತು ತಿಳಿದ ತತ್ವವಿಚಾರಂ ಸಂಸಾರಮನಸಾರಂ ಮಾಡೆ ನಿರ್ವೇಗಪರನಾಗಿ

ಈತನಿಂದು ತೊಱೆದಂ ಭವದಿಂದಂ
ಜಾತರೂಪಧರನಾದನೆನುತ್ತಂ ।
ಭೂತಳಂ ನುಡಿಯೆ ನಿಶ್ಚಲಚಿತ್ತಂ
ವೀತರಾಗಮುನಿಮಾರ್ಗಮನಾಂತಂ ॥ ೩೨ ॥

ಅಂತು ಶೀಲಗುಣವ್ರತಾಚಾರಂಗಳುತ್ತರೋತ್ತರಮಾಗೆ ಸಿಂಹನಿಃಕ್ರೀಡಿತಾದ್ಯುಗ್ರೋಗ್ರತಪದೊಳ್ನೆಗಳ್ದು ಕಾಲಾಂತರದೊಳೊಂದು ತಿಂಗಳ್ ಸನ್ಯಸನವಿಧಿಯಿಂ ದಂಡಿತಕರಣನಾಗಿ ಪಂಡಿತಮರಣದಿಂ ಮುಡುಪಿ ರತ್ನದಂತಿರಾಕಲ್ಪದೊಳುದಯಿಸಿರ್ದನಾ ಮಹಾಬಳಚರೇಂದ್ರನುಮಿತರೇತರ ಪ್ರೀತಿಯಿಂ ಸಮನಿಸಿದ ಸೌಹಾರ್ದದೊಳ್ ದೇವಲೋಕಶೇಖರರಾಗಿರ್ದರ್. ಇತ್ತ ಜಂಬೂದ್ವೀಪದ ಭರತಕ್ಷೇತ್ರದೊಳಖಿಳಸುಖಮುಖದ್ವಾರಂ ದ್ವಾರಾವತೀಪುರಂ ಪುರಂದರಪುರೀವಿಳಾಸಮಂ ಪೆಸರ್ಗೊಂಡಂತೆಮೆಱೆದಿರ್ಪುದಲ್ಲಿ

ಸುರರಾಜರ್ಪದಿನಾಱು ಕಲ್ಪದವರ್ಗಂ ಸ್ತ್ರೀರತ್ನಮಂ ಸಾರ್ಚುತಿ
ರ್ಪಿರವಿಂ ಮನ್ಮಥಸೃಷ್ಟಿಯಂತೆಸೆವ ಮಾಹೇಂದ್ರಾಗ್ರದಿಂ ಬಂದ ನಿ ।

ಜರನಾ ನಿರ್ಜರೆಯುರ್ಜಯಾವತಿಯುಮಂತಾ ಸೀತೆಯುಂ ಪೆಂಡಿರಾ
ಗಿರೆ ತೇಜಃಪ್ರಚುರಪ್ರಭಂ ಧರೆಯುನಾಳ್ದಂ ಸಂದ ಸೋಮಪ್ರಭಂ || ೩೩ ||

ವಿತತೋರಸ್ಥಳವಕ್ತ್ರಪಂಕರುಹದೊಳ್ತಮ್ಮಿರ್ವರುಂ ಶ್ರೀಸರ
ಸ್ವತಿಗಳ್ಗಣ್ಗಳವಟ್ಟ ವೀರವಿಜಯಶ್ರೀಭಾಮೆಯುರ್ಸಂದ ದೋ।
ರ್ದ್ವಿತಯಸ್ತಂಭದೊಳೆಂಬಿನಂ ಮೆಱೆದು ತಮ್ಮೊಂದಾನುಕೂಲ್ಯಂ ಜಯಾ
ವತಿಯುಂ ಸೀತೆಯುಮಿರ್ಪಿನಂ ಸೊಬಗನಾಳ್ದಂ ತಾಳ್ದಿ ಸೋಮಪ್ರಭಂ || ೩೪ ||

ಎರಡುಂ ಪಕ್ಕದೊಳೊಪ್ಪೆ ಕಲ್ಪಲತೆಗಳ್ಕೈಗೊಂಡ ಮಂದಾರಭೂ
ಮಿರುಹಂ ತಾನೆನೆ ಪೂರ್ವಜನ್ಮಜನಿತಸ್ನೇಹಂಗಳಿಂ ಬಂದ ಪ।
ಟ್ಟರಣಾಲೋಲ ವಿನೀಲಕುಂತಳೆಯರಿರ್ವರ್ಲೀಲೆಯಿಂದೊಪ್ಪೆ ಮೂ
ರ್ತಿಯುಮಂ ತಾಳ್ದಿದ ಕಾಮದೇವನಲರ್ವಿಲ್ಲಂತಿರ್ಪನಾ ಭೂಭುಜಂ || ೩೫ ||

ಏತೆಱದಿಸೆಂದುಮಱಿಯೆಂ
ಸೀತಾದೇವಿಗೆ ತನೂಜದೋಹಳಚಿಂತಾ।
ಪಾತಂ ತಂದುದು ಘರ್ಷಿತ
ಜಾತೀಮಾಳಿಕೆಯ ದೊರೆಗೆ ತನ್ಮಾಳಿಕೆಯಂ || ೩೬ ||

ಪಡೆದಮರ್ದಪ್ಪಿಕೊಂಡು ಬಿಗಿಯಪ್ಪಿ ತನೂಜನ ಮೆಯ್ಯ ಧೂಳಿ ಪ
ತ್ರದ ನಳಿತೋಳ್ಗಳೇಕೆ ಮೊಲೆಯುಂಬ ಕುಮಾರನ ಕಣ್ಣ ಕಜ್ಜಳಂ।
ಪುದಿಯದುರೋಜಮೇಕೆ ಪರಿಚುಂಬಿಸೆ ಕಂದನ ಕೈದೊಡಂಕೆ ಸೂ
ಸದ ಕುರುಳೇಕೆ ಬೇಱೆ ಪೊಱೆಯೇಕಿವಱಂ ಕುಲವೆಣ್ಗೆ ಲೋಕದೊಳ್ || ೩೭ ||

ಮಗನಂ ತೊಟ್ಟಿಲೊಳಿಟ್ಟು ತೂಗಿ ನಲವಿಂದಂ ಜೋಗುಳಂಬಾಡಿ ಮೆ
ಲ್ಲನೆಯಿಂ ಮುದ್ದುಮೊಗಂ ತುಳುಂಕೆ ಪರಸುತ್ತುಂ ನೋಡಿ ಬಾ ದೇವ ಬಾ।
ಜಗತೀವಲ್ಲಭ ಬಾರ ಮಾಣಿಕವೆ ಬಾರೆನ್ನಾಸೆಯೆಂದೆತ್ತಿ ಮೆ
ಯ್ದಿಗೆವನ್ನಂ ಮೊಲೆಯೂಡಿ ತೂಪಿಱನ ಪುಣ್ಯಂ ನೋನವಳ್ಗಕ್ಕುಮೇ || ೩೮ ||

ಮೊಲೆಯುಣುತುಮುತ್ತರೀಯಮಂ
ಚಲದಿಂದೆ ಮುಸುಂಕಿಕೊಂಡು ಭುಜದೊಳ್ ಬಂದ।
ಗ್ಗಲಿಸಿದೊಡಾನಂಜುವೆನ
ವ್ವಲವ್ವಲೆನೆ ನಗುವ ಮಗನನೆಂದೆತ್ತಿದಪೆಂ || ೩೯ ||

ಅರಸನುಮಾನುಂ ಕೈಗೊ
ಟ್ಟೆರೆ ಪಟ್ಟಡಿಯಿಡುತೆ ಮತ್ತ ಮಣಿಕುಟ್ಟಿಮದೊಳ್ ।
ಬರೆ ಪಿಂದೆ ನಿಲಿಸಲೊಲ್ಲದೆ
ಮುಂದೆತ್ತಿಸಿಕೊಳ್ವ ಕಂದನೆಂದಾದಪನೋ ॥ ೪೦ ॥

ಎಂದಿಂತನಂತಚಿಂತಾಕ್ಷುಭಿತಸಂಕಲ್ಪಶರಧಿಕಲ್ಲೋಲತರಂಗಿತಾಂತರೆಯಂತಾಗಿರ್ದ ವಲ್ಲಭೆಯಲ್ಲಿಗರಸಂ ಬಂದು ಮೆಲ್ಲನೆ ಪೊರ್ದಿ ಸಾರ್ದು ತಕ್ಕೈಸಿ ಕಂಬನಿಗಳಂ ತೊಡೆಯುತ್ತುಮಾಗಳಿಂತೆಂದಂ

ದೊರೆವೆತ್ತಪ್ರರ್ದು ನಿಮ್ಮ ನಣ್ಪು ಸಪತೀತ್ವಪ್ರಭಾವದಿಂದೊರ್ವರೊ
ರ್ವರಜಾತಕ್ಷುಧೆಗೊಂಡು ನಿಪ್ರೆಗೊಱಗುತ್ತಿರ್ದಪ್ಪಿದಂತಿಲ್ಲ ಮ ।
ಚ್ಚರಮೊಂ ನಿಮ್ಮ ವಿಲೋಕಮಾಗಿ ನಡೆಯುತ್ತಿರ್ದಪ್ಪಿನಂತಿಲ್ಲನಾ
ದರಮಿಂತೀ ಪರಿಖೇದಮೇತಱದಿನಾಯುಷ್ಮತ್ಪ್ರಸವಿನಸ್ತನೀ ॥ ೪೧ ॥

ನೀನಿಂತು ನಿರ್ನಿಮಿತ್ತ
ಗ್ಲಾನಿಸಿದಾಘದೊಳೆ ಮಱುಗಿ ಬಱದಾದೊಡೆ ಮಾ ।
ನ್ಯಾನಸಮರಾಳಲೀಲೆಗ
ದೇನಾಸೆ ಸರೋಜಕುಮುದದಳಮುಖನಯನೇ ॥ ೪೨ ॥

ಎಂದು ನೊಂದು ಮನಮುಂ ಮುಂತಿಟ್ಟು ಬಹುಪ್ರಕಾರದಿಂ

ನುಡಿಯಿಸಿದೊಡೆ ಮತ್ತಿನಿಯ
ಳ್ನುಡಿಯದೆ ಮಱುಮಾತನಶ್ರುವಿಹಿತವಿಲೋಕಂ ।
ಜಡಭರಿತಕುಮುದದಳಮೆನೆ
ಕಡೆಗಣ್ಣಿಂ ನೋಡಿದಳ್ ಮಯಸ್ಸೈಯ ಮುಖಮಂ ॥ ೪೩ ॥

ಅಂತು ನೋಡಿದ ಕಣ್ಣಱದಾ ಕಾಂತೆ ಮಹೀಕಾಂತನೊಳ್ ದೇವರ ಪಯಿಯಿಂ ದೇವಿಯಗರ್ಭವ್ರತದೞೊಳಂ ಕೊಱತೆಯಿಲ್ಲ ನಿನ್ನೆ ಬಂದ ನಂದೀಶ್ವರಾಷ್ಟಮಿಯೊಳಷ್ಟಮ ಲೋಕಚೂಡಾಮಣಿಯ ವಂದನಾಭಿಷವಣಪೂಜಾನಿಮಿತ್ತಂ ಚಾರಣರವತಾರಂ ಮಹೀಧರಕ್ಕೆ ನಿಮ್ಮೊಡನೆ ಬಿಜಯಂಗೆಯ್ದು ಮಗುಳ್ವಾಗಳಾಂ ಬೆರಸು ಪುಷ್ಪರಥಾರೂಢೆಯಾಗಿ ತದ್ಧರಾಧರದ ಪರಿಸರ ಪ್ರದೇಶದೊಳ್ ಮರಾಳೀಮರಾಳಶಿಖಿನೀಮಯೂರ ಹರಿಣೀಹರಿಣ ಮಹಿಷೀಲುಲಾಯ ಕರಿಣೀಕರೀಂದ್ರ ಸಿಂಹೀಮೃಗೇಂದ್ರ ಕ್ರೀಡೆಗಳಂ ನೋಡುತ್ತು ಬರೆವರೆ

ಕಡೆವಾಯಂ ಬಿರ್ಚಿ ಬೆನ್ನಂ ಕುಸಿದು ನೆಗಪಿ ವಾಳಾಗ್ರಮಂ ಬೀಸೆಯಿಂ ಧೂ
ೞಡುತುಂ ಶೈಲಾಗ್ರದೊಳ್ಸೊಕ್ಕುಱಿಸಿ ಮುಱುಕದಿಂದೀಂಬ ಸಿಂಹೀಕಿಶೋರಂ ।
ನಡುಸೂಲೊಳ್ಸಿಕ್ಕಿ ಕಣ್ಣಂ ತೆಱದಿಭಶಿಶುವಂ ತಾರಲೊಳ್ಕಂಡು ಕಾಯ್ವಂ
ನಡುಪಾಯ್ದಾತಾಯ್ಗೆ ದುಃಖಪ್ರಸವಸಮಯದೊಳ್ತಂದುದಂತೊಂದಲಂಪಂ ॥ ೪೪ ॥

ಅದಂ ಕಂಡು ನೀಡುಮಚ್ಚರಿವಟ್ಟು ನೋಡಿ ಮಾಣದೆನ್ನಂ ನೂಂಕಿ ತೋಱಿ ಕೌತುಕಂಬಟ್ಟು ತಲೆಯಂ ತೂಗಿ

ಪಡೆವೊಡೆ ಸಿಂಹಿವೋಲ್ಪಡೆವುದಾತ್ಮಜರಂ ಒಱರ್ದೇಕೆ ಮಕ್ಕಳಂ
ಪಡೆದಪೆನೆಂದು ಹಿಗ್ಗುವರೊ ಪುಟ್ಟಿದ ಮುನ್ನಮೆ ಜಾತಿವೈರದಿಂ ।
ಸಿಡಿಲೆಱಿಪಂದದಿಂದೆಱಗಿಪ್ಪುದು ಹಸ್ತಿಗೆ ಶತ್ರುಸಿಂಹನಂ
ಪೊಡವಿಗಧೀಶನಂ ಪಡೆಯದಾಕೆಯ ಜೀವನಮುತ್ತೆ ನಿಷ್ಫಲಂ ॥ ೪೫ ॥

ಇಂತೆನ್ನ ಕೂಡೆ ನುಡಿದಳ್
ದಂತಾವಲಗಮನೆ ಬಂದು ರಾಜ್ಯಾಲಯದೊಳ್ ।
ಚಿಂತಾಸಹಚರಿಯೊಡನೇ
ಕಾಂತಮನಾಡುತ್ತುಮಿರ್ಪಳಾಸದನಱಿಪೆಂ ॥ ೪೬ ॥

ಎಂದು ನುಡಿದ ಕೆಳದಿಯ ಮಾತು ಭೂತಳಾಧಿಪನ ಚೇತೋಭೂಮಿಯೊಳ್ ಪುತ್ರಲಾಭೋದ್ಯೋಗಬೀಜಾವಾಪಮನೊಡರ್ಚೆ ಬಿಚ್ಚನೆ ಸುಯ್ದು ಘನರವಹಿತಹೃದಯಂ ವಲ್ಲಭೆಯನಿಂತೆಂದಂ

ಅದು ಸುಕೃತಾನುರೂಪಮದು ನಮ್ಮ ಮನೋರಥದಂತೆ ತಿರ್ದಿ ಬ
ರ್ಪುದೆ ದೊರೆಕೊಳ್ವುದಕ್ಕೆ ದೊರೆಕೊಳ್ಳದುದಕ್ಕಧಿಕರ್ವಿವೇಕಿಗ ।
ಳ್ದಪರೆ ದೇವಿ ಮಾಣ ಮನದುಮ್ಮಳಮಂ ಭವದೀಯದಾನಧ
ರ್ಮದ ಸುದೃಢವ್ರತಾಚರಣವೃತ್ತಿಗೆ ಕೂಡದುದೇಂ ಮನೋರಥಂ ॥ ೪೭ ॥

ಅದಲ್ಲದೆಯುಮಾಗಳ್

ಅವಿರಳಪಕ್ಷ್ಮನೇತ್ರೆ ನಿನಗೀ ದಿವಸಂ ಮೊದಲಾಗಿ ಮುಂದೆ ಸಂ
ಭವಿಸುವ ಸತ್ಫಲೋದಯನಿಮಿತ್ತಮನಿಲ್ಲಿ ಬರುತ್ತೆ ಕಂಡೆನೀ ।
ಭವನದ ರತ್ನಮಂಡಪದ ಶಾಂತವಿಭಾಗದೊಳಿರ್ದು ತತ್ತ್ರಿಯಿ
ಕ್ಕುವ ಗೃಹಕೋಕಿಲಾಂಗನೆ ನಿಜಪ್ರಿಯನಂ ಕರೆಯುತ್ತುಮಿರ್ದುದಂ ॥ ೪೮ ॥

ಎಂದು ನುಡಿದ ಚಿತ್ರವಲ್ಲಭನ ಸಂತರ್ಪಣವಚನಸೆಂಬೀ ತಂಬೆಲರ ಶೀಟದಿಂ ಪುನದುಮ್ಮಳಿಪೆಂಬ ಘರ್ಮೋದ್ರೇಕಮಂ ಘಣ್ಣನಾಱಿಸೆ ಕಣ್ಮಲರೆಂಬ ಕಮಲದೊಳಾನಂದಾಶ್ರುಬಿಂದು ಮಕರಂದಮಂ ಸಂಧಿಸುವಿಸನುನಂತರಮಾ ಪಲ್ಲವಪಾದಯುಗಳೆ ಚತುರ್ಥದಿನದೊಳ್ ಮಂಗಳಮಜ್ಜನಪವಿತ್ರೀಭೂತಗಾತ್ರಲತಿಕೆಯುಂ ಧವಳಪ್ರಾಸಾದ ಸದಿಮುಲ್ಲಾಸವಿಲಾಸೆಯುಮಾಗಿ ಪಾಲ್ಗಡಲ ತೆರೆಯೊಳಗೆ ಮುಳುಂಗಿ ನೆಗೆದ ಚಂದ್ರಕಳಾಲಕ್ಷ್ಮಿ ಶಾರದನೀರದಂ ಪದಮನೇಱುವಂತೆ ಸೆಜ್ಜೆಯುಜ್ಜ್ವಲಿಪ ಧವಳಾರಮನೇಱಿ ನಿಜವಲ್ಲಭನ ಸೂಟಿಗ್ಗೆ ವಂದು ಸುರತಸುಖಯಾಮಿನೀವಿರಾಮಸಮಯದೊಳ್

ಕಳಶಂ ಕನ್ನಡಿ ಬಾಸಿಗಂ ತಿಳಿಗೊಳಂ ಸಿಂಹಾಸನಂ ಚಾಮರಂ
ಕಳಭಂ ಪೂರ್ಣಸುಧಾಂಶು ಕೇಸರಿ ಗಜೇಂದ್ರಂ ಭಾನು ರತ್ನಾಕರಂ ।
ಬೆಳಗೆಯ್ದೆಳ್ಗೊಡೆ ಲಕ್ಷ್ಮಿ ರತ್ನತತಿಯಿಂದೊಪ್ಪಿರ್ದಮಂ ಸೀತೆ ಕಂ
ಡಳಿರುಳ್ಪಿಂಗಲೊಡರ್ಚೆ ಷೋಡಶಶುಭಸ್ವಪ್ನಂಗಳಂ ಮಂಗಳಂ || ೪೯ ||

ಅಂತು ಕಂಡ ಕನಸುಗಳನಾ ಸೀತಾದೇವಿ ನಿಜಕಾಮುಪ್ರೇಮಭೂಮಿಯಪ್ಪ ಸೋಮಪ್ರಭಮಹಾರಾಜಂಗೆ ಪೇಟ್ವುದುಮಾ ನೃಪೇಂದ್ರ ಪರಮಾನಂದಸಂದರ್ಶಿತ ಹೃದಯನಾಗುತ್ತಮುಮವಱ ಫಲಮಸಿಂತೆಂದು ನುಡಿದಂ

ಪರಮಫಲಪ್ರದಮಿಂತಿವು
ಸರಸಿಜಮುಖಿ ನಿನ್ನ ಗರ್ಭದೊಳ್ಪುಟ್ಟದಪಂ ।
ಪುರುಷೋತ್ತಮಂ ಶಲಾಕಾ
ಪುರುಷಂ ರಿಪುದನುಜಮರ್ದನಂ ಚಕ್ರಧರಂ || ೫೦ ||

ಎಂದು ನುಡಿದ ಚಿತ್ರಪ್ರಿಯನ ಪರಮಪ್ರಮೋದಂ ತನ್ನ ನಿಜಸ್ವಾಂತದೊಳ್ನಿಲಸೆ

ಪದಪಿಂ ಬಂದು ಜಯಾವತೀಜಠರದೊಳ್ಮುನ್ನಂ ಸಹಸ್ರಾರಕ
ಲ್ಪದೊಳೊಪ್ಪಿರ್ದಮರ ಮಹಾಬಳಚರಂ ಪೊಕ್ಕಿರ್ದು ಕೈಸನ್ನೆದೋ ।
ಱಿದವೊಲ್ಕೆಂಬಿಡಿದಟ್ಟಿಱಿಂ ನೆಲಸಿದಂ ತತ್ಕಲ್ಪದಿಂ ಬಂದು ತ
ತ್ರಿದಶೇಂದ್ರಂ ವಸುಷೇಣಭೂಭುಜಚರಂ ಸೀತಾಂಬಿಕಾಗರ್ಭದೊಳ್ || ೫೧ ||

ಆ ಸಂತೋಷವರ್ಧನಾವಸರದೊಳ್

ಸುತಲಾಭಾನುಭವಕ್ಕೆ ವಲ್ಲಭರತಪ್ರೇಮಾನುಭೋಗಕ್ಕೆ ತ
ತ್ಪತಿಪತ್ನೀದ್ವಯಮೇಕಮೆಂಬಿನೆಗಮಂತರ್ವರ್ತಿನಿಯಾಗಿರ್ದು ಗ |
ರ್ಭತನೂಜಂ ಪೊಱಮಟ್ಟನೆಂದು ನಲಿವನ್ನಂ ಧಾತ್ರಿಮುನ್ನಂ ಜಯಾ
ವತಿ ಪೆತ್ತಳ್ಬಲದೇವನಂ ರಿಪುಕುಲಾರಣ್ಯಾವನೀದಾವನಂ || ೫೨ ||

ತ್ಯಕ್ತಾಖಿಲದೋಷಂ ಸು
ವ್ಯಕ್ತಾಂಗಂ ತಾಯ ಸೋಂಕಿಲೊಪ್ಪಿತ ಕಾಯಂ |
ಶುಕ್ತಿಕೆಯ ಸೋಗೆಯೊಳ್ ನವ
ಮುಕ್ತಾಫಲದಂತೆ ತೊಳಗುತಿರ್ದಂ ತನಯಂ || ೫೩ ||

ಅಂತು ಮೆಱೆವ ಬಾಲಕನ ವದನಾರವಿಂದದೊಳಾತ್ಮಾವಲೋಕದ್ವಿರೇಫವಾ ಬಾಲ್ಯರಸಮಕರಂದದಿಂ ತಣಿದು ಚೇತೋಮರಾಳಂ ಸ್ನೇಹಲೀಲೆಯಿಂ ನಲಿದು ನಿರ್ವರ್ತಿತ ಜಾತಕರ್ಮವಿಧಾನನಾಗಿ ದಶಮದಿನದೊಳರ್ಭಕಂಗೆ ನಿರ್ಭರಪ್ರಭಾವಿಭಾಸಿಯಪ್ಪುದಱಿಂ ದೋರ್ವಳದೊಳ್ ಸರ್ವತೋಭದ್ರನಪ್ಪುದಱಿಂ ಬಲಭದ್ರನುಂ ಲೋಕಾವಲೋಕಾಭಿರಾಮನಪ್ಪುದಱಿಂ ರಾಮನೆಂಬಿನ್ವರ್ಥನಾಮಂಗಳನಿಟ್ಟುತ್ಸವದ ಪರಮಸೀಮೆಯಿಂದಮಿರೆ

ಒಸಗೆಯ ಮೇಲೆ ಮತ್ತೊಸಗೆ ಪೊರ್ಕುಳಿ ಪೆರ್ಚಿನ ಮೇಲೆ ಪೆರ್ಚು ಸಂ
ತಸಿಕೆಯ ಮೇಲೆ ಸಂತಸಿಕೆ ಮಂಗಳಾಚಾರದ ಮೇಲೆ ಮಂಗಳಂ |
ಪಸರಿಸುವಂತಿರಗ್ರಜೆ ತನೂಭವನಂ ಪಡೆದುತ್ಸವಾನಕಂ
ಮಸುಳದ ಮುನ್ನೆ ಸೀತೆ ಪಡೆದಳ್ಮೃಗನಂ ಸರಸೀಜನಾಭನಂ || ೫೪ ||

ಆಗಳರಸನಾ ಕುಮಾರಂಗೆ ಜಾತಕರ್ಮನಿರ್ಮಾಪಣಮಹೋತ್ಸವಾನಂತರಂ ನಾಮಕರಣಮಂ ಶುಭವಾಸರದೊಳಷ್ಟೋತ್ತರಶತಾಖ್ಯಾತನೀತಂ ಪುರುಷೋತ್ತಮನುಮೆಂಬ ಪೆಸರ್ಗಳಸದಳಮೆಸೆಯೆ

ಕಳಹಂಸಧವಳನಗ್ರಜ
ನಳಿನೀದಳಶ್ಯಾಮನನುಜನಿರ್ವರ ಗಡಣಂ |
ಬಿಳಿಯು ಕರಿಯಾಲಿಯುಂತು
ಜ್ವಳಿಸಿರೆ ಲೋಕಕ್ಕೆ ತಾಮೆ ಲೋಚನಮಾದರ್ || ೫೫ ||

ಬಳೆಯುತ್ತಿರ್ದಮ ಕೂಡೆಕೂಡೆ ಒಳಿವಾಗಳ್ ಶಸ್ತ್ರಶಾಸ್ತ್ರಾದಿ ಸ
ತ್ಕಳೆಗಳ್ ಪೌರುಷಮೊರ್ಗೊರ್ಮೆ ಶಿಶುಭಾವಂ ಪಿಂಗೆ ಮೆಯ್ಯೊಡೆ ಮಾಂ |

ಸಳಮಾಯ್ತನ್ವಿತ ರಾಜನೀತಿಗೆ ನವಪ್ರಾಗಲ್ಭ್ಯದೊಳ್ನಾಡೆ ಕೌ
ಶಳಮಾಯ್ತಿಂತು ಕುಮಾರರುರ್ವಿಗವತಂಸೀಭಾವದಿಂದೊಪ್ಪಿದರ್ ॥ ೫೬ ॥

ಐರಾವತಮುಮನಂ ಜನ
ವಾರಣಮುಮನಡ್ಡಮಿಕ್ಕಿದಂತಿರೆ ಬಲನುಂ
ನಾರಾಯಣನುಂ ಜಗಮುಂ
ಕೂರಿಸಿದರ್ ಕಾಯ ಬಲದೊಳಂ ಬಣ್ಣದೊಳಂ ॥ ೫೭ ॥

ಜಗುನೆಯ ಕಡಲೊಳ್ತಾರಾ
ಮೃಗಧರಮಂಡಲದ ಕಾಂತಿ ಮಾರ್ಪೊಳೆದವೊಲೇ ।
ನುಗಿಬಗಿಮಾಳ್ಪುವೊ ಪೆಂಡಿರ
ಬಗೆಯುಂ ಕೃಷ್ಣನ ವಿಲೋಲಲೋಚನರುಚಿಗಳ್ ॥ ೫೮ ॥

ನಳಿನಾಕ್ಷಂಗೆ ಕುಮಾರರಾಜ್ಯಮಧಿನಾಥಂ ತಂದೆ ಸೋಮಪ್ರಭಂ
ಗಳವಟ್ಟುತ್ತ್ತ ವಿದಗ್ಧರಾಜ್ಯಮಧಿರಾಜ್ಯಶ್ರೀಯನಾಳ್ದಂ ಜಗ ।
ಜ್ಜಳಜಾರ್ಕಂ ಕವಿತಾನಟೀನಟನಶೈಲೂಷಂ ಜಯಶ್ರೀವಧೂ
ಕುಳಗೇಹಂ ಬಲಭದ್ರನುಜ್ಜ್ವಲಯಶಂ ಸಾಹಿತ್ಯರತ್ನಾಕರಂ ॥ ೫೯ ॥

ನಾರದ ನಾರದಂ ನುಡಿದರ್

ಶ್ರೀರಾಮಂ ಹಲಹಸ್ತಸ
ರೋರುಹನವನತನೃಪಾಲದಂಭೋಳಿ ಪ್ರಾ।
ಕಾರಂ ನೀತಿನದೀನದ
ಪಾರಾವಾರಂ ವಿನೇಯಜನಮುಖತಿಲಕಂ ॥ ೧ ॥

ಅಂತು ಬಲದೇವನುಂ ಶ್ರೀಕಾಂತನುಮೌದಾರ್ಯಶೌರ್ಯಧೈರ್ಯಂಗಳ್ ತಮ್ಮಂ ತೊಳಗಿ ಬೆಳಗೆ ಜಗದೊಳ್ ಸಂತೋಷದಿಂ ದ್ವಾರಾವತಿಯೊಳಿರ್ಪಿನಮಿತ್ತಲ್

ಒಡಸತ್ತಂದಿನ ಚಂಡಶಾಸನನೆ ಘೋರಾಕಾರಸಂಸಾರದ
ಟ್ಟಿಡಲೊಳ್ಪಟ್ಟು ಮುಟ್ಟಿಂಕಿ ಬಂದು ಭವನಾವಾಸಕ್ಕೆ ದೈತ್ಯಾನ್ವಯಂ।
ಬಡೆದಲ್ಲಿಂದಮೆ ಬಾಣರಾಸಿವ್ರೊಟಿಲೊಳ್ ಧಾತ್ರೀತ್ರಿಖಂಡಕ್ಕೆ ತಾ
ನೊಡೆಯಂ ಭೂಪರೊಳರ್ಧಚಕ್ರಿ ಎನೆ ರಾಜಾಮ್ನಾಯದೊಳ್ಕೂಡಿದಂ ॥ ೨ ॥

ಪೆಸರ್ವೆತ್ತಾ ಮಧು ಕೃಷ್ಣನಿಂ ಮಡಿದಪಂ ಕೃಷ್ಣಂ ಬಟಿಕ್ಕರ್ಧಚ
ಕ್ರಿ ಸಮಸ್ತಾವನಿಗಾಗಿ ಸಲ್ವನವಧಿಸ್ಥಾನಕ್ಕೆ ಕಾಲಾಂತದೊಳ್।
ದೆಸೆಗೆಟ್ಟಾತನ ಶೋಕದಿಂ ಬಳಸಿ ಬಂದಾ ಸುಪ್ರಭಂ ಕಂಡು ಬೋ
ಧಿಸೆ ಸೋಮಪ್ರಭರಲ್ಲಿ ದೀಕ್ಷೆನಡೆದಾಳ್ವಂ ಮುಂದೆ ನಿರ್ವಾಣಮಂ ॥ ೩ ॥

ಈ ಕಥೆಯನಿಂತೆ ಕೇಳ್ದಿನ
ನಾಕುಲಮೆಂದಾಕೆ ಪೇಟ್ದೊಡೆನಗವಗತಮಿ।
ನ್ನಾಕಥನಮೆಂದು ಮದನಪ
ತಾಕೆಗೆ ಕಡೆಮುಟ್ಟೆ ಚಿತ್ರಲತೆ ಪೇಟ್ವಾಗಳ್ ॥ ೪ ॥

ಎನ್ನ ಮನಃಪ್ರಿಯಂ ಖಚರಸೇನೆಗೆ ನಾಯಕನಾದನಲ್ಲಿ ತಾಂ
ಮನ್ನಣೆಯಾತನಂತಱಿಪೆ[ನಾಂ ತಱಿವೆ]ನಾ ಮಧುಕೈಟಭಾಂಕನ।
ತ್ಯುನ್ನತನಣ್ಮಿನೊಳ್ಬಲದೊಳತ್ಯಧಿಕಂ ಛಲದೊಳ್ನಿರರ್ಗಳಂ
ತನ್ನ ಮಹತ್ವದೊಳ್ತೃಣ ವಿಶ [ಲ್ಕಲ ಘೂರ್ಣಿತ ವಿಶ್ವವಿಷ್ಟಪಂ] ॥ ೫ ॥

ನಿನಗೇವೇಟ್ದಪ್ಪೆನಾ ಭೂಭುಜನರಸುತನಂ ಪೇಟ್ವ ಕೇಳ್ವಂತುಟಲ್ತು
ರ್ವಿನಮೀ ತ್ರೈಖಂಡಮುಂ ತ್ರೈಭುವನದನಿತು ಚಕ್ರೇಶ್ವರತ್ವಂ ಚತುರ್ಸಾ।

ಕಿನಿಕಾಯಕ್ಕೆಂಬವೊಲ್ದುರ್ಜನಸುಜನಜನಂ ನಿಗ್ರಹಾನುಗ್ರಹಕ್ಕೆ
ಪ್ಪಿಸಮೇಕಚ್ಛತ್ರದಿಂ ದಳ್ಳಿಸಿ ಮಧು ಮಧುಮತ್ತಂಬೊಲುದ್ವೃತ್ತನಾದಂ ॥ ೬ ॥

ಬೆಸಸೇಟ್ಟಿಂ ದಿಗಧೀಶರಂ ಬನದ ಬಾಳ್ಗಂಬಂಗಳೊಳ್ತಂದು ಕ
ಟ್ಟಿಸಸೇಟ್ಟಿಂ ದೆಸೆಯಾನೆಯಂ ತನಗವಾಱೆೞೆಕೆ ಸೂರ್ಯಂಗೆ ವಾ।
ಹಸಮೂಹಮಂ ಪುಗಿಸೆಂದು ಮಂದುರಮನೆಂಬಂ ದೈತ್ಯನಿಟ್ಟೆತ್ತು ಸು
ಟ್ಟಿಸಿ ತೋರ್ಪಾತನ ಬೊಟ್ಟು ಸೋರ್ಕುವರಿಗಂ ಪ್ರತಾಪಾಗ್ನಿಯಿಂ ॥ ೭ ॥

ಮೇರುವಿನ ಹಳಿಗಳಂ ಭಂ
ಡಾರಕ್ಕೆನ್ನಾಣೆ ವಜ್ರಧಾರೆಗಳಿಂದಂ।
ಕಾರಿಸಿ ಸಲಿಸದೊಡೆಂದು ಬ
ಲಾರಿಗೆ ದಿವಿಜಾರಿ ರಾಯಸಂ ಬರೆಯಿಸುವಂ ॥ ೮ ॥

ಬಱಿದೆ ತಿರುಗಿದೊಡೆ ಮೞೆಯುಂ
ಕಱೆಯದೆ ವಕ್ರಿಸಿದೊಡುರ್ಚೆ ಮುಕ್ಕುವೆನೆಂದ।
ಳ್ಳಱಿಸಿ ಮಧು ತನಗೆ ಪನ್ನೊಂ
ದಱೆಯೊಳಲ್ಲದೆ ಮಿಡುಕಲೀಯನೇೞುಂ ಗ್ರಹಮಂ ॥ ೯ ॥

ಅಮರೇಂದ್ರಂ ನಿಜಹಸ್ತದಿಂದಗೆಯನಾಯ್ದುದ್ಯಾನದಿಂ ತಂದು ಕ
ಲ್ಪಮಹೀಜಂಗಳನಿಟ್ಟ ಕೇಳಿವನಮಾ ದೈತ್ಯಂಗೆ ಬಂದೆತ್ತುವಂ।
ಕಮಲಪ್ರೋದ್ಭವನಬ್ಜವೃದ್ಧಿಗೆ ಸುಧಾರೋಚಿಃಕಲಾದ್ರೋಣಿಯಿಂ
ಹಿಮವದ್ಭೂಧರವೇತ್ರದಿಂ ಗಗನಗಂಗಾವಾರಿಪೂರಂಗಳಂ ॥ ೧೦ ॥

ಆ ದಿಶಾಧಿನಾಥಯೂಥನೊಡ್ಡೋಲಗಂಗೊಟ್ಟಿರ್ದಾ ಪ್ರಸ್ತಾವದೊಳ್

ದ್ಯುನದೀತೋಯಕನತ್ಕಮಂಡಲಕರಂ ಯಜ್ಞೋಪವೀತಾಂಶುಪಾ
ವನಪಕ್ಷಂ ದಶನಚ್ಛವಿಸ್ಫುರಿತವಕ್ತ್ರಾಂಭೋಜನುದ್ಧೂತ ಭೂ।
ತಿನಿಮಗ್ನಂ ಗಗನಾಧ್ವದಿಂದಿೞಿದು ಬಂದಾಸ್ಥಾನಮಂ ಪೊಕ್ಕನ
ರ್ಜನರೋಚಿರ್ಧವಳೀಕೃತಾಭ್ರತಳ ನಾನಾ ನೀರದಂ ನಾರದಂ ॥ ೧೧ ॥

ಅಂತು ಪುಗಲೊಡಂ ಪರಿಹೃತಕೇಸರೀಸಮಾನನುಂ ಪ್ರತ್ಯೋದತವಪೀಪುಃ ಶಲಾಕನುಮಾನಮತ್ಕಿರೀಟಾಗ್ರಭಾಗನುಂ ಸಂಘಟಿತಕರಕಿಸಲಯನುಮಾಗಿ ತನ್ಮುನಿಪರಿವೃಢನನರ್ಘ್ಯಪಾದ್ಯಪುರಸ್ಸರಮುಚ್ಚಾಸನದೊಳಿರಿಸಿ ತಾನುಂ ನೀಚಾಸನದೊಳಿರ್ದು ಬೞಿಯಂ ಕ್ಷೇಮಕುಶಲಸಂಭಾಷಣಾನಂತರಂ

ಎಮ್ಮ ಪುರಾಕೃತಪುಣ್ಯಮೆ
ನಿಮ್ಮಂ ತರೆ ಬಂದಿರಾವ ಕಾರ್ಯನಿಮಿತ್ತಂ |
ಕೆಮ್ಮನೆ ಸಂಭವಿಸುಗುಮೇ
ನಿಮ್ಮ ಸಮಾಗಮಮುಮಿಷ್ಟದೈವಾಗಮಮುಂ ॥ ೧೧ ॥

ಎನೆ ನಾರದನಿಂತೆಂದಂ
ದನುಜೇಂದ್ರಂಗಖಿಲ ಭುವನಭಾಗ್ಯಶ್ರೀಭಾ |
ಜನನಂ ನಿನ್ನಂ ಕಣ್ಣಾ
ಱೆ ನೋಡಿ ಮನಮಾಱೆ ಪರಸಿ ಕಂಡುದದಱಿಪಲ್ ॥ ೧೨ ॥

ಬಂದೆವದೆಂತೆಂದೊಡೆ

ಪ್ರಿಯರ್ಗೞಿಪಿದುದನಱಿಪನ
ಪ್ರಿಯನಱಿಯದ ಮಾತನಱಿಪುವಂ ಖಳನದಱಿಂ |
ಪ್ರಿಯನಪ್ಪ ನಿನ್ನ ರಾಜ್ಯೋ
ದಯದೊಳ್ ಪೆಱರೊಡವನೆನಗೆ ನೋಳ್ಪುದಸಹ್ಯಂ ॥ ೧೩ ॥

ನಿನಗೆಂದುಂ ತೆತ್ತು ಪೊತ್ತೊಕ್ಕಲಿಗರ ಪರಿಯಾಗಿಪ್ಪ ಸೋಮಪ್ರಭಂ ನಂ
ದನರೀಗಳ್ಕೊರ್ವಿ ತಾಮುಂ ಮಲೆದಪರವರುಂ ತೇಳಕೊಂಡಂತೆ ಚಯ್ದು |
ಱಿತ್ರಿನುತಿರ್ಪರ್ ಸಿರಿನಾರಾಯಣರೆಸಕಮನೇರ್ವೇಟ್ಟಿಪೆಂ ದಳ್ಕುದಳ್ಕಿಂ
ಬಿನಮುರ್ಕಿಂ ಸೊಕ್ಕಿ ದಕ್ಕಿಂದಲೆವರಿದುರಿದಪ್ಪರ್ಕರಂ ನಂದಿದಪ್ಪರ್ ॥ ೧೪ ॥

ಆದೊಡಂ

ಕರಿಕಂ ದ್ವಿಜರೊಳ್ಕಿಂಚಂ
ಪರಜಾತಿಯೊಳಾಗೆ ತಲೆಯನೂಱುವರವರಿ |
ವರ್ಗರೊಳಂ ಕೃಷ್ಣನ ಕಾಯ್ಪು
ಬ್ಬರಮುರಿದಪುದೊರ್ಮೆ ನಿಲ್ಲದವನಲಗೊಱತೆಯೊಳ್ ॥ ೧೫ ॥

ದಾನವಮಾರಿ ದಾನವಕುಳಾಂತಕನುದ್ಧತಚಕ್ರಿಸಿಂಹಸೆಂ
ದಾನೆಯ ಕಾಲ್ಗೆ ಪೆಂಡೆಯದ ಪಾಸೆಯನಿಕ್ಕಿದನಾತನೆಂದು ಕ |
ಟ್ಟಾನೆಯುಮಂತುಟಿಲ್ಲ ಸರಿ ದಿಕ್ಕರಿಯೊಳ್ಕರಿಗಿಂದು ನಿನ್ನ ಪಾ
ದಾನತಮಾಗದೇ ಮುಳಿದು ನೀನದನೇಱಿಲೊಡಂ ಜಗತ್ರಯಂ ॥ ೧೬ ॥

ದಾನವಸತ್ವಂ ತಾಂ ಸಿಂ
ಹಾನುಕರಂ ಭದ್ರಜಾತಿ ದೇವಾನ್ವಯಮಾ ।
ದಾನಗಜೇಂದ್ರಂ ಜಗದೊ
ಳ್ಳಾನಜೀವಿನಮಿಲ್ಲ ಬನದೊಳಂ ಶಾಲೆಯೊಳಂ ॥ ೧೭ ॥

ಎಂದಾ ಮುನೀಂದ್ರಂ ದನುಜೇಂದ್ರನ ಚಿತ್ತಕ್ಷೇತ್ರದೊಳಂ ಶತ್ರುಸೂದನದೊಳಂ ಕ್ಷೋಭಮುಮಂ ಮಾತಂಗದೊಳ್ ಲೋಭಮುಮಂ ಸಮಸಮನೆ ಬಿತ್ತಿ ಬೆಳೆಯಿಸ ಲೊಡಂ ಕಿಂಚಿದಾಕಳಿತನೇತ್ರತ್ರಿಭಾಗನುಂ ಮುಹುರ್ಮುಹುರುಚ್ಚಳಿತಾಂದೋಳಿತಮಸ್ತ ಕನುಮಾಗಿ

ಎಮಗೆ ತಪಸ್ವಿಗಳ್ಗೆ ನೃಪವಾರ್ತೆಯ ದಂದುಗಮೇವುದೆಂದು ನಿ
ರ್ಮಮತೆಯಿನಪ್ಪುದೇನರಿದೆ ನಿಮ್ಮಡಿಯೆಮ್ಮಯ ಮೇಲೆ ಮಾಳ್ಪ ಮೋ ।
ಹಮೆ ತರೆ ಬಂದಿದಂ ನುಡಿವಿರೀ ದಯೆಯೆಂಬುದೆ ಕಾರ್ಯಸಿದ್ಧಿ ಮುಂ
ತೆಮಗಭಿವೃದ್ಧಿಯಿಂದಜೀದುಮಿಂ ಬಿಜಯಂಗೆಯಿಮಿಂದ್ರವಂದಿತಾ ॥ ೧೮ ॥

ಎಂದನುನಯಾಭಿವಾದನಸಮನ್ವಿತಂ ಮಧುಕೈಟಭಂ ಕಳಿಪೆ ನಾರದ ನಾರದಂ ನುಡಿದರೆಂಬಂತೆ ಪಿಸುಣ್ಗೆಡೆದು ಸನ್ಮಾರ್ಗಾನುವರ್ತಿಯಾಗಿ

ಕ್ಷೋಣೀಶ್ವರರಿರ್ವರುಮಂ
ಪೂಣಿಸಿ ಮುಸೆಯಲ್ಕೆ ಬಗೆದು ತತ್ಸಭೆಯಂ ಗೀ ।
ರ್ವಾಣಮುನಿ ಪೊಱಮಡುತ್ತುಂ
ಸಾಣೆಯ ಜಾರಂತೆ ಪೋದ ಕೆಯ್ನೊಳೆ ಮಗುಟ್ದಂ ॥ ೧೯ ॥

ಅಂತು ಮಗುಳ್ದಾತಂ ದ್ವಾರಾವತಿಗೆ ಬಂದು ತದ್ರಾಜಭವನದೊಳ್ ಗೋಮಿನೀ ಚೂಡಾಕಲ್ಪದಂತೆ ಮೆಱೆವ ಲಕ್ಷ್ಮೀನಿಲಯಮೆಂಬ ಕರುಮಾಡದುಪರಿಮತಳದ ಮಣಿ ರಂಗದೊಳ್ ವಿದ್ಯಾವಿನೋದಗೋಷ್ಠಿಯೊಳಿರ್ದ ಸುಪ್ರಭಪುರುಷೋತ್ತಮರಲ್ಲಿಗೆ

ಬರಲೊಡಮಿದಿರೆಟ್ದಿತ್ತರ್ಘ್ಯಮಂ ಪಾದ್ಯಮಂ ಬಿ
ತ್ತರಿಸಿ ಪೊಡೆಮಡುತ್ತುತ್ತುಂಗಪೀಠಾಗ್ರದೊಳ್ಕು ।
ಳ್ಳಿರಿಸಿ ಒಱಿಯ ನಿಮ್ಮೊಂದೆಟ್ಟಿರಂ ನಮ್ಮದೊಂದೆ
ಟ್ಟಿರವು ಪೊಸತದೆಂದಿಂದಿತ್ತ ಚಿತ್ತೈಸ ಬಂದಿರ್ ॥ ೨೦ ॥

ಕ್ಷೇಮದಿನಿರ್ದಿರೇ ಕುಶಲಮೇ ಮುನಿಮಾಳಿಗೆ ಸಂತಮೇ ಗ್ರಹ
ಸ್ತೋಮದ ವರ್ತನಕ್ಕೆ ಸುಖಮೇ ಸುರಕೋಟಿಗೆ ಕಲ್ಪಭೂರುಹಾ ।

ಕಾಮಫಲೋದಯಕ್ಕೆ ನಿರವಗ್ರಹಮೋ ನಿಜಕಾಮಧೇನುವುಂ
ಕಾಮಿತಹವ್ಯಕವ್ಯರಸದಾಯಕಮೋ ಮುನಿಮೌಳಿಮಂಡನಾ || ೨೧ ||

ಎಂಬುದುಮಂಬುರುಹಗರ್ಭನಂದನನಿಂತೆಂದಂ

ಎಮ್ಮನದೇಂ ಕೇಳ್ದಪ್ಪೆ
ನಿಮ್ಮಱಿಯದುದೇ ಚರಾಚರಸ್ಥಿತಕರಣಂ ।
ನಿಮ್ಮವತಾರದೆ ನೀಂ ಕ್ಷೇ
ಮಂ ಮುನ್ನಂ ಪೇೞ್ದೊಡುಂತು ಸರ್ವಕ್ಷೇಮಂ || ೨೨ ||

ಈ ಕಾಶೀವಿಷಯಾಬ್ಧಿಯೊಳ್ ವಿಷಮೆ ಮೂಡಿರ್ದಂತೆ ಲೋಕೈಕಲುಂ
ಠಾಕಂ ದಾನವನಪೂರ್ತಿ ಮೂಡಿ ಮಧುವೆಂಬಂ ದುರ್ವಿನೀತಂ ನಿಜ ।
ಸ್ವೀಕಾರಪ್ರತಿಘಾತಕಂ ಕದಡಿ ತಾನೆಯ್ದಿತ್ತು ಲೋಕಂ ನಿರಾ
ಲೋಕಂ ಮರ್ಕಟಹಸ್ತದುಸ್ತ್ರುಟಿತ ಮಲ್ಲೀಮಾಲಿಕಾವಸ್ಥೆಯಂ || ೨೩ ||

ಬೇಡಂ ತರುಶಾಖಾಖಗ
ನೀಡಮನಳ್ಳಿಱಿದು ದೋಂಟಿಯಿಂ ಕೆದಱುವವೊ ।
ಲ್ಕಾಡೆ ನಿಜತೇಜದಿಂದಂ
ಗೂಡಾಡಿಸುತಿರ್ಪನಮರಲೋಕಮನಸುರಂ || ೨೪ ||

ಹುತ ವಟುನಿದು ಕೆಟ್ಟುಪೋದುದು
ಕಿತವಾಹರಣಂಗಳಿಂದೆ ತಪಮಧ್ಯಯನ ।
ಪ್ರತಿಯುಂ ಶ್ರುತಿಯುಂ ಸ್ಮೃತಿಗಂ
ಸ್ಮೃತಿಗಳ್ ಗೆಂಟಾದುವಮರಮುನಿಮಂಡಲದೊಳ್ || ೨೫ ||

ಗುರುಲಘುಗಣನಂ ಕೆಟ್ಟುದು
ಪಿರಿದಾದುದು ವರ್ಣಸಂಕರಂ ದಾನವನಿಂ ।
ದೊರೆಯಾದುದು ಭೂವಲಯಂ
ಪರಿಣತನಲ್ಲದನ ಕವಿತೆಗಂ ಚಿತ್ರಕ್ಕಂ || ೨೬ ||

ಅದು ಕಾರಣದಿಂ ನಿಮ್ಮ
ಭ್ಯುದಯಮೆ ತಾನೆಮಗೆ ನಿತ್ಯಕರ್ಮಾನುಷ್ಠಾ

ನದ ಪರಮಸೇವೆಯೆಂದತಿ
ಮುದದಿಂದಭ್ಯುದಯುವಾಗೆ ಪಸಲ್ಬಂದೆಂ || ೨೭ ||

ಕಾರಣಪುರುಷರಿರವನೀ
ಚಾರಧುರಂಧರದಿರುಗ್ರಶಾತ್ರವಕುಲಸಂ ।
ಹಾರಕ್ಕೆ ನೀಮೆ ನಿಮ್ಮವ
ತಾರಂಗಳ್ ಸಕಲಲೋಕಸುಕೃತಫಲಂಗಳ್ || ೨೮ ||

ವೇಗಾಯ್ತು ಯಾದವಾನ್ವಯ
ಮಾಗಳ್ ನಿಮ್ಮುದಯದಿಂದಮಖಿಳಾನ್ವಯಕಂ ।
ಯಾಗಂ ದಾನಂ ಧರ್ಮಂ
ಚಾಗಂ ನಿರ್ವಿಘ್ನಪ್ಪುವು ನಿಮ್ಮ ತಲೆ ನಿರ್ವಿಸಲೊಡಂ || ೨೯ ||

ನೀಮಾ ಪೈತೃಷ ಕಣ್ಣ ಮುಳ್ ಮನದ ಶೂಲಂ ನಿಮ್ಮ ಬಾಹಾಬಲಂ
ಸೀಮಾತೀತಮಸೂಯೆಯಂ ಪಡೆಯುದಾಗಳ್ಮಂತುಂ ಧರಾಚಕ್ರಿ ತಾಂ ।
ಸಾಮಾನ್ಯರ್ಗೆಜಲಿಂದಪ್ಪಂಕದಿರನಾತಂ ತನ್ನುನಂತೌಂಕಿದಂ
ದೇ ಮಾತಕ್ಕುಜದಿರ್ಪುದಾರ್ಜಸುಪ್ರದಿಷ್ನಂ ಮಂತ್ರತಂತ್ರಂಗಳಂ || ೩೦ ||

ಮತ್ತಮೊಂದು ರಹಸ್ಯಮುಂಟದಂ ನಿಮ್ಮ ಮನದೊಳಚ್ಚಿದಿರ್ಪುದದೆಂತೆಂದೊಡೆ

ಒಳಗಾರಯ್ವುತುಮಿರ್ಪವನಾನುಮೆಮಗಂತೇವಾಸಿಯಾಗಿರ್ಪ ಕಾ
ಪಿಳಮಿಶ್ರಂ ಮಧುವಿಂಗೆ ಸಲ್ಗೆಯ ಪುರೋಧಶ್ರೇಷ್ಠನಂತಾ ಸಭಾ ।
ಸ್ಥಳದೊಳ್ಪುಟ್ಟಿದ ವಾರ್ತೆ ತಾಂ ವಿದಿತಮೆಂದೇಕಾಂತದೊಳ್ಕಾರದಂ
ಬಳಕೃಷ್ಣರ್ಗಮತಂಪದಂತೆ ಕಿವಿವೊಕ್ಕೇನಾನುಮಂ ಪರ್ಚಿಸಿದಂ || ೩೧ ||

ಪರ್ಚೆ ನಡನೋಡಿ ಪೊಟ್ಟಿಂ
ಬಿರ್ಚಿದ ತೆಱದಿಂದಮೆಟ್ಟಿನುಷ್ಮಾನದ ದೇ ।
ವಾರ್ಚನದ ಸಮಯಮೆಮಗಿದೆ
ಸಾರ್ಚಿದುದಿಂ ನಿಮಗೆ ಸಕಲ ಮಂಗಳವಿಜಯಂ || ೩೨ ||

ಎಂದವರ್ಗೋಘನಚನದಿಂ ಪರಸಿ ಪೊಡೆವಟ್ಟ ಚಂಡಿನಂತೆ ಗಗನಕ್ಕೊಗೆದನನ್ನೆಗಂ ಮಧುಕೈಟಭಂ ಕಳಿಪಿದ ದೂತಂ ಬಂದು ಬಾಗಿಲೊಳಿರ್ದುದಂ ದೌವಾರಿಕಪರಿಜ್ಞಾತಂ ಕಂಚುಕಿ ಬಂದು ಬಿನ್ನವಿಸಲೊಡನುಲ್ಲಿಂ ತಳರ್ದು ಪರಿಷನ್ಮಂಡಪಕ್ಕೆ ಬಂದು ಸುಪ್ರಭಂ

ಸೋಮಪ್ರಭನೃಪೇಂದ್ರಪಾದಪದ್ಮಾಂತಿಕದೊಳ್ ಪದ್ಮನಾಭಸಮನ್ವಿತಪರಿಜನಪರೀತನವ ಸರಂಗೊಟ್ಟು ದೂತನಂ ಬರಿಸಿಕೊಳಲೊಡನಾತಂ ಕಂಡು ವಿನಯವಿನಮಿತೋತ್ತ ಮಾಂಗನಾಗಿ ಸಮುಚಿತಾಸನದೊಳ್ಕುಳ್ಳಿರ್ದಿಂತೆಂದಂ

ಅಭಿಜನವತ್ಸಲಂ ನೃಪಶಿರೋಮಣಿಪೀಠಪದಾಂಬುಜಂ ಬಲ
ತ್ರಿಭುವನಚಕ್ರವರ್ತಿ ಖಚರೋರಗಕಿನ್ನರಗೇಯಮಾನದೊಳ್ ।
ವಿಭವದೊಳಿಂದ್ರಸನ್ನಿಭ ಕುಲೋದ್ಧರಣಂ ಮಧುಕೈಟಭಂ ಭವ
ತ್ಪ್ರಭುಗುಣಪಾಲಕಂ ಬೆಸಸಿದಂ ಶರಣಾಗತವಜ್ರಪಂಜರಂ ॥ ೩೩ ॥

ಎಂದು ತದನಂತರ ಪ್ರತಿಹಸ್ತಹಸ್ತಾನೀತ ಲೇಖಪ್ರಾಭೃತಂಗಳಂ ಕಳೆದುಕೊಂಡು ಸಂಧಿವಿಗ್ರಹಿಯ ಕೈಗೆ ನೀಡುವೆಡೆಯೊಳ್ ಪುರುಷೋತ್ತಮಂ ಮುನ್ನಮುನ್ನೆಗಂ ನಿನ್ನ ಬಂದ ಕಾರ್ಯಮಂ ಪೇಳೆಂಬುದುಮಾತನಿಂತೆಂದಂ

ಪೊಗಟ್ದಿರ್ದಾನವರಾಜನೋಲಗದೊಳಿರ್ದಾರೋಹಕರ್ನಿಮ್ಮದಂ
ತಿಗಳೊಳ್ ವೈರಿಷುಳಪ್ಪನಂ ಕುಳಿಸಿಯುಂ ದೇವರ್ಗೆ ಚೌದಂತನೋ ।
ಲಗಮೆಂದಂಕುಸಮಿತ್ರನಾಗಳದುಮಂ ಕೈಕೊಂಡು ನಿಮ್ಮಲ್ಲಿಗಾ
ಜಗದೇಕಪ್ರಭು ಪಕ್ಕೆಸಾರಿಗಿದುವೇಟ್ಟಿಂ ತಕ್ಕುದೆಂದಟ್ಟಿದಂ ॥ ೩೪ ॥

ಕುಡುವುದು ಬೇಟ್ಪುದಂ ಕಳೆದುಕೊಳ್ವುದು ವಕ್ರತೆಯಿಲ್ಲದುಳ್ಳುದಂ
ನುಡಿವುದು ಲೇಸನುದ್ಭವಿಪ ಪೊಲ್ಲಮೆಯುಂ ಮಱದೇಕಮಾರ್ಗದೊ ।
ಳ್ನಡೆವುದು ಹಾನಿವೃದ್ಧಿಯೊಳಭೇದಕನಪ್ಪುದು ಭೋಗ್ಯವಸ್ತು ಬಂ
ದೊಡೆ ಸಮನಾಗಿ ಭೋಗಿಸುವುದಿಂತುಟು ಸಜ್ಜನಬಂಧುಲಕ್ಷಣಂ ॥ ೩೫ ॥

ಇದು ನಾಯಂ ನಿಮಗಾದಿಯಿಂ ನಯವಿದಂ ನಿಮ್ಮಂ ಮನು ಸ್ವಾಮಿ ಕೂ
ಡಿದರೊಳ್ತಿಳ್ದನಾದ ಬಂಧುಕೃತಿಯುಂ ಪಾರಂಗಮಂ ಮಾಡಲಾಂ ।
ತ್ವದಧೀನಂ ಬಲಿಕೇನಿದಿರ್ಚಿದುಪಸಾಯುಂ ರಾಯಸಂ ತಳ್ವಲಾ
ಗದು ಕೈಕೊಳ್ವುದು ಮಾಟ್ಪುದತ್ಯಧಿಕರೊಳ್ಸಂಪ್ರೀತಿ ಸಾಮಾನ್ಯಮೇ ॥ ೩೬ ॥

ಎಂದ ದೂತನ ಮಾತಿಂಗೆ ನೀತಿರತ್ನಾಕರಂ ಕೋಪಗರ್ಭೀಕೃತ ದರಹಸಿತವದನನುಂ ಕಿಂಚಿದಾಂದೋಳಿತಮಸ್ತಕನುಮಾಗುತ್ತಮಾಗಳಿಂತೆಂದಂ

ಮೊದಲೊಳ್ದಂಡೋಕ್ತಿಯುಂ ಮಾಡಿದೆಯದು ಹೃದಯಂ ನಿನ್ನನಾಳ್ದಂಗೆ ನೀನಾ
ಡಿದ ಸಾಮಂ ಭೇದಮುಂ ಕೂಡಿದ ಬೆರಗು ಕರಪ್ರಾಭೃತಚ್ಛಾಯೆಯಿಂ ತೋ ।

ಱಿದ ದಾನಂ ಮಂತ್ರಿಗಳ್ಗೆಲ್ಲೆಡೆ ನುಡಿವರ ಮಾತಿಕ್ಕೆ ನಿಮ್ಮೊಱೆಯುಂ ಮೆ
ಚ್ಚಿದೆವಾ ಮಾತಿರ್ಕೆ ನಿಮ್ಮಾಳ್ದನ ಮನದೊಳಗಿರ್ದಂತುಟಂ ಮಾಡಲಕ್ಕುಂ ॥ ೩೭ ॥

ಎಂದು ಬೞಿಕ್ಕೆ ಲೇಖಮಂ ಪಾವುಡಮನಭಿಜ್ಞನ ಗಾಹೆಯಂತಿರಲೋದಿಸದೆಯುಂ ಶೋಧಿಸದೆಯುಮನ್ನೆಗಮಾತನಂ ಬೀಡಿಂಗೆ ಕಳುಪಿಯೆಂದ ಮುಕುಂದನ ವಚನದಿಂ ಕನಕ ಪಾತ್ರಪ್ರಣಿಹಿತತಾಂಬೂಲ ಪ್ರಶಸ್ತವಸ್ತ್ರನಾದ ಸಂಧಿವಿಗ್ರಹಿಯು ಕೆಯ್ಯಂ ನೂಂಕುತ್ತು ಮಾತನಿಂತೆಂದಂ

ನಿತ್ತರಿಸದೆ ಚಕ್ರಿಗೆ ಬೆ
ನ್ನಿತ್ತು ಪೊದಲ್ಗಿಡಿಸಿ ತೆತ್ತು ಬಿರುದಂ ತಲೆಯೊಳ್ ।
ಪೊತ್ತು ಪೊಱೆಗಂಡುಗೆಯ್ತದೆ
ಸತ್ತ ಮಹೀಭುಜರನಾರನಾರಂ ಪೋಲ್ವರ್ ॥ ೩೮ ॥

ಮಚ್ಚರದಾಯಮಂ ಮಱೆದು ಕೈದುಗಳಂ ತೊಱೆದುಟ್ಟು ತೊಟ್ಟ ಪೆ
ಣ್ಬುಚ್ಚಮೊಡಂಬಡಂ ಪಡೆಯೆ ವೈಲಿಯ ನಚ್ಚನೆಯಂತೆ ಸೂಲಮಂ ।
ಬಚ್ಚಿಸಿ ಪೊತ್ತುಗೂಡಿಡುವ ಗುಬ್ಬಿಗಳಂತಿರೆ ಬಾಗಿಲಲ್ಲಿ ಪು
ಲ್ಗಚ್ಚಿ ಪುಗುತ್ತುಮಿರ್ಪರಿಭೂಮಿಭುಜರ್ಮದಧಿಕ್ಕೃತಭೇಂದ್ರನಾ ॥ ೩೯ ॥

ಎಂದು ಬೞಿಕ್ಕೆ ಸೋಮಪ್ರಭನ ಮೊಗಮಂ ನೋಡಿ

ಜಗತೀನಾಥನ ಕೊಟ್ಟ ರಾಯಸಕಮಿಟ್ಟಾಳಾಳ್ದನೊಲ್ಪಟ್ಟುದುಂ
ಡಿಗೆಗಂ ನೀಂ ಬೆಸಕೆಯ್ದು ಮಂಡಲಿಕನಾಪ್ಪೆ ಕೇಡುಗಾಲಕ್ಕೆ ತಾ ।
ಮೊಗೆವರ್ತೇಱಿಱೊಗೆವಂತಿವರ್ನಿನಗೆ ಪಾಪಂ ಪೆತ್ತುವರ್ಬೇಲಿಯುಂ
ಪುಗುವಂತಪ್ಪುದರಣ್ಯಮಂ ಪಡೆದು ನೀನೀ ಮಕ್ಕಳ ಮೊಕ್ಕಳಂ ॥ ೪೦ ॥

ಎಂದು ತನ್ನಾಳ್ದನ ಭುಜಬಲಪ್ರತಾಪಲೇಪಮನೆ ಮುಂದಿಟ್ಟು ದಂಡಮನೆ ಗಂಡುಗೆದಱಿದ ದೂತನ ಮಾತಿಂಗೆ ಮುಳಿಪೊಯ್ದು ನೆಗೆವ ಜಳಧರ ಗಭೀರಧೀರಧ್ವಾನದಿಂ ದಾನವಧ್ವಂಸಕನಾಗಳಿಂತೆಂದಂ

ನಿನಗೇನುತ್ತರಗೊಟ್ಟಪುದಱಿಕೆಯು ದೂತಿಂಗೆ ನಿನ್ನಾಳ್ದನೆಮ್ಮಂ
ಪೊನೆಯೊಳ್ಕಂದಾಂತು ಕೈಮಾಡಿದೊಡೆ ಬೞಿಕೆ ನೀಂ ಬೇಡುವುಗ್ರ ದ್ವಿಪೇಂದ್ರಂ ।
ಪೊನೆಯೊಳ್ ತೂಗಾಡೆ ನೀಡುಂ ತಲೆ ಪರವಶದಿಂ ಮೆಚ್ಚಿ ಕಣ್ಮುಚ್ಚುತಾಹಾ
ಯೆನೆ ಕಾಣ್ಬೈ ನಾಳೆ ನೀಂ ಬಿತ್ತರಮೆಸೆರ್ದೆವ್ರಗುವಂತುತ್ತರಂಗೊಟ್ಟ ಕೋಡಂ ॥ ೪೧ ॥

ಬರೆದಟ್ಟಟ್ಟಿಯಿನಿಟ್ಟಳಂ ಮೆಱೆವುದೇ ಕಟ್ಟಾಳ್ತನಂ ಪೋಗು ನೀ
ಬರವೇಳಣ್ಣ ಪೊಡಣ್ಮದಿರ್ದೊಡಿರವೇಳಾಂ ಬರ್ಪೆವೀ ಜರ್ವು ಸಂ।
ಗರಮಂ ನೋಡುವ ದೇವಕೋಟಿಯ ಮನಂ ಕೌತೂಹಳಾವಗ್ರಹಂ
ಬೆರಸಾಂತಿರ್ದರ ಬಾಳ ಬಾಯ್ಗಳ ಬಱಂ ಪಿಂಗಲ್ಕೆವೇಡಂ ಗಡಾ ॥ ೪೨ ॥

ಏಟ್ಕಳಕೆ ದನುಜನಂ ಬರ
ವೇಟ್ಕಾದುವಡೆಂದು ಸಮಯಸಮುಚಿತಧನಮಂ।
ನೀಟ್ಕಿರಿಸದಿತ್ತು ಚರನಂ
ಬೀಟ್ಕೊಡೆ ಕೃಷ್ಣಂ ಬಱಿಕ್ಕಮಾ ಬಲಹಸ್ತಂ ॥ ೪೩ ॥

[ಅಸಮ ರಣಾಗ್ರಹಕ್ಕೆ ಬೆಱಗಾದ ತಾತನಂ ಬಗೆಗೊಳಿಸಿ ಮಂತ್ರನಿಕೇತನದಿಂ ಪೊಱಮಡುವಾಗಳ್]

ಧರೆಗಂ ವ್ಯೋಮಕ್ಕಮಾರಿಟ್ಟವೊಲೊದವಿದ ವ್ಯೈ ದಿಕ್ಕನೊಟ್ಟೈಪ ಕಣ್ಕೇ
ಸುರಿಗೆಂಪಂ ಕಿತ್ತ ಕೋರ್ವಾಳ್ಪಿಡಿಲನುಗುಟ್ವ ಕೂರ್ದಾಡೆ ಮೂಲೋಕಮಂ ಮು।
ಮ್ಮುರಿಗೊಳ್ವಾಟೋಪಮತ್ಯದ್ಭುತಮೆನೆ ಭವನಪ್ರಾಂಗಣಪ್ರಾಂತದೊಳ್ನಿ
ರ್ಭರಮಾತಂ ಮುಂತೆ ಭೋಭೋ ಕವಿಯೆನುತಮಿರಲ್ ರಾಕ್ಷಸಂ ರೂಕ್ಷರೂಪಂ ॥ ೪೪ ॥

ತ ಮಹಾದ್ಭುತಪ್ರತಿಪಕ್ಷರಕ್ಷನಿಪುಣಭಾವನಂ ಕಣ್ಮುಟ್ಟೆನೊಳ್ ಕಂಡು

ದೂತನ ಬೆನ್ನೊಳೆ ಕಳಿಪಿದ
ದೈತೇಯನ ಗೂಢತೀಕ್ಷ್ಣದನುಜನೆಗೆತ್ತು।
ತ್ರಾತರರಾತಿಯನಂಭೋ
ಜಾತೋದರನಡಸಿ ಪೊಡೆಯಲೊಡನಾಕ್ಷಣದೊಳ್ ॥ ೪೫ ॥

ಉರಿವರಿವರಿವಂ ಜಳದಂ
ಜೊರೆಯಲೊಡಂ ತಣ್ಣನಾದವೊಲ್ ಕೃಷ್ಣನ ಬಾ।
ಳ್ಪಿರಸಲೊಡಂ ಪರೆಯೆ ನಿಶಾ
ಚರರೂಪಂ ನೋಡೆ ನೋಡೆ ಖೇಚರನಾದಂ ॥ ೪೬ ॥

ಆಗಿ ಮಕುಟತಟಘಟಿತಹಸ್ತಕುಟ್ಮಳಂ ಹಸ್ತಪಲ್ಲವಪ್ರಸರಿತ ಪಾರಿಜಾತಪ್ರಸೂನಾಭ್ಯರ್ಚಿತ ರಾಮದಾಮೋದರಚರಣನಖತಾಮರಸನಿಂತೆಂದಂ ದೇವ ನಿಮ್ಮಿರ್ವರುಂ ಪೂರ್ವಜನ್ಮದೊಳ್

ದಿವಿಜಾಧೀಶರ್ಸಹಸ್ರಾರಜರಿರಖಿಳದೇವೇಂದ್ರಸೇನಾನ್ವಿತಂ ಪೂ
ರ್ವವಿದೇಹಶ್ರೀಜಿನಾಭ್ಯರ್ಚನೆಗೆವರುತವೆಮ್ಮೊಳ್ ಮಹಾವೈರದಿಂ ಭೈ।
ರವಚೂಡಂ ತಳ್ತು ನಾಮುಂ ತಡಮಡಿವೆಡೆಯೊಳ್ ಭೋಂಕನಡ್ಡೈಸಿ ಮಾತಿಂ
ಯುವತೀವ್ಯಾಮೋಹಮಂ ಪಿಂಗಿಸಿದಿರುಳಿದೆನಾಂ ನಿಮ್ಮ ಕಾರುಣ್ಯದಿಂದಂ ॥ ೪೭ ॥

ಎನ್ನ ಪೆಸರ್ ಮಣಿಚೂಡನೆಂದು

ಎಸಗಲ್ಪ್ರತ್ಯುಪಕಾರಮುಂಟೆ ದಿಟದಿಂ ಪ್ರಾಣೋಪಕಾರಕ್ಕೆ ನಿ
ಮ್ಮಸಕಕ್ಕಾಂ ಬೆಸಕೆಯ್ವುದೇಂ ಪಿರಿದು ಮದ್ವಿದ್ಯಾಳಿಯೆಂಬಾಳಿಯು।
ರ್ಬೆಸಕೆಯ್ದುರ್ಕೆ ಭವದ್ಭುಜಾರ್ಜಿತಜಯಶ್ರೀಗೆಂದು ತನ್ನಟ್ಟಿಜಿಂ
ದೊಸೆದಿತ್ತಂ ನಿಜವಿದ್ಯೆಯಂ ಮುಸಲಿಕೃಷ್ಣಗಾರ್ ಖಗಾಧೀಶ್ವರಂ ॥ ೪೮ ॥

ಎಂದು ಬಳಿಯುಮಿಂತೆಂದಂ

ರಕ್ಕಸನೊಳಿಱಿವ ಕಾಯ್ಪಿನ
ತಕ್ಕಂ ನೆಗಪಲ್ಕೆ ದೇವ ಕಂಡೆಂ ನಿಮ್ಮಂ।
ರಕ್ಕಸರ ಚೋಹಮೇಱಿದ
ಪೆಕ್ಕಣದಿಂದೆಂದು ಪೋದನಾ ಮಣಿಚೂಡಂ ॥ ೪೯ ॥

ಬಲನಾರಾಯಣರುಂತಜೇಯಮುಹಿಮಾವಷ್ಟಂಭಮುಚ್ಚಂಡದೋ
ರ್ವಳರಾ ಖೇಚರವಿದ್ಯೆ ಸಾರ್ದ ಬಳಿಕೆಂತುಂ ಮಾಣ್ಬರೇ ದುರ್ಧರಂ।
ಕುಲಿಶಾಸ್ತ್ರಂ ವಿಲಯಾನಲಾಂಶುರಸದಿಂ ನೀಂ ಮಾಡಿದಂದಾಜನೋ
ಬಲದಿಂದಾಮಹಿಶೈಲನೋದ್ಯಮನದೊಳ್ಮೇಲೆತ್ತಿ ಬೂತಟ್ಟುಗುಂ ॥ ೫೦ ॥

ದಿಗ್ವಿಜಯೋದ್ಯುಕ್ತರಾಗಿ ಬಲಾಧ್ಯಕ್ಷನಂ ಪಡೆಗೆ ಸಾಱಲ್ವೇೞ್ದು ವಿಜಯಪ್ರಯಾಣ
ಭೇರಿಯಂ ಸೂೞೈಸಿ, ವಿಜಯಪ್ರಸ್ಥಾನಶಿಬಿರದಿಂ ತಳರ್ದು ನಿಚ್ಚವಯಣದಿನೆತ್ತಿಬಪ
ನ್ನೆಗಮಿತ್ತಲ್

ಆ ದೂತಂ ವಾರಣಾಸೀಪುರಮನಿರದೆ ಪೊಕ್ಕೋಲಗಂಗೊಟ್ಟು ಕೇಳ್ದಿ
ದಾರ್ ದೈತ್ಯಾಧೀಶನಂ ಕಂಡೆಱಗಿ ಬಳಿಕೆ ಮುಂದಿಕ್ಕುತುಂ ಪ್ರಾಭೃತಂ ರಾ।
ಜಾದೇಶಂ ಕಾಣ್ಕೆಯಾಂಗಿಂತಿರೆ ನುಡಿದನಿದೇಂ ದೇವ ನೀನಟ್ಟೆ ಬೇೞ್ಪಿಂ
ತಾದೀನರ್ಗಣ್ಯರೇ ನೀಂ ಮುನಿದೊಡೆ ಬೆಸಕೆಯ್ವರ್ಬೆಸಂಗೆಯ್ವರಲ್ಲರ್ ॥ ೫೧ ॥

ತಾನಱ್ತಿವಟ್ಟು, ಬೇಡುವ
ದಾನಗಜಂಬೆರಸು ಬಂದು ಕಂಡಪೆವಾಮೆಂ ।
ದಾನಡೆದು ಬರುತ್ತಿರ್ದರೆ
ವಿಮಾನುಂಬುಱು ಬರ್ಪ ತೆಱವಿ ದಿನಪತಿಗಿದಿರಂ ॥ ೫೨ ॥

ಎಂದೊಡೆ ಕೋಪಾನಳನಿಂ
ಬೆಂದರಲಂತಾಸ್ಯಮರಲೆ ತಲೆದೂಗುತ್ತುಂ ।
ಮಂದಸ್ಮಿತಮುಂ ಶ್ಮಶ್ರು
ಸ್ಪಂದನಮುಂ ಕಣ್ಣ ಕೆಂಪುಮೊಗೆತರೆ ದನುಜಂ ॥ ೫೩ ॥

ಕಿವಿವೆತ್ತಂದಿದಮೆಮ್ಮೊಳ್ತೊಡರ್ದಿಱುಪಪೆಮೆಂಬನ್ನರಂ ಕೇಳ್ವನಿಲ್ಲಿಂ
ದುವರಂಭೋ ಚೋದ್ಯಮೇ ಕೊರ್ವಿದ ಕುಱು ಪುಗಪೇ ಬಾಣಮಂತಾನೆಂಬಂತೊ ।
ಡ್ತುಪ್ರದುರ್ವೀಭಾರನಿರ್ವಾಣದ ಸಮಯಮೊ ಪೇಱ್ಮರಿಗಂ ಭೈರವಂಗಂ
ಜವರಾಯಂ ವಿಶ್ವಮಹಾಲಯವಿಧಿಯೊಳಪ್ರೋಶಾನವಿಮಾನಂದಮೋ ಮೇಣ್ ॥ ೫೪ ॥

ಎಂದು ಭುಜಬಲೋದ್ರೇಕಮಂ ನುಡಿದ ಮಧುವಿನ ವಿಧುವದನ ವಳಯುದಂತ ಕೌಮುದಿಯಿನಾ ಸಭಾಸಮುದ್ರಕ್ಷೋಭಮಸದಳಮಪ್ಪಿನಮಹಮಹಮಿಕೆಯನೆಟ್ಟಿ ಸುಭಟ ಪೇಟಕದೊಳ್ ಪಟ್ಟವರ್ಧನಗಜದಿಗ್ಗಜಸಾಧನಾಧಿಪತಿ ಮನ್ನಣೆಯ ವ್ಯಾಮೆಯ ದಾನವ ಸೇನಾನಿಯೊರ್ವಂ

ಜೇಡುವ ಸಾಧು ನೀಂ ಕುಡದ ಗಂಡರವರ್ಬೆಸಸೆನ್ನನೊರ್ವನಂ
ಕೋಡಗಗಟ್ಟುಗಟ್ಟಿ ಹಲಿಕೃಷ್ಣರನಾಳಿಸಿ ತಾಳವಟ್ಟದೊಳ್ ।
ಮೂಡಿದ ಹಾಹೆಯೆಂತೆಱಲೆ ವೈರಿಶ್ಶುಳಪ್ಪನನಿಂದು ಕಂಬದೊ
ಳ್ಕೋಡ ನೃಪೇಂದ್ರ ಕಟ್ಟಿದೊಡೆ ಬೀರದ ಬಟ್ಟಿಗೆ ಕೈದುಗಟ್ಟಿದೇಂ ॥ ೫೫ ॥

ಎನೆ ಮತ್ತೊರ್ವಂ ಖೇಚರಭೂಚರಪತಿಪ್ರತಾನದ ಮೊತ್ತಮೊದಲಿಗಂ ಮುಂಗೆಯ್ದ ಕಂಕಣಮಂ ತಿರಿಂಪಿ ನೂಂಕುತುಂ ಜಾಱುವ ದ್ಘುಳವಟ್ಟಿಗೆಯನೇಱಿ[3] ಸಾರ್ಚುತ್ತುಮೆೞ್ದು

ಕೊಡಗೂಸಾಗಿಸಿದತ್ತು ನಿನ್ನತುಳಬಾಹಾಸಾಹಸಂ ಸಿಂಗಮಂ
ಸಿಡಿಲಂ ಮಾರ್ಪೊಡೆಮೆಮ್ಮನಿಂದುವರೆಗುಂ ಮಾಱಾಂಪರಿಲ್ಲಿಂದು ಮಾ ।
ರ್ಮಡಿಯಾಯ್ತಿನ್ನವಧಾರಿಸೆಂದಸೆಲೆ ಕಣ್ಕೆಂಪೇಱಿಪಿಂ ನಿನ್ನ ಕ
ಣ್ಕುಡಿ ಕೆಂಗೇಱದ ಮುಸ್ಕಿ ವೈರಿನೃಪರಕ್ತಾಸೇಕದಿಂ ಲೋಕಮಂ ॥ ೫೬ ॥

ಆಂತು ಸಮನಿಸಿದ ವೀರಾಲಾಪಕೋಲಾಹಲಮನುತ್ತಂಭಿತ ಹಸ್ತಕಂಕಣ ಝಣಂಕಾರಂ ಮುನ್ನೆ ಝಣಂಕಿಸಿ ಬೞಿಕ್ಕೆ ಮಧುಕೈಟಭನಿಂತೆಂದಂ

ನೊಳವಿಂಗೆ ಕುಪ್ಪೆವರಮೇಂ
ತ್ರಿಲೋಕಮೊಂದಾಗಿ ಬಂದು ತಾಗುವೊಡಕ್ಕುಂ ।
ಮುಳಿಸುಂ ಮೂದಲೆಯುಮಿದೇಂ
ಗಳಗೇಹಾನರ್ದಿಭಾವಬಾಹ್ಯಾಲಾಪಂ ॥ ೫೭ ॥

ಎಂದು ನಿವಾರಿಸುತ್ತುಂ

ನಡೆವಂ ಸೂೞ್ಪಸವೇಱಿನ್ನದೆ ಕಟಕಮುನಿಂದೆತ್ತವೇಱಿನ್ನದೆತ್ತಲ್
ಪಡೆಗೆಲ್ಲಂ ಸಾಜಮೇೞಿನ್ನದೆ ವಿಸದೃಶವಿದ್ವೇಷಮುದ್ವೇಗಮುಂ ಮುಂ ।
ಬಿಡೆ ಮತ್ತೇಭಾಶ್ವವ್ರೈಸಾಳಿಗೆ ವನದ ವಿನೋದಕ್ಕೆ ಪೇರ್ವೆಂಟೆಗಂ ಮುಂ
ನಡೆವಂತೆಲ್ಲಂ ಸಭಾಸಂಗಮೊಳನಗಹನಾರಂಭವೊಳ್ಪಾನಮೇಂಪ್ರಂ ॥ ೫೮ ॥

ಎಮ್ಮ ಕುಬೇರಂ ಮುನ್ನೆ ಬೇರಕ್ಕಟ್ಟಿ ಕಪ್ಪವಿತ್ತ ಪುಷ್ಪಕವಿಮಾನಮಂ ವಿದ್ಯಾಧರ ಸ್ಯಂದನಾಹಕರನಟಯಿಸಿದುಮನೇೞಿ ಪೊಱಮಡುವಾಗಳ್

ಕಟ್ಟಿದುಮಿತ್ತಿಸೋರ್ವ ಮದಮುಂ ಕಿಡೆ ಡೆಂಕಿಪ ಹಸ್ತಿ ಕಣ್ಣ ನೀ
ರಿಟ್ಟುವು ದಂಡೆಯಿಂ ಕೆದಱಿ ಕೆಂಡಮುಮಗ್ರ ಹಯಾಳಿ ಸುರ್ಗ ಮೆ ।
ಗೊಟ್ಟಿದ ಕೈಮಗಳ್ಕುೞಿದು ನಿಂದುವು ತೇರ್ಧರೆ ಮುಂಗಿದಂತೆ ಸಾ
ಲಿಟ್ಟವು ಮುಂದೆ ಕಟ್ಟಿದೊಱೆಯುಂ ನೆಱೆದರ್ಚಿ ಪದಾತಿವೇತಿಗಳ್ ॥ ೫೯ ॥

ಅವನ ಪೊಱಗಲಸಿದಂತೆವೊ
ಲವನೀಕಂಪನಮಳುಂಬಮಾದುದು ತೇಜ ।
ಕ್ಕವಚತ್ತ್ರಂತೆಯೆ ಮುಸುಕಿ
ಟ್ಟುವು ದಿಗ್ವಾಹಂಗಳೆಯ್ದೆ ಮಧುಕೈಟಭನಾ ॥ ೬೦ ॥

ಅದಂ ಕಂಡು ಕೆಲಗೆಲದೊಳ್ ಬರ್ಪ ಮಂತ್ರಿಮುಹತ್ತರದೊಳಾದ ಗುಜುಗುಜಿಯಂ ಕಿವಿಗಿವಿಗೇಳ್ದು ದಿವಿಜದ್ವಿಷಂ ಪಾವಕಕರ್ಣನಮುಗಂಗಿಂತೆಂದಂ

ಇದು ದಲ್ ದಿಗ್ವಿಜಯಂ ರಣಾಜಿರದೊಳಾರಾನುಂ ಭಿರಂಗೆಯ್ದು ತಾ
ಗಿದಪರ್ಬೆಟ್ಟಿದು ಭೂಭುಜಂ ವಿಧುಬಲಂ ತಾರಾಬಲಂ ನೋಡ ಬೇ ।

ಡಿದ ಬೇಳಂಬಮನಂತಕಂಗಮೆನಗಂ ತಿರ್ದಂಬುದೇಂ ವಕ್ರಮೆಂ
ಬುದುಮೇಂ ವಿಕ್ಕಿನ ಹಕ್ಕಿಯೊಳ್ ಕಱುಣೆಯೊಳ್ ಸೇನಾಸಹಸ್ರಂಗಳುಂ ॥ ೬೧ ॥

ಎಂದು ತೋಱಿದುತ್ಪಾತಕ್ಕೆ ಸೆಡೆಯದೆಯುಂ ಪೊಱಬೀಡಿನೊಳ್ತಡೆಯದೆಯುಂ ಷಡಂಗಬಲವಾಹಿನೀವಾರಾಂ ನಿಧಾನಂ ಸಪಾದಲಕ್ಷಾಕ್ಷೋಹಿಣಿವಲ್ಲಭನೆತ್ತಿ ಬರ್ಪಾಗಳ್

ಧರೆನೆತ್ತ್ರೆಟ್ವಿಂತೆ ಚಾತುರ್ಬಲಪದರಜಮೊಟ್ಟೈಸೆ ದಿಕ್ಚಕ್ರಮಂ ದಿ
ಕ್ಕರಿಗಳ್ದಳೀಮದೋದ್ರೇಕದಿನೆಸೆದುವು ರೋದೋಂತರದೊಳ್ ಪಲ್ಲಣಂ ಬಿ।
ಟ್ಟರುಣಂ ವೇಳ್ಕೈಸಲಿಜ್ಛೈಸಿದನಿನಹಯಮಂ ಮತ್ತಮತ್ತಬ್ಜಜಂ ಬಿ
ಟ್ಟಿರಿಯುಂ ದೂಳಾಡಲಿಜ್ಛೈಸಿದುದು ಕದಱಿ ಪಕ್ಷಾಂತರಾಳಂ ಮರಾಳಂ ॥ ೬೨ ॥

ಅಂತು ನಿಚ್ಚಪಯಣದಿನೆತ್ತಿ ನಡೆದು ಸುಪ್ರಭಪುರುಷೋತ್ತಮರ ಬಿಟ್ಟ ಬೀಡಿಂಗೆ ಕಟ್ಟಿದಿರೊಳ್

ಮಕರವ್ಯೂಹಮನೊಡ್ಡಿ ನಿಂದನಸುರಂ ಲೋಕಕ್ಕೆ ಕಲ್ಪಾಂತಕಾ
ಲಕೃತಾಂತಂ ಮುಳಿದಯ್ದಿ ಬಾಯ್ದೆಱೆದವೊಲ್ತದ್ವ್ಯೂಹಮಂ ನೋಡಿ ಸ।
ಮ್ಮುಖದೊಳ್ತಾಂ ಮೊನೆಯಾಗೆ ಭೇದಿಸುವ ಸೂಚೀವ್ಯೂಹದೊಳ್ದಾನವಾಂ
ತಕನಾಂತಂ ಪೆಱಗಾಂಕೆಯೊಳ್ನಿಲೆ ಬಲಂ ಸಾಹಿತ್ಯರತ್ನಾಕರಂ ॥ ೬೩ ॥

ಕಱೆದಂ ಜಗದ್ಗುರು ಲಸದ್ಧರ್ಮಾಮೃತಾಸಾರಮಂ

ಶ್ರೀವರನುಂ ದ್ವಿತೀಯ ಮ
ಹೀವರನುಂ ವ್ಯೂಹಮುಖದಿನಾಂತಿರೆ ಕಾಲಂ ।
ಕೈವೀಸಿದಂತೆ ಬಳೆನೇಂ
ಕೈವೀಸಿದನೋ ವಿನೇಯಜನಮುಖತಿಲಕಂ ॥ ೧ ॥

ಅಂತೊಡನೆ ಕೈವೀಸೆ

ಮದಗಂಧಕ್ಕೆ ಪರಸ್ಪರಂ ಮುಸಗಿ ಕೋಪಾಟೋಪದಿಂ ತಳ್ತು ತಾ
ಗಿದ ದಂತಂಗಳ ಕಿಚ್ಚು ಪತ್ತಿ ತಗುಳ್ದಂದಳ್ಕಿಂಬಿನಂ ಬೂದಿ ಪಾ ।
ಱಿದ ಕೆಂಡಕ್ಕೆಣೆಯಾಗೆ ಪೊಗೆ ಕಡುಕೆಯ್ವಾರೋಹಕರ್ಬೇಗೆ ಪ
ತ್ತಿದ ಬೆಟ್ಟಂ ಪೊಣರ್ದಂತೆ ಪೋರ್ದುವು ಗಜವ್ಯೂಹಂ ಗಜವ್ಯೂಹದೊಳ್ ॥ ೨ ॥

ಕಿಱಿಪಂ ನಿಟ್ಟಿಸಿ ಪೊಕ್ಕು ಪಾಯ್ದುಲಿವ ಘೋಟಾಯ್ಲ್ಕರ್ಕಳಿಂ ವಾಜಿ ಕು
ಕ್ಕಱಿಪುತ್ತಿರ್ಪಿನಮುಟ್ಟಿಯಿಟ್ಟಳಿಕೆವಾಱುತ್ತಿರ್ಪಿನಂ ಬಾಳ ಬ ।
ಲ್ಕಱಿಯುಂ ನೆತ್ತರ ಪೂರಮುಂ ನೆಗೆದು ಕಣ್ಗಂಬಾಯ್ತು ಬಾನೆಂಬ ಕೆಂ
ಗೆಱೆ ಪಿಂಪಿದರ್ದ ಕಲಂಕೆ ಮಿಾನ್ಮಿಡುಕುವಂತತ್ಯುಗ್ರಸಂಗ್ರಾಮದೊಳ್ ॥ ೩ ॥

ತಱಿಲಾಳ್ವಾಜಿ ಗಜಂಗಳಕ್ಷಯುಗಳ ಸ್ಥೂಲಾಗ್ರದೊಳ್ತಟ್ಟು ಕೋ
ಟೆಱಲುತ್ತಿರ್ಪಿನಮುಂಬು ತೀರ್ದ ಗಱಿಗಳ್ಗೇಣ್ಗೇಣ್ಗೆ ಕೊಳ್ಪತ್ತಿ ಕೈ ।
ದೊಱಿಸುತ್ತಿರ್ಪಿನಮೊರ್ಮೊದಲ್ಜವನ ಜಕ್ಕಂದೋಳದೊಡ್ಡಿದ ಮು
ನ್ನುಱಿಯುತ್ತುಂತಿದಿರೇಱಿ ತಳ್ತುವು ರಥಾನೀಕಂ ರಥಾನೀಕದೊಳ್ ॥ ೪ ॥

ಶರದೊಳಿ ತಟ್ಟಿಗಟ್ಟಿದುದಂ ದಿಕ್ತಟಮುಂಬಿನ ಹಂದರಿಕ್ಕಿದಂ
ಬರತಳಮೆಂಬಿನಂ ತುಱುಗಿ ಬೀಱಿಪ್ಪಡೆಯೆಚ್ಚಲಗಂಬು ತಾಗಿ ತ ।
ಳ್ತುರಿವುರಿಮಾಲೆಗಿಚ್ಚುವರೆಗಾಣಿಸಿದತ್ತು ನಭಸ್ಥಳಂ ಜಿತೋ
ರ್ವರೆಯೊಳೆ ಪಾಯ್ವ ಪಂದಲಿಗಳಂ ಬಯಲಂಗಣವಾಡುವಟ್ಟಿಯುಂ ॥ ೫ ॥

ಪೊಡವಿ ಕಡಂಗಿ ತಿಂದುಗುಳ್ದುದೊಡ್ಡಿದ ಚಿತ್ರದ ಭಿತ್ತಿಯುಂ ಸಿಡಿ
ಲ್ಪೊಡೆದುದು ಸುಟ್ಟುರೆತ್ತಿ ಪಡೆಪೊಯ್ದುದು ನಂಜಿನ ಘಾಳಿಯೆಂಬಿನಂ ।

ಪಡಲಿಡೆ ಕೃಷ್ಣನೊಂದು ಗಜದಿಂ ನಿಜವಾಹಿನಿ ಕಂಡು ದಾನವಂ
ಕಿಡಿಕಿಡಿವೋಗಿ ತಾಂ ಪೊರೆದ ನಚ್ಚಿನ ಮಚ್ಚಿನ ದೈತ್ಯರೆಲ್ಲರಂ ॥ ೬ ॥

ಕರಿಯಂ ಜೇಡುವ ಬಾಯ್ಗಿಡೊಂದಲಗಿನಂಬೊಲ್ವೇಱುವಂಗಕ್ಕೆ ಭಾ
ಸುರಭಲ್ಲಾಸ್ತ್ರಮಿದೊಂದು ನೀಡಿಬಪದಿಕ್ಕಲ್ಕೆಕ್ಕತಕ್ಕಳ್ತ ತೋ ।
ಳೆರಡಕ್ಕಂ ಕವಲಂಬಿನಿಂದೆಲವೊ ಕೊಳ್ಕೊಳ್ಳೆಂದು ಪೂಣ್ದೆಚ್ಚನ
ಚ್ಚರಿಯಪ್ಪಂತು ಜನಾರ್ದನಂ ಮುನಿದು ನುಂಗಲ್ಕಟ್ಟಿವಂದಿರ್ದನಂ ॥ ೭ ॥

ಅಂತು ಮುಟ್ಟೆ ಮೂದಲಿಸಿ ಮೆಟ್ಟಿನಿಂದೆಚ್ಚ ಬಿಚ್ಚತಿಗೆಗೊಚ್ಚತಂ ಕೆಳರ್ದು

ಧರೆಯುಂ ದಿಕ್ತಟಮುಂ ವಿಯತ್ಪಟಲಮುಂ ಧಾರಾಕರೋತ್ಪಾತದಿಂ
ತಿರುಗುತ್ತಿರ್ಪಿನೆಗಂ ತಿರಿಪ್ಪಿ ಮಧು ಕೋಪಾಟೋಪದಿಂದಿಟ್ಟೊಡ ।
ದ್ಧರಚಕ್ರಂ ಬಲವಂದು ನೀಲಗಿರಿಯಂ ಪೂರ್ವಾದ್ರಿಗೆತ್ತಿರ್ದ ಭಾ
ಸ್ಕರನಂತಿರ್ದುದು ದೇವ ನೀಂ ಬೆಸಸೆನುತ್ತುಂ ಕೃಷ್ಣನಂ ಸಾಗ್ರದೊಳ್ ॥ ೮ ॥

ಅಂತು ಬಲದ ಭುಜದೊಳ್ ತಳತ್ತಳಿಸುತಿರ್ದ ಚಕ್ರರತ್ನಮಂ ಕಳೆಯಕೊಂಡು

ಅನಿಲಪಥಕ್ಕೆ ಪಾಱೆ ತಲೆ ಪೋಪಿನ ಕೋಪರ ಚಕ್ರದಂತೆ ತಿ
ರ್ರನೆ ತಿರಿದುರ್ವರಾತಳಕೆ ಬೀೞ್ವಿನೆಗಂ ತೆಗೆದಿಟ್ಟನಿಟ್ಟಳಂ ।
ಮುನಿದೊಡೆ ಭಟ್ಟಗುತ್ತನ ಕಟಾರದವೋಲ್ ನೆಱೆ ತನ್ನ ಕಯ್ದು ತ
ನ್ನನೆ ತಱಿಮೊಟ್ಟಿ ದಾನವಧರಾತಳವಲ್ಲಭನಂ ಚತುರ್ಭುಜಂ ॥ ೯ ॥

ಸುರತರುವಿನರಲ ಸರಿಗ
ಳ್ಸುರಿದುವು ಸುರನಿಕರಮೊಸೆದು ಪರಸುವ ಪಸರಂ ।
ಪರೆದುವು ಸುರದುಂದುಭಿಗ
ಳ್ಮೊರೆದುವು ಹರಿ ವಿಜಯಲಕ್ಷ್ಮಿಯೊಳ್ನೆರೆಯಲೊಡಂ ॥ ೧೦ ॥

ಸಮನಂತರಂ

ರಣಮಂ ಪೂಜಿಸಲೆೞ್ದು ಕಾದು ಶರಣಾಯಾತರ್ಕಳಂ ವಾಜಿ ವಾ
ರಣ ಕುಂತಾತತಿ ವಸ್ತುಮಂ ಪಿಡಿದು ದಂಡಾಧೀಶರಂ ಕೊಂಡು ಪ ।
ಟ್ಟಣದೊಳ್ ಯೋಜಿಸಿ ಬಾಣರಾಸಿವೊಬಿಲೊಳ್ ತಾಳಾಂಕನುಂ ಪಂಕಜೇ
ಕ್ಷಣನುಂ ದ್ವಾರಾವತೀಪುರಕ್ಕೆ ಮಗುೞ್ದಿಟ್ಟಂದರ್ಮಹೋತ್ಸಾಹದಿಂ ॥ ೧೧ ॥

ಮದಗಂಧೇಭ ತುರಂಗ ಸ್ಯಂದನಬಲಂ ಸೌದಾಮಪ್ರಭಂ ಲೀಲೆಯಿಂ
ದಿದಿರ್ವಂದಾನತರಾದ ಸುಪ್ರಭಾ ಮಧುಪ್ರಧ್ವಂಸರಂ ಹರ್ಷದಾ ।
ಪ್ಪದೆ ಮೆಯ್ವೆಚ್ಚಿದನೆತ್ತಿಕೊಂಡು ಪರಸುತ್ತುಂ ತಳ್ತು ಮುಂಡಾಡಿದಂ
ಕನಕಂ ಕೆರ್ಚಿದನಿಕ್ಕಿದಂ ಸಿಸೆಸಿನಿಂ ಬಾಯಲ್ಲಾಯ ತಾಂಬೂಲಮಂ || ೧೨ ||

ಅಂತು ಯಥಾವನಾನ್ವಯರಾಜಹಂಸಂ ರಾಜಭವನಮಂ ಪೊಕ್ಕು ರಾಜಾಂಗಣದೊಳ್ ಸಕಳರಾಜಲೋಕಕ್ಕೆ ಸಮುಚಿತ ಸನ್ಮಾನ ದಾನಂಗಳಿಂ ಬೀಳ್ಕೊಟ್ಟು ಕಳುಪಿ ಕನಕಮಾಡದ ಮುಂದಣ ಭುವನತ್ರಯಾಭರಣಮೆಂಬೋದ್ದೋಲಗಸಾಲೆಯ ಮಧ್ಯಮದ ರತ್ನಸಿಂಹಾಸನಮನಲಂಕರಿಸಿ

ಬಲಭದ್ರಂ ಮಧುಮರ್ದನಂಗೆ ಬಟಿಕಂ ಚಕ್ರೇಶಪಟ್ಟಂ ಜಗ
ತ್ತಿಲಕಂ ತಾನೆನೆ ಕಟ್ಟಿ ದಿಗ್ವಿಜಯಮೂರ್ಧ್ವಶ್ರೀ ತ್ರಿಖಂಡಂ ಗುಣಂ ।
ಗೊಳೆ ಬಂದ್ಯೋಲಿಸಿ ಕೀರ್ತಿ ವರ್ತಿಸೆ ದಿಗಂತಂ ತನ್ಮೂರ್ತಿಸಂಪಾರ
ಕೇಳಿಮಾನಸೆಲೆವಡು ಮಹಾಡಿ ಸುಖದಿಂ ದಿಗ್ವಾರಾನತೀಪಟ್ಟದಿಂ || ೧೩ ||

ಮಧು ಮಧುಸೂದನಾನುಚರಿತಂ ಕೃತಿರಾಜ್ಯ ಕವೀಶ್ವರರ್ಗೆ ತ
ಕ್ಕುದು ರಸವೃತ್ತಿಯುಂ ತಳೆದುದೀ ಕಥೆಯಿಂದು ಪರಸ್ಪರಾನುವಾ ।
ದದೆ ಪೊಗಳುತ್ತುಮೊಲ್ದಗಲಲಾಜದೆ ಮತ್ತೆ ಮರುಳ್ದು ಪೊಕ್ಕರಾ
ಮದನಪತಾಕೆ ಚಿತ್ರಲತೆಗೂಡಿ ಜಿನೇಂದ್ರ ಸಭಾಂತರಾಳಮಂ || ೧೪ ||

ಆ ಸಮಯದೊಳ್

ಅವಧಿಜ್ಞಾನದಿನಿಂದ್ರನೀಶ್ವರನ ಧರ್ಮಶ್ರೀವಿಹಾರಕ್ಕೆ ಸಂ
ಭವಮುಂಟೆಂದರಿದಿಟ್ಟು ಕೈಮುಗಿದಿದಂ ವಿಜ್ಞಾಪನಂಗೆಯ್ದನಿಂ ।
ದುಮಸಂ ಕಂದಿದ ಧರ್ಮಮಂ ಬೆಳಗಿ ಧರ್ಮಾದರ್ಶಮಂ ಪುಣ್ಯದಿಂ
ಭವದಾರ್ಹಂತ್ಯ ವಿಭೂತಿ ಬಣ್ಣವಿಡಲಿಂ ಭವ್ಯಾಬ್ಜಿನೀ ಭಾಸ್ಕರಾ || ೧೫ ||

ಎಂದು ಪುರಂದರನ ವಿಜ್ಞಾಪನೋಪಚಾರದೊಡನೆ ಸ್ವಂದಾರಕವೃಂದ ಬಾಹಾಪರಿಘ ಪರಿವಾರಿತ ದ್ವಿವಿಕಾಸಸ್ಥಾನೀ ಪ್ರಸ್ಥಾನಭೇರೀ ಭಾಂಕಾರಂ ಶಂಕಾಕಳಿತ ದುರಿತಹರಣಾಂ ಬೆರ್ಚೆ ಪೆರ್ಚೆ ಗಗನದಿಶಾಭೂವಿಭಾಗಮಂ ತಳ್ತೊಳ್ದು ಮುಪ್ಪುರಿಗೂಡಿದಾಗಳ್

ಮನದನುರಾಗಮತ್ಯಧಿಕಮಪ್ಪುದು ಸರ್ವಜನಕ್ಕೆ ಪ್ರೀತಮುಂ
ನೆನೆಸುವ ಜೀವರಾಶಿ ಕೆಳೆಗೊಳ್ವುದು ಭಾಸುರ ಧರ್ಮಚಕ್ರಮು ।
ರ್ಕಿನ ಕಿರಣಕ್ಕೆ ಮಾರ್ಮಲೆವುತಿರ್ಪುದು ಮಂಗಳವಸ್ತುಜಾಲಮುಂ
ತನತನಗಾಂತು ಬರ್ಪುದಮರೀಜನಮಾ ಜಿನರಾಜ ಯಾತ್ರೆಯೊಳ್ || ೧೬ ||

ಅನುಕೂಲಾನಿಳನೊಯ್ಯನಲೆಗುಂ ದೇವೇಂದ್ರರೋರೊರ್ವರಂ
ದನಿಗೆಯ್ವರ್ಬರೆವೇಟ್ಟು ಕೊಟ್ಟಣೆಯೊಳ್ ಧಾತ್ರೀಸುಧಾವರ್ಷಣ |
ಸ್ತನಿತಂ ದಿವ್ಯನಿನಾದವೇಣೆಸೆಯೊಳಂ ಕೈಗಣ್ಮುಗುಂ ತೀರ್ಥನಾ
ಥನನಂತಂಗೆ ಚತುರ್ದಶಾತಿಶಯಮಿಂತೊಪ್ಪಿತ್ತು ದೇವರ್ಕಳಿಂ || ೧೭ ||

ಹರಿಸೀಳಿಯೀಪಳಬದ್ಧ ಸಿದ್ಧಸಭೆ ಜೀಮೂತೋತ್ತರಂ ಬೋಧ ಸಾ
ಗರ ದೇಹಪ್ರಭೆಯುಂ ಪ್ರಭಾವಳಿಯುಮಂ ವಿದ್ಯುದ್ವಿಳಸ್ಫೂರ್ಜದು |
ಸ್ಫುರಿತಂ ದಿವ್ಯನಿನಾದಮಾಗುಭಯಮಪ್ಪರ್ಷಂಗುಂದೆ ಸಪ್ತರ್ತುವ
ಪ್ಪಾಲಕ್ಷ್ಮಿ ಕಲಿತಂ ಜಗದ್ಗುರು ಲಸದ್ಧರ್ಮಾಮೃತಾಸಾರಮಂ || ೧೮ ||

ಆ ದುರಿತೇಭಸಿಂಹನ ಸಭಾವಳಯಂ ಬಿಟೆಕೆಯ್ವುದತ್ತು ಸ
ಸ್ವೇಧನನಾದಿರಾಜ ಸಗರಾದಿ ವಿನಿರ್ಮಿತ ಚೈತ್ಯಮಾಳಿಕಾ |
ಪಾದನನಾತ್ತ ವಿಂಶತಿ ಜಿನೇಂದ್ರಸಮಾಧಿವಿಧಾನಸೌಖ್ಯ ಸ
ಮ್ಪಾದನಿರ್ದ ಸಿದ್ಧಪದವೀಜಗತೀಪ್ರತಿಬದ್ಧಭೇದಮಂ || ೧೯ ||

ಆ ಧರಾಧರದ ದಿವ್ಯಕಲ್ಪಕದನೇಕಾನೋಕಹಚ್ಛಾಯಾಚ್ಛನ್ನ ಪಾವನಪ್ರದೇಶದೊಳ್ ಪರಿದುಪರ್ದಿದ ಶುದ್ಧಸ್ಫಟಿಕ ಶಿಲಾಪಟ್ಟದಲ್ಲಿ

ಪೋಗಣ ನಿಶ್ರೇಯಸ ಲ
ಕ್ಷ್ಮೀಗಾಢಾಲಿಂಗನಕ್ಕೆ ತ್ವರಿತಮನಂ |
ದ್ಯೋಗಿಸಿದದೊಪ್ಪೆ ಪ್ರತಿಮಾ
ಯೋಗದೆ ನಿಂದನೊ ಮುನೀಂದ್ರವೃಂದಾರಾಧ್ಯಂ || ೨೦ ||

ಆಗಳಾ ಪರಮೇಶ್ವರನ ಪರಿನಿರ್ವಾಣಕಲ್ಯಾಣ ಸಮಭ್ಯರ್ಚನೋತ್ಸುಕಚಿತ್ತನಾಗಿ

ಅನ್ನತಮ ನಸ್ಮೇದಶೈಲಂ ಪೊಡರ್ವಲರ್ಗೆ ಫಲಂಗಳ್ಗೆ ಮುಕ್ತಾಕ್ಷತೆಗ
ಳ್ಗೆಸಿತ್ತುಲ್ಲಿಂಬನಂ ಮಂಗಳಯುವತಿಯರುಂ ಮಂಗಳದ್ರವ್ಯ ದಿವ್ಯಾ |
ರ್ಚನಮಂ ಮಾಗಲ್ಕ ಸಂಗೀತಕಮುಮೆಸೆವಿನಂ ಭಕ್ತಿಯಿಂ ಭಾವನೇಂದ್ರ
ರ್ದನುಜೇಂದ್ರಜ್ಯೋತಿರಿಂದ್ರಪ್ರತಿಗತಪೃತನರ್ಬಂದರಾ ಕಲ್ಪಜೇಂದ್ರರ್ || ೨೧ ||

ಅಂತು ವಿಯತ್ತಳದಿಂದಿಳಿದು ಇಳಾಮಂಡಳಕ್ಕವತರಿಸಿ ಅನಂತಗುಣನಿಳಯನ ನಂತನಾಥನಂ ತೀರ್ಥವಲ್ಲಭನನಾಲಂಗಿಸಿದ ನಿಃಶ್ರೇಯಸಶ್ರೀಯ ಸಿರಿಮುಡಿಯ ಕೆಳಗೆ ಪೊಳೆವ ಪಳಿನಾವುಗೆಯಂತೆ ಪಳಚ್ಚನಾದಚ್ಚವಳಿಕಿನ ಸಮಾಧಿಶಿಲಾಪಟ್ಟಕಮುಮಿಂದ್ರ

ಸಮಾಜನಮುಮಿಂದ್ರಾಣೀಗಣಮುಮಂ ಸವಿಸ್ತರಮಾರಾಧಿಸಿ, ದೇವೇಂದ್ರವೃಂದಮುಮಿಂತುಮಾನಂದರಸಮೊಕ್ಕುಳಿಯಾಡೆ, ಸೌಧರ್ಮೇಂದ್ರ ನಿಟಿಲತಟಘಟಿತ ಕರಕಮಲಕುಟ್ಮಳನುಂ ಜಯಜಯೋತ್ತಾರಿತ ಮುಖರಿತ ಮುಖಮಂಡಳನುಮಾಗಿ

ಮದವನಿಕ್ಕಿ ಗೆಲ್ದು ಪರಿನಿಷ್ಕ್ರಮಣಾಯತಿ ತಳ್ತು ಘಾತಿಯಂ
ಬಿದಱಿ ಸುಬೋಧಮಂ ಬೆಳಗಿದುನ್ನತಿ ಲೋಕಮನುಯ್ದುರುಂಡು ತೀ |
ಗಿದ ಜನನಂ ಜವಂಗೆಡಿಸಿ ನಿತ್ಯನಿವಾಸಮನಾಳ್ದ ಶಕ್ತಿಯೊ
ಪ್ಪಿದುದೆಲೆ ದೇವದೇವ ನಿನಗಿಂ ನಿಸಗೀವ್ರವದೇಂ ಜಿನೇಶ್ವರಾ || ೨೨ ||

ಎಂದು ಕೀರ್ತಿಸಿಯುಮರ್ಚಿಸಿಯುಂ ಪೂಜಿಸಿಯುಂ ನೋಡಿಯುಂ ತಣಿಯದೆ

ಕ್ಷೋಣಿಯಂ ಪಯದೇಱ್ಗ ಬಳ್ಳಿ ಬಳ್ಳಿಸುತ್ತಿರೆ ಮಿಕ್ಕ ದಿ
ಕ್ಕೋಣಮುಂ ಕಡವಾಗಿಸುತ್ತಿರೆ ಹಸ್ತಜಾಪಳನಭ್ರಮಂ |
ವೀಣೆ ವಾಮಭುಜಾಗ್ರಲಂಬಿತನಂಕಿಸುತ್ತಿರೆ ನಿಂದು ನಿ
ರ್ವಾಣನೃತ್ಯಮನಾಡಿದಂ ಸುರನಾಯಕಂ ನೃತನಾಯಕಂ || ೨೩ ||

ಖಳಕರ್ಮಾಷ್ಟಕಷ್ಟಬಾಧೆಗಿದು ಲಕ್ಷ್ಯಾಲಕ್ಷ್ಯಮೆಂದಾ ಸಮು
ಜ್ವಳಿತ ಸ್ವಾಪಕಲಾಪಪಕ್ಷಿಗಳನೆಲ್ಲಂ ಕೊಂಡು ಬೊಬ್ಬಿಟ್ಟು ಮಂ |
ಗಳಸಂಗೀತಕಮಂ ನೆಗಳ್ಚಿ ದಿವಿಜೇಂದ್ರಸ್ತ್ರೀಜನರ್ ಕುತೂ
ಹಳಿತಸ್ವಾಂತನನಂತಸಂ ನೆಲೆಗೆ ಪೌಲೋಮೀಮನೋವಲ್ಲಭಂ || ೨೪ ||

ಪರಿನಿರ್ವಾಣನಿವಾಸಲಕ್ಷ್ಮಿಯ ವಿವಾಹೋತ್ಸಾಹಮಂ ತಾಳ್ದಿದೀ
ಶ್ವರನಕ್ಷಯನಜೇಯನಂತರಹಿತಂ ತಾನಿರ್ದನಂತಂ ನಿರಂ |
ತರಮೊಲ್ದೀಗೆ ವಿನೇಯ ಸಂತತಿಗೆ ಸಮ್ಯಗ್ದರ್ಶನ ಜ್ಞಾನ ಸ
ಚ್ಚರಿತ ಶ್ರೀಯನನುತ್ತರೋತ್ತರ ಸುಖಶ್ರೀಯುಂ ಜಗತ್ಪ್ರಿಯಮಂ || ೨೫ ||

ಸುರವೃಂದಾರಕವೃಂದಮಂತು ಜಿನಪಶ್ರೀಪಂಚಕಲ್ಯಾಣ ಭಾ
ಸ್ವರ ಪೂಜಾವಿಧಿಯಂ ನೆಗಳ್ಚಿ ಬೞಿಯಂ ವಾಕ್ಪೂಜೆಯಂ ಮತ್ತೆ ಬಿ |
ತ್ತರಿಸಲ್ ತಾಂ ಕವಿಭಾಳಲೋಚನನಶೇಷಾಖ್ಯಾನದಿಂ ತೀರ್ದನಂ
ಬರೆದಂ ಶ್ರೀಮದನಂತನಾಥಕೃತಿಯಂ ಲೋಕಂ ಗುಣಂಗೊಳ್ವಿನಂ || ೨೬ ||

ಚರಿತಪುರಾಣಮಂ ನೆಱೆಯೆ ಪೇೞ್ವೆಡೆಯೊಳ್ಪರಮಾಗಮಕ್ಕೆ ಮೇ
ಣ್ಗುರುಗಳನಾಂತು ನಿಂದೆಡೆಗೆ ಬಲ್ಗವಿಯುಂ ನವಸುಪ್ರಯೋಗತ |

ಕಲಿತವಂ ಜಗದ್ಗುರು ಲಕ್ಷದ್ಧ ವರ್ಣಾಮೃತಾಸಾರಮಂ
ತ್ಪರತೆಗೆ ಬೇಱಿತೆ ಪಂಡಿತರನಳ್ಕಿಱಿತೆ ಕೇಳದೆ ನೋಡದಾಸಿನ
ಟ್ಟಿರವಸಹಾಯನಲ್ತೆ ಸುಕಳಾನ್ವಸುದೊಳ್ಕವಿಭಾಳಲೋಚನಂ ॥ ೧೭ ॥

ರನ್ನಂ ವೈಯಾಕರಣಂ
ಜನ್ನಂ ವೇಣ್ ಕವಿಗಳೊಳಗೆ ವೈಯಾಕರಣಂ ।
ಪೊನ್ನನಸಹಾಯಕವಿ ವೇಣ್
ಜನ್ನಿಗನಸಹಾಯಸುಕವಿ ಕವಿಚಕ್ರಿಗಳೊಳ್ ॥ ೧೮ ॥

ಪಾಡುವ ಸಾಳಗಂ ಬಳಿಯೊಳಾಡುವ ನಚ್ಚಣಿ ಮೆಯ್ವಸಂಗಳಿಂ
ತೀಡುವ ತಂಬೆಲರ್ತೊಳಗಿ ಮೂಡುವ ಪೂರ್ಣಸುಧಾಂಶು ರಾಗದಿಂ ।
ನೋಡುವ ಪೆಣ್ಣ ಕಣ್ಣ ಕಡೆ ಸೋಲಿಸಲಾರ್ಪವೆ ಭಾಳಲೋಚನಂ
ಮಾಡಿದ ಕಾವ್ಯರೀತಿ ಕಿವಿದಾಗಿದ ಭಾವಕರಂತರಂಗಮಂ ॥ ೧೯ ॥

ಪದಪಿಂ ತಾಂ ಪೆಸರ್ಗೊಂಡಿಳಾಧಿಪತಿಯೋ ರಾಯಂ ನಲಂಪಿಂದಮಿ
ರ್ದುದೆ ಸರ್ವಜ್ಞ ಸಭಾಸ್ಥಲಂ ಗಡಣಗೊಂಡಾಜಾಣರೊಳ್ ಜಾಣರಿ ।
ರ್ದುದೆ ದೇವವ್ರಜದೊಳ್ಪ್ರದೇಶ ಮುದದಿಂ ವ್ಯಾಖ್ಯಾನಮಂ ಮಾಡಿ ಕೇ
ಳಿದಪಂ ವಾಗ್ಮಿಗಣಾಗ್ರಗಣ್ಯನೆನೆ ಜನ್ನಂಗಾರ್ಸಮಂ ಧಾತ್ರಿಯೊಳ್ ॥ ೨೦ ॥

ಇದು ಲೋಕೋತ್ತಮಮಪ್ಪ ವಿದ್ಯೆ ಜಗದೊಳ್ತಾನಿತ್ತ ಕಯ್ಯಲ್ಲದೊ
ಡ್ಡಿದ ಕಯ್ಯಲ್ಲದ ಪೆಂಪು ಭೂಭುಜರೊಳದ್ವೈತೀಯಮಾಗಿರ್ಪ ಸ ।
ಲ್ಗೆ ದಿಟಕ್ಕಸ್ಸರ ಲೇಸನಲ್ಲದೆನಗಿಂತಂತೆಂದು ಮಾತಾಡಲೊ
ಲ್ಲದ ಸತ್ವಂ ಕವಿಭಾಳಲೋಚನನೊಳುಂಟಿನ್ನೆರ್ವರೊಳ್ತೋಱಿಸಾ ॥ ೨೧ ॥

ಕೊಡೆಯಂ ಪಟ್ಟಮನಾಂತ ಚಕ್ರಿ ಕವಿತಾಸಾಮ್ರಾಜ್ಯದೊಳ್ತೇಜಮು
ಗ್ಗಡಮಂ ಕೀರ್ತಿಯನಾಂತ ಬಲ್ಲಹನಿಳಾಪುತ್ರತ್ವದೊಳ್ ಚಾಗಮಂ ।
ನುಡಿಯೊಳ್ಸತ್ಯಮನಾಂತ ರಾಜಮುನಿಪಂ ಸಮ್ಯಕ್ತ್ವದೊಳ್ಗಾರವಂ
ಬಡೆದಂ ಮಾನವಮೇರು ಜನ್ನಮರಸಂ ಸಾಹಿತ್ಯರತ್ನಾಕರಂ ॥ ೨೨ ॥

ಅನುಬಂಧ - ೧

ಚಾವುಂಡರಾಯನ 'ತ್ರಿಷಷ್ಟಿಲಕ್ಷಣ ಮಹಾಪುರಾಣ'ದಲ್ಲಿ ವರ್ಣಿತವಾಗಿರುವ ಅನಂತತೀರ್ಥಕರನ ಕಥೆ

ಶ್ರೀಮಹಿತಮುನಿಪ ಸದ್ಧ
ರ್ಮಾಮೃತದಿಂ ತಣಿಸಿ ಭವ್ಯರಂ ನೆಗೞ್ದ ಮಹೋ।
ದ್ದಾಮಗುಣರ್ ಲೋಕೈಕ ಶಿ
ಖಾಮಣಿಗಳನಂತದೇಗನಂತ ಶ್ರೀಯಂ ॥ ೧ ॥

ಧಾತಕೀಷಂಡದ ಮೂಡಣ ಮಂದರದ ಐರಾವತಕ್ಷೇತ್ರದ ಅರಿಷ್ಟಪುರವನಾಳ್ವ ಪದ್ಮರಥನೆಂಬರಸಂ ಸ್ವಯಂಪ್ರಭಜಿನರ ಪಕ್ಕದೆ ಧರ್ಮಮಂ ಕೇಳಿ ವೈರಾಗ್ಯಪರಂ ತನ್ನ ಮಗಂ ಘನರಥಂಗೆ ರಾಜ್ಯಮಂ ಕೊಟ್ಟು ಸಂಯಮಮಂ ಕೈಕೊಂಡೇಕಾದಶಾಂಗಧಾರಿ ಷೋಡಶಭಾವನೆಗಳಿಂ ತೀರ್ಥಕರ ಪುಣ್ಯಮಂ ಕಟ್ಟಿ ಜೀವಿತಾಂತದೊಳ್ ಆರಾಧನಾವಿಧಿಯಿಂದಚ್ಯುತಕಲ್ಪದೊಳ್ ಪುಷ್ಪೋತ್ತರ ವಿಮಾನದೊಳ್ ಅಚ್ಯುತೇಂದ್ರನಿಪ್ಪತ್ತೆರಡು ಸಾಗರೋಪಮಾಯುಮಂ ಮೂಱುಮೊಳನಿಡಿಯುಮಂ ಶುಕ್ಲಲೇಶ್ಯಾಪರಿಣಾಮಮುಂ ಷಷ್ಠಪೃಥ್ವೀಗತಾವಧಿಜ್ಞಾನಮುಮಾಗಿ ಸುಖಮನನುಭವಿಸುತ್ತಿರ್ಪಿನಮಿತ್ತ ಜಂಬೂದ್ವೀಪದ ಭರತಕ್ಷೇತ್ರದಯೋಧ್ಯಾನಗರಮನಾಳ್ವ ಇಕ್ಷ್ವಾಕುವಂಶದ ಕಾಶ್ಯಪಗೋತ್ರದ ಸಿಂಹಸೇನಮಹಾರಾಜಂಗೆಯರಸಿ ಜಯಶ್ಯಾಮಾಮಹಾದೇವಿ ಸೌಧರ್ಮಕೃತ ವಸುಧಾರಾದಿ ಪೂಜಾಪೂರ್ವಕಂ ಕಾರ್ತಿಕಪಾಡಿವದ ಬೆಳಗಪ್ಪ ಜಾವದೊಳ್ ರೇವತೀನಕ್ಷತ್ರದೊಳ್ ಷೋಡಶಸ್ವಪ್ನದರ್ಶನಾನಂತರಮೊಂದು ಗಜಂ ತನ್ನ ಮುಖಮಂ ಪುಗುವುದಂ ಕಂಡು ಅವಧಿಜ್ಞಾನಿಯಪ್ಪ ನಿಜೇಶನಿಂ ತತ್ಫಲಮನಱಿದು ಸುಖಮಿರ್ಪಿನಮಚ್ಯುತೇಂದ್ರಂ ಸ್ವರ್ಗಾವತರಣ ಕಲ್ಯಾಣ ಪೂಜಾಪೂರ್ವಕಮಾ ದೇವಿಯ ಗರ್ಭಕ್ಕವತರಿಸಿ ವಿಮಲಭಟ್ಟಾರಕರ ಸಂತಾನಂ ಪತ್ತು ಸಾಗರೋಪಮದ ಕಡೆಯ ಪಲ್ಯೋಪಮದ ತ್ರಿಭಾಗದೊಳ್ ಧರ್ಮವ್ಯುಚ್ಛಿನ್ನಮಾಗಿರ್ದ ಕಾಲದೊಳ್ ಜ್ಯೇಷ್ಠ ಬಹುಳ ದ್ವಾದಶಿಯೊಳ್ ಪುಷ್ಯಯೋಗದೊಳ್ ಪುಟ್ಟೆ ಸೌಧರ್ಮೇಂದ್ರಂ ಬಂದು ಜನ್ಮಾಭಿಷೇಕಪೂರ್ವಕಮನಂತಜ್ಞಾನಾದಿ ಸಕಲಗುಣಸಂಪನ್ನರಪ್ಪರಿಂದಮನಂತರೆಂಬನ್ವರ್ಥನಾಮಮನಿಟ್ಟು ಪೋದನಿತ್ತಲಾ ತೀರ್ಥಕರ ಕುಮಾರರ್ ತ್ರಿಜ್ಞಾನಧರರುಂ ತ್ರಿಂಶಲ್ಲಕ್ಷವರುಷಪರಮಾಯುಷ್ಯರುಂ ಐವತ್ತು ಬಿಲ್ಲಿಡಿಯರುಂ ಕನಕವರ್ಣರುಮಾಗಿ ಬೆಳೆಯೆ ಲಕ್ಕೆಯುಮಯ್ಯತ್ತುಸಾಸಿರ ವರ್ಷಂ ಕುಮಾರಕಾಲಂ ಪೋಗೆ ರಾಜ್ಯದೊಳ್ನಿಂದು ಪದಿನೈದುಲಕ್ಕೆ ವರ್ಷಂ ರಾಜ್ಯಕಾಲಂ ಸಲ್ವಿನಮೊಂದು ದಿವಸಮುಲ್ಕಾಪಾತ

ದರ್ಶನದಿಂ ಮತಿಜ್ಞಾನಕ್ಷಯೋಪಶಮಪ್ರಯೋಗಸಂಜನಿತ ನಿರ್ವೇಗಂ ಲೋಕಾಂತಿಕ ದೇವರ್ ಪ್ರತಿಬೋಧಿಸೆ ತನ್ನ ಮಗನಪ್ಪ ವಿಜಯನಂ ರಾಜ್ಯದೊಳ್ನಿಲಿಸಿ ಸಾಗರದತ್ತೆಯೆಂಬ ಶಿಬಿಗೆಯನೇರಿ ಸಹೇತುಕವನಕ್ಕೆ ಷಷ್ಠೋಪವಾಸದಿಂ ಜ್ಯೇಷ್ಠ ಬಹುಳ ದ್ವಾದಶಿಯ ಪೂರ್ವಾಹ್ಣದೊಳ್ ರೇವತೀನಕ್ಷತ್ರಮಾಗೆ ಸಾಸಿರರಸುಗಳ್ವೆರಸು ದೀಕ್ಷೆಗೊಂಡು ಚತುರ್ಜ್ಞಾನಧರನಯೋಧ್ಯಾಪುರಕ್ಕೆ ಚರಿಗೆವರೆ ಕನಕವರ್ಣನಪ್ಪ ವಿಶಾಖನೃಪನ ಮನೆಯೊಳ್ ನಿಲೆ ಪಂಚಾಶ್ಚರ್ಯಂ ನೆಗೞೆ ಮೌನವ್ರತದಿನೆರಡು ವರ್ಷಂ ಛದ್ಮಸ್ಥಕಾಲಂ ಸಲೆ ಸಹೇತುಕವನದಶ್ವತ್ಥವೃಕ್ಷದಡಿಯೊಳ್ ಚೈತ್ರಮಾಸದಮಾವಾಸೆಯಪರಾಹ್ಣದೊಳ್ ರೇವತೀ ನಕ್ಷತ್ರದೊಳ್ ಕೇವಲಜ್ಞಾನೋತ್ಪತ್ತಿಯಾಗೆ ಸೌಧರ್ಮಕೃತ ಕಲ್ಯಾಣಂ ಸಾಸಿರದೆಂಟನ್ವರ್ಥನಾಮಂಗಳಿಂ ತಾಳ್ದಿ ಜಯಧಾಮಸರ್ವದಲಾಗಯ್ವದಿಂಬರ್ಗಣಧರರುಂ ಸಾಸಿರ್ವರ್ ಪೂರ್ವಧರರುಂ ಮೂವತ್ತೊಂಬೈಸಾಸಿರದಯ್ನೂರ್ವರ್ಶಿಕ್ಷಕರುಂ ನಾಲ್ಸಾಸಿರದ ಮೂನೂರದಿಂಬರವಧಿಜ್ಞಾನಿಗಳುಂ ಐಸಾಸಿರ್ವರ್ ಕೇವಲಿಗಳುಂ ಎಣ್ಸಾಸಿರ್ವರ್ ವಿಕ್ರಿಯರ್ದ್ಧಿಪ್ರಾಪ್ತರುಂ ಐಸಾಸಿರ್ವರ್ ಮನಃಪರ್ಯಯಜ್ಞಾನಿಗಳುಂ ಎರಡುಲಕ್ಕ ವಾದಿಗಳುಂ ಸರ್ವಶ್ರೀ ಮೊದಲಾಗೊಂದು ಲಕ್ಕೆಯನೆಣ್ಸಾಸಿರ್ವರಜ್ಜಿಯರುಂ ಎರಡುಲಕ್ಕ ಶ್ರಾವಕರುಂ ನಾಲ್ಕು ಲಕ್ಕೆ ಶ್ರಾವಕಿಯರುಂ ಅಸಂಖ್ಯಾತ ದೇವರುಂ ದೇವಿಯರುಂ ಸಂಖ್ಯಾತ ತಿರ್ಯಗ್ಜಾತಿಗಳುಂ ಪಾತಾಳಯಕ್ಷನುಮನಂತಮತಿ ಯಕ್ಷಿಯುಂ ಬೆರಸು ಧರ್ಮೋಪದೇಶಂಗೆಯ್ಯುತ್ತಿರ್ದು ನಸುಮುಂದಿದೇಳುಲಕ್ಕೆಯುಮಯ್ವತ್ತು ವರ್ಷಂ ವಿಹಾರಿಸಿ ಸಮ್ಮೇದಗಿರಿಯೊಳೊಂದು ತಿಂಗಳ್ ವಿಹರಣಮನುೞಿದು ಆಱುಸಾಸಿರ್ವೆನೂರ್ವ ಮುನಿಗಳ್ವೆರಸು ಪ್ರತಿಮಾಯೋಗಧರನಮಾವಾಸೆಯ ಪೂರ್ವರಾತ್ರದೊಳನಂತಭಟ್ಟಾರಕರ್ ಮುಕ್ತಿಗೆ ಸಂದರ್. ಸೌಧರ್ಮೇಂದ್ರ ಪರಿನಿರ್ವಾಣಕಲ್ಯಾಣದೊಳಾನಂದನೃತ್ಯಮನಾಡಿಪೋದಂ.

ಇದು ಸಕಲಶಾಸ್ತ್ರಸಂಯಮಸಂಪನ್ನ ಶ್ರೀಮದಜಿತಸೇನಭಟ್ಟಾರಕ
ಚರಣಕಮಲ ಚಂಚರೀಕಧರ್ಮ ವಿಜಯ ಶ್ರೀಮಚ್ಚಾವುಂಡ
ರಾಜ ವಿರಚಿತಮಪ್ಪ ತ್ರಿಷಷ್ಟಿಲಕ್ಷಣಮಹಾ
ಪುರಾಣದೊಳ್ ಅನಂತನಾಥಪುರಾಣಂ*

*ಚಾವುಂಡರಾಯಪುರಾಣದಲ್ಲಿ ಬರುವ ಅನಂತನಾಥಪುರಾಣದ ಈ ಭಾಗವನ್ನು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ಸಂ: ೨೭, ಸಂಚಿಕೆ ೨ (ಪು. ೪೧–೪೨)ರಿಂದ ತೆಗೆದುಕೊಂಡಿದ್ದೇನೆ.

ಅನುಬಂಧ - ೨

ಶ್ರೀಮದನಂತತೀರ್ಥಕರಸಂತಾನದೊಳ್ ಸುಪ್ರಭನುಂ ಪುರುಷೋತ್ತಮನುಮೆಂಬ ಬಲದೇವವಾಸುದೇವರ ಚರಿತಂ

ಈ ಜಂಬೂದ್ವೀಪದ ಭರತಕ್ಷೇತ್ರದ ಪಾದನಪುರಮನಾಳ್ವ ವಸುಷೇಣನೆಂಬರಸಂ ತನ್ನಯಯ್ನೂರ್ವರರಸಿಯರೊಳಗ್ರಗಣ್ಯೆಯುಮಪ್ಪ ಪ್ರಿಯಸುಂದರಾ ಮಹಾದೇವಿಯೊಳನುಭವಿಸುತ್ತಿರ್ಪನ್ನೆಗಮೊಂದು ದಿವಸಂ ಮಳಯವಿಷಯಾಧಿಪತಿಯಪ್ಪ ಚಂಡಶಾಸನನೆಂಬೊಂ ಮಿತ್ರತ್ವದಿಂ ಪಾದನಪುರಕ್ಕೆ ಬಂದಾತಂ ಪ್ರಿಯಸುಂದರಿಯಂ ಕಂಡು ಸೋಲ್ತು ಮಾಯಾಂತರದಿನಾತೆಯುಂ ಕೊಂಡು ಪೋಗೆ ಭಂಗಮಾಗಿರ್ದ ವಸುಷೇಣಂ ದುಃಖಾಕ್ರಾಂತನಿಂತೆಂದು ಚಿಂತಿಸಿದಂ:—ನಾಂ ಮಂದಭಾಗ್ಯನೆಂ ಸುಕೃತಫಲವಿಹೀನನೆನ್ನ ಪಗೆವಂ ಕಿಡಿಸಲಾರ್ತೆನಿಲ್ಲೆನೆ ನಿರ್ವೇಗಪರನಾಗಿರ್ಪನ್ನೆಗಮೊಂದು ದಿವಸಂ ಶ್ರೇಯಾಂಸರೆಂಬ ಗಣಧರರ ಪಕ್ಕದೆ ತಪಂಬಟ್ಟು ಸಿಂಹನಿಃಕ್ರೀಡಿತಮೆಂಬ ತಪದೊಳ್ನೆಗಳ್ದು ಎನ್ನ ತಪದ ಫಲಮುಂಟಪ್ಪೊಡಮನುಭವದೊಳ್ ಸಕಲ ಮನೋಹರರೂಪನುಮಪ್ರತಿಹತಶಾಸನನುಮಪ್ಪೆನಕ್ಕೆಂದು ನಿದಾನಂಗೆಯ್ದು ಕಾಲಾಂತರದೊಳೊಂದು ತಿಂಗಳ್ ನೋಂತು ಮುಡುಪಿ ಸಹಸ್ರಾರ ಕಲ್ಪದೊಳ್ಪುಟ್ಟಿ ಪದಿನೆಂಟುಸಾಗರೋಪಮಸುಖಮನನುಭವಿಸುತಿರ್ಪಿನಮಿತ್ತ ಜಂಬೂದ್ವೀಪದ ಭರತಕ್ಷೇತ್ರದ ದ್ವಾರಾವತೀಪುರದೊಳ್ ಮಹೇಂದ್ರಕಲ್ಪದಿಂ ಬಂದು ಸೋಮಪ್ರಭನೆಂಬರಸನಾಲ್ವತ್ತಿರ್ಚ್ಛಾಸಿರವರುಷಪರಮಾಯುಷ್ಯಮನೊಡೆಯನುಂ ಐವತ್ತೊಂದು ಬಿಲ್ಲಿಡಿಯನುಮಾಗಿರ್ಪಿನಂ ಮಹೇಂದ್ರಕಲ್ಪಜಂ ಬಂದು ಜಯಾವತಿಯೆಂಬರಸಿಯುಂ ಆನತಕಲ್ಪದಿಂ ಬಂದ ಸೀತೆಯುಮಂಬೆರಸು ಸುಖಮಿರ್ಪಿನಂ ಜಯಾವತಿಗೆ ಶುಭಸ್ವಪ್ನದರ್ಶನಾನಂತರಂ ಪೂರ್ವಾಭಾದ್ರಪದ ನಕ್ಷತ್ರದೊಳ್ ಮುಂವೇಳ್ದ ಮಹಾಬಳಚರನಪ್ಪ ಸಹಸ್ರಾರಕಲ್ಪಜಂ ಬಂದು ಸುಪ್ರಭನೆಂಬೊಂ ಮಗನಾದೊಂ. ಸೋಮಪ್ರಭಂಗಂ ಸೀತೆಗಂ ವಸುಷೇಣಚರನಪ್ಪ ಸಹಸ್ರಾರಕಲ್ಪಜಂ ಬಂದು ಪುರುಷೋತ್ತಮನೆಂಬ ಮಗನಾದನಂತಿರ್ವ್ವರುಂ ಬಲದೇವವಾಸುದೇವರೆನಿಸಿ ಧವಲನೀಲವರ್ಣರುಮಪ್ಪೆಯ್ವತ್ತು ಬಿಲ್ಲಿಡಿಯರುಂ ಪಂಚಾಶಲ್ಲಕ್ಷವರ್ಷಪರಮಾಯುಷ್ಯರುಮಾಗಿ ಸುಖಮಿರ್ಪಿನಮಿತ್ತ ಕಾಶೀದೇಶದ ವಾರಣಾಸೀಪುರಮನಾಳ್ವ ಮಧುಕೈಟಭನೆಂಬನವರ್ಗ್ಗೆ ಕಪ್ಪಮಂ ಬೇಡಿಯಟ್ಟೆ ಕುಡದಿರ್ದ್ದೊಡದಕ್ಕೆ ಮುಳಿದಿರ್ಪಿನಂ ನಾರದನಿಂ ಮುಳಿಸುಪೆಚ್ಚಿ ಮೇಲೆವಂದು ಕಾದಿ ಪುರುಷೋತ್ತಮನಂ ಚಕ್ರದೊಳಿಟ್ಟೊಡದು ಬಂದು ಬಲದ ತೋಳಕೆಲದೊಳ್ ನಿಲ್ವುದುಂ ಪುರುಷೋತ್ತಮನಾಚಕ್ರಮಂ

ಕೊಂಡು ಮಧುಕೈಟಭನಂ ಕೊಂದು ತ್ರಿಖಂಡಪತಿಗಳಾಗಿ ರಾಜ್ಯಂಗೆಯ್ದು ಜೀವಿತಾಂತ್ಯನದೊಳ್ ಪುರುಷೋತ್ತಮುನವಧಿಸ್ಥಾನಕ್ಕೆ ಸಂದೊಂ. ಸುಪ್ರಭನುಮಾತನ ವಿಯೋಗದೊಳ್ ಸೋಮಪ್ರಭಕೇವಲಿಗಳ ಸಾರೆ ದೀಕ್ಷೆಯಂ ಕೈಕೊಂಡು ಮೋಕ್ಷಕ್ಕೆ ಪೋದಂ.*

*ಚಾವುಂಡರಾಯಪುರಾಣದಲ್ಲಿ ಬಂದಿರುವ ಈ ಬಲದೇವ-ವಾಸುದೇವರ ಚರಿತವನ್ನು ಕನ್ನಡ ಸಾಹಿತ್ಯಪರಿಷತ್ಪತ್ರಿಕೆಯ ಸಂ. ೨೭, ಸಂಚಿಕೆ ೨(ಪು. ೪೩)ರಿಂದ ತೆಗೆದುಕೊಂಡಿರುವೆನು.

ಅರ್ಥಕೋಶ

(ಸೂಚನೆ : ಮೊದಲ ಅಂಕೆ ಅಧ್ಯಾಯವನ್ನೂ ಎರಡನೆ ಅಂಕೆ ಪದ್ಯವನ್ನೂ ಸೂಚಿಸುತ್ತದೆ.)

ಪು. ೫೧

ಉದ್ದಾಮ (೧.೧) ಶ್ರೇಷ್ಠ
ವಿತ್ರಸ್ತಾರಿ (೧.೨) ವಿಶೇಷ ಭಯವನ್ನುಂಟುಮಾಡುವ ಸ್ವೈರಿ
ಸ್ವಾದರ್ಥ (೧.೩) ವಿಶೇಷವಾದ ಅರ್ಥ (?)
ಅಸ್ಮನ್ (೧.೩) ನನ್ನ
ಕೆಯ್ದು (೧.೬) ಆಯುಧ
ನಸಿ (೧.೬) ಬಾಡು, ಕಳೆಗುಂದು

ಪು. ೫೨

ನೋನ್ (೧.೭) ವ್ರತವನ್ನು ಮಾಡು
ಅಪತ್ಯ (೧.೮) ಮಗ
ಕಟಕ (೧.೯) ಸೈನ್ಯ
ಬಗೆ (೧.೧೦) ರೀತಿ
ಅರಿದು (೧.೧೧) ತಿಳಿದು
ಜಾಱಿಬಟ್ಟೆ (೧.೧೧) ಒಡುಕುವ ದಾರಿ
ಪರಮಾಗಮ (೧.೧೧) ಶ್ರೇಷ್ಠವಾದ ಜಿನಾಗಮ
ಬಱಿಕೆಯ್ವ (೧.೧೧) ವ್ಯರ್ಥವಾಗಿಸುವ
ಬಱಿದೆ (೧.೧೧) ಸುಮ್ಮನೆ, ವ್ಯರ್ಥವಾಗಿ
ಪೞಿ (೧ ೧೩) ನಿಂದೆ
ಪೊಗೞ್ತೆ (೧.೧೩) ಹೊಗಳಿಕೆ
ಬಗುೞ್ವುದು (೧.೧೩) ನಾಯಿ
ಬೇೞ್ಕು (೧.೧೩) ಬೇಕು

ಪು ೫೩

ಜಾಸಿಗ (೧.೧೪) ಹೂವಿನ ದಂಡೆ
ಪೞಗಬ್ಬಿಗರ್ (೧.೧೫) ಹಳೆಯ ಕವಿಗಳು
ಪಲ್ಲಟವಿಟ್ಟು (೧.೧೫) ಬದಲಿಸಿ
ಅಣ್ಮು (೧.೧೫) ಸಮರ್ಥ
ಚಂದನಪಂಕ (೧೧.೭) ಶ್ರೀಗಂಧದ ಕೆಸರು
ಬಂಧ (೧.೧೭) ಕಟ್ಟು
ಸಂಕಲೆ (೧.೧೭) ಸಂಕೋಲೆ
ಪರಿಷದ್ (೧.೧೮) ಸಮೂಹ
ಆಸ್ಥಾಯಿಕೆ (೧.೨೦) ಆಸ್ಥಾನ
ಆಯತ್ತಂ (೧ ೨೨) ಪ್ರಾಪ್ತಿಯಾಗುವುದು
ತ್ರಯ್ಯಲ್ (೧ ೨೨) ಪಾಯಸ
ಭರ್ತೃ (೧.೨೨) ಸ್ವಾಮಿ, ಒಡೆಯ

ಪು. ೫೪

ಕರಂ (೧.೨೬) ಅತಿಶಯವಾಗಿ, ವಿಶೇಷವಾಗಿ
ಮುಕುಳ (೧.೨೬) ಮೊಗ್ಗೆ

ಪು ೫೫

ಬೇಳಂಬ (೧.೨೭) ವಿಚಾರ
ಭೂಭೃತ್ (೧.೨೭) ಪರ್ವತ

ಪು. ೫೬

ಗೋರಿಯ ಹರಿಣ (೨.೨) ಮೋಸದ

ಆಕರ್ಷಣೆಗೆ ಒಳಗಾದ ಜಿಂಕೆ
ಸ್ಥಾನ (೨.೨) ತಾಣ
ಆಸೇಕ (೨.೨) ಚಿಮುಕಿಸುವುದು
ಒದವೆ (೨.೨) ಉಂಟಾಗಲು
ಪ್ರವಾಲಾಧರೆಯರ್ (೨.೨) ಚಿಗುರಿನಂತಹ ತುಟಿಯುಳ್ಳವರು
ಕಣ್ಗೇಟ (೨.೨) ನೋಟಗಳ ಮಿಲನ
ಕೋಟಲೆ (೨.೨) ಚಿಂತೆ
ಲಚ್ಚಣ (೨.೩) ಲಕ್ಷಣ
ಸಂಸೃತಿ (೨.೩) ಸಂಸಾರ
ಮಕರಧ್ವಜ (೨.೪) ಮನ್ಮಥ
ಚಯ (೨.೫) ಸಮೂಹ
ತೆಮಳ್ದಪ್ಪುದು (೨.೫) ತಳ್ಳಿಹೋಗುತ್ತದೆ
ಮನೋಜಾತ (೨.೫) ಮನ್ಮಥ
ವಿದ್ಧ (೨.೫) ಚಿತ್ರ
ಗಾಡಿ (೨.೫) ಸೌಂದರ್ಯ
ರೂಢಿ (೨.೫) ಅತಿಶಯವಾದ
ಪ್ರವಾಲ (೨.೫) ಚಿಗುರು, ಮೊಳಕೆ

ಪು. ೫೭

ಅರ್ವಿಸೆ (೨.೬) ಆವರಿಸಲು
ಆಖಂಡಳ (೨.೬ ವ) ಇಂದ್ರ
ರೋಚಿ (೨.೭) ಕಿರಣ
ಅನೀಕ (೨.೭) ಸಮೂಹ
ತೂಣೀರ (೨.೭) ಬತ್ತಳಿಕೆ
ತೀವಿದ (೨.೭) ತುಂಬಿದ
ಶ್ರೇಣಿ (೨.೭) ಸಾಲು
ಎಳವೆಱೆ (೨.೭) ಬಾಲಚಂದ್ರ
ಅಗೆ (೨.೭) ಮೊಳಕೆ
ಅಭ್ರಾಬ್ಧಿ(೨.೭ವ)ಮೋಡಗಳೆಂಬ ಸಮುದ್ರ
ಎಸಳ್ಪಸಗಿದ(೨.೭ ವ) ಹೂವಿನ ದಳಗಳು ವಿಜೃಂಭಿಸಿದ
ಚಂಚರೀಕ (೨.೭ ವ) ದುಂಬಿ
ಪಾಱು ನೀಱೆಯರ್ (೨.೭ ವ) ಸಂಚರಿಸುವ ಸುಂದರಿಯರು
ಅವನೀತಳ (೨.೭ ವ) ಭೂಭಾಗ
ಸುರಭಿ (೨.೮) ಪರಿಮಳ
ಜವನಿಕೆ (೨.೮) ತೆರೆ
ಭೃಂಗೀಪಟಲ (೨.೮) ದುಂಬಿಗಳ ಸಮೂಹ
ನೆವ (೨.೯) ವ್ಯಾಜ
ಅಧಿವಾಸ (೨.೯) ಪರಿಮಳ
ಮಯೂಖ (೨.೯) ಕಿರಣ
ಅವನೀಲಲನೆ (೨.೧೦) ಭೂಕಾಂತೆ
ಕುಟ್ಟಿಮತಲ (೨.೧೧) ನೆಲೆಗಟ್ಟು
ಲತಿಕಾಕೋಮಳೆ (೨.೧೧) ಬಳ್ಳಿಯಂತೆ ಬಳಕುವ ಕೋಮಲ ಶರೀರವುಳ್ಳವಳು

ಪು. ೫೮

ಅಂತೇವಾಸಿ (೨.೧೨) ಶಿಷ್ಯ
ಧರಾಮರ (೨.೧೨) ಬ್ರಾಹ್ಮಣ
ಮಾಣಿ (೨.೧೩) ಶಿಷ್ಯ
ಕವಳಿಗೆ (೨.೧೩) ಓಲೆಯ ಹೊತ್ತಿಗೆ
ಸ್ರಕ್ (೨.೧೪) ಮಾಲೆ
ಕರಂಕ (೨.೧೪) ತಾಂಬೂಲದ ಸಣ್ಣ ಪೆಟ್ಟಿಗೆ
ಪ್ರಾಭೃತ (೨.೧೪) ಕಾಣಿಕೆ
ಸ್ಮರಚಕ್ರೇಶ (೨.೧೪) ಮನ್ಮಥಚಕ್ರವರ್ತಿ
ಶರದ (೨.೧೫) ಶರತ್ಕಾಲ

ಪ್ರಸ್ತರಣ (೨.೧೫ ವ) ಚೆಲ್ಲಲ್ಪಟ್ಟ
ವಿಯಚ್ಚರಲೋಕ (೨.೧೫) ದೇವಲೋಕ
ಕೆಯ್ಗೆಯೊಳ್ (೨.೧೫ ವ) ಕೈಯಿಂದ ಕೈಗೆ ದಾಟಿಸಿ
ಅವಟಯಿಸು (೨.೨೫ ವ) ತಿಳಿಯಪಡಿಸು
ಧರಾಮರ (೨.೧೫ ವ) ಬ್ರಾಹ್ಮಣ
ಅಗ್ಗ (೨.೧೬) ಶ್ರೇಷ್ಠ

ಪು. ೫೯

ಅಂಕ (೨.೧೬) ಮಗ್ಗಲು
ಕಮ್ರ (೨.೧೭) ಮನೋಹರ, ಸುಂದರ
ಎಳಸಿದ (೨.೧೭) ಉಂಟಾದ
ಕೇಸಡಿ (೨.೧೮) ಕೆಂಪಾದ ಪಾದ
ಅನುನಯ (೨.೧೯) ಪ್ರೀತಿ
ಪಕ್ಷ್ಮ (೨.೨೦) ರೆಪ್ಪೆ
ತಳ್ಪೊಯ್ಯೆ (೨.೨೦) ಒತ್ತಾಗಿ ಸೇರಲು, ತಾಗಲು
ಶೋಣಾಬ್ಜ (೨.೨೦) ಕೆಂಪಾದ ಕಮಲ
ಕೆಳೆ (೨.೨೦) ಸ್ನೇಹ
ಛವಿ (೨.೨೦) ಕಾಂತಿ
ಅಣುಗಿ (೨.೨೦ ವ) ಪ್ರೀತಿಯ
ನಡೆಯಿಸೆ (೨.೨೦ ವ) ನಡೆದಾಡಿಸಲು
ಮರಾಳ (೨.೨೦ ವ) ಹಂಸ
ಕೇಕಿ (೨.೨೦) ನವಿಲು
ನಡೆಗಲ್ವಂತೆ (೨.೨೦ ವ) ನಡೆಯುವುದನ್ನು ಕಲಿಯುವಂತೆ

ಪು. ೬೦

ಪುತ್ರಿಕೆ (೨.೨೧) ಗೊಂಬೆ
ಅದಟ (೨.೨೧) ಪರಾಕ್ರಮಿ
ಪರ್ಯಂಕ (೨.೨೨ ವ) ಮಂಚ
ತುಹಿನಕರ (೨.೨೨ ವ) ಚಂದ್ರ
ಗಗನವಲ್ಲಭ (೨.೨೨ ವ) ಚಂದ್ರ
ಬಳಿಯಂ (೨.೨೨ ವ) ಅನಂತರ
ಅಪನೋದ (೨.೨೨) ನಿವಾರಣೆ
ನುಣ್ಣಿಸು (೨.೨೨ ವ) ನಯಗೊಳಿಸು
ಅಳಂಕೆಗೊಳಿಸು (೨.೨೨ ವ) ಉಂಟು ಮಾಡು
ಅನ್ವಯ (೨.೨೩) ವಂಶ

ಪು. ೬೧

ಸೌವಿದಲ್ಲ (೨.೨೪ ವ) ರಾಣಿವಾಸದ ಸೇವಕ
ಸೆರ್ವಿಸಿ (೨.೨೫) ಅವಲಂಬಿಸಿ, ಒರಗಿ
ಕಮ್ರಾಮ್ರೇಡಿತ (೨.೨೫ ವ) ಸುಂದರವಾದ ಮಾವನ್ನು ತಿರಸ್ಕರಿಸುವಂತೆ
ಅಷ್ಟಮಂಗಳ (೨.೨೫ ವ) ಪೂಜೆಗೆ ಬೇಕಾದ ಜಲ, ಗಂಧ, ಅಕ್ಷತೆ, ಕುಸುಮ, ನೈವೇದ್ಯ, ದೀಪ, ಧೂಪ, ಫಲ —ಇತ್ಯಾದಿ ಪರಿಕರಗಳು
ನಿರ್ಗಳಿತ (೨.೨೬ ವ) ಬೀಳದ
ಮಾಂಗಲ್ಯ (೨.೨೭) ಮಂಗಳ
ನಮೋಸ್ತು (೨.೨೭) ಮುನಿಗಳು
ಎಗ್ಗು (೩.೨) ದಡ್ಡತನ
ಪಾಣಿ (೩.೬) ನೀರು
ಗೊಂದಣ (೩.೬) ಸಮೂಹ
ಬಂದ (೩.೬) ಫಲಬಿಟ್ಟ
ಜಾತಿ (೩.೬) ಜಾಜಿಯ ಹೂ
ಶಾಲಿ (೩.೭) ಬತ್ತ
ಕೌಂಗು (೩.೭) ಅಡಕೆಮರ
ಚಟುಳ್ನಾಡು (೩.೭) ಹೊರಳಾಡು

ಕಾಸಾರ (೩.೭) ಸರೋವರ

ಪ್ರೇಕ್ಷಣ (೩.೮) ನೋಟ

ನಟ್ಟುವ (೩.೮) ನಟ, ಪಾತ್ರಧಾರಿ, ನೃತ್ಯಗಾರ

ಪನಸರಂಗ (೩.೮) ಹಲಸಿನ ಮರವೆಂಬ ರಂಗಸ್ಥಳ

ಸೂಟ್ವಿಳ (೩.೮) ಸರದಿಯಂತೆ ಕೂಗುವವ

ಕಿಸುಗಣ್ಚೆ (೩.೮) ಕಣ್ಣು ಕೆಂಪಗೆ ಮಾಡಿ

ವೃತ್ತಿ (೩.೧೦) ವಿವರಣೆ

ಪಂಚಿಕೆ (೩.೧೦) ಹಂಚಿಕೆ

ವಾರ್ತಿಕ (೩.೧೦) ಟೀಕೆ, ಟಿಪ್ಪಣಿ, ಶ್ರೇಷ್ಠ ಗ್ರಂಥಕ್ಕೆ ಬರೆಯುವ ವೃತ್ತಿ

ಪು. ೬೪

ತರಳಾಪಾಂಗೆ (೩.೧೩) ಚಂಚಲವಾದ ಕಡೆಗಣ್ಣೋಟವುಳ್ಳವಳು

ದೋಷಾಕರ (೩.೧೩) ಚಂದ್ರ

ನಿರ್ನೆರಂ (೩.೧೩) ನಿಷ್ಕಾರಣವಾಗಿ

ಮೃಗೀ (೩.೧೪) ಜಿಂಕೆ

ದೀವ (೩.೧೪) ಬೇಟೆಯಾಡಲು ಆಕರ್ಷಿಸುವುದಕ್ಕಾಗಿ ಕಟ್ಟಿದ ಪ್ರಾಣಿ

ಗೋರಿಗೊಳಿಸು (೩.೧೪) ಮೋಸದ ಆಕರ್ಷಣೆಗೆ ಒಳಗಾಗಿಸು

ಲುಬ್ಧಕ (೩.೧೪) ಬೇಡ

ಸಾಯಕ (೩.೧೪) ಬಾಣ

ಪು. ೬೫

ಕುಂಚಣಿಗೆ (೩.೧೮) ಚಾಮರ

ಕುಂಡಿಕ (೩.೧೮) ಕಮಂಡಲು

ಮುಖರಿತ (೩.೧೯ ವ) ಶಬ್ದದಿಂದ ಕೂಡಿದ

ಮೂಮೆ (೩.೧೯ ವ) ಮೂರು ಬಾರಿ

ಅಂಗಚಿತ್ತ (೩.೨೦) ಬಹುಮಾನ

ಪಟಹ (೩.೨೧) ತಮಟೆ

ಘೂರ್ಣಿ (೩.೨೧) ಭೋರೆಂಬ ಶಬ್ದ

ಪಿಶಿತ (೩.೨೨) ಮಾಂಸ

ಪುರುಡಿಸು (೩.೨೨) ಸ್ಪರ್ಧಿಸು

ಪೋರ್ (೩.೨೨) ಹೋರು, ಯುದ್ಧ ಮಾಡು

ಪು. ೬೬

ಕರಿಣಿ (೩.೨೩) ಹೆಣ್ಣಾನೆ

ಕೇಸರಿಣಿ (೩.೨೩) ಸಿಂಹಿಣಿ

ಕರೇಣುಪ್ರೋತ (೩.೨೩) ಹೆಣ್ಣಾನೆಮರಿ

ಆತ್ಮಸಂಜಾತ (೩.೨೩) ತನ್ನ ಕೂಡ ಹುಟ್ಟಿದ

ಬಟ್ಟೆ (೩.೨೪) ದಾರಿ

ಪುಡಿ (೩.೨೪) ಧೂಳು

ಸೋಗೆ (೩.೨೪) ಗರಿ

ಸೋಗೆ (೩.೨೪) ನವಿಲು

ಮುಕುಳ (೩.೨೫) ಮುಚ್ಚಿದ

ನಕುಳ (೩.೨೫) ಮುಂಗುಸಿ

ಊಡು (೩.೨೬) ಉಣ್ಣಿಸು

ಪುರಂದರ (೩.೨೭) ದೇವೇಂದ್ರ

ಬಲಗೊಳ್ (೩.೨೭) ಪ್ರದಕ್ಷಿಣೆ ಮಾಡು

ಆತೋದ್ಯ (೩.೨೭) ಎಲ್ಲಾ ಕಡೆಯಲ್ಲಿ ಹೊಡೆಯಲ್ಪಡುವ ವಾದ್ಯ

ತಂಡುಲ (೩.೨೮) ಅಕ್ಕಿ

ಚರು (೩.೨೮) ಹವಿಸ್ಸು

ಚಂದನ (೩.೨೮) ಶ್ರೀಗಂಧ

ಪು. ೬೭

ಅಭಿಷ್ಟುತಿ (೩.೨೮ ವ) ಎದುರಿಗೆ ಸ್ತುತಿಸುವುದು

ನೊಳ್ಗಿದ (೩ ೩೧) ನಮಸ್ಕರಿಸಿದ

ಪು. ೬೮

ನನೆತು (೩.೩೨ ವ) ಚಿಗುರಿ, ಮೊಳಕೆ ಯೊಡೆದು

ಕರ್ದಮ (೩.೩೫) ಕೆಸರು

ಮುಸುರಿಗೆ (೩.೩೫) ಪರದೆ

ಅಪರದಿಶಾ (೩.೩೬) ಪಶ್ಚಿಮದಿಕ್ಕು

ಪು. ೬೯

ಪಕ್ಷ್ಮ (೩ ೩೬) ರೆಪ್ಪೆ

ಕೊನರ್ವ (೩ ೩೬) ಹಬ್ಬುತ್ತಿರುವ

ವಿದ್ಯುಲ್ಲತೆ (೩ ೩೭) ಬಳ್ಳಿಮಿಂಚು

ನಿರಭ್ರವ್ಯೋಮ (೩ ೩೭) ಮೋಡಗಳಿಲ್ಲದ ಆಕಾಶ

ಸಿಂದೂರ (೩ ೩೭) ಕುಂಕುಮ

ಉದ್ಗ್ರೀವ (೩.೩೭ ವ) ಕೊರಳೆತ್ತಿದ

ಉತ್ತಾಲ (೩.೩೭ ವ) ಉದ್ದವಾದ

ಉನ್ನಮಿತ (೩.೩೭ ವ) ಎತ್ತಿದ

ನಿರ್ವೇಗ (೩ ೩೮ ವ) ವೈರಾಗ್ಯ

ಜತ್ರುಕುಟಿ (೩ ೩೯ ವ) ಹಿಂಸಾಚಾರ

ಹಣೆದ (೩.೪೦) ಗಾಯ

ಪೊಯಿಲ್ (೩.೪೦) ಹೊಡೆತ

ಪು. ೭೦

ನಿಟ್ಟೆ (೩.೪೧) ನಿಡಿದು

ಕಲ್ಪ (೩ ೪೨) ಬ್ರಹ್ಮನ ಒಂದು ಹಗಲು

ಚೋಹ (೩.೪೫) ವೇಷ

ಮೊನೆ (೩.೪೬) ಯುದ್ಧ

ಪು. ೭೧

ಜೋಡೆ (೩.೪೭) ಜಾರೆ, ಸೂಳೆ

ಪ್ರವ್ರಜ್ಯ (೩.೪೭ ವ) ಸನ್ಯಾಸ

ಸೇಕ (೩.೪೭ ವ) ಸುರಿಸುವುದು

ಪರಿಜು (೩.೪೯) ಆಕಾರ

ಪರಿರಂಭ (೩.೪೯) ಆಲಿಂಗನ

ಚಂಚರೀಕ (೩.೫೦) ದುಂಬಿ

ವಿಧು (೩ ೫೦) ಚಂದ್ರ

ಪು. ೭೨

ತೂಳ್ (೩.೫೧) ಓಡಿಸು, ಬೆನ್ನಟ್ಟು

ಸ್ಪೃಹ (೩.೫೨) ಆಶೆ, ಮೋಹ

ಉದೀರ್ಣ (೩.೫೨ ವ) ಹಿರಿದಾದದ್ದು, ಹೆಚ್ಚಾದದ್ದು

ಕಳಭ (೩.೫೨ ವ) ಆನೆಯ ಮರಿ

ಸಂಭಾವನೆ (೩.೫೩) ಊಹೆ (?)

ಪಂದೆ (೩ ೫೩) ಹೇಡಿ

ಸಂತರ್ಜಿಸು (೩.೫೪ ವ) ಸಮಾಧಾನಿಸು

ಅವಹಿತ (೩.೫೪ ವ) ಏಕಾಗ್ರತೆ

ಪು. ೭೩

ತಿಣ್ಣ (೩.೫೬) ಭಾರ

ಸಮನಿಸು (೩ ೫೬) ಒದಗು

ನಾಗ (೩ ೫೭) ಆದಿಶೇಷ

ಅವತಂಸ (೩.೫೮) ಆಭರಣ

ಪು. ೭೪

ವಲ್ಲಕೀ (೩ ೬೩) ವೀಣೆ

ಸೀಜ (೩.೬೩) ಸುಂದರ, ಮನೋಹರ

ಬಗ್ಗಿಸು (೩.೬೪) ಸಮಾಧಾನಿಸು

ಪು. ೭೫

ಶಬಲ (೪.೧) ಮಿಶ್ರವರ್ಣ

ಅಚ್ಚಿಗ (೪.೩) ರೀತಿ

ಅವರೂಢಾಂದೋಳ (೪ ೩ ವ) ಮನಸ್ಸಿನ ತಾಕಲಾಟವನ್ನು ತಡೆದ

ಘೃಣಿ (೪.೪) ಕಾಂತಿ

ಒಯ್ಯರ (೪.೪) ಅಂದ

ಕರಂಬ (ಳ.೪) ಕದಂಬ
ವಾಸಿಗ (ಳ.೪) ಪರಿಮಳದಿಂದ ಕೂಡಿದ

ಪು. ೭೬
ಜವನಿಕೆ (ಳ.೫) ತೆರೆ
ನೇಪಥ್ಯ (ಳ.೫) ವೇಷಾಲಂಕಾರ
ಚೋಹ (ಳ.೫) ವೇಷ
ಬೆಳ್ಕುರ್ (ಳ.೭) ಭಯಪಡು
ತಳ್ಕಯಿಸು (ಳ.೭) ಲೇಪಿಸು
ಪಿಳ್ಳು (ಳ.೭) ಬಾಣದ ಬುಡ
ಲಕ್ಷ್ಯ (ಳ.೭) ಗುರಿ
ಶರದಭ್ರ (ಳ.೧೦) ಶರತ್ಕಾಲದ ಮೋಡ
ವಿಭ್ರಮ (ಳ.೧೦) ಸೊಗಸು
ಸಾಕಲ್ಯ (ಳ.೧೦) ಎಲ್ಲಾ

ಪು. ೭೭
ಪೆಕ್ಕಣ (ಳ.೧೧) ನೋಟ
ಪೀಯೂಷ (ಳ.೧೨ ವ) ಅಮೃತ
ಪರಿತೋಷ (ಳ.೧೨ ವ) ಸಂತೋಷ
ಕತ (ಳ.೧೩) ಕಾರಣ
ಆರವೆ (ಳ.೧೪) ಉದ್ಯಾನ, ತೋಟ
ನನಾಂದೃ (ಳ.೧೫) ಹೆಂಡತಿಯ ಅಕ್ಕ

ಪು. ೭೮
ಅವನಮ್ರ (ಳ.೧೬) ಬಾಗಿದ
ಪೂವಲಿ (ಳ.೧೮) ಹೂವಿನಿಂದ ಬರೆದ ಚಿತ್ರ
ಕಾರ್ (ಳ.೧೮) ಮಳೆ
ನೇರಾಣಿ (ಳ.೧೮) ಅಪರಂಜಿ, ಶುದ್ಧ ಬಂಗಾರ
ಉತ್ತಂಸ (ಳ.೧೯) ಶಿರೋಭೂಷಣ
ವೈಮಾನಿಕ (ಳ.೧೯) ವಿಮಾನಸಂಚಾರಿ

ಪು. ೭೯
ಎಲರ್ವಟ್ಟೆ (ಳ.೨೨) ಆಕಾಶಮಾರ್ಗ
ವಿಚಕಿಲ (ಳ.೨೪) ಸೂಜಿಮಲ್ಲಿಗೆ
ಕುರುವಕ (ಳ.೨೪) ಮದರಂಗಿ, ಗೋರಟೆ
ಮಂಡವ (ಳ.೨೪) ಮಂಟಪ
ರುಚಕ (ಳ.೨೪) ಮಂಗಳ, ಶೋಭಾಯಮಾನ
ಭೃಂಗಾರ (ಳ.೨೪ ವ) ಚಿನ್ನದ ಗಿಂಡಿ
ಡವಕೆ (ಳ.೨೫ ವ) ಉಗುಳುವ ಪಾತ್ರೆ, ಕಾಳಂಜಿ

ಪು. ೮೦
ಅಪರ (ಳ.೨೬) ಪಶ್ಚಿಮ
ಅಶ್ಮ (ಳ.೨೬) ಕಲ್ಲು

ಪು. ೮೧
ಸೂಳ್ (ಳ.೨೮ ವ) ಸರದಿ
ವೆಸ (ಳ.೨೮ ವ) ಊಳಿಗ, ಸೇವೆ
ಮೃಗಮದ (ಳ.೩೦) ಕಸ್ತೂರಿ
ಅಣ್ಪು (ಳ.೩೦) ಲೇಪನ
ನೂಪುರ (ಳ.೩೦) ಕಾಲಗೆಜ್ಜೆ, ಪೈಜಣ
ಪುಲಿನ (ಳ.೩೨) ಮಳಲಿನ

ಪು. ೮೨
ಸದ್ಮ (ಳ.೩೩) ಮನೆ
ಗವೇಂದ್ರ (ಳ.೩೫) ಒಳ್ಳೆಯ ಎತ್ತು
ಅಣೆ (ಳ.೩೫) ತಿವಿ, ಇರಿ
ನಸೆ (ಳ.೩೫) ಕಡಿತ
ಅಸವಸ (ಳ.೩೫) ತ್ವರೆ, ಸಂಭ್ರಮ
ಗಂಧಸಿಂಧುರ (ಳ.೩೬) ಮದ್ದಾನೆ
ಭಿದಾ (ಳ.೩೬) ಸೀಳುವುದು
ಕಟ (ಳ.೩೬) ಕಪೋಲ
ಸಿಕ್ತ (ಳ.೩೬) ಒದ್ದೆಯಾದ

ಕರ್ದಮ (೪.೩೬) ಕೆಸರು
ಭ್ರಮರಮಾಳೆ (೪.೩೬) ದುಂಬಿಗಳ ಮೊತ್ತ
ಮೃಗವಲ್ಲಭ (೪.೩೬) ಸಿಂಹ
ಮೃಗನೇತ್ರೆ (೪.೩೬) ಜಿಂಕೆಯಂತೆ ಚಂಚಲವಾದ ನೇತ್ರವುಳ್ಳ
ಸುಣ್ಣಿಸು (೪.೩೮) ನಯಗೊಳಿಸು

ಪು. ೮೩
ಗೆತ್ತು (೪.೩೯) ಭಾವಿಸಿ
ಕುವಲಯವ್ವೈರಿ (೪.೪೦) ಸೂರ್ಯ
ಪಟಿಯಗೆ (೪.೪೧) ಪತಾಕೆ, ಬಾವುಟ
ಕೋಳ್ಪನಲ್ (೪.೪೧) ರಭಸಯುಕ್ತವಾಗಿ ಹರಿಯುವ ಪ್ರವಾಹ
ಉರೋರುಹ (೪.೪೨) ಮೊಲೆ
ದರದಳಿತ (೪.೪೩) ಕ್ರಮಕ್ರಮೇಣ ಅರಳುವ (?)

ಪು. ೮೪
ಪಡಲಿಗೆ (೪.೪೭) ಬುಟ್ಟಿ
ಭೋಗಿ (೪.೪೭) ಆದಿಶೇಷ
ಶಬಲ (೪.೪೮) ಹಲವು ಬಣ್ಣಗಳುಳ್ಳ
ಪುಂಜಿಸು (೪.೪೮) ರಾಶಿಹಾಕು
ಅಗ (೪.೪೯) ಮೊಳಕೆ
ಗಾವರ (೪.೫೧) ಧ್ವನಿ

ಪು. ೮೫
ಪರಿರಂಭ (೪.೫೧) ಆಲಿಂಗನ
ಮಹೀರುಹ (೪.೫೧ ವ) ವೃಕ್ಷ
ಅಘದಾಹಕ (೪.೫೨) ಪಾಪವನ್ನು ಸುಡುವವ
ಸೆಜ್ಜರ (೪.೫೨ ವ) ಶಯ್ಯಾಗಾರ, ಮಲಗುವ ಮನೆ

ದಿವ (೪.೫೩) ಸ್ವರ್ಗ
ಸೌಧರ್ಮ (೪.೫೩) ಜೈನಪುರಾಣಗಳಲ್ಲಿ ಹೇಳಲಾಗುವ ಲೋಕಗಳಲ್ಲಿ ಒಂದು ಸ್ವರ್ಗಲೋಕ
ಪಾಡಿವ (೪.೫೩) ಪಕ್ಷದ ಮೊದಲ ದಿನ, ಪಾಡ್ಯ
ನಿಶಾಂತಿಮ (೪.೫೩) ಬೆಳಗಿನ ಜಾವ
ಸಾಲಭಂಜಿಕೆ (೪.೫೪) ಗೊಂಬೆ
ತೆಱಂಗೊಳೆ (೪.೫೫) ಚೆನ್ನಾಗಿ ಹೊಳೆ
ಬೇವಸ (೪.೫೪) ಚಿಂತೆ, ವ್ಯಥೆ
ವಿಭ್ರಮ (೪.೫೪) ಸೌಂದರ್ಯ
ಪೊಂಗು (೪.೫೫) ಉಬ್ಬು

ಪು. ೮೬
ಪ್ರತೀತ (೪.೫೬) ವಿಶೇಷ ತಿಳುವಳಿಕೆ
ಅರ್ಭಕ (೪.೫೬) ಮಗು
ಪ್ರೋದ್ಭೇಧ (೪.೫೭ ವ) ಅಭಿವೃದ್ಧಿ

ಪು. ೮೭
ಈರೇೞ್ (೫.೨) ಹದಿನಾಲ್ಕು
ಶತಕ್ರತು (೫.೨) ನೂರು ಯಜ್ಞಗಳನ್ನು ಮಾಡಿದ ದೇವೇಂದ್ರ

ಪು. ೮೮
ರೂಪುಗೞ್[3] (೫.೬) ರೂಪ ಬದಲಿಸಿ
ಬಾಲಮೃಗಾಂಕ (೫.೮) ಚಂದ್ರ
ತಿಗ್ಮರುಗ್ಮಾಲೆ (೫.೮) ಸೂರ್ಯ
ಅಣ್ಮದೆ (೫.೧೦) ಸಮರ್ಥಳಾಗದೆ

ಪು. ೮೯
ಕಲ್ಯಾಣ (೫.೧೦ ವ) ಪಂಚಕಲ್ಯಾಣಗಳಲ್ಲಿ ಒಂದಾದ ಜಿನಜನ್ಮಾಭಿಷವಣ ಕಲ್ಯಾಣ
ಕೆಂದಳಿ (೫.೧೧) ಕೆಂಪಾದ ಅಂಗೈ

ಜ್ಯಾಯ (ಶ.೧೨) ಹಿರಿಯ
ಸೂತಿಭವನ (ಶ.೧೨) ಹೆರಿಗೆಮನೆ
ವಿಯತ್ತಳ (ಶ.೧೩) ಆಗಸ
ಅಣ್ಪು (ಶ.೧೩) ಲೇಪನ
ತೀವು (ಶ.೧೩) ಆವರಿಸು
ಆರ್ಪ (ಶ ೧.೩) ಸಮರ್ಥವಾಗುವ
ಕನ್ಮರೆ (ಶ ೧೪) ಸಂಭ್ರಮ, ಗಲಿಬಿಲಿ
ಸಾರ್ಕೆ (ಶ.೧೪ ವ) ಸಮೀಪ
ಎೞಲ್ವ (ಶ.೧೫) ಜೋಲಾಡುವ
ಪುಷ್ಕರ (ಶ ೧೫) ಆನೆಯ ಸೊಂಡಿಲ ತುದಿ
ಪುಲೋಮಸುತೆ (ಶ.೧೫) ಇಂದ್ರನ ಹೆಂಡತಿ
ರಾಗ (ಶ.೧೫) ಸಂತೋಷ
ಎಱೆಯ (ಶ.೧೫) ಗಂಡ, ಒಡೆಯ
ಜ್ಯೋತ್ಸ್ನೆ (ಶ ೧೬) ಬೆಳುದಿಂಗಳು
ಶೀತಾಂಶು (ಶ.೧೬) ಚಂದ್ರ
ಪೌಲೋಮಿ (ಶ ೧೬) ಶಚೀದೇವಿ
ಕುಲಿಶಧರ (ಶ.೧೬) ದೇವೇಂದ್ರ

ಪು. ೯೦

ನಿರ್ವೃತಿಲಕ್ಷ್ಮಿ (ಶ.೧೭) ಮೋಕ್ಷಲಕ್ಷ್ಮಿ
ಕೇಸಡಿ (ಶ.೧೭) ಕೆಂಪಾದ ಪಾದಗಳು
ವಾಸಿಗ (ಶ.೧೭) ಹೂಮಾಲೆ
ಶಿಂಜಿತ (ಶ.೧೭ ವ) ಧ್ವನಿ
ಅಂಚಲ (ಶ.೧೭ ವ) ಸೀರೆಯ ಸೆರಗು
ಸಮೀಚೀನ (ಶ.೧೭ ವ) ಯೋಗ್ಯ
ಚೀನಾಂಬರ (ಶ.೧೭ವ) ನವುರಾದ ವಸ್ತ್ರ
ಆಚ್ಛಾದಿತ (ಶ.೧೭ ವ) ಮುಚ್ಚಿದ
ಪರ್ಯಂಕ (ಶ.೧೭ ವ) ಹಾಸಿಗೆ
ವಿಷ್ಟರ (ಶ.೧೭ ವ) ಪೀಠ
ಅಂಕ (ಶ.೧೮) ಪಕ್ಕ, ತೊಡೆ
ವಿಲಸನ (ಶ.೧೯) ಶೋಭೆ
ಱೆಂಚೆ (ಶ.೨೦) ಆನೆಯ ಕವಚ
ಭಂಭಾ (ಶ.೨೧) ವಾದ್ಯವಿಶೇಷ
ಸುಟ್ಟುರೆ (ಶ.೨೨) ಸುಂಟರಗಾಳಿ
ಸುಯ್ಯಾಣ (ಶ.೨೨) ರಕ್ಷಣೆ

ಪು. ೯೧

ಘಟೆ (ಶ ೨೩) ಆನೆಯ ಪಡೆ
ತಟ್ಟು (ಶ.೨೩) ಸಮೂಹ
ವೈಕುರ್ವಣ (ಶ..೨೩) ಮಾಯಾ ಪ್ರಭಾವ, ಮಾಯೆಯಿಂದಾಗುವ ಪರಿವರ್ತನೆ
ವಾಸವರದನಿ (ಶ.೨೪) ಇಂದ್ರನ ಆನೆ
ರದನ (ಶ.೨೪) ಹಲ್ಲು, ದಂತ
ನೀರೇಜಿನಿ (ಶ.೨೪) ಕಮಲ
ನಮೇರು (ಶ ೨೫) ಸುರಪುನ್ನಾಗವೃಕ್ಷ
ಪಟವಾಸಚೂರ್ಣ (ಶ.೨೫) ಪರಿಮಳದ ಪುಡಿ
ಅಟ್ಟೆ (ಶ ೨೫) ಮುಂಡ
ಕಬರಿ (ಶ.೨೬) ತುರುಬು
ಮಹೀಧರ (ಶ.೨೬) ಪರ್ವತ
ಉತ್ಸೇಧ (ಶ.೨೬ವ) ಎತ್ತರ
ಪೆಱೆ (ಶ.೨೬ ವ) ಚಂದ್ರ
ಕಱೆ (ಶ.೨೬ ವ) ಕಪ್ಪು
ಕುಟ್ಟಿಮ (ಶ ೨೬ ವ) ಜಗುಲಿ, ನೆಲೆಗಟ್ಟು
ಹರಿ (ಶ.೨೭) ದೇವೇಂದ್ರ
ಸಮೆದ (ಶ.೨೭) ನಿರ್ಮಿಸಿದ
ವಸ್ತ್ರೋತ್ಕರಂ (ಶ.೨೭) ವಸ್ತುಗಳ ಸಮೂಹ

ಪುತ್ಥಳಿ (ಆ.೨೭) ಗೊಂಬೆ
ಪು. ೯೨
ಅಳುಂಬ (ಆ.೨೮) ಹೆಚ್ಚಳ
ಉಪಕಂಠ (ಆ.೨೮ ವ) ಸಮೀಪ
ಅಧ್ಯಾಸ (ಆ.೨೮ ವ) ಸ್ಥಾನ
ಸಾಮಜಾರಿವಿಷ್ಟರ (ಆ.೨೮ ವ) ಸಿಂಹಾಸನ
ಹರಿ (ಆ.೨೮ ವ) ಇಂದ್ರದೇವ
ಶಿಖಿ (ಆ.೨೮ ವ) ಅಗ್ನಿದೇವ
ನಿರುತಿ (ಆ.೨೮ ವ) ನೈರುತ್ಯದೇವ
ಅನಿಳ (ಆ.೨೮ ವ) ವಾಯುದೇವ
ಧನದ (ಆ.೨೮ ವ) ಕುಬೇರ
ಪರಿಚರ್ಯೆ (ಆ.೨೮ ವ) ಸೇವೆ
ನೇರಾಣಿ (ಆ.೩೧) ಅಪರಂಜಿ
ಎಟಲ್ (ಆ.೩೨) ಜೋತಾಡು
ಉದ್ಘ (ಆ.೩೩) ಶ್ರೇಷ್ಠ
ಅಳುರ್ಕೆ (ಆ.೩೪) ಆಧಿಕ್ಯ; ಹೆಚ್ಚಳ
ಪು. ೯೩
ಪಯಃಪ್ಲವ (ಆ.೩೪) ಹಾಲಿನ ಪ್ರವಾಹ
ಚರ್ಚೆ (ಆ.೩೫) ಲೇಪನ
ಸವನ (ಆ.೩೭) ಅಭಿಷೇಕ
ಅಂಚಿರ (ಆ.೩೯) ಚಂಚಲ
ಮುಂಚು (ಆ.೩೯) ಮುಂದಾಗು
ಅವಟಯಿಸು (ಆ.೩೯ ವ) ತಿಳಿಯಪಡಿಸು
ಪು. ೯೪
ನಾಪೇಯ (ಆ.೪೧) ನದಿಯಿಂದ ದೊರೆತದ್ದು
ತಳ್ಪೊಯ್ (ಆ.೪೧) ತಾಗು
ಪೊಂಗು (ಆ.೪೧) ಉಬ್ಬು
ಬೆಳ್ಮಾಡು (ಆ.೪೩) ಬೆಪ್ಪನನ್ನಾಗಿಸು
ಬಿಡೌಜ (ಆ.೪೩ ವ) ದೇವೇಂದ್ರ
ಅರಳೆಲೆ (ಆ.೪೪) ಅರಳಿ ಎಲೆಯಾಕಾರದ ಒಂದು ಬಾಲದೊಡಿಗೆ
ಮಾಂಗಾಯ್ (ಆ.೪೪) ಮಾವಿನಕಾಯಿ ಆಕಾರದ ಒಂದು ಬಾಲದೊಡಿಗೆ
ಕುಜಾತ (ಆ.೪೪) ವೃಕ್ಷ
ಪು. ೯೫
ಕರುಮಾಡ (ಆ.೪೯ ವ) ಉಪ್ಪರಿಗೆ
ಪು. ೯೬
ಜನಂಜವ (ಆ.೫೦) ಹುಟ್ಟು ಸಾವು
ಆಖಂಡಲ (ಆ.೫೩) ದೇವೇಂದ್ರ
ನಸೆಕೊಸೆವೋಗು (ಆ.೫೪) ಹಬ್ಬಿ ಹರಡು
ಪು. ೯೭
ಸೆಳ್ಳುಗುರ್ (ಆ.೫೭) ಉದ್ದವಾದ, ಹರಿತವಾದ ಉಗುರು
ಕೈವಾರ (ಆ.೫೭) ಹೊಗಳಿಕೆ
ಚಕ್ರಂಬೊಟ (ಆ.೫೮) ಚಕ್ರಾಕಾರವಾಗಿ ಸುತ್ತುವ ಉಯ್ಯಾಲೆ
ಹರಿ (ಆ.೫೮) ದೇವೇಂದ್ರ
ತಳ್ಪಂಕ (ಆ.೫೯) ದಿಗ್ಭ್ರಾಂತಿ
ವೃತ್ರವೈರಿ (ಆ.೫೯ ವ) ದೇವೇಂದ್ರ
ದುರಿತವಿಜಯಿ (ಆ.೫೯ ವ) ಪಾಪಗಳನು ಗೆದ್ದವನು
ಪು. ೯೮
ಬೋಧ (೬.೧) ಜ್ಞಾನ
ಅಚ್ಚರಿಯರ್ (೬.೨) ಅಪ್ಸರಸ್ತ್ರೀಯರು
ಜಂಘೆ (೬.೩) ಕಿರುದೊಡೆ
ಪ್ರದ್ಯೋತ (೬.೪ ವ) ಕಾಂತಿ
ಆಮ್ನಾಯ (೬.೫) ವೇದ

ಪು. ೯೯
ಕೋಡದ (೬.೭) ಭಯಪಡದ
ಕೋಳ್ (೬.೭) ಹೊಡೆತ
ಕಂಟಕ (೬.೭) ಉಪದ್ರವ; ವಿಘ್ನ
ಆಮಯ (೬.೭) ರೋಗ
ಉತ್ಕರ್ಷಣ (೬.೭) ಅಭಿವೃದ್ಧಿ
ಕಡೆಯಾಳಿ (೬.೮) ಶ್ರೇಷ್ಠವಾದ ಚಿನ್ನ
ಕರ (೬.೮) ಕಿರಣ
ಕರುವಿಡು (೬.೮) ಎರಕಹೊಯ್ಯಿ
ಕಂಡರಣೆ (೬.೮) ಕೆತ್ತು; ಕೊರೆ
ಕೆಯ್ಪಿಡಿ (೬.೮) ಸೆರೆಹಿಡಿ
ವಶ್ಯಾಂಜನ (೬.೧೦) ವಶಮಾಡಿ ಕೊಳ್ಳುವ ಕಾಡಿಗೆ
ನೀರೇಜ (೬.೧೦) ಕಮಲ
ಕೋರನ (೬.೧೦) ಕುವರನ
ಸುಯ್ಪು (೬.೧೦) ನಿಟ್ಟುಸಿರುಬಿಡುವ
ರಾಕಾಶಶಾಂಕ (೬.೧೦ ವ) ಪೂರ್ಣಚಂದ್ರ

ಪು. ೧೦೦
ನಿರೀಹಿತ (೬.೧೦ ವ) ಬಯಕೆಯಿಲ್ಲದವನು
ಅಂಗುಳಿಸಂಗ (೬.೧೧) ಬೆರಳುಗಳ ಸ್ಪರ್ಶ
ವೀತರಾಗ (೬.೧೧) ಅಪೇಕ್ಷೆಯನ್ನು ಬಿಟ್ಟವನು
ಅಂಕತಲ (೬.೧೨) ಪಾರ್ಶ್ವಭಾಗ
ಕುಱುಪು (೬.೧೨) ಚಿಹ್ನೆ
ಸಂಘಟಿತ (೬.೧೨ ವ) ಸೇರಿಸಿದ; ಕೂಡಿಸಿದ
ಲವ (೬.೧೫) ತುಣುಕು; ಚೂರು

ಪು. ೧೦೧
ಕೇವಣಿಸು (೬.೧೭) ಪೋಣಿಸು
ಮೃಗೇಶ್ವರಾಸನ (೬.೧೭ವ) ಸಿಂಹಾಸನ
ಉದಧಿ (೬.೧೮) ಸಮುದ್ರ
ಉದಂತ (೬.೧೮) ವಾರ್ತೆ
ವೃಜ್ಜೋದ (೬.೧೯) ಹಬ್ಬ

ಪು. ೧೦೨
ತವಿಸು (೬.೨೧) ನಾಶಪಡಿಸು
ಅವಶಿಷ್ಟ (೬.೨೧) ಉಳಿದುದು
ಅನಿಷ್ಟ (೬.೨೧) ಇಷ್ಟವಿಲ್ಲದುದು, ಹಾನಿ
ದುರಾಗ್ರಹ (೬.೨೧) ಕೆಟ್ಟ ಒತ್ತಾಯ
ಕಣ್ಬರಿ (೬.೨೨) ವಿವೇಕ
ಉದ್ವಾಹ (೬.೨೩) ವಿವಾಹ
ಉದಂತ (೬.೨೪) ಸುದ್ದಿ, ವರ್ತಮಾನ

ಪು. ೧೦೩
ಅಂಬು (೬.೨೫) ನೀರು
ತಱಿಸಂದು (೬.೨೭) ನಿಶ್ಚಯಿಸಿ
ರಾಜನ್ಯ (೬.೨೭) ಕ್ಷತ್ರಿಯ
ಜೋರೆಯ (೬.೨೮) ಅಂತಃಪಟ (?)
ಬಗೆ (೬.೨೯) ಮನಸ್ಸು

ಪು. ೧೦೪
ಕಿವಿವೇಟ (೬.೩೦) ಆಪ್ತರಾಗುವುದು; ನಲ್ಲನಲ್ಲೆಯರು ಪರಸ್ಪರ ವಾರ್ತೆಯನ್ನು ಕೇಳಿ ಸಂತೋಷಪಡುವುದು
ಉತ್ಕಳಿಕೆ (೬.೩೦) ವಿರಹಚಿಂತೆ; ಕಾತುರ, ಔತ್ಸುಕ
ಜವನಿಕೆ (೬.೩೦) ತೆರೆ
ಅಡಹಡಿಸು (೬.೩೦) ತ್ವರೆಮಾಡು

ವಾರ್ನಾಳ (೬.೩೧) ನೀರಧಾರೆ
ಸೈಕತ (೬.೩೧ ವ) ಮರಳು
ಬಾಸಿಗ (೬.೩೨ ವ) ತಲೆಯಲ್ಲಿ ಧರಿಸುವ ಹೂವಿನ ದಂಡೆ
ನಿಟ್ಟೆ (೬.೩೨ವ) ನಿಯಮ
ಹುತವಹ (೬ ೩೩) ಅಗ್ನಿ
ಅನುಲೋಮ (೬ ೩೩) ಹಿಂದಿನಿಂದ ಮುಂದಕ್ಕೆ
ಪು. ೧೦೫
ಅಣ್ಮದೆ (೬.೩೪) ಸಮರ್ಥಳಾಗದೆ
ತೆಱಪು (೬.೩೪) ಅವಕಾಶ, ಎಡೆ
ಕಡಂಗಿ (೬.೩೪) ಆತುರದಿಂದ ಕೂಡಿ
ಅಭಿಷವ (೬ ೩೫) ಅಭಿಷೇಕ
ಪಾಂಗು (೬.೩೫) ಕ್ರಮ
ಇಱಿಸಲ್ (೬.೩೫) ತಿರಸ್ಕರಿಸು
ಮಖ (೬.೩೬) ಯಜ್ಞ
ಸಪತ್ನಿ (೬.೩೭) ಸವತಿ
ಪು. ೧೦೭
ಕೆಂಗೊಸರ್ (೭.೫) ಕೆಂಪನೆಯ ಚಿಗುರು
ಸಲ್ಲಕಿ (೭.೫) ಮರಗಳಲ್ಲಿ ಒಂದು ಜಾತಿ
ಪು. ೧೦೮
ಕದಂಬ (೭.೫) ಒಂದು ಬಗೆಯ ವೃಕ್ಷ
ತೊಂಗಲ್ (೭ ೫) ಗೊಂಚಲು
ಪೀಲಿ (೭.೫) ನವಿಲುಗರಿ
ಪೂತು (೭.೬) ಹೂಬಿಟ್ಟು
ಓತು (೭.೬) ಒಲಿದು
ಕೇತಕ (೭.೬) ಕೇದಗೆ ಹೂವು
ಪೋತಕ (೭.೬) ಮರಿ

ವಾಸವಚಾಪ (೭.೭) ಕಾಮನಬಿಲ್ಲು
ಮೊಟಿಗು (೭.೭) ಗುಡುಗು
ತಟಿನ್ನಟಿ (೭.೭) ಮಿಂಚೆಂಬ ನಟಿ
ಇಂದ್ರಗೋಪ (೭.೭) ಮುಂಗಾರು ಮಳೆಯ ಪ್ರಾರಂಭದಲ್ಲಿ ಕಾಣಿಸುವ ಕೆಂಪುಹುಳು
ಬಾರಿಗೆ (೭ ೮) ಸರದಿಗೆ
ಮಧುಕರ (೭ ೮) ದುಂಬಿ
ಪೊಗರೆ (೭.೮) ಪೊಟ್ಟರೆ
ವಲ್ಮೀಕ (೭ ೮) ಹುತ್ತ
ಒಱಲೆ (೭ ೮) ಗೆದ್ದಲಹುಳ
ಅಗಿದು (೭.೮) ಹೆದರಿ
ಉತ್ತಿನೊಳ್ (೬ ೮) ಹುತ್ತದಲ್ಲಿ
ವರ್ಷಾಗಮ (೭.೮ ವ) ಮಳೆಗಾಲದ ಪ್ರಾರಂಭ
ಬಳಾಕ (೭.೮) ಬೆಳ್ಳಕ್ಕಿ
ಕರಕ (೭ ೮ ವ) ಆಲಿಕಲ್ಲು
ತಂದಲ್ (೭.೮ ವ) ತುಂತುರುಮಳೆ
ತಂಬೆಲರ್ (೭ ೮ ವ) ತಣ್ಣನೆಯ ಗಾಳಿ
ವಿಯತ್ತಳ (೭.೮ ವ) ಆಗಸ
ಕಜ್ಜಳ (೭.೯) ಕಾಡಿಗೆ
ಸಜ್ಜಿತ (೭.೯) ಸಿದ್ಧಗೊಂಡ
ಅಬ್ಧಫಲಕ (೭.೯) ಮೋಡವೆಂಬ ಹಲಗೆ
ಪ್ರಾಗ್ಭಾಗ (೭ ೯) ಪೂರ್ವಭಾಗ, ಮುಮ್ಮೈ
ಸೌದಾಮಿನಿ (೭.೯) ಮಿಂಚು
ತುಱುಗೆಮೆ (೭.೧೦) ಒತ್ತಾದ ಕೂದಲುಳ್ಳ ರೆಪ್ಪೆ
ಪರೆದು (೭.೧೦) ಹರಡಿ

ಚಾಪಳ (೭.೧೧) ಚಂಚಲ
ಸದೃಕ್ಷ (೭.೧೧) ಸಮಾನ
ಭವ (೭.೧೧) ಹುಟ್ಟು, ಜನ್ಮ

ಪು. ೧೦೯

ಪಱೆ (೭.೧೩) ತಮ್ಮಟೆ
ಶಬ (೭.೧೩) ಶಿವ
ಮಱೆಮೆಯ್ಯ (೭.೧೩) ಮರೆಯಾದ ದೇಹ
ಆದ ಪೋದ ಭವ (೭.೧೩) ಆದ ಹೋದ ಜನ್ಮಗಳು
ಬಱಿದೆ (೭.೧೪) ವ್ಯರ್ಥವಾಗಿ
ತಳಿವ (೭.೧೪) ಚಿಮುಕಿಸುವ
ನಿರ್ವೇಗ (೭.೧೪ ವ) ವೈರಾಗ್ಯ
ಬಗೆ (೭.೧೪ ವ) ಆಲೋಚನೆ, ಇಚ್ಛೆ
ಅಂತರ್ವಂಶಿಕ (೭.೧೪ ವ) ರಾಣಿವಾಸದ ಮೇಲ್ವಿಚಾರಕ
ಕೈವಲ್ಯ (೭.೧೬) ಮೋಕ್ಷ
ಕೋಡು (೭.೧೭) ಕುಗ್ಗು; ತಣ್ಣಗಾಗು; ಅಂಜು

ಪು. ೧೧೦

ಕಟ (೭.೨೪) ಕಪೋಲ,ಗಂಡಸ್ಥಲ
ಫಳ (೭.೨೪) ಫಲ
ರೂಕ್ಷ (೭.೨೪) ಕ್ರೂರ
ತಿಕ್ತ (೭.೨೪) ಕಹಿ
ಸರಿಸ (೭.೨೪) ಎದುರು; ನೇರ
ಆಯಃ (೭.೨೫) ಸೂಜಿ
ಕೂರ್ಪರಂ (೭.೨೫) ಪ್ರೀತಿಸುವವರನ್ನು
ನೇರಿದು (೭.೨೬) ನೆಟ್ಟಗೆ
ಬೆಟ್ಟಿತು (೭.೨೬) ಕಠಿಣ; ಒರಟು
ತೋರ (೭.೨೬) ದಪ್ಪ
ದುರ್ವಾರ (೭.೨೭) ನಿವಾರಿಸಲಾಗದ; ಹಿಡಿತಕ್ಕೆ ಸಿಗದ
ಕುತ್ತ (೭.೨೭) ರೋಗ
ನಿರ್ಧನತೆ (೭.೨೭) ದಾರಿದ್ರ್ಯ
ಯಾಚ್ಞೆ (೭.೨೭) ಬೇಡಿಕೆ
ತಸ್ಕರ (೭.೨೭) ಕಳ್ಳ
ಕೂರ್ದಾಗೆ (೭.೨೮) ಹರಿತವಾದ ಹುಲ್ಲು
ವಾಗುರೆ (೭.೨೮) ಮೃಗಗಳನ್ನು ಹಿಡಿಯುವ ಬಲೆ
ಅಂಶುಕ (೭.೨೮) ಉಡುವ ಬಟ್ಟೆ
ಬೆಟ್ಟಿದರ್ (೭.೨೮) ಒರಟಾದವರು
ಏಱ್ ೭.೨೮ ಗಾಯ
ಕೋಟಲೆ (೭.೨೮) ದುಃಖ; ಚಿಂತೆ

ಪು. ೧೧೨

ಮನೀಷೆ (೭.೩೦) ಯೋಜನೆ; ಚಿಂತನೆ
ಉದಂತ (೭.೩೧) ವಾರ್ತೆ
ಸಂಸರಣ (೭.೩೨) ಸಂಸಾರ
ನಿಪಾತ (೭.೩೨) ಹಾಳುಸ್ಥಿತಿ
ಅವಧಿ (೭.೩೪) ಮುಂದಾಗುವುದನ್ನು ತಿಳಿಯುವ ಜ್ಞಾನ
ನಿಷ್ಕ್ರಮಣ (೭.೩೪) ತೀರ್ಥಂಕರನ ಪಂಚಕಲ್ಯಾಣಗಳಲ್ಲಿ ಒಂದಾದ ಪರಿನಿಷ್ಕ್ರಮಣಕಲ್ಯಾಣ
ಬಂಬಲ್ (೭.೩೫ ವ) ಗೊಂಚಲು
ವಾರವಧೂ (೭.೩೯) ಸೂಳೆ
ನೀರಾಜನ (೭.೩೯) ಆರತಿ; ಪೂಜೆ
ಅಪಾಂಗ (೭.೪೦) ಕಡೆಗಣ್ಣೋಟ
ಮಸೃಣ (೭.೪೦) ಕೋಮಲ
ಶಿವಿಗೆ (೭.೪೦) ಅಂದಣ; ಪಲ್ಲಕ್ಕಿ
ನೀರಾಜಿಸುವ (೭.೪೧) ಆರತಿಯೆತ್ತುವ

ಪು. ೧೧೪

ಯಾನ (೭.೪೧) ಪ್ರಯಾಣ
ಕರ್ದುಂಕು (೭.೪೩) ಕುಕ್ಕು
ಧನದ (೭.೪೩) ಕುಬೇರ
ಶಕ್ರ (೭.೪೩) ದೇವೇಂದ್ರ
ಸೊದೆಲೋವೆ (೭.೪೪) ಅಮೃತದ ಮಾಡಿನ ಸೂರು
ವಿಧುಬಿಂಬ (೭.೪೪) ಚಂದ್ರಬಿಂಬ
ಲಕ್ಷ್ಮ (೭.೪೪) ಕಲಂಕ
ಭಾಜನ (೭.೪೫ ವ) ತಟ್ಟೆ
ಪ್ರವಾಳ (೭.೪೫ ವ) ಚಿಗುರು

ಪು. ೧೧೫

ಪಂಕರುಹ (೭.೪೬) ಕಮಲ
ಸೌಷ್ಠವ (೭.೪೬) ಸೊಗಸು; ಮನೋಹರತೆ
ಅಂಚಿತ (೭.೪೬) ಸುಂದರ; ಹೊಳೆವ
ಪಂಚಮಗತಿ (೭.೪೬) ಮೋಕ್ಷ
ಅಪವರ್ಗ (೭.೪೬) ಮೋಕ್ಷ
ಕಿಟಿಪು (೭.೪೬) ಕೀಳು
ಅಳಿಕ (೭.೪೬) ಮುಂಗುರುಳು
ಕುಂತಳ (೭.೪೭) ಮುಂಗುರುಳು
ಪಡಲಿಗೆ (೭.೪೭) ತಟ್ಟೆ
ಆನಕ (೭.೪೭ ವ) ತಮಟೆ; ಭೇರಿ
ಅತ್ತಳಗ (೭.೪೭ ವ) ವ್ಯಥೆ
ಜೈತೆ (೭.೪೮) ರಾಕ್ಷಸಿ
ಸಾಕ್ಷಿತ್ರಯ (೭.೪೯) ಸೂರ್ಯ, ಚಂದ್ರ, ಅಗ್ನಿ ಇವರ ಸಾಕ್ಷಿ
ಪರ್ಯಾಯ (೭.೪೯) ಪಲ್ಲಟ; ಪರಿವರ್ತನೆ
ಪರಿಪುಷ್ಟ (೭.೪೯ ವ) ಸಂತೃಪ್ತ

ಪದೆಪು (೭.೫೦) ಪ್ರೀತಿ
ಶತಮಖ (೭.೫೦) ನೂರು ಯಜ್ಞಗಳನ್ನು ಮಾಡಿದ ದೇವೇಂದ್ರ

ಪು. ೧೧೬

ಸಮಯ (೭.೫೧) ಧರ್ಮ
ಪಾಂಗು (೭.೫೧) ಕ್ರಮ; ಬಗೆ; ರೀತಿ
ಕಳತ್ರ (೭.೫೨) ಹೆಂಡತಿ
ಜಂಗಮ (೭.೫೨ ವ) ಚಲಿಸುವ
ಮುಕುರ (೭.೫೨ ವ) ಕನ್ನಡಿ
ಸ್ತಬಕ (೭.೫೨ ವ) ಗುಂಪು; ಮೊತ್ತ
[illegible] (೭.೫೨ ವ) ಶೀಘ್ರ; ಆತುರ
ಭಾಸುರ (೭.೫೩) ಹೊಳೆವ
ಮಾಸರ (೭.೫೩) ಮಹಾಶ್ರಯ
ಅಷ್ಟವಿಧಾರ್ಚನೆ (೭.೫೪) ಜಲ, ಗಂಧ ಅಕ್ಷತೆ, ಕುಸುಮ, ನೈವೇದ್ಯ, ದೀಪ, ಧೂಪ, ಫಲ— ಇವುಗಳಿಂದ ಮಾಡುವ ಆರಾಧನೆ

ಪು. ೧೧೭

ಸೌಷ್ಠವ (೭.೫೬) ರಮಣೀಯತೆ
ಕೋಕನದ (೭.೬) ಕಮಲ
ಕಳಿಕ (೭.೫೬ ವ) ಮೊಗ್ಗು
ಚರ್ಯಾ (೭.೫೭) ಭಿಕ್ಷೆ
ಅತಿಚಾರ (೭.೫೭) ಪದ್ಧತಿಯನ್ನೂ ಶಾಸ್ತ್ರವನ್ನೂ ಮೀರಿದ ನಡತೆ
ಈರ್ಯಾ (೭.೫೭) ಮನಬಂದಂತೆ ಸಂಚರಿಸುವ (?)
ಉಪಲ (೭.೫೭) ಶಿಲೆ; ಕಲ್ಲು
ಅಂಕೆ (೭.೫೮) ಆಧಾರ

ಪು. ೧೧೮
ಲತಿಕಾ (೭.೫೯) ಬಳ್ಳಿ
ದಾವ (೭.೫೯ ವ) ಕಾಡು
ಪಾವಕ (೭ ೫೯ ವ) ಕಿಚ್ಚು
ನಿರಸನ (೭.೫೯ ವ) ಪರಿತ್ಯಾಗ; ಬಿಟ್ಟು
ಅರ್ಬಿಸುವ (೭ ೬೦) ಅರ್ಭಟಿಸುವ; ಕೂಗುವ

ಪು. ೧೧೯
ಕಣ್ಬೊಣರ್ (೭.೬೪) ನೋಟ
ನೇರಾಣಿ (೭ ೬೪) ಶುದ್ಧ ಚಿನ್ನ: ಅಪರಂಜಿ
ಋದ್ಧಿ (೭.೬೭) ಅಭಿವೃದ್ಧಿ

ಪು. ೧೨೦
ಕುನಿ (೭.೬೯) ಬಗ್ಗು

ಪು. ೧೨೧
ನಮೇರು (೮ ೨) ಸುರಪುನ್ನಾಗವೃಕ್ಷ
ಸರಿ (೮.೨) ಮಳೆ
ಪೊಜಟ್ (೮ ೨) ವ್ಯಾಪಿಸು; ಪ್ರಕಟವಾಗು
ಅನಿಮಿಷಪತಿ (೮ ೩) ದೇವೇಂದ್ರ
ಶತಕ್ರತು (೮.೪) ದೇವೇಂದ್ರ

ಪು. ೧೨೨
ಅಗರುವ (೮.೫) ಸುವಾಸನೆ ಬೀರುವ
ವಿಭೂಷಣ (೮.೫) ಆಭರಣ
ಶೋಣ (೮ ೫) ಕೆಂಪು
ಮೌಕ್ತಿಕ (೮.೫) ಮುತ್ತು
ಕಂತುಹರ (೮.೬) ತೀರ್ಥಂಕರ
ಕೋಟೀರ (೮.೬ ವ) ಕಿರೀಟ
ನಿನ್ನನ್ನರ್ (೮.೯) ನಿನ್ನಂಥವರು

ಪು. ೧೨೩
ನವರತ್ನ (೮.೧೪) ವಜ್ರ, ಮಾಣಿಕ್ಯ, ಮರಕತ, ಪುಷ್ಯರಾಗ, ನೀಲ, ಗೋಮೇಧಿಕ, ವೈಡೂರ್ಯ, ಮುತ್ತು, ಹವಳ
ನವನಿಧಿ (೮.೧೪) ಪದ್ಮ, ಮಹಾಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ನಂದ, ನೀಲ, ಖರ್ವ
ಭೃಂಗಾರ (೮.೧೫) ಚಿನ್ನದ ಗಿಂಡಿ
ತಾಲು (೮.೧೫ ವ) ನಾಲಗೆ
ಆಸನ್ನ (೮.೧೫ ವ) ಸಮೀಪ

ಪು. ೧೨೪
ಆತಪ (೮.೧೬) ಬಿಸಿಲು
ಆಸಾರ (೮.೧೬) ಬಿರುಮಳೆ
ಕಾರ್ಪ (೮.೧೮) ಸುಡುವ; ಉಗ್ರವಾಗಿರುವ
ಕೆರ್ಪು (೮.೨೨) ಪಾದರಕ್ಷೆ

ಪು. ೧೨೫
ಮೊಟ್ಟೆ (೮.೨೨) ಗಂಟು
ಗ್ರಾವ (೮ ೨೫) ಕಲ್ಲು
ಬಯಸೆ (೮.೨೭) ಅಪೇಕ್ಷೆ
ನಿಧಾನ (೮.೨೭) ನಿಧಿ

ಪು. ೧೨೬
ಪಂಕ (೮.೨೯) ಕೆಸರು
ಉಪಳ (೮.೩೦) ಕಲ್ಲು: ಶಿಲೆ
ನೋಂಪಿ (೮.೩೪) ನೇಮ; ವ್ರತ

ಪು. ೧೨೭
ನೋನ್ (೮.೩೮) ವ್ರತವನ್ನು ಮಾಡು
ಸಂಸೃತಿ (೮.೪೦) ಸಂಸಾರ

ಪು. ೧೨೮
ಅಗ್ಗ (೯.೩) ಶ್ರೇಷ್ಠ

ಪು. ೧೨೯
ತೇಜಂಬೊಳೆ (೯.೫) ಚೆನ್ನಾಗಿ ಹೊಳೆ
ಪಣ್ಣನೆ (೯.೫) ಮೆಲ್ಲನೆ
ಇಮ್ಮನೆ (೯.೫) ಸೊಗಸಾಗಿ
ಕಮ್ಮನೆ (೯.೫) ಸುವಾಸನೆಯಿಂದ ಕೂಡಿ
ತೆಳ್ಪು (೯.೭) ಸೊಬಗು
ದೇಸೆ (೯.೭) ಸೊಬಗು; ಸೌಂದರ್ಯ; ಚೆಲುವು
ಯಷ್ಟಿ (೯.೮) ಹಾರದ ಎಳೆ
ವಿಭೂತಿ (೯.೮ ವ) ಐಶ್ವರ್ಯ

ಪು. ೧೩೦
ವಾಹಳಿ (೯.೯ ವ) ಕುದುರೆಸವಾರಿ
ಉಪಾಯನ (೯.೯ ವ) ಉಡುಗೊರೆ
ಪಾಂಶು (೯ ೯ ವ) ಧೂಳು
ದೆವಸ (೯.೯ ವ) ದಿವಸ
ವಿಸ್ತಾರಿತ (೯.೯ ವ) ಅರಳಿದ
ಅಪಸಾರಿ (೯.೯ ವ) ಹಿಂದೆ ಸರಿಸಿದ
ಸಮಾಜ (೯ ೯ ವ) ಗುಂಪು
ತಟ್ಟುರ್ಚಿ (೯ ೧೦ ವ) ಹೊಲಿಗೆ ಬಿಚ್ಚಿ
ಮುಯ್ಯ್ (೯.೧೦ ವ) ಭುಜ
ವೇದಂಡ (೯.೧೦ ವ) ಆನೆ
ಪೊಣರ್ಕೆ (೯.೧೨) ಹೋರಾಟ
ಮೇಷ (೯.೧೨) ಟಗರು
ಕಂದುಕಕೇಳಿ (೯.೧೩) ಚೆಂಡಾಟ
ವಾರುವದಂಕ (೯.೧೩) ಕುದುರೆಯ ಯುದ್ಧ

ಪು. ೧೩೧
ಕೇಲ್ಮಸೆ (೯.೧೩ ವ) ಶಬ್ದ ಮಾಡುವಂತೆ ಮಸೆ
ತೊತ್ತಳದುಳಿ (೯.೧೩ ವ) ಹಾಳಾಗುವಂತೆ ತುಳಿ
ಕೊಳ್ಕು (೯.೧೩ ವ) ಆಕ್ರಮಿಸು
ಜಿಳ್ಕು (೯ ೧೩ ವ) ಭಯ (?)
ಬಗೆ (೯.೧೩ ವ) ಮನ
ಬಯ್ಕೆ (೯ ೧೩ ವ) ಬಯಕೆ
ಅಗೆ (೯.೧೩ ವ) ತೋಡು; ಬಗೆ
ಕವ್ವರಿ (೯.೧೩ ವ) ಮುತ್ತು; ಗಾಬರಿ
ಮಣಿಬಂಧ (೯.೧೪) ಮಣಿಕಟ್ಟು
ವಳಗೆ (೯.೧೪) ತೆರೆ
ಪಲ್ಲವಕ (೯ ೧೫) ವಿಟ
ಕುಕ್ಕುಳಗುದಿ (೯.೧೫ ವ) ವಿಶೇಷವಾಗಿ ಕುದಿ
ಸಮಸಡಿಸು (೯.೧೫ ವ) ಸಮಾಧಾನ ಮಾಡು
ಮಾಕಂದ, ಭೂರುಹ } (೯ ೧೫ ವ) ಮಾವಿನಮರ
ಕುಱು (೯.೧೫ ವ) ಸಣ್ಣ
ಪ್ರವಾಳ (೯. ೧೫ ವ) ಚಿಗುರು
ಸ್ನಾಪಕ (೯.೧೫ ವ) ಸುಗಂಧದ್ರವ್ಯವನ್ನು ಮೈಗೆ ಪೂಸಿಕೊಳ್ಳುವುದು
ಛದ್ಮ (೯.೧೫ ವ) ಕೃತಕ

ಪು ೧೩೨
ಮೇಖಲೆ (೯.೧೮) ಡಾಬು
ತೆಟ್ಟುಂಚಿಱಿ (೯.೧೮ ವ) ಹೊಲಿಗೆ ಬಿಚ್ಚುವಂತೆ ತೆರೆ
ಅತ್ತಳಗ (೯.೧೮ ವ) ವ್ಯಥೆ
ಕಟ್ಟಣಕ (೯.೧೯) ಪ್ರಬಲ
ಮೊಱೆ (೯.೧೯) ನ್ಯಾಯ

ಪು. ೧೩೩

ಅಳಿಪು (೯.೨೦) ಪ್ರೀತಿ
ಗಾತ್ರ (೯.೨೧) ಶರೀರ
ಗಂಡಗಾಡಿ (೯.೨೧) ವೀರತ್ವ
ಜೋಡೆ (೯.೨೧) ಸೂಳೆ
ಕೈಘಟ್ಟಿ (೯.೨೧ ವ) ಗಂಧ
ಕೆಂಡೂತಿ (೯.೨೨ ವ) ನವೆ
ಕತ್ತರಿವೀಲಿ (೯.೨೩) ಕತ್ತರಿಯಾಕಾರದಲ್ಲಿ ಸಿಕ್ಕಿರುವ ನವಿಲುಗರಿ

ಪು. ೧೩೪

ಉಗಿ (೯.೨೪) ಬಗಿ
ಹರವಸ (೯.೨೩ ವ) ಪರವಶ
ಬಲ್ಲಹ (೯.೨೩ ವ) ಒಡೆಯ
ಸೋಹು (೯.೨೬) ಅಟ್ಟು; ಎಬ್ಬಿಸು
ಉರ್ವರೆ (೯.೨೬) ಸಾರವತ್ತಾದ ನೆಲ
ಕನ್ವರಿಸು (೯.೨೭) ಗಾಬರಿಗೊಂಡ
ಕೆತ್ತು (೯.೨೭) ಅಲುಗಾಡು
ಎಟಲ್ (೯.೨೭) ಜೋಲಾಡು
ಅಚ್ಚಿ (೯.೨೭) ದೃಷ್ಟಿ

ಪು. ೧೩೫

ಸೂಟಾಯ್ತು (೯.೨೮ ವ) ಸೇವಕ
ಬಟ್ಟೆ (೯.೨೮ ವ) ದಾರಿ
ಪರೀತೆ (೯.೨೮ ವ) ನಡೆಯುವವಳು
ಕತಿಪಯ (೯.೨೮ ವ) ಹಲವು
ಪುರೋಭಾಗ (೯.೨೮ ವ) ಮುಂಭಾಗ
ಆಂದೋಳ (೯.೨೯) ಪಲ್ಲಕ್ಕಿ; ತೂಗು ಮಂಚ
ಕಡುಕೆಯ್ (೯.೨೯) ತೀವ್ರವಾಗಿ
ಗೆತ್ತು (೯.೨೯ ವ) ಭಾವಿಸಿ
ಹಮ್ಮು (೯.೩೦ ವ) ಮೂರ್ಛೆ
ಇನ (೯.೩೧) ಪ್ರಿಯ
ಅಣ್ಣೆ (೯.೩೧) ಹೋರಾಡಿ
ನೀಟು (೯.೩೧) ಸುಂದರ

ಪು. ೧೩೬

ಅಟಿಸಿ (೯.೩೨) ಬಯಸಿ
ಬಾರೇಟ್ (೯.೩೨) ಚರ್ಮ ಕಿತ್ತುಬರು
ಬೂತೆ (೯.೩೩) ಪ್ರಾಣಿ
ತರಕ್ಷು (೯.೩೩ ವ) ಹುಲಿ

ಪು. ೧೩೭

ಕಳಕಳಿಸು (೯.೩೫ ವ) ಧ್ವನಿಮಾಡು
ರಸೆ (೯.೩೭) ಭೂಮಿ
ಅಟಿಸು (೯.೩೮) ಬಯಸು
ಆಯತ (೯.೩೮) ಅಧೀನ
ಕಳ (೯.೩೯) ಯುದ್ಧರಂಗ
ಆಶಾಲಳನೆ (೯.೩೯) ದಿಗ್ದೇವತೆ
ಆರಸಂಕ (೯.೩೯) ನಿರ್ಣಾಯಕ ಶಕ್ತಿ (?)

ಪು. ೧೩೮

ಪೊಣರ್ಚೆ (೯.೪೧) ಹೋರಾಡಿ
ಕಯ್ಗಣ್ಮು (೯.೪೧) ಮಿತಿಮೀರು
ಕೋಟಲೆ (೯.೪೧) ಚಿಂತೆ
ಅಳ್ಳಿರ್ದೆ (೯.೪೧) ಹೆದರಿದ ಎದೆ
ಅನಷ್ಟಂಭ (೯.೪೨ ವ) ಆತ್ಮವಿಶ್ವಾಸ
ಮುಂಡೆ (೯.೪೩) ಕತ್ತಿಯ ಮೊನೆ
ಕೈವೀಣ (೯.೪೩) (?)
ಒಡ್ಡಣ (೯.೪೩) ಸೈನ್ಯ
ಅಳ (.೪೩) ಪ್ರೀತಿ
ಮಡ (೯.೪೩ ವ) ಹಿಮ್ಮಡಿ
ರಸಾಳ (೯.೪೪) ಮಾವಿನಮರ
ಅಂಗರಕ್ಕ (೯.೪೪) ಅಂಗರಕ್ಷ

ಚೇಟಿ (೯.೪೫) ದಾಸಿ

ಪು. ೧೩೯

ಆಹತ (೯.೪೫) ಹೊಡೆತಕ್ಕೆ ಸಿಕ್ಕಿದ

ಆಕುಲಿತ (೯.೪೫) ವ್ಯಥೆಯಿಂದ ಕೂಡಿದ

ಬೞಿ (೯.೪೬ ವ) ಸಮೀಪ

ಪಡಲಿಡು (೯.೪೭) ಚದುರು; ಚೆಲ್ಲಾಪಿಲ್ಲಿ ಯಾಗು

ನಿಸ್ತ್ರಿಂಶ (೯.೪೭) ಕ್ರೂರ; ಕಠೋರ

ಉರ್ಕೆ (೯.೪೮) ಅಧಿಕ

ಆತ್ಮನಾಥ (೯.೪೮) ತನ್ನ ಒಡೆಯ

ಅಂಶುಕ (೯.೪೮) ಹೊದೆವ ಬಟ್ಟೆ

ಪು. ೧೪೦

ಪಳಿಕು (೯.೪೯) ಸ್ಫಟಿಕ

ಕದಳಿದಲ (೯.೪೯) ಬಾಳೆಎಲೆ

ಪರಾಮರ್ಶೆ (೯.೪೯ ವ) ಪರೀಕ್ಷೆ

ಮುೞುಂಕು (೯.೫೦) ಮುಳುಗು

ವೈಕ್ಲಬ್ಯ (೯.೫೦ ವ) ಚಿಂತೆ

ವಲ್ಮೀಕ (೯.೫೦ ವ) ಹುತ್ತ

ವ್ಯಾಳ (೯.೫೦ ವ) ಹಾವು

ಉತ್ಥಾಪನೆ (೯.೫೦ ವ) ಎಬ್ಬಿಸುವುದು

ದಂಡ (೯.೫೦ ವ) ಹೊಡೆತ

ಬಂಡಣ (೯.೫೧) ಯುದ್ಧ

ಕೋಳ್ಪಡು (೯.೫೧) ಸೂರೆಯಾಗು

ಪರ್ವ (೯.೫೩) ಹಬ್ಬ

ಸ್ಯಂದನ (೯.೫೩ ವ) ರಥ

ಸುಟ್ಟುರಿ (೯.೫೩ ವ) ಸುಂಟರ ಗಾಳಿ

ವ್ಯತಿಕರ (೫.೫೩) ಸಂದರ್ಭ; ದುಃಖ

ಪು. ೧೪೧

ಮುಸಗು (೯.೫೪) ಆರ್ಭಟಿಸು

ಪಣ್ಣಿದ (೯.೫೪) ಸಿದ್ಧಮಾಡಿದ

ಪಲ್ಲಣಿಸಿದ (೯.೫೪) ಜೀನುಹಾಕಿ ಸಿದ್ಧಗೊಳಿಸಿದ

ಪೃತನಾ (೯.೫೪ ವ) ೨೪೩ ರಥ, ೨೪೩ ಆನೆ, ೭೨೯ ಕುದುರೆ, ೧೨೧೫ ಜನಗಳ ಒಂದು ಸೇನಾವಿಭಾಗ;

ವೀರಪಟಹ (೯.೫೪ ವ) ವೀರವಾದ್ಯ

ಕಾಳೆ (೯.೫೪ ವ) ಕಹಳೆ

ಪಿಡಿದಲೆ (೯.೫೪ ವ) ಹಾರಿದ ತಲೆ

ಪರಿಯಾಣ (೯.೫೪) ತಟ್ಟೆ

ಜೋಳವಾೞಿ (೯.೫೪ ವ) ಜೋಳದ ಋಣ; ಅನ್ನದ ಹಂಗು,

ಸಿಬ್ಬಣ (೯.೫೪ ವ) ಮೆರವಣಿಗೆ

ಬೀರಸಿರಿ (೯.೫೪ ವ) ವೀರಶ್ರೀ

ಪಂದಲೆ (೯.೫೪ ವ) ಹಸಿಯ ತಲೆ; ರಕ್ತ ಬಸಿಯುವ ತಲೆ

ವೇಳೆವಾೞಿ (೯.೫೬) ಸಮಯಪಾಲನೆ

ಎನಸುಂ (೯.೫೬) ಚೆನ್ನಾಗಿ

ಮುಯ್ಯಾಂಪ (೯.೫೬) ಗರ್ವಪಡುವ; ಬೀಗುವ

ನಿವಾಳಿಸಿ (೯.೫೬ ವ) ಆರತಿ ಎತ್ತಿ

ಬೞಿಯಂ (೯.೫೬ ವ) ಅನಂತರ

ಜತ್ತ್ರಕೇಳಿ (೯.೫೭) ಚೇಷ್ಟೆ; ಲೀಲೆ

ಅಂಕರ (೯.೫೭) ಪ್ರಸಿದ್ಧರ

ಲೆಂಕ (೯.೫೭) ಬಂಟ; ಸೇವಕ

ಗೊಂದಣ (೯.೫೭) ಗುಂಪು

ಪು. ೧೪೨

ಅೞಲ್ (೯.೫೭ ವ) ದುಃಖ

ಸಂತಜಿಸು (೯.೫೭ ವ) ಸಮಾಧಾನಿಸು

ತುೞಿಲಾಳ್ (೯.೫೮) ಬಂಟ; ವೀರ

ಮಿಗೆ (೯.೫೮ ವ) ಹೆಚ್ಚಾಗಲು
ಸಂರಂಭ (೯.೫೮) ಉತ್ಸಾಹ; ಸಂಭ್ರಮ
ಕುದಿ (೯. ೫೯) ದುಃಖಿಸು
ಅರ್ದಿದರ್ (೯.೫೯) ಮುಳುಗಿದರು
ತಳ್ಳಂಕ (೯.೫೯) ಅಂಜಿಕೆ. ದಿಗ್ಭ್ರಾಂತಿ
ಮೂರಿ (೯.೬೦) ಕತ್ತಿ; ಸಿಮಿಂಪುವುದು
ನಿಚ್ಚಣಿ (೯.೬೦) ಏಣಿ
ಸಾರ್ಚುಂಡೊಲೆ (೯.೬೦) ಏರಿಹೋಗುವುದಕ್ಕೆಂದು ಕೋಟೆಗೆ ಆನಿಸಿ ನಿಲ್ಲಿಸಿದ ತೊಲೆ
ವೀರಸೇತು (೯.೬೦) ಕಂದಕವನ್ನು ದಾಟುವ ಸಾಧನ [ಯುದ್ಧದಲ್ಲಿ ಸತ್ತ ವೀರರನ್ನು ಕಂದಕದಲ್ಲಿ ಹಾಕಿ ರಚಿಸುತ್ತಿದ್ದಿರಬಹುದೆ?]
ನಡೆಸಾರು (೯.೬೦) ಕಂದಕವನ್ನು ದಾಟಿ ಹೋಗಲಿಕ್ಕಾಗಿ ಬಳಸುತ್ತಿದ್ದ ಸಾಧನ
ಬದ್ಧರ (೯.೬೦) ಭದ್ರ ಎಂಬುವರ ವಿಕೃತರೂಪ, ಕೋಟೆಯ ಮೇಲಿನಿಂದ ಬೀಳುವ ಬೇರೆ ಬೇರೆ ಆಯುಧಗಳ ಆಘಾತಗಳನ್ನು ತಡೆಯುವುದಕ್ಕಾಗಿ ವ್ಯಕ್ತಿಗೆ ತಲೆವರಿಗೆ (= ಢಾಲು) ಇದ್ದಂತೆ, ಸಮೂಹಕ್ಕೆ ಬದ್ಧರವು ಸಂರಕ್ಷಣೆಯ ಸಾಧನವಾಗಿದ್ದಿತು. ಇದರ ಮರೆಯಲ್ಲಿ ನಿಂತು ಕೋಟೆಯನ್ನು ಅಗೆದು ಕೆಡಹುವ ಕೆಲಸವನ್ನು ಶತ್ರುಗಳು ಮಾಡುತ್ತಿದ್ದರು. ಮೇಲಿನವರ ಸಾಧನಗಳನ್ನು ತೀರಿಸುವುದಕ್ಕಾಗಿ ಆಗಾಗ ಹೊರಕ್ಕೆ ಬಿದ್ದಂತೆ ತೋರಿಸಿ, ಮತ್ತೆ ಮತ್ತೆ ಬದ್ಧರದ ಮರೆಗಳಲ್ಲಿ ಅಡಗಿಕೊಳ್ಳುತ್ತಿದ್ದರು.
ಗೆಗ್ಗ (೯.೬೦) ಅಗಳನ್ನು ದಾಟುವ ಸಾಧನ
ಡೆಂಕಣಿ (೯.೬೦) ಒಂದು ಆಯುಧ ವಿಶೇಷ. ಕೋಟೆಯ ಮೇಲೆ ಯಾವಾಗಲೂ ಇವು ಕಾಪಿನ ಎಚ್ಚರಿಕೆಯ ಚಿಹ್ನೆಯನ್ನು ಸೂಚಿಸುತ್ತ ಸೆಡೆದುಕೊಂಡು ನಿಂತಿರುತ್ತಿದ್ದವು.
ಗುಮ್ಮ (೯.೬೦) ಬಡಿಮಣೆ
ಪಡಿಗೋಂಟೆ (೯.೬೦) ದಾಳಿಯಿಕ್ಕುವುದಕ್ಕೆ ಹೊರಟ ಸೈನ್ಯದ ಸಂರಕ್ಷಣೆಗಾಗಿ ರಚಿಸಿದ ಕೃತ್ರಿಮ ದುರ್ಗ, ಇದನ್ನು ಗಾಲಿಗಳ ಸಹಾಯದಿಂದ ಸಾಗಿಸುತ್ತಿದ್ದಿರಬಹುದು.
ಲಗ್ಗೆ (೯.೬೦) ಮುತ್ತಿಗೆ
ಆರ್ದು (೯.೬೦) ಗರ್ಜಿಸಿ
ಸೂಳ್ಯಿಸು (೯.೬೦) ಶಬ್ದಮಾಡು
ಸೂಟಿಸುವ (೯.೬೦ ವ) ಸರದಿಯಂತೆ ಶಬ್ದಮಾಡುವ
ನಿಸ್ಸಾಳ (೯.೬೦ ವ) ದೊಡ್ಡ ನಗಾರಿ
ಢಕ್ಕಾ (೯.೬೦ ವ) ಢಕ್ಕೆ
ಗುಡವಿಡಂಬಿತ (೯.೬೦ ವ) (?)
ಪಿಪೀಲಿಕಾ (೯.೬೦ ವ) ಇರುವೆ
ಅಣ್ಣಣ್ಣಿ (೯.೬೦ ವ) ಹೋರಾಡಿ ಹೋರಾಡಿ
ಮುಮ್ಮಳಿ (೯.೬೦ ವ) ರೂಪಳಿದ ಸಾವು
ಗುಡಿಗಟ್ಟಿ (೬.೬೦ ವ) ಸುತ್ತುಗಟ್ಟಿ
ಸೀರೆ (೯.೬೦ ವ) ವಸ್ತ್ರ
ಅಱಿತಿ (೯.೬೦ ವ) ಅರ್ಥಟಿಸಲು

ಪೆಱತೆಗೆ (೯.೬೧) ಹಿಂದೆ ಸರಿ; ಹಿಮ್ಮೆಟ್ಟು

ಪಣೆಯುಂತೆಗೆ (೯.೬೧) ಪಣೆಯುನಪ್ಪ ಹಿಂದೆ ಸರಿಸು

ನೆಱೆದ (೯.೬೧) ಪರಿಪೂರ್ಣವಾದ

ದಂಡೆ (೯.೬೧) ಸಾಲು

ಅಡ್ಡಣ (೯.೬೧) ಗುರಾಣಿ

ಪು. ೧೪೩

ಭೋಂಕೆಲ್ (೯.೬೨) ತಟ್ಟನೆ

ಮದಮಾತಂಗಾರಿ (೯.೬೯) ಮದಿಸಿದ ಆನೆಗೆ ವೈರಿಯಾದ ಸಿಂಹನಸುಷೇಣ

ವಜ್ರಾಂಗಿ (೯.೬೨) ವಜ್ರದಷ್ಟು ಬಲಿಷ್ಠವಾದ ದೇಹವುಳ್ಳ

ಕೊಂತ (೯.೬೨) ಒಂದು ಆಯುಧ ವಿಶೇಷ

ದಂಡೆ (೯.೬೨) ಸಾಲು

ಅಡ್ಡೈಸೆ (೯.೬೨) ಅಡ್ಡಬಂದು

ನೊಬಿಗೆ (೯.೬೨ ವ) ಧ್ವನಿಮಾಡಲು

ಪೆಱತೆಗೆ (೯.೬೨ ವ) ಹಿಂದೆ ಸರಿ

ಸ್ಕಂಧಾವಾರ (೯.೬೨ ವ) ಅರಮನೆ

ಪಕ್ಷ್ಮ (೯.೬೩) ರೆಪ್ಪೆಗೂದಲು

ಪ್ಲುಷ್ಟ (೯.೬೩) ಸುಡಲ್ಪಟ್ಟ

ಪ್ರಾಹ್ಣ (೯.೬೩) ಹಗಲಿನ ಪೂರ್ವಭಾಗ

ಉತ್ತರೀಯ (೯.೬೩) ಮೇಲುವಸ್ತ್ರ

ಅವಗುಂಠನ (೯.೬೩) ಮುಸುಕು

ಕಪೋಲ (೯.೬೩) ಕೆನ್ನೆ

ಸಾರ್ (೯.೬೩) ಸಮೀಪಿಸು

ಬಾಳಮೃಣಾಳ (೯.೬೪) ಎಳೆಯ ಚಿಗುರು

ಪಸಾಯಿತ (೯.೬೪ ವ) ಉಡುಗೆ ತೊಡಿಗೆಗಳನ್ನು ಇಟ್ಟುಕೊಳ್ಳುವ ಅಧಿಕಾರಿ

ಪರಿಹರಿಸಿ (೯.೬೪ ವ) ನಿವಾರಿಸಿ; ಕಳೆದು

ಪು. ೧೪೪

ಔತ್ಸುಕ್ಯ (೯.೬೫) ಉತ್ಸುಕತೆ

ಸಲ್ಗೆ (೯.೬೫) ಸಲಿಗೆ

ಸೊಳ್ತು (೯.೬೫) ಸೇವಕ

ಘೃತ (೯.೬೬) ತುಪ್ಪ

ಶಿಖಿ (೯.೬೬) ಬೆಂಕಿ

ಕನಲ್ (೯.೬೬) ಕೋಪ

ಒಸಲ್ (೯.೬೬) ಉಪಹಾಸ್ಯ ಮಾಡುವ ಸಿಟ್ಟು

ದೇಸಿಗಿತಿ (೯.೬೭) ಸೊಬಗಿ

ಮೆಱೆದು (೯.೬೭) ಪ್ರದರ್ಶಿಸಿ

ಜಱಚು (೯.೬೭) ಹರಟು

ಪಾಣ್ಬ (೯.೬೭) ನೀಚ

ದೋಷಾಕರ (೯.೬೮) ಚಂದ್ರ

ಚಿಟ್ಟನೆಟ್ಟನೆ (೯.೬೮ ವ) ಕಠಿನವಾಗಿ

ಚಿಮ್ಮಿರ್ (೯.೬೮ ವ) ಕನಲಿ ಕೆದರಿದಂತೆ

ಏವೈಸಿ (೯.೬೮ ವ) ದುಃಖಿಸಿ

ಜಳಿಯದೆ (೯. ೬೮ ವ) ಕುಗ್ಗದೆ; ಶಕ್ತಿಗುಂದದೆ

ಕೆಳೆ (೯.೬೯) ಸ್ನೇಹ

ಅಱಿಯಾಸೆ (೯.೬೯) ಹುಸಿ ಆಸೆ

ಆಗ್ರಹ (೯.೬೯) ಕೋಪ

ತೆಱಪು (೯.೬೯ ವ) ಅವಕಾಶ; ಎಡೆ

ಚಾಳಿಸಿ (೯.೭೦ ವ) ಸೋಲಿಸಿ

ಪು. ೧೪೬

ಕಿತವ (೧೦.೧) ವಂಚಕ

ಕೈತವ (೧೦.೧) ಕಪಟ; ಮೋಸ

ಸೋವದಿಕೆ (೧೦.೨) ಗುರುತು
ಪೊಣರ್ (೧೦.೩) ಎರಡು
ಪು. ೧೪೭
ಗಾತ್ರ (೧೦.೬) ದೇಹ
ಡವಕೆ (೧೦.೭) ಕಾಳಂಜಿ; ಪೀಕದಾನಿ
ಪು. ೧೪೮
ಉಪರಿ (೧೦.೯ ವ) ಎತ್ತರವಾದ
ಪೆಂಡವಾಸ (೧೦.೯ ವ) ಅಂತಃಪುರ
ಹುತವಹ (೧೦.೯ ವ) ಅಗ್ನಿ
ಪರಿಚ್ಛೇದಿಸು (೧೦.೯ ವ) ನಿರ್ಧರಿಸು
ಮಾರ್ಕೊಳ್ (೧೦.೧೦ ವ) ಪ್ರತಿಭಟಿಸು
ಮೊಗಸು (೧೦.೧೪) ಇಚ್ಛಿಪಡು, ಬಯಸು
ಪಲ್ಲಣಿಸಿ (೧೦.೧೪) ಸಿದ್ಧಗೊಳಿಸಿ
ಪು. ೧೪೯
ಕೃಪಾಣ (೧೦.೧೬) ಕತ್ತಿ
ಪಾರ್ಷ್ಣಿ (೧೦.೧೬ ವ) ಹಿಮ್ಮಡಿ
ನೆಮ್ಮು (೧೦.೧೬ ವ) ಆಧಾರ
ದಯಿತ (೧೦.೧೬ ವ) ಪ್ರಿಯ
ಕಳಿವೂ (೧೦.೧೭) ಬಾಡಿದ ಹೂವು
ಹೊಟ್ಟುಗೆರೆ (೧೦.೧೭) ಒಡೆದ ಕೆರೆ
ಜೇಳಂಬ (೧೦.೧೮) ವಿಸ್ತಾರ
ತಿಣ್ಣ (೧೦.೧೯) ವಿಶೇಷ
ಪು. ೧೫೦
ಮುರವಾಳ್ (೧೦.೧೯) ಮರದ ಕತ್ತಿ
ನೀಱೆ³ (೧೦.೨೦) ಸುಂದರಿ
ಕಾಳೆ (೧೦.೨೧) ಕಹಳೆ
ಕೊಕ್ಕರಿಕೆ (೧೦.೨೧) ಜಿಗುಪ್ಸೆ
ಕಟಕ (೧೦.೨೨) ಸೈನ್ಯ
ಪಚ್ಚು (೧೦.೨೩) ವಿಭಾಗಿಸು

ಘಟಿಕಾಸ್ಥಾನ (೧೦.೨೪) ವಿದ್ಯಾಪೀಠ
ಪು. ೧೫೧
ತಾಳ್ದಿದ (೧೦.೨೬) ಧರಿಸಿದ
ವೃಂದಾರಕ (೧೦.೨೮) ದೇವತೆ
ದಿವ (೧೦.೨೯) ಸ್ವರ್ಗ
ವಾಸವ (೧೦.೨೯) ಇಂದ್ರ
ಪು. ೧೫೩
ದೋರ್ (೧೦.೩೩) ಬಾಹು, ಭುಜ
ಕೈಗೊಂಡ (೧೦.೩೫) ರೆಂಟೆಯನ್ನೊಳಗೊಂಡ
ಪಟ್ಟರಣ (೧೦.೩೫) ದುಂಬಿ
ಕಜ್ಜಳ (೧೦.೩೭) ಕಾಡಿಗೆ
ಉರೋಜ (೧೦.೩೭) ಸ್ತನ
ಅಂಚಲ (೧೦.೩೯) ಸೀರೆಯ ಸೆರಗು
ಪು. ೧೫೪
ನಿದಾಘ (೧೦.೪೨) ಬೇಸಗೆ
ವಯಸ್ಯೆ (೧೦.೪೩) ಸ್ನೇಹಿತೆ
ಅಭಿಷವಣ (೧೦.೪೩ ವ) ಅಭಿಷೇಕ
ಶಿಖಿನೀ (೧೦.೪೩ ವ) ಹೆಣ್ಣುನವಿಲು
ಹರಿಣೀ (೧೦.೪೩ ವ) ಹೆಣ್ಣುಜಿಂಕೆ
ಮಹಿಷೀ (೧೦.೪೩ ವ) ಎಮ್ಮೆ
ಲುಲಾಯ (೧೦.೪೩ ವ) ಕೋಣ
ಕರಿಣೀ (೧೦.೪೩ ವ) ಹೆಣ್ಣಾನೆ
ಪು. ೧೫೫
ಇಭಶಿಶು (೧೧.೪೪) ಆನೆಮರಿ
ತಾರ (೧೦.೪೪) ಪರ್ವತ
ಕಾಯ್ಪು (೧೦.೪೪) ಸಿಟ್ಟು
ಅಲಂಪು (೧೦.೪೪) ಸಂತೋಷ
ಪು. ೧೫೬
ಗಾತ್ರ (೧೦.೪೮ ವ) ದೇಹ

ಪು. ೧೫೭
ದಾವ (೧೦.೫೨) ಕಾಡ್ಗಿಚ್ಚು
ಸಂತಸಿಕೆ (೧೦.೫೪) ಸಂತೋಷ

ಪು. ೧೫೮
ಅಂಜನವಾರಣ (೧೦.೫೭) ಪಶ್ಚಿಮ ದಿಕ್ಕಿನ ದಿಗ್ಗಜ
ಉಗಿಬಗಿ (೧೦.೫೮) ಘಾಸಿ

ಪು. ೧೫೯
ಅಣ್ಮು (೧೧.೫) ಸಾಹಸ, ಪರಾಕ್ರಮ

ಪು. ೧೬೦
ಪಳ್ಳಿಸು (೧೧.೬) ಗರ್ವದಿಂದ ಮೆರೆ
ಉದ್ವೃತ್ತ (೧೧.೬) ದುರಾಚಾರಿ
ಅಳ್ಳಿಱ್ (೧೧.೯) ಭಯ ಹುಟ್ಟಿಸು, ತಾಗು
ಅಗೆ (೧೧.೧೦) ಮೊಳಕೆ
ದ್ರೋಣಿ (೧೧.೧೦) ನದಿ
ದ್ಯುನದಿ (೧೧.೧೧) ದೇವಗಂಗೆ
ನಿಮಗ್ನ (೧೧.೧೧) ಮುಳುಗಿದ
ಅರ್ಜುನ (೧೧.೧೨) ಬಿಳಿಯ

ಪು. ೧೬೧
ತೇಳ್ (೧೧.೧೪) ಚೇಳು
ದಕ್ಕ್ಯಂಪಲೆ (೧೧.೧೪) ಕರಗತ ಮಾಡಿ ಕೊಂಡವರಂತೆ (?)

ಪು. ೧೬೨
ಸೂದನ (೧೧.೧೭ ವ) ನಾಶ
ಅಭಿವಾದನ (೧೧.೧೮ ವ) ಹೆಸರು ಹೇಳಿ ನಮಸ್ಕಾರ ಮಾಡುವುದು
ಉಪರಿಮ (೧೧.೧೯ ವ) ಎತ್ತರ ಸ್ಥಳ

ಪು. ೧೬೩
ಆರಾಮ (೧೧.೨೧) ಉಪವನ
ಹವ್ಯಕವ್ಯ (೧೧.೨೧) ದೇವತೆಗಳಿಗೆ ಮತ್ತು ಪಿತೃಗಳಿಗೆ ಅರ್ಪಿಸುವ ಪದಾರ್ಥ
ಖಗನೀಡ (೧೧.೨೪) ಪಕ್ಷಿಗಳ ಗೂಡು
ದೋಂಟೆ (೧೧.೨೪) ಕೊಕ್ಕೆ
ಹುತ (೧೧.೨೫) ಹವಿಸ್ಸು
ಕಿತವ (೧೧.೨೫) ನೀಚ, ಮೋಸಗಾರ
ಗೆಂಟು (೧೧.೨೫) ದೂರ

ಪು. ೧೬೪
ಬಾಹ (೧೧.೩೦) ತೋಳ

ಪು. ೧೬೫
ಉಂಡಿಗೆ (೧೧.೪೦) ಮೊಹರು, ಮುದ್ರೆ

ಪು. ೧೬೭
ನೀಟ್ಕರಿಸು (೧೧.೪೩) ತಿರಸ್ಕರಿಸು
ದೈತೇಯ (೧೧.೪೫) ರಾಕ್ಷಸ
ಗೆತ್ತು (೧೧.೪೫) ಭಾವಿಸಿ

ಪು. ೧೬೮
ಮುಸಲಿ (೧೧.೪೮) ಬಲರಾಮ
ಅವಷ್ಟಂಭ (೧೧.೫೦) ಸ್ಥಿರತೆ

ಪು. ೧೬೯
ಶ್ಮಶ್ರು (೧೧.೫೩) ಮೀಸೆ
ಎಂಬನ್ನರ್ (೧೧.೫೪) ಎನ್ನುವಂತಹವರು
ನಿರ್ವಾಣ (೧೧.೫೪) ಮುಕ್ತಿ
ವಿಧು (೧೧.೫೪ ವ) ಚಂದ್ರ
ಕೌಮುದಿ (೧೧.೫೪ ವ) ಬೆಳುದಿಂಗಳು
ಅಹಮಹಮಿಕೆ (೧೧.೫೪ ವ) ತ್ವರೆ, ನಾನು ಮುಂದೆ ತಾನು ಮುಂದೆ ಎಂಬ ಸಂಭ್ರಮ
ಪೇಟಕ (೧೧.೫೮ ವ) ಸಮೂಹ (?)

ಕೋಡುಗಗಟ್ಟು (೧೧.೫೫) ಕೋತಿಯನ್ನು ಕಟ್ಟುವ ಹಾಗೆ ಕಟ್ಟಿ ಹಾಕು, ಬಿಡಿಸಲಾಗದಂತೆ ಹಾಕುವ ಕಟ್ಟು
ಆಳಿಸಿ (೧೧.೫೫) ಸೇವಕರನ್ನಾಗಿಸಿ
ತಾಳವಟ್ಟ (೧೧.೫೫) ತಾಳೆಗರಿಯ ಆಕಾರ
ಹಾಹೆ (೧೧ ೫೫) ಗೊಂಬೆ
ಎಟಿಲ್ (೧೧.೫೫) ಜೋಲಾಡು
ಬಟ್ಟೆ (೧೧ ೫೫) ದಾರಿ
ಪ್ರತಾನ (೧೧.೫೫ ವ) ಸಮೂಹ
ಝಳವಟ್ಟಗೆ (೧೧.೫೫ ವ) ಪ್ರಕಾಶಮಾನವಾದ ವಸ್ತ್ರ (?)
ಮಾಜಿಾನ್ (೧೧ ೫೬) ಯುದ್ಧಕ್ಕೆ ಇದಿರಾಗು
ಆಸೇಕ (೧೧ ೫೬) ಚೆಲ್ಲು; ಸುರಿ

ಪು. ೧೨೦
ಸೂಟ್ಟೈಸು (೧೧ ೫೮) ನಗಾರಿ ಬಾರಿಸು
ಕಟಕ (೧೧.೫೮) ಸೈನ್ಯ
ಪೇರ್ವೆಂಟೆ (೧೧.೫೮) ದೊಡ್ಡಬೇಟೆ
ಪೊಱ[3] (೧೧.೬೦) ಭಾರ
ಅಳುಂಬ (೧೧ ೬೦) ಹಿರಿದು
ಅನಚಟು (೧೧.೬೦) ಅಸಹ್ಯಪಡು
ಬೆಜ್ (೧೧.೬೧) ಭಯಪಡು

ಪು. ೧೨೧
ಜೇಳಂಬ (೧೧ ೬೧) ಆಹುತಿ, ಬಲಿ
ಸೆಡೆ (೧೧.೬೧ ವ) ಹೆದರು, ಕುಗ್ಗು
ಒಟ್ಟೈಸು (೧೧ ೬೨) ಒಂದುಗೂಡಿಸು
ರೋದೋಂತ (೧೧ ೬೨) ಭೂಮಿ ಆಕಾಶಗಳು ಒಂದುಗೂಡುವ ಭಾಗ
ಪಲ್ಲಣ (೧೧.೬೨) ಕುದುರೆ ಜೀನು

ಪು. ೧೨೨
ತೆಱಪು (೧೨ ೩) ಅವಕಾಶ, ಎಡೆ
ಘೋಳಾಯ್ಲ (೧೨ ೩) ಕುದುರೆಸವಾರ
ಇಟ್ಟಳ (೧೨ ೩) ಸಮೂಹ
ಪೂರ (೧೨.೩) ಪ್ರವಾಹ
ಕೋದು (೧೨ ೩) ಪೋಣಿಸು
ಮುಮ್ಮಳಿ (೧೨.೪) ರೂಪಳಿದ ಸಾವು
ಸುಟ್ಟುರೆ (೧೨.೬) ಸುಂಟರಗಾಳಿ

ಪು. ೧೨೩
ಪೊರೆ (೧೨ ೬) ರಕ್ಷಿಸು
ಭಲ್ಲ (೧೨.೭) ಈಟಿ, ಬರ್ಚಿ
ಚಿಕ್ಕುತಿಗೆ (೧೨.೭ ವ) ಬಿಸುಸು
ಒಜ್ಜುತ (೧೨ ೭) ಒಪ್ಪಲೆ
ಅಂಸ (೧೨ ೮) ಹೆಗಲು, ಭುಜ
ಕೋವರ (೧೨.೯) ಕುಂಬಾರ
ಜೇಟ್ (೧೨ ೯) ಆಹುತಿ
ಇಟ್ಟಳ (೧೨.೯) ವಿಶೇಷವಾಗಿ
ಕಾದು (೧೨ ೧೧) ರಕ್ಷಿಸಿ

ಪು. ೧೨೪
ಆನತ (೧೨ ೧೨) ಬಾಗಿದ, ಅಡ್ಡಬಿದ್ದ
ತಳ್ತು (೧೨ ೧೨) ಅಪ್ಪಿ
ವಡ್ಡ (೧೨ ೧೨ ವ) ಪೂಜ್ಯ
ಜಾಯ್ಮೋಳಿಸು (೧೨ ೧೩) ಆಜ್ಞಾಧೀನಗೊಳಿಸು

ಪು. ೧೨೫
ಕೊಲ್ಲಣಿಗೆ (೧೨.೧೭) ಸಂಚಾರ, ಎಡೆಯಾಟ
ಅನೋಕಹ (೧೨.೧೯ ವ) ಮರ
ನಿಶ್ರೇಯಸ (೧೨.೨೦) ಮೋಕ್ಷ

ಪು. ೧೨೬
ಸಾಳಗ (೧೨.೨೯) ಒಂದು ಬಗೆಯ ರಾಗ
ನಚ್ಚಣಿ (೧೨.೨೯) ನರ್ತನ

ಜೈನ ಪಾರಿಭಾಷಿಕ ಪದಗಳು

ಪು. ೫೧ ಸಮ್ಯಗ್ದರ್ಶನಜ್ಞಾನಚಾರಿತ್ರ (೧.೨): ಮೋಕ್ಷಸಾಧನಗಳಾದ ಇವನ್ನು ರತ್ನತ್ರಯವೆಂದು ಕರೆಯುವರು. ತೀರ್ಥಂಕರರ ಧರ್ಮವಾದ ಅಹಿಂಸಾಧರ್ಮವನ್ನು ಪೂರ್ಣವಾಗಿ ನಂಬುವುದು, ವಿವೇಚಿಸುವುದು, ಬಾಳಿನಲ್ಲಿ ಅಳವಡಿಸಿಕೊಳ್ಳುವುದು ಇವಕ್ಕೆ ಕ್ರಮವಾಗಿ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ, ಸಮ್ಯಗ್‌ಚಾರಿತ್ರ ಎನ್ನುವರು.

ಪು. ೬೭ ಶುಕ್ಲಧ್ಯಾನ (೩.೩೦): ಶುಚಿತ್ವಸಮೇತವಾದುದು ಶುಕ್ಲಧ್ಯಾನ. ಧರ್ಮಧ್ಯಾನವನ್ನು ಮುಗಿಸಿ ಮುಕ್ತಿ ಹೊಂದುವುದನ್ನು ಕುರಿತು ಚಿಂತಿಸುವುದು ಶುಕ್ಲಧ್ಯಾನವು ಸಾಕ್ಷಾತ್ತಾಗಿ ಮುಕ್ತಿಗೆ ಸಾಧನವಾಗುತ್ತದೆ.

ಪು. ೧೧೦ ಏಳು ನರಕ (೭.೧೯): ಮಧ್ಯಲೋಕದ ಕೆಳಗೆ ಭವನವಾಸಿಗಳೂ ಅಸುರಕುಮಾರರೂ ವಾಸಿಸುವ ನೆಲೆಗಳಿವೆ. ಅಲ್ಲಿಂದ ಕೆಳಗೆ ಕ್ರಮವಾಗಿ 1. ರತ್ನಪ್ರಭೆ, 2. ಶರ್ಕರಾಪ್ರಭೆ, 3. ವಾಲುಕಾಪ್ರಭೆ. 4. ಪಂಕಪ್ರಭೆ, 5. ಧೂಮಪ್ರಭೆ, 6. ತಮಃಪ್ರಭೆ. 7. ಮಹಾತಮಃಪ್ರಭೆ ಎಂಬ ಏಳು ನರಕಗಳಿವೆ.

ಪು. ೧೧೧ ಚತುರ್ಗತಿ (೭.೨೯): ದೇವ, ಮನುಷ್ಯ, ತಿರ್ಯಕ್, ನಾರಕ ಎಂಬ ನಾಲ್ಕು ನೆಲೆಗಳು.

ಪು. ೧೧೨ ನಿಷ್ಕ್ರಮಣವಿಶೇಷೋತ್ಸವ (೭.೩೪): ತೀರ್ಥಂಕರನ ಪಂಚಕಲ್ಯಾಣಗಳಲ್ಲಿ ನಾಲ್ಕನೆಯದು. ಸಂಸಾರದಲ್ಲಿ ಕೊಕ್ಕರಿಕೆಯಾಗಿ ತೀರ್ಥಂಕರ ಸನ್ಯಾಸಿಯಾಗ ಬಯಸುತ್ತಾನೆ. ಆಗ ಲೌಕಾಂತಿಕ ದೇವತೆಗಳು ಬಂದು ಉಪದೇಶಮಾಡಿ ವೈರಾಗ್ಯವನ್ನು ದೃಢಮಾಡುತ್ತಾರೆ. ಇಂದ್ರಾದಿಗಳು ಬಂದು ಮಂಗಳಸ್ನಾನ ಮಾಡಿಸುತ್ತಾರೆ. ತೀರ್ಥಂಕರನು ತನ್ನ ಬಂಧುವರ್ಗವನ್ನು ಬೀಳ್ಕೊಂಡು ದೇವತೆಗಳು ತಂದ ಶಿಬಿಕೆಯನ್ನೇರಿ ಗೃಹತ್ಯಾಗಮಾಡುತ್ತಾನೆ. ದೀಕ್ಷೆಹೊಂದಿ ವನದಲ್ಲಿ ತಪಸ್ಸಿಗೆ ನಿಲ್ಲುತ್ತಾನೆ. ತೀರ್ಥಂಕರ ಗೃಹ ತ್ಯಜಿಸಿ ಹೋಗುವಾಗಿನ ಉತ್ಸವವೇ ನಿಷ್ಕ್ರಮಣ ವಿಶೇಷೋತ್ಸವ (ಅ) ಪರಿನಿಷ್ಕ್ರಮಣ ಕಲ್ಯಾಣ.

ಪು. ೧೧೨ ಚತುರ್ನಿಕಾಯ ಅಮರರು (೭.೩೫ ನ): ಭವನಪತಿ, ವ್ಯಂತರಿಕ, ಜ್ಯೋತಿಷ್ಕ ಮತ್ತು ವಿಮಾನವಾಸಿಗಳೆಂದು ದೇವತೆಗಳಲ್ಲಿ ನಾಲ್ಕು ಬಗೆ.

ಪು. ೧೧೩ ಘಾತಿ, ಅಘಾತಿ (೭.೩೭) : ಕರ್ಮಗಳಲ್ಲಿ ಘಾತಿ, ಅಘಾತಿ ಎಂದು ಎರಡು ಬಗೆ. ಘಾತಿಕರ್ಮಗಳು ಜೀವವನ್ನು ಸಂಸಾರದಲ್ಲೆ ಸಿಲುಕಿಸಿ ಅದು ತನ್ನ ಸಹಜ ಸ್ಥಿತಿಯನ್ನು ಪಡೆಯದಂತೆ ತಡೆದಿಡುತ್ತವೆ.

ಘಾತಿಕರ್ಮಗಳು ನಾಲ್ಕು :

1. ಜ್ಞಾನಾವರಣೀಯ—ಅನಂತಜ್ಞಾನವನ್ನು ಆವರಿಸುವುದು.
2. ದರ್ಶನಾವರಣೀಯ—ಅನಂತದರ್ಶನವನ್ನು ಆವರಿಸುವುದು.
3. ಅಂತರಾಯ—ಅನಂತವೀರ್ಯವನ್ನು ಆವರಿಸುವುದು.
4. ಮೋಹನೀಯ—ಜೀವವನ್ನು ಮೋಹಗೊಳಿಸಿ ಅನಂತಸುಖವನ್ನು ಮರೆಸುವುದು.

ಅಘಾತಿಕರ್ಮಗಳು—ಆತ್ಮನ ಗುಣಗಳನ್ನು ನಾಶಮಾಡದ ಕರ್ಮಗಳು. ಇವು ನಾಲ್ಕು ಬಗೆ :

1. ಆಯು—ಆಯುಸ್ಸಿನ ಅವಧಿಯನ್ನು ನಿರ್ಣಯಿಸುವ ಕರ್ಮ.
2. ನಾಮ—ವ್ಯಕ್ತಿಯ ತೂಕ, ಎತ್ತರ, ಗಾತ್ರ, ಬಣ್ಣ ಮುಂತಾದುವನ್ನು ನಿರ್ಣಯಿಸುವ ಕರ್ಮ
3. ಗೋತ್ರ—ವ್ಯಕ್ತಿಯ ವಂಶ, ಕುಲ, ದೇಶವನ್ನು ನಿರ್ಣಯಿಸುವ ಕರ್ಮ.
4. ವೇದನೀಯ—ಇಹಜೀವನದಲ್ಲಿ ಸುಖದುಃಖಕಾರಣವಾದ ಕರ್ಮ.

ಪು. ೧೧೩ ಬಾಹ್ಯ ಅಭ್ಯಂತರ ತಪಸ್ಸು (೭ ೪೭ ವ) : ಕರ್ಮನಿರ್ಜರೆಗೆ ಸಾಧನವಾದ ತಪಸ್ಸು ಎರಡು ರೀತಿಯವು : 1. ಬಾಹ್ಯ ತಪಸ್ಸು, 2. ಅಭ್ಯಂತರ ತಪಸ್ಸು.

ಬಾಹ್ಯ ತಪಸ್ಸು ಆರು :

1. ಅನಶನ ತಪಸ್ಸು—ಆಹಾರವನ್ನೇ ತೆಗೆದುಕೊಳ್ಳದೆ ಉಪವಾಸ ಮಾಡುವುದು. (ಕೆಲವು ವೇಳೆ ಸಾಯುವವರೆವಿಗೂ ಅನಶನವ್ರತ ತೊಟ್ಟು ಉಪವಾಸ ಮಾಡಿ ಮುಡಿಯುತ್ತಾರೆ. ಇದಕ್ಕೆ 'ಸಲ್ಲೇಖನ'ವೆಂದು ಹೆಸರು.)
2. ಅವಮೋದರ ತಪಸ್ಸು—ಹೊಟ್ಟೆ ತುಂಬುವುದಕ್ಕೆ ಎಷ್ಟು ಬೇಕೋ ಅದಕ್ಕಿಂತ ಕಡಿಮೆ ತಿನ್ನುವುದು.
3. ವೃತ್ತಿಸಂಖ್ಯಾನ ತಪಸ್ಸು—ಯಾವುದೋ ಒಂದು ರೀತಿಯಲ್ಲಿ ದೊರೆತರೆ ಮಾತ್ರ ಭಿಕ್ಷೆ ತೆಗೆದುಕೊಳ್ಳುವುದಾಗಿ ಮನಸ್ಸಿನಲ್ಲಿ ನಿರ್ಧರಿಸಿಕೊಂಡು ತನ್ನ ಭಿಕ್ಷಾವೃತ್ತಿಯನ್ನು ಸಂಕೋಚಪಡಿಸಿಕೊಳ್ಳುವುದು.
4. ರಸತ್ಯಾಗ ತಪಸ್ಸು—ಹಾಲು ತುಪ್ಪ ಮೊದಲಾಗಿ ತನಗೆ ಇಷ್ಟವಾದ ಪದಾರ್ಥಗಳನ್ನು ತಿನ್ನದೆ ಬಿಡುವುದು.

5 ಕಾಯಕ್ಲೇಶ ತಪಸ್ಸು—ಬಿಸಿಲು, ಚಳಿ, ಮಳೆ ಮೊದಲಾದವನ್ನು ಸಹಿಸಿ ಧ್ಯಾನ ಮಾಡುತ್ತ ದೇಹವನ್ನು ದಂಡಿಸುವುದು

6. ವಿವಿಕ್ತ ಶಯನಾಸನ ತಪಸ್ಸು—ಏಕಾಂತವಾಗಿ ಕೂರುವುದು. ಮಲಗುವುದು.

ಅಭ್ಯಂತರ ತಪಸ್ಸು ಆರು :

1. ಪ್ರಾಯಶ್ಚಿತ್ತ—ಮಾಡಿದ ತಪ್ಪನ್ನು ಹಿರಿಯರೆದುರಿಗೆ ಒಪ್ಪಿಕೊಂಡು ಕ್ಷಮೆ ಬೇಡಿ ಅವರು ವಿಧಿಸಿದ ಶಿಕ್ಷೆಯನ್ನು ಸ್ವೀಕರಿಸಿ ಪರಿಹಾರ ಮಾಡಿಕೊಳ್ಳುವುದು.
2. ವಿನಯ—ಜ್ಞಾನ ದರ್ಶನ ಚಾರಿತ್ರಗಳಲ್ಲಿ ತನಗಿಂತ ಮುಂದುವರಿದವರಿಗೆ ವಿನೀತನಾಗಿ ವಂದಿಸುವುದು.
3. ವೈಯಾವೃತ್ತ್ಯ—ಮುಪ್ಪಡಸಿದ, ಅಶಕ್ತರಾದ, ರೋಗಿಷ್ಠರಾದ ಸಾಧುಗಳಿಗೆ ಸೇವೆ ಮಾಡುವುದು; ದೀನಾನಾಥರನ್ನು ಸೇವಿಸುವುದು.
4. ಸ್ವಾಧ್ಯಾಯ—ಆಗಮ ಗ್ರಂಥಗಳನ್ನು ಓದಿಸಿ, ಕೇಳಿ, ಓದಿ, ತಿಳಿದು, ಮನನ ಮಾಡುವುದು.
5. ವ್ಯುತ್ಸರ್ಗ—ಶರೀರದಲ್ಲಿ ಮಮತೆಯನ್ನು ಬಿಟ್ಟು ಉಪೇಕ್ಷೆಯಿಂದಿರುವುದು.
6. ಧ್ಯಾನ—ಧ್ಯಾನದಲ್ಲಿ (1) ಆರ್ತಧ್ಯಾನ (2) ರೌದ್ರಧ್ಯಾನ (3) ಧರ್ಮಧ್ಯಾನ (4) ಶುಕ್ಲಧ್ಯಾನ ಎಂದು ನಾಲ್ಕು ಬಗೆ. ಇಷ್ಟವಸ್ತು ಹೋಯಿತೆಂದೂ ಅನಿಷ್ಟವಾದದ್ದು ಬಂತೆಂದೂ ಭೋಗ ದೊರೆಯಲೆಂದೂ ದುಃಖ ರೋಗಗಳೆಂದೂ ಸದಾ ಕೊರಗುತ್ತಿರುವುದು ಆರ್ತಧ್ಯಾನ. ಹಿಂಸೆಮಾಡುವುದು ಸುಳ್ಳಾಡುವುದು, ಕದಿಯುವುದು, ತನ್ನದನ್ನು ರಕ್ಷಿಸಿಕೊಳ್ಳಲು ವಿಶೇಷ ಪ್ರಯತ್ನಮಾಡುವುದು, ಇವಕ್ಕಾಗಿ ರಾಗದ್ವೇಷಗಳಿಂದ ಸದಾ ಯೋಚಿಸುತ್ತಿರುವುದು ರೌದ್ರಧ್ಯಾನ. ಆರ್ತ ರೌದ್ರಧ್ಯಾನಗಳೆರಡೂ ಕೆಟ್ಟವು; ಸಂಸಾರಕಾರಣಗಳು. ಈ ಎರಡನ್ನೂ ಬಿಟ್ಟು ಧರ್ಮವಿಷಯಗಳನ್ನು ಸದಾ ನೆನೆಯುತ್ತಿರುವುದು ಧರ್ಮಧ್ಯಾನ. ಧರ್ಮಧ್ಯಾನವನ್ನು ಮುಗಿಸಿ ಮುಕ್ತಿಯೊಂದುವುದನ್ನೇ ಕುರಿತು ಚಿಂತಿಸುವುದು ಶುಕ್ಲಧ್ಯಾನ (ಕಷಾಯ ಮಲಗಳಿಲ್ಲದೆ ಪರಿಶುದ್ಧವಾದದ್ದು). ಧರ್ಮಶುಕ್ಲಧ್ಯಾನಗಳೆರಡೂ ಶುಭಕಾರಿಗಳು. ಶುಕ್ಲಧ್ಯಾನ ಸಾಕ್ಷಾತ್ತಾಗಿ ಮುಕ್ತಿಗೆ ಸಾಧನವಾಗುತ್ತದೆ.

ಪು. ೧೧೭ ಪಂಚಾಶ್ಚರ್ಯ (೭.೫೫ ವ) : ಐದು ಆಶ್ಚರ್ಯಗಳು: 1. ದೇವದುಂದುಭಿ ಮೊಳಗುವುದು, 2. ಹೂಮಳೆಗರೆಯುವುದು, 3. ಚಿನ್ನದ ಮಳೆ ಸುರಿಯುವುದು 4. ದೇವತೆಗಳು ಪ್ರಶಂಸೆ ಮಾಡುವುದು, 5. ತಂಗಾಳಿ ಬೀಸುವುದು.

ಪು. ೧೧೭ ಚರ್ಯಾ (೭.೫೭) : ಮುನಿ ಭಿಕ್ಷೆಗಾಗಿ ತಿರುಗುವುದು, ಭಿಕ್ಷಾಟನೆ.

ಪು. ೧೧೭ ಈರ್ಯಾಪಥಶುದ್ಧಿ (೭.೫೭): ಪ್ರಾಸುಕ ಮಾರ್ಗದಲ್ಲಿ ಹಗಲುಹೊತ್ತು ಕಾರ್ಯನಿಮಿತ್ತವಾಗಿ ಉತ್ಸುಕನೂ, ಅನ್ಯಮನಸ್ಕನೂ ಆಗದೆ ಮುಂದೆ ನೋಡಿಕೊಂಡು ಸೂಕ್ಷ್ಮಬಾದರ ಪ್ರಾಣಿಗಳನ್ನು ಪ್ರಯತ್ನಪೂರ್ವಕವಾಗಿ ಪರಿಹರಿಸಿ ನಡೆಯುವುದು.

ಪು. ೧೨೧ ಸಮವಸರಣ (೮.೩.೪): ಘಾತಿಕರ್ಮವನ್ನು ಧ್ವಂಸಮಾಡಿ ಕೇವಲಜ್ಞಾನ ಪಡೆದ ತೀರ್ಥಂಕರನಿಗೆ ದೇವತೆಗಳು ಸತ್ಕರಿಸಲು ಅಂಬರದಲ್ಲಿ ತೇಲಾಡುವ ದೈವಕಲಾಪ್ರಪಂಚವನ್ನು ಸೃಷ್ಟಿಸಿ ಆತನನ್ನು ಆಹ್ವಾನಿಸುವರು. ಎಷ್ಟೇ ಭವ್ಯಾತ್ಮರು ಅಲ್ಲಿ ಸೇರಿದರೂ ಇನ್ನೂ ಜಾಗ ಉಳಿಯುವುದು. ತೀರ್ಥಂಕರ ಧನಾಧ್ಯಕ್ಷನಿಂದ ನಿರ್ಮಾಣಗೊಂಡ ಸಮವಸರಣದಲ್ಲಿ ಕುಳಿತು ಬೋಧಿಸುವನು.

ಪು. ೧೨೧ ಚಾತುರ್ಥ್ಯಕಲ್ಯಾಣ (೮.೯): ತೀರ್ಥಂಕರನ ಪಂಚಕಲ್ಯಾಣಗಳಲ್ಲಿ ನಾಲ್ಕನೆಯದಾದ ಪರಿನಿಷ್ಕ್ರಮಣ ಕಲ್ಯಾಣ (ಅ) ಪರಿನಿಷ್ಕ್ರಾಂತಿ ಮಹೋತ್ಸವ.

ಪು. ೧೫೧ ಸಹಸ್ರಾರಕಲ್ಪ (೧೦.೨೭): ಹದಿನಾರು ಸ್ವರ್ಗಗಳಲ್ಲಿ ಸಹಸ್ರಾರಕಲ್ಪ ಹನ್ನೆರಡನೆಯದು.

ಪು. ೧೫೨ ಪದಿನಾಱುಂ ಕಲ್ಪ (೧೦.೩೭.೪): 1. ಸೌಧರ್ಮ, 2 ಈಶಾನ, 3. ಸನತ್ಕುಮಾರ, 4. ಮಾಹೇಂದ್ರ (ಈ ನಾಲ್ಕರಲ್ಲಿ ಪ್ರತಿಯೊಂದರಲ್ಲೂ ಒಬ್ಬೊಬ್ಬ ಇಂದ್ರನುಂಟು), 5. ಬ್ರಹ್ಮ, 6. ಬ್ರಹ್ಮೋತ್ತರ, 7. ಲಾಂತವ, 8. ಕಾಪಿಷ್ಠ, 9. ಶುಕ್ರ, 10. ಮಹಾಶುಕ್ರ, 11 ಶತಾರ 12. ಸಹಸ್ರಾರ, (ಈ ಎಂಟರಲ್ಲಿ ಎರಡೆರಡಕ್ಕೆ ಒಬ್ಬನಂತೆ ಒಟ್ಟು ನಾಲ್ಕು ಮಂದಿ ಇಂದ್ರರು), 13. ಆನತ, 14. ಪ್ರಾಣತ, 15. ಆರಣ, 16. ಅಚ್ಯುತ (ಈ ನಾಲ್ಕರಲ್ಲಿ ಒಂದೊಂದಕ್ಕೂ ಒಬ್ಬೊಬ್ಬ ಇಂದ್ರ)

ಅಚ್ಚಿನ ತಪ್ಪುಗಳು

ಪುಟ	ಸಾಲು	ಅಶುದ್ಧ	ಶುದ್ಧ
೪೧	೨೮	ಪೇಟ್ದ ಪ್ರಶಸ್ತ	ಪೇಳ್ದಪ್ರಶಸ್ತ
೫೪	೩	ಸರ್ಜಜ್ಞ	ಸರ್ವಜ್ಞ
೭೧	೨	ಅಜುಃಪಿನ	ಅಱುಪಿಸ
೮೯	೨೦	ಎಟಿಗಿದ	ಎಱಗಿದ
೯೬	೫	ಪದೆಪಂ	ಪಡೆಪಂ
೯೬	೨೩	ಜನನಿಕೆ	ಜವನಿಕೆ
೯೮	೧೮	ಜಾಡಿಕಾಜಿ	ಗಾಡಿಕಾಜಿ
೯೯	೧೬	ಮಂದಸ್ಮತ	ಮಂದಸ್ಮಿತ
೧೦೨	೭	ತವಿಸಲ್ವೇಂಟ್ಪುದು	ತವಿಸಲ್ವೇಟ್ಪುದು
೧೦೨	೧೨	ದೇವ	ದೇ
೧೧೧	೭	ವ್ರಭೆ	ಪ್ರಭೆ
೧೧೪	೧೧	ಚೆಲ್ವಾಯು	ಚೆಲ್ವಾಯ್ತು
೧೧೬	೨೦	ಬಿಜಯಂಗೆಯಿ	ಬಿಜಯಂಗೆಯ್ಸಿ
೧೧೬	೨೨	ಮೆಲ್ಲನ್ನಿ	ಮೆಲ್ಲನಿ
೧೧೯	೨೧	ಬರಶಿಲೆ	ಖರಶಿರೆ
೧೩೪	೨೩	ಭಾಸು	ಭಾವ

1. ... page 6

ಗೀತಾ ಬುಕ್ ಹೌಸ್ • ಪ್ರಕಾಶಕರು • ಮೈಸೂರು

ರೂ. 7.50